

# ದೇವರರಾಜ್ಯ ಕಟ್ಟುವವರು

ದೇವರೊಂದಿಗೆ ಜೊತೆ-ಕೆಲಸದವರು ಮತ್ತು ಪರಸ್ಪರ ಆತನ ರಾಜ್ಯವನ್ನು ಕಟ್ಟುವುದು

ಆಶಿಷ್ ರಾಯ್‌ಚೂರ್

ಪರಿಷ್ಕೃತ ಎರಡನೇ ಆವೃತ್ತಿ

ಮುದ್ರಣ ಮತ್ತು ವಿತರಣೆ: **ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್, ಬೆಂಗಳೂರು**

ಪ್ರಥಮ ಪ್ರತಿ ಮುದ್ರಣ: ಏಪ್ರಿಲ್ 2006
ಪರಿಷ್ಕೃತ ಎರಡನೇ ಆವೃತ್ತಿ ಪ್ರತಿ ಮುದ್ರಣ ಫೆಬ್ರವರಿ 2015

ಕಾರ್ಯ ನಿರ್ವಾಹಕ ಸಂಪಾದಕರು/ಪ್ರಕಾಶನಗಳ ಮುಖ್ಯಸ್ಥರು: ವಾಲೈಂಟೀನಾ ಹ್ಯೂಬರ್ಟ್

ಸಹಾಯಕ ಸಂಪಾದಕರು : ಆರತಿ ರೇಚೆಲ್ ಯೆಶಾಯ

ಮುಖಪುಟ ಮತ್ತು ವರ್ಣವಿನ್ಯಾಸ: ಬಿಜೋ ಥಾಮಸ್
ಪ್ರಥಮ ಪ್ರತಿ ಕನ್ನಡಕ್ಕೆ ಭಾಷಾಂತರಿಸಿದವರು : ರವಿಕುಮಾರ್. ಎಂ.

**Contact Information:**
All Peoples Church & World Outreach,
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617, +91-80-65970617
Email: contact@apcwo.org
Website: www.apcwo.org

Unless otherwise indicated, all Scripture quotations are taken from the Holy Bible, New King James Version.

**ಉಚಿತ ವಿತರಣೆಗಾಗಿ**

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಸ್ನೇಹಿತರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ವಂದನೆಗಳು!

ದೇವರ ರಾಜ್ಯ ಕಟ್ಟುವವರು

# ದೇವರರಾಜ್ಯ ಕಟ್ಟುವವರು

ದೇವರೊಂದಿಗೆ ಜೊತೆ-ಕೆಲಸದವರು ಮತ್ತು ಪರಸ್ಪರ ಆತನ ರಾಜ್ಯವನ್ನು ಕಟ್ಟುವುದು

ಆಶಿಷ್ ರಾಯ್‌ಚೂರ್



ಪರಿಷ್ಕೃತ ಎರಡನೇ ಆವೃತ್ತಿ

## ವಿಷಯಸೂಚಿ


| | | |
|---|---|---|
| 1 | **ದೇವರ ರಾಜ್ಯ ಮತ್ತು ಕ್ರಿಸ್ತನ ಸಭೆ** | 5 |
| | ದೇವರ ರಾಜ್ಯ | 5 |
| | ದೇವರ ರಾಜ್ಯ ಮತ್ತು ಕ್ರಿಸ್ತನ ಸಭೆ | 7 |
| | ಸಭೆಯ ಸ್ವಾಭಾವಿಕ ವಿಸ್ತೀರ್ಣ | 8 |
| 2. | **ಕ್ರಿಸ್ತನು ದೇವರ ರಾಜ್ಯದ ಅರಸನು** | 13 |
| | ಅರಸನೊಂದಿಗಿನ ನಮ್ಮ ಸಂಬಂಧವು ಮುಖ್ಯ ಆದ್ಯತೆ | 14 |
| | ದೇವರ ರಾಜ್ಯವೂ ನನ್ನದೂ ಅಲ್ಲ ನಿಮ್ಮದೂ ಅಲ್ಲ ಆದರೆ ಆತನದು | 15 |
| | ನಾವು ದೇವರೊಬ್ಬನನ್ನೇ ಮಹಿಮೆ ಪಡಿಸುವುದನ್ನು ಹುಡುಕಬೇಕು | 16 |
| | ಭೂಮಿಯ ಮೇಲಿನ ನಮ್ಮ ಅಧಿಕಾರವು, ಅರಸನಿಗೆ ನಮ್ಮನ್ನು ಸಮರ್ಪಿಸಿಕೊಳ್ಳುವುದರ ಅಧೀನತೆಯಲ್ಲಿದೆ | 20 |
| | ನಾವು ಮನುಷ್ಯನಲ್ಲಿ ಮಹಿಮೆ ಹೊಂದುವುದು ಬೇಡ | 20 |
| | ಎಲ್ಲಾ ವಿಷಯಗಳಿಗೆ ನ್ಯಾಯತೀರ್ಪು ಮಾಡುವ ಕರ್ತನಿಗೆ ನಾವು ಲೆಕ್ಕ ಒಪ್ಪಿಸುವವರಾಗಿದ್ದೇವೆ | 22 |
| | ದೇವರ ರಾಜ್ಯ ಕಟ್ಟುವವರ ಹೃದಯ | 24 |
| 3. | **ಪವಿತ್ರಾತ್ಮನು - ನಿರ್ದೇಶಕನು** | 29 |
| | ಯಾರು ತಂದೆಯ ಚಿತ್ತವನ್ನು ಮಾಡುತ್ತಾರೋ ಅವರು ನಿತ್ಯತ್ವದಲ್ಲಿ ಬಹುಮಾನ ಹೊಂದಿದವರು | 29 |
| | ಪವಿತ್ರಾತ್ಮನು ನಮಗೆ ಭೂಮಿಯ ಮೇಲೆ ತಂದೆಯ ಚಿತ್ತವನ್ನು ಪ್ರಕಟಪಡಿಸುತ್ತಾನೆ | 30 |

ದೇಹದಿಂದ ಹುಟ್ಟಿದ್ದು ದೇಹವೇ
ಆತ್ಮನಿಂದ ಹುಟ್ಟಿದ್ದು ಆತ್ಮವೇ 31

ಯಾವುದು ಆತ್ಮನಿಂದ ಹುಟ್ಟಬೇಕೆಂದು ದೇವರು
ಬಯಸುತ್ತಾನೋ ಅದಕ್ಕೆ ದೇಹಭಾವದಿಂದ
ಹುಟ್ಟಿದ್ದು ಅಡ್ಡಿಮಾಡುತ್ತದೆ. 33

ದೇಹಭಾವದಿಂದ ಹುಟ್ಟಿದ್ದು ಯಾವ
ಪ್ರಯೋಜನಕ್ಕೂ ಬರುವುದಿಲ್ಲ 34

ಆತ್ಮನಲ್ಲಿ ನಡೆಯಿರಿ ಆಗ ನೀವು ಶರೀರ ಭಾವದ
ಆಸೆಗಳನ್ನು ನೆರವೇರಿಸುವುದಿಲ್ಲ 35

ಅಧೀನರಾಗಿ ಮತ್ತು ತಗ್ಗಿದ ಭಾವದವರಾಗಿ ನಡೆಯಿರಿ 35

ಎರಡು ಪರೀಕ್ಷಾರ್ಥ ಪ್ರಶ್ನೆಗಳು: ಯಾವುದು ನನ್ನನ್ನು
ಪ್ರೇರೇಪಿಸುತ್ತದೆ? ಯಾರಿಗೆ ಮಹಿಮೆಯಾಗುತ್ತದೆ? 36

ಪವಿತ್ರಾತ್ಮನು ‘ಎಲ್ಲಿ’ ‘ಯಾವಾಗ’ ಮತ್ತು ‘ಹೇಗೆ’
ಎಂಬುದನ್ನು ಪ್ರಕಟಮಾಡುತ್ತಾನೆ 37

ಆತ್ಮನು ಸೂಚಿಸುವವುಗಳು ವಿವಿಧ ರೀತಿಗಳಲ್ಲಿ ಬರುತ್ತವೆ 39

ಪವಿತ್ರಾತ್ಮನೊಂದಿಗೆ ಮುರಿಯಲ್ಪಡದ ಸಂಪರ್ಕ
ಬೆಳೆಸಿಕೊಳ್ಳುವುದು ಅವಶ್ಯಕ 40

ಆತ್ಮನ ಸಮಯವನ್ನು ಗ್ರಹಿಸುವುದು ಅವಶ್ಯ 41

**ಆತ್ಮನಲ್ಲಿ ಪ್ರಾರ್ಥಿಸುವಾಗ, ದೇವರ ಉದ್ದೇಶಗಳನ್ನು ನನ್ನ
ಆತ್ಮವು ಗ್ರಹಿಸುವಂತೆ ಸಿದ್ಧಗೊಳಿಸುತ್ತದೆ** 42

ಆತ್ಮನ ಕಾರ್ಯಗಳಿಗೆ ಜನನ ನೀಡುವುದು -
‘ಮರಿಯಳ ಅದ್ಭುತ’ ದಿಂದ ಕೆಲವು ಪಾಠಗಳು 45

1. ನೇಮಿಸಲ್ಪಟ್ಟ ಸಮಯದಲ್ಲಿ ಭೂಮಿಯ ಮೇಲೆ
ಬಿಡುಗಡೆಗೊಳ್ಳುತ್ತವೆ 45

2. ಆತ್ಮನ ಕಾರ್ಯಗಳು ಸಾಮಾನ್ಯ ಜನರ ಮೂಲಕ
ಬಿಡುಗಡೆಗೊಳ್ಳುತ್ತವೆ 46

3. ಆತ್ಮನ ಕಾರ್ಯಗಳು ಅಕಲಂಕಿತವಾದುದಾಗಿರಬೇಕು - ಆತನ
ಆತ್ಮನಿಂದ ಪವಿತ್ರವಾಗಿ ಹುಟ್ಟಿದ್ದು 46

4. ಆತ್ಮನ ಕಾರ್ಯಗಳುತೊಡಕು ಉಂಟಾಗುವುದಕ್ಕೆ ಕಾರಣವಾಗಬಹುದು 47

5. ಆತ್ಮನ ಕಾರ್ಯಗಳು ಸಾಧಾರಣ ಸ್ವಾಭಾವಿಕ ವಿಧಾನಗಳಲ್ಲಿ ಬಿಡುಗಡೆಗೊಳ್ಳುತ್ತವೆ 48

6. ದೇವರ ನೇಮಿತ ಸ್ಥಳ ಮುಟ್ಟುವವರೆಗೂ ಮುಚ್ಚಲ್ಪಟ್ಟ ಬಾಗಿಲನ್ನು ಸಂಧಿಸಬಹುದು 48

7. ಪವಿತ್ರಾತ್ಮನ ಕೆಲಸವು ಅನೇಕಬಾರಿ ಸರಳವಾದ ಕನಿಷ್ಠ ಸ್ಥಿತಿಗತಿಗಳ ನಡುವೆ ಪ್ರಾರಂಭಗೊಳ್ಳುತ್ತದೆ 49

8. ಆತ್ಮನ ಕಾರ್ಯಗಳು ಸಂರಕ್ಷಿಲ್ಪಡಬೇಕು ಮತ್ತು ಪೋಷಿಸಲ್ಪಡಬೇಕು 50

**4. ಒಂದು ದೈವದತ್ತ ದರ್ಶನಗಳ ಸ್ವರೂಪ 55**

**ಒಂದು** ದೈವದತ್ತ ದರ್ಶನವು ದೈವಿಕ ಆಜ್ಞೆ ಮತ್ತು ಅಧಿಕಾರ ಹೊಂದಿರುತ್ತವೆ 56

ಒಂದು ದೈವದತ್ತ ದರ್ಶನಗಳು ಹಲವು ಬಾರಿ ನಮ್ಮ ಹೃದಯಗಳ ಸಾಮಾನ್ಯ ಪ್ರೇರಣೆ ಅಥವಾ ಕದಡುವಿಕೆಯಿಂದ ಪತ್ತೆಯಾಗುತ್ತವೆ 58

ಒಂದು ದೈವದತ್ತ ದರ್ಶನವು ಪ್ರಾರಂಭವಾಗಲು ಮತ್ತು ನಿರ್ವಹಣೆಯಾಗಲು ಒಂದು ನಿಯಮಿತ ಸಮಯ ಹೊಂದಿದೆ 60

ದೈವದತ್ತ ದರ್ಶನಗಳು ನೆರವೇರಿಸಲು ಸಿದ್ಧತೆ ಬೇಕು 61

ದೈವದತ್ತ ದರ್ಶನಗಳು ಅನಾವರಣಗೊಳ್ಳುವುದು ನಮ್ಮ ನಿರೀಕ್ಷೆಗಿಂತಲೂ ವಿಭಿನ್ನವಾಗಿರಬಹುದು 69

'ಕೈರೊಸ್' ಕ್ಷಣವು (ಪರಿಪೂರ್ಣತೆಯ ಸಮಯದ ಕ್ಷಣ) 'ಸ್ವ' ದಿಂದ ಪ್ರಯತ್ನಿಸಿದರೆ ತಡಗೊಳ್ಳುತ್ತದೆ 71

ಒಂದು ದೈವದತ್ತ ದರ್ಶನವನ್ನು ಪ್ರತಿಯೊಬ್ಬರು ಅರ್ಥಮಾಡಿಕೊಳ್ಳಲಾಗುವುದಿಲ್ಲ 73

ದೈವ-ದತ್ತ ದರ್ಶನಗಳು ದುರಾತ್ಮನ ವಿರೋಧವನ್ನು ಎದುರಿಸುತ್ತದೆ 74

ದೈವ-ದತ್ತ ದರ್ಶನಗಳು ಯಾವಾಗಲು ವ್ಯಕ್ತಿಗಿಂತ ದೊಡ್ಡದಾಗಿರುತ್ತದೆ 76

ದೈವದತ್ತ ದರ್ಶನಗಳನ್ನು ಇತರ ಜನರು ಗುರ್ತಿಸುತ್ತಾರೆ ಮತ್ತು ಅವರ ಜೀವಿತಗಳ ಕರೆಯಲ್ಲಿ ಭಾಗಿಯಾಗಿ ಅದನ್ನು ನೆರವೇರಿಸುತ್ತಾರೆ 78

ಕ್ರಿಸ್ತನ ದೇಹಕ್ಕೆ ಕೊಡಲ್ಪಟ್ಟ ಕನಸುಗಳು ಮತ್ತು ದರ್ಶನಗಳು ಪರಸ್ಪರ ಸಂಬಂಧ ಕಲ್ಪಿಸುತ್ತವೆ 78

ನಿಮಗೆ ದೊಡ್ಡ ಹೃದಯ ಕೊಡುವಂತೆ ದೇವರನ್ನು ಕೇಳಿರಿ 79

5 **ದೇವರ ರಾಜ್ಯ ಕಟ್ಟುವವರ ಜೀವನಶೈಲಿ** 83

**ಗುಣವು ಯಾಕೆ ಪ್ರಾಮುಖ್ಯವಾಗಿದೆ?** 83

1. ದೈವಿಕ ಗುಣನಡತೆಯು ಸಭಾಸೇವೆಗೆ ಪೂರ್ವಾಗತ್ಯವಸ್ತುವಾಗಿದೆ 87
2. ನಿಮ್ಮ ನೈತಿಕ ಗುಣನಡತೆಯು ನಿಮ್ಮ ನೈಜ ಸಾಮರ್ಥ್ಯವಾಗಿದೆ 90
3. ನಿಮ್ಮ ಗುಣನಡತೆಯು ನೀವು ಎಂದಾದರೂ ಬೋಧಿಸಬಹುದಾದ ಅತ್ಯಂತ ಪ್ರಮುಖ ಸಂದೇಶವನ್ನು ರೂಪಿಸುವುದು 90
4. ಗುಣನಡತೆಯು ನಿಮ್ಮ ಬಾಳಿಕೆಯನ್ನು ನಿಶ್ಚಯಿಸುತ್ತದೆ 91

**ಆತ್ಮಿಕ ಪ್ರಬುದ್ಧತೆಯು ಆತ್ಮನ ವರಗಳಷ್ಟೇ ಪ್ರಾಮುಖ್ಯವಾದದ್ದು** 92

**ಆತ್ಮಿಕ ಪ್ರಬುದ್ಧತೆಯ ಏಳು ಲಕ್ಷಣಗಳು** 93

1. ಆತ್ಮಿಕ ಪ್ರೌಢಿಮೆಯು ಕ್ರಿಸ್ತನ ಸಾರೂಪ್ಯದಲ್ಲಿ ವೃದ್ಧಿಯಾಗುವುದಾಗಿದೆ 93
2. ಆತ್ಮಿಕ ಪ್ರೌಢಿಮೆ ಎಲ್ಲಾ ದೇವರ ಎಲ್ಲಾ ಚಿತದಲ್ಲಿಯೂ ಪರಿಪೂರ್ಣ ಮತ್ತು ಸಮಗ್ರವಾಗಿ ಇರುವುದಾಗಿದೆ 94
3. ಆತ್ಮಿಕ ಪ್ರೌಢಿಮೆಯು ಎಲ್ಲಾ ಒಳ್ಳೇ ಕಾರ್ಯಗಳನ್ನು ಮಾಡಲು ಪೂರ್ತಿಯಾಗಿ ಸಜ್ಜುಗೊಳ್ಳುವುದಾಗಿದೆ 94
4. ಆತ್ಮಿಕ ಪ್ರಬುದ್ಧತೆಯು ಗಟ್ಟಿಯಾದ ಆಹಾರವನ್ನು ತಿನ್ನಲು ಶಕ್ತಗೊಳ್ಳುವುದಾಗಿದೆ 96
5. ಆತ್ಮಿಕ ಪ್ರೌಢಿಮೆ ಒಳ್ಳೆಯದು ಮತ್ತು ಕೆಟ್ಟದ್ದನ್ನು ಗ್ರಹಿಸಲು ನಮ್ಮ ಜ್ಞಾನೇಂದ್ರಿಯಗಳನ್ನು ತರಬೇತಿಗೊಳಿಸುವುದಾಗಿದೆ 97

6. ಆತ್ಮಿಕ ಪ್ರೌಢಿಮೆ ಶಿಶುವಿನಂತಹ ನಡವಳಿಕೆಯನ್ನು ದೂರವಿರಿಸುತ್ತದೆ 97
7. ಆತ್ಮಿಕ ಪ್ರೌಢಿಮೆ ನಿಮ್ಮ ಸಂಪೂರ್ಣ ದೇಹ ಮತ್ತು ನಾಲಿಗೆಯನ್ನು ನಿಮ್ಮ ಅಧೀನದಲ್ಲಿಟ್ಟುಕೊಳ್ಳುವುದಾಗಿದೆ 98

ನಾವು ಮನೆವಾರ್ತೆಯವರು 99

1. ಒಳ್ಳೆಯ ಮನೆವಾರ್ತೆಯವನು ಕ್ರಮಬದ್ಧವಾಗಿ ಕೆಲಸಮಾಡುತ್ತಾನೆ 102
2. ಒಳ್ಳೆಯ ಮನೆವಾರ್ತೆಯವನು ಉಪಯುಕ್ತತೆಯನ್ನು ಖಚಿತ ಮಾಡಿಕೊಳ್ಳುತ್ತಾನೆ 102
3 ಒಳ್ಳೆಯ ಮನೆವಾರ್ತೆಯವನು ಹೊಣೆಹೊತ್ತುಕೊಳ್ಳುತ್ತಾನೆ 102
4. ಒಳ್ಳೆಯ ಮನೆವಾರ್ತೆಯವನು ಭದ್ರತೆಯನ್ನು ನಿಶ್ಚಯಪಡಿಸಿಕೊಳ್ಳುತ್ತಾನೆ 103
5. ಒಳ್ಳೆಯ ಮನೆವಾರ್ತೆಯವನು ನಿರಂತರತೆಯನ್ನು ಕಾಪಾಡಿಕೊಳ್ಳುವನು 103
6. ಒಳ್ಳೆಯ ಮನೆವಾರ್ತೆಯವನು ನಂಬಿಗಸ್ತನು ಮತ್ತು ಬುದ್ಧಿವಂತನು 104
7. ಒಳ್ಳೆಯ ಮನೆವಾರ್ತೆಯವನು ಚಿಕ್ಕ ವಿಷಯಗಳಲ್ಲೂ ನಂಬಿಗಸ್ತನಾಗಿದ್ದಾನೆ 106
8. ಒಳ್ಳೆಯ ಮನೆವಾರ್ತೆಯವನು ಹಣದ ವ್ಯವಹಾರದಲ್ಲಿ ನಂಬಿಗಸ್ತನಾಗಿರುತ್ತಾನೆ. 107
9. ಒಳ್ಳೆಯ ಮನೆವಾರ್ತೆಯವರು ಮತ್ತೊಬ್ಬರ ಸೊತ್ತಿನ ವಿಷಯದಲ್ಲಿ ನಂಬಿಗಸ್ತನಾಗಿರುತ್ತಾನೆ 107

**6. ಆತ್ಮನಿಂದ ಜನರನ್ನು ಕಟ್ಟುವುದು 111**

ದೇವರ ರಾಜ್ಯದ ಕಟ್ಟುವುದು ಜನರನ್ನು ಕಟ್ಟುವುದಾಗಿದೆ 111

ದೇವರ ರಾಜ್ಯ ಕಟ್ಟುವವರು ಜನರನ್ನು ತಮ್ಮ ಹೃದಯಗಳಲ್ಲಿ ಇಟ್ಟುಕೊಂಡಿರಬೇಕು 112

ನಾವು ಆತ್ಮನಿಂದ ಜನರನ್ನು ಕಟ್ಟುತ್ತೇವೆ 114

ದೇವರು ಅಪರಿಪೂರ್ಣ ಜನರನ್ನು ಪರಿಪೂರ್ಣಗೊಳಿಸಲು ಅಪರಿಪೂರ್ಣ ಜನರನ್ನು ಉಪಯೋಗಿಸುತ್ತಾನೆ 114

ಆತ್ಮನಿಂದ ಜನರನ್ನು ಕಟ್ಟಲು ಪ್ರಾಯೋಗಿಕ ಸೂಚಿಗಳು (ಕಿಲಿಕೈಗಳು) 115

1. ಒಬ್ಬ ವ್ಯಕ್ತಿಯ ವಿಷಯದಲ್ಲಿ ದೇವರ ಉದ್ದೇಶವನ್ನು ಗುರುತಿಸಬೇಕು. 115
2. ದೈವದತ್ತವಾದ ಸಾಮರ್ಥ್ಯಗಳನ್ನು ಬಿಡುಗಡೆಗೊಳಿಸುವಂತೆ ಜನರನ್ನು ಪ್ರವೃತ್ತಿಗೊಳಿಸಬೇಕು. 116
3. ಅವರ ವರಗಳನ್ನು ಕಂಡುಹಿಡಿಯಿರಿ ಮತ್ತು ಪಕ್ವಗೊಳಿಸಿರಿ 118
4. ಜೀವಿತದಿಂದ ಜೀವಿತಕ್ಕೆ ಪೋಷಣೆ ಮಾಡಿರಿ 119
5. ಅಭದ್ರತೆಗಳನ್ನು ತಪ್ಪಿಸಿರಿ 120
6. ಅಗತ್ಯಬಿದ್ದಾಗ ತಿದ್ದುಪಡಿ ತನ್ನಿರಿ 124
7. ಎಲ್ಲಾ ಕ್ಷೇತ್ರಗಳಲ್ಲೂ ಪ್ರೌಢತೆ ತನ್ನಿರಿ 132
8. ಅವರ ಕರೆಗೆ ಅವರನ್ನು ಬಿಡುಗಡೆಗೊಳಿಸಿರಿ 134
9. ಅಗತ್ಯವಿದ್ದಾಗ ಅವರ ಆತ್ಮೀಕ ಸಹಾಯಕರಾಗಿ ಮುಂದುವರೆಯಿರಿ 135
10. ಬಿದ್ದು ಹೋದವರನ್ನು ಪುನ:ಸ್ಥಾಪಿಸುವುದು 135
11. ಬಿದ್ದುಹೋದವರನ್ನು ನಿಭಾಯಿಸುವುದು 136

7 **ಪಾಲುಗಾರಿಕೆ - ದೇವರ ರಾಜ್ಯದಲ್ಲಿ ಜೊತೆ ಕೆಲಸದವರಾಗಿರುವುದನ್ನು ಕಲಿಯುವುದು** 141

ವಿಭಾಗವಾದ ಒಂದು ರಾಜ್ಯವು ದುರ್ಬಲ ಮತ್ತು ಅಧಿಕಾರವಿಲ್ಲದ್ದಾಗಿದೆ 141

ಆತ್ಮನಲ್ಲಿ ಐಕ್ಯತೆ ಕಾಪಾಡಿಕೊಳ್ಳಲು ನಾವು ಕರೆಯಲ್ಪಟ್ಟಿದ್ದೇವೆ 142

ದೇವರ ರಾಜ್ಯದ ಮನಸ್ಸು - ಉಳ್ಳವರಾಗಿರುವದು 142

| | | |
|---|---|---|
| | ವೈಯಕ್ತಿಕವಾಗಿ ಮಾಡುವ ಸೇವೆಗಿಂತಲೂ<br>ದೇವರ ರಾಜ್ಯದ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿರಿ | 143 |
| | ಒಬ್ಬರೊಂದಿಗೊಬ್ಬರು ಸಂಪರ್ಕ ಮಾಡಿ<br>ಕೆಲಸ ಮಾಡುವುದನ್ನು ನಾವು ಕಲಿಯಬೇಕು | 144 |
| | ದೈವಿಕ ಸಂಪರ್ಕಗಳನ್ನು ತರಲು ದೇವರಿಗೆ<br>ಅವಕಾಶ ನೀಡಿರಿ | 150 |
| | ನಾವು ಇತರರಿಗೆ ತೀರ್ಪು ಮಾಡಬಾರದು | 151 |
| | ಪ್ರತಿಯೊಬ್ಬರು ಬೇರೆ ಬೇರೆ ವರಗಳನ್ನು ಹೊಂದಿದ್ದಾರೆ | 153 |
| | ಅಪ್ರಧಾನರ ಮೇಲೆ ಪ್ರಾಧಾನ್ಯತೆ ಮಾಡಬೇಡಿರಿ<br>(ಕಿರಿಯರ ಮೇಲೆ ಹಿರಿತನ ತೋರಬೇಡಿರಿ) | 153 |
| | ದೇವರ ರಾಜ್ಯದಲ್ಲಿ ಪಾಲುಗಾರಿಕೆಯ ಮೌಲ್ಯ | 154 |
| | ದೇವರ ರಾಜ್ಯದಲ್ಲಿ ಪಾಲುಗಾರಿಕೆಗೆ ತಡೆ ಮಾಡುವ ವಿಷಯಗಳು | 155 |
| **8** | **ನಗರವ್ಯಾಪ್ತಿ ಸಭೆಯನ್ನು ಸ್ಥಾಪಿಸುವುದು** | 161 |
| | ಐಕ್ಯತೆಗೆ ಕರೆ : ಒಂದು ದೇಹ–ಅನೇಕ ಸಭೆಗಳು | 161 |
| | ನಾಯಕತ್ವದೊಂದಿಗೆ ಪ್ರಾರಂಭಮಾಡುವುದು | 162 |
| | ನಗರವನ್ನು ಮಾರ್ಪಡಿಸಲು ಪಾಲುಗಾರಿಕೆ | 164 |
| | ನಗರವ್ಯಾಪ್ತಿ ಐಕ್ಯತಾ ಕೂಟಗಳು | 166 |
| | ನಗರವ್ಯಾಪ್ತಿ ಸಭೆಯು ನಗರದಲ್ಲಿ ಕಾರ್ಯಗತವಾಗಿರುವುದು | 168 |
| | ಹಿಂಸೆಗೆ ಐಕ್ಯತೆಯಿಂದ ಪ್ರತಿಕ್ರಿಯೆ ನೀಡುವುದು | 169 |
| | ಐಕ್ಯತೆ ಮತ್ತು ನಿಷ್ಠತೆಯ ಒಡಂಬಡಿಕೆ | 170 |
| **9** | **ಸಹೋದರರು ಮತ್ತು ತಂದೆಗಳು<br>(ಸಹೋದರಿಯರು ಮತ್ತು ತಾಯಿಗಳು)** | 175 |
| | ಸಹೋದರ, ಜೊತೆ ಕೆಲಸದವ ಮತ್ತು ದೇವರ ಸೇವಕ | 175 |
| | ಪ್ರತಿಕೂಲಕ್ಕಾಗಿ ಜನಿಸಿರುವುದಿಲ್ಲ | 176 |
| | ವೈಯಕ್ತಿಕ ಸವಾಲುಗಳು | 177 |

ಸಹೋದರನೊಬ್ಬನು ಎಡವಿದಾಗ 178
ಬೆಳಕು ಮತ್ತು ಹಗೆತನ ಬೆರೆಸಬೇಡಿರಿ 178
ಹಳೆಯದನ್ನು ಹಿಂದಕ್ಕೆ ಬಿಟ್ಟು ಬಿಡುವುದು 179
ದೇವರ ರಾಜ್ಯದಲ್ಲಿ ತಂದೆಯರು ತಾಯಂದಿರು ಏಳಬಹುದು 180

**10. ದೇವರ ರಾಜ್ಯದ ಸೇವೆಗಾಗಿ ಮುಂದಿನ ಪೀಳಿಗೆಯವರನ್ನು ಎಬ್ಬಿಸುವುದು** **183**

ತಿಮೊಥೆಯರನ್ನು ಎಬ್ಬಿಸುವುದು ಹೇಗೆ? ಪೌಲ ತಿಮೊಥೆಯರ ಸಂಬಂಧದಿಂದ ಪಾಠಗಳು 185

1. ದೈವಿಕ ಸಂಪರ್ಕವನ್ನು ಗುರುತಿಸಿ 185
2. ಪೋಷಣೆಯ ಸಂಬಂಧ ಬೆಳೆಸಿಕೊಳ್ಳಿರಿ 187
3. ಆತ್ಮೀಯತೆ ಮತ್ತು ಪಾರದರ್ಶಕತೆ ಸ್ಥಾಪಿಸಿರಿ 188
4. ನಿರ್ದಿಷ್ಟ ಉಪದೇಶಗಳ ಸಂಪರ್ಕ 188
5. ಪ್ರೋತ್ಸಾಹ, ಹಿತವಚನ ಮತ್ತು ತಿದ್ದುಪಡಿ 188
6. ತೆರಬೇಕಾದ ಬೆಲೆಯನ್ನು ಸ್ಪಷ್ಟಗೊಳಿಸು 189
7. ಗೌರವದ ಸ್ಥಳ, ಕಟ್ಟಿರಿ, ಗೌರವದಿಂದ ಸತ್ಕರಿಸಿರಿ 190
8. ಪ್ರತಿನಿಧಿಸು ಮತ್ತು ಅಧಿಕಾರ ಕೊಡು 191
9. ಸಕರಾತ್ಮಕ ಶಿಫಾರಸ್ಸು 192
10. ಆತನ ಕರೆಗೆ ಬಿಡುಗಡೆಗೊಳಿಸುವುದು 192

ನೀವು ವೃದ್ದರಾದಾಗ ಮತ್ತು ನರೆ ತಲೆಯವರಾದಾಗ 193

# ಪೀಠಿಕೆ

ದೇವರು ನಮ್ಮನ್ನು ತನ್ನ ಜೊತೆ ಕೆಲಸದವರಾಗಿರಲು ಕರೆದಿದ್ದಾನೆ ಎನ್ನುವುದನ್ನು ಆಲೋಚಿಸುವಾಗ ಅತ್ಯಾಶ್ಚರ್ಯವೆನಿಸುತ್ತದೆ. ನಮಗಿರುವ ಕರೆಯು ಆತನ (ಪರಲೋಕ) ರಾಜ್ಯವನ್ನು ಕಟ್ಟುವುದಕ್ಕಾಗಿಯೇ.

ರಾಜ್ಯವನ್ನು ಕಟ್ಟುವುದೆಂದರೇನು? ದೇವರು ತನ್ನ ರಾಜ್ಯವನ್ನು ಕಟ್ಟುತ್ತಿರುವಾಗ ಅತನ ಜೊತೆ ಕೆಲಸದವನಾಗಿರುವವನಿಗೆ 'ರಾಜ್ಯವನ್ನು ಕಟ್ಟುವವನು' ಎನಿಸಿಕೊಳ್ಳಲು ಯಾವ ಅರ್ಹತೆ ಇರಬೇಕು? ನಾವೆಲ್ಲರೂ ದೇವರ ಜೊತೆಕೆಲಸದವರಾಗಿರುವುದರಿಂದ ನಾವು ಪರಸ್ಪರ ಜೊತೆಕೆಲಸದವರೆಂದು ಸಹ ಅರ್ಥ ಬರುತ್ತದೆ. ನಮ್ಮ ನಮ್ಮಲ್ಲಿ ಭೇದಗಳೂ, ವೈಯಕ್ತಿಕ ಅಭದ್ರತೆಗಳೂ, ಕೊರತೆಗಳು ಮತ್ತು ಬಲಹೀನತೆಗಳಿರುವಲ್ಲಿ ನಾವಿದನ್ನು ಹೇಗೆ ಸಾಧಿಸಬಲ್ಲೆವು!

ದೇವರ ರಾಜ್ಯವೆಂದರೇನು ಎಂಬುದಕ್ಕೆ ಒಂದು ಸಂಕ್ಷಿಪ್ತ ಪೀಠಿಕೆಯೊಂದಿಗೆ ರಾಜ್ಯವನ್ನು ಕಟ್ಟುವವರಾಗುವ ನಿಟ್ಟಿನಲ್ಲಿ ನಮ್ಮ ಪಯಣವನ್ನು ಸಾಗಿಸೋಣ. ಇದು ವೈಯಕ್ತಿಕ ನೆಲೆಗಟ್ಟಿನಿಂದ ಅಂದರೆ ನಮ್ಮ ಹೃದಯದಿಂದ ಪ್ರಾರಂಭವಾಗಲಿ. ಅರಸನ ಜೊತೆಕೆಲಸದವರ ಸ್ಥಾನಮಾನಗಳೇನು ಮತ್ತು ರಾಜ್ಯವನ್ನು ಕಟ್ಟುವ ಅಂತಃಕರಣವನ್ನು ಬೆಳೆಸಿಕೊಳ್ಳುವುದು ಹೇಗೆ ಎಂಬುದನ್ನು ಕಂಡುಕೊಳ್ಳೋಣ. ರಾಜ್ಯವನ್ನು ಕಟ್ಟುವ ಅಂತಃಕರಣ ನಮಗಿಲ್ಲದೆ ಹೋದಲ್ಲಿ ನಾವು ರಾಜ್ಯವನ್ನು ಕಟ್ಟುವವರಾಗಲು ಸಾಧ್ಯವೇ ಇಲ್ಲ. ರಾಜ್ಯದ ಕೆಲಸವನ್ನು ನಿರ್ದೇಶಿಸುವ ದೇವರಾತ್ಮನಿಗೆ ಅಧೀನರಾಗಲು ನಾವು ಕಲಿತುಕೊಳ್ಳಬೇಕಾಗಿದೆ.

ರಾಜ್ಯದ ವಿಸ್ತರಣೆಯ ಕುರಿತು ದೇವರಿಗಿರುವ ದರ್ಶನ ಮತ್ತು ಕನಸುಗಳನ್ನು ಸಾಕಾರಗೊಳಿಸಲು ದೇವರು ನಮ್ಮೊಬ್ಬೊಬ್ಬರನ್ನು ಹೇಗೆ ಉಪಯೋಗಿಸುತ್ತಾನೆಂದು ನಾವು ಅನ್ವೇಷಿಸೋಣ.

ರಾಜ್ಯವನ್ನು ಕಟ್ಟುವುದೆಂದರೆ ಜನರನ್ನು ಕಟ್ಟುವುದು, ಅವರ ಹೃದಯಗಳನ್ನು ಜೀವಿತಗಳನ್ನು ಸ್ವರೂಪಗೊಳಿಸುವುದಾಗಿದೆ. ಇದು ಒಂದು ಸಂಸ್ಥೆಯನ್ನಾಗಲೀ ಕಟ್ಟಡವನ್ನಾಗಲೀ ಕಟ್ಟುವುದಕ್ಕಿಂತ

ಭಿನ್ನವಾಗಿದೆ. ನಾವು ದೇವರಾತ್ಮನಿಂದ ಜನರನ್ನು ಕಟ್ಟುತ್ತೇವೆ ಮತ್ತು ಅದಕ್ಕೆ ಬೇಕಾದ ಸರಳವಿಧಾನಗಳನ್ನು ಕಲಿಯುತ್ತೇವೆ.

ದೇವರ ರಾಜ್ಯದಲ್ಲಿ ದರ್ಶನಗಳು ಮತ್ತು ಕನಸುಗಳು ಪರಸ್ಪರ ಸಂಬಂದ ಹೊಂದಿದೆ. ನನ್ನ ಹೃದಯದಲ್ಲಿನ ಕನಸುಗಳನ್ನು ನೆರವೇರಿಸುವ ಕ್ರಮದಲ್ಲಿ, ದೇವರು ನಿಮ್ಮ ಹೃದಯದಲ್ಲಿ ಇಟ್ಟಂತಹ ದರ್ಶನಗಳಲ್ಲಿ ಸೇವೆ ಮಾಡಲು ದೇವರು ಅನೇಕವೇಳೆ, ಹೆಜ್ಜೆಯಿಡಲು ನಮ್ಮನ್ನು ಕರೆಯುತ್ತಾನೆ. ಈ ಕಾರ್ಯವಿಧಾನದಲ್ಲಿ ನನ್ನ ಹೃದಯದಲ್ಲಿರುವುದು ನೆರವೇರುತ್ತದೆ. ಒಟ್ಟಾಗಿ ಕೆಲಸ ಮಾಡುವುದು ಮತ್ತು ಜೊತೆ ಕೆಲಸದವರಾಗಿರುವುದು, ದೇವರ ಕಟ್ಟಡದಲ್ಲಿ ಪಾಲುಗಾರರಾಗಿರುವುದು ಹೇಗೆ ಎಂಬುದನ್ನು ನಾವು ಕಲಿಯುತ್ತೇವೆ.

ನಾವು ವಾಸಿಸುವಂತಹ, ನಗರ ಅಥವಾ ಸಮುದಾಯಗಳ ಕಡೆಗೆ ದೇವರ ರಾಜ್ಯ ಕಟ್ಟುವವರಾಗಿ, ನಮ್ಮ ಸಾಮೂಹಿಕ ಜವಬ್ದಾರಿಗಳೇನು ಎಂಬುದನ್ನು ನಾವು ಚರ್ಚಿಸುತ್ತೇವೆ. ಮುಂದಿನ ಪೀಳಿಗೆಯಲ್ಲೂ ದೇವರ ರಾಜ್ಯದ ಕೆಲಸವು ಬಲಿಷ್ಟವಾಗಿ ಮುಂದುವರೆಯುವಂತೆ ಖಚಿತಪಡಿಸಿಕೊಳ್ಳುವುದು ಮತ್ತು ಪರಂಪರೆಯನ್ನು ಹಿಂದೆ ಬಿಟ್ಟು, ಮುಂದಿನ ಪೀಳಿಗೆಯ ಕಡೆಗೆ ನಮ್ಮ ದೇವರ ರಾಜ್ಯದ ಜವಾಬ್ದಾರಿಗಳ ಕುರಿತು ನಾವು ನಮ್ಮಲ್ಲಿ ನೆನಪಿಸಿಕೊಳ್ಳಬೇಕು.

ನಾವೆಲ್ಲರೂ ದೇವರ ರಾಜ್ಯ ಕಟ್ಟುವವರಾಗಿ ಕೆಲಸ ಮಾಡಿದರೆ ಯಾವುದೇ ದೇಶದಲ್ಲಿ, ಪ್ರಾಂತದಲ್ಲಿ, ಯಾವುದೇ ನಗರದಲ್ಲಿ, ಕ್ರಿಸ್ತನ ಅಂಗದಲ್ಲಿ, ಒಂದು ಆತ್ಮಿಕ, ಕ್ರಿಯಾತ್ಮಕ ಪ್ರಾರಂಭಿಕ ಬದಲಾವಣೆಯನ್ನು ನಾವು ನೋಡಬಹುದು.

ನಾವೆಲ್ಲರು ಮೊದಲು ದೇವರ ರಾಜ್ಯ ಹುಡುಕೋಣ, ಒಟ್ಟಾಗಿ ಆತನ ರಾಜ್ಯವನ್ನು ಕಟ್ಟೋಣ. ದೇವರ ರಾಜ್ಯ ಕಟ್ಟುವವರಾಗಿರೋಣ! ನಿನ್ನ ರಾಜ್ಯವು ಬರಲಿ!

**– ಆಶಿಷ್ ರಾಯ್‌ಚೂರ್**

# ಅಧ್ಯಾಯ 1

# ದೇವರ ರಾಜ್ಯ ಮತ್ತು ಸಭೆ

ನಾನು ನಿನಗೆ ಒಂದು ಮಾತನ್ನು ಹೇಳುತ್ತೇನೆ, ಅದೇನೆಂದರೆ ನೀನು ಪೇತ್ರನು, ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು; ಪಾತಾಳಲೋಕದ ಬಲವು ಅದನ್ನು ಸೋಲಿಸಲಾರದು ಪರಲೋಕರಾಜ್ಯದ ಬೀಗದ ಕೈಗಳನ್ನು ನಿನಗೆ ಕೊಡುವೆನು; ಭೂ ಲೋಕದಲ್ಲಿ ನೀನು ಯಾವುದನ್ನು ಕಟ್ಟುತ್ತೀಯೋ; ಅದು ಪರಲೋಕದಲ್ಲಿಯೂ ಕಟ್ಟಿರುವುದು; ಮತ್ತು ಭೂಲೋಕದಲ್ಲಿ ನೀನು ಯಾವುದನ್ನು ಬಿಚ್ಚುತ್ತೀಯೋ ಅದು ಪರಲೋಕದಲ್ಲಿಯೂ ಬಿಚ್ಚಿರುವುದು ಅಂದನು. (ಮತ್ತಾಯ 16:18–19)



# 1

# ದೇವರ ರಾಜ್ಯ ಮತ್ತು ಸಭೆ

## ದೇವರ ರಾಜ್ಯ

**ಕೀರ್ತನೆಗಳು 24:10**
**ಮಹಾಪ್ರಭಾವವುಳ್ಳ ಈ ಅರಸನು ಯಾರು? ಸೇನಾಧೀಶ್ವರನಾದ ಯೆಹೋವನೇ; ಮಹಾಪ್ರಭಾವವುಳ್ಳ ಅರಸನು ಈತನೇ ಸೆಲಾ.**

ದೇವರು ಅರಸನು, ಆತನ ರಾಜ್ಯವು, ಆತನ ನಿಯಮ ಮತ್ತು ಪರಮಾಧಿಕಾರವಾಗಿದೆ. ಇದು ಆತನ ಆಳ್ವಿಕೆಯ ಸ್ಥಳವಾಗಿದೆ. ಇದು ಆತನ ಪ್ರಭುತ್ವ ವಿಸ್ತರಿಸುವ ಮತ್ತು ಆತನ ಚಿತ್ತವು ಪೂರೈಸಿದ ಸ್ಥಳವಾಗಿದೆ ಮತ್ತು ಆತನ ಉದ್ದೇಶಗಳು ಸ್ಥಾಪಿತವಾಗಿವೆ. ಎಲ್ಲಾದರ ಮೇಲೂ ಆತನ ರಾಜ್ಯವು ಆಳ್ವಿಕೆ ಮಾಡಲ್ಪಟ್ಟಿದೆ "ಯೆಹೋವನು ಮೇಲಣ ಲೋಕದಲ್ಲಿ ತನ್ನ ಸಿಂಹಾಸನವನ್ನು ಸ್ಥಾಪಿಸಿದ್ದಾನೆ, ಆತನು ಸಮಸ್ತವನ್ನು ಆಳುತ್ತಾನೆ. [ಕೀರ್ತನೆಗಳು 103:19]

ಕರ್ತನಾದ ಯೇಸುವು, ದೇವರ ರಾಜ್ಯವನ್ನು ನಮ್ಮ ಕ್ಷೇತ್ರಕ್ಕೆ ಪರಿಚಯಿಸಿದ್ದಾನೆ. "ಪರಲೋಕರಾಜ್ಯವು ಸಮೀಪಿಸಿತು; ದೇವರ ಕಡೆಗೆ ತಿರುಗಿಕೊಳ್ಳಿರಿ" ಎಂಬುದಾಗಿ ಸಾರುತ್ತಾ ಆತನು ಬಂದನು (ಮತ್ತಾಯ 4:17) ದೇವರ ರಾಜ್ಯಕ್ಕೆ ನಮ್ಮನ್ನು ತರಲು ಮತ್ತು ದೇವರ ರಾಜ್ಯವನ್ನು ನಮಗಾಗಿ ತರಲು ಆತನು ಬಂದನು ಅಂಧಕಾರದ ಬಲದಿಂದ ನಾವು ಬಿಡುಗಡೆ ಹೊಂದಿದ್ದೇವೆ ಮತ್ತು ಯೇಸುಕ್ರಿಸ್ತನ ರಾಜ್ಯಕ್ಕೆ ಬದಲಾವಣೆ ಹೊಂದಿದ್ದೇವೆ. (ಕೊಲೊಸ್ಸೆಯವರಿಗೆ 1:13) ನಮ್ಮ ಹೃದಯಗಳೊಳಗೆ ಮತ್ತು ಜೀವಿತಗಳಲ್ಲಿ, ಆತನ ರಾಜ್ಯವು ಸ್ಥಾಪಿಸಲ್ಪಟ್ಟಿದೆ [ಲೂಕ 17:21]

ದೇವರ ಕುಟುಂಬಕ್ಕೆ ದತ್ತು ಹೊಂದಿದ್ದ ಜನರುಗಳಾಗಿ ನಾವು "ಬಾಧ್ಯರಾಗಿದ್ದೇವೆ; ದೇವರಿಗೆ ಬಾಧ್ಯರು, ಕ್ರಿಸ್ತನೊಂದಿಗೆ ಬಾಧ್ಯರು". [ರೋಮಾಪುರದವರಿಗೆ 8:17] ಆಗಿದ್ದೇವೆ. ನಾವು ಮಾಡುವಂತವುಗಳಲ್ಲಿ ಮತ್ತು ನಮ್ಮ ಜೀವಿತಗಳಲ್ಲಿ ಆತನ ಆಡಳಿತ ಮತ್ತು ಅಧಿಕಾರ ವಿಸ್ತರಿಸಲ್ಪಟ್ಟಿದೆ. ದೇವರ ರಾಜ್ಯದ ಮಕ್ಕಳು

ಎಂಬುದಾಗಿ ನಾವು ಕರೆಯಲ್ಪಟ್ಟಿದ್ದೇವೆ. [ಮತ್ತಾಯ 13:38] ದೇವರ ರಾಜ್ಯವು ವ್ಯಾಪಕವಾಗಿದೆ ಮತ್ತು ಮನುಷ್ಯನ ಜೀವಿತದ ಎಲ್ಲಾ ಕ್ಷೇತ್ರದಲ್ಲಿಯೂ ಹರಡಿದೆ [ಮತ್ತಾಯ 13:31–33].

ಆತನು ಭೂಮಿಯ ಮೇಲೆ ತನ್ನ ರಾಜ್ಯವನ್ನು ವಾಸ್ತವಿಕವಾಗಿ ಸ್ಥಾಪಿಸಲು ಒಂದು ಸಮಯವಿದೆ, ಅದು ಬರುತ್ತದೆ. "ಆತನು ಯಾಕೋಬನ ವಂಶವನ್ನು ಸದಾಕಾಲ ಆಳುವನು, ಆತನ ರಾಜ್ಯಕ್ಕೆ ಅಂತ್ಯವೇ ಇಲ್ಲ" [ಲೂಕ 1:33].

ಆಡಳಿತವು ಅವನ ಬಾಹುವಿನ ಮೇಲಿರುವುದು ಸಿಂಹಾಸನದ ಆಡಳಿತವು ಅಭಿವೃದ್ಧಿಯಾಗುವುದು, ನಿತ್ಯ ಸಮಾಧಾನವಿರುವುದು ಆ ರಾಜ್ಯಕ್ಕೆ ಕೊನೆಯೆ ಇಲ್ಲಾ, ಆ ರಾಜ್ಯವೂ ಇಂದಿನಿಂದ ಯಾವಾಗಲೂ ನೀತಿನ್ಯಾಯುಗಳ ಮೂಲಕ ಸ್ಥಾಪಿತವಾಗಿ ಸ್ಥಿರಗೊಳ್ಳುವುದು [ಯೆಶಾಯ 9:6,7]. ಆತನ ಜನರುಗಳಿಗೆ ಆತನ ರಾಜ್ಯದ ಆಡಳಿತವನ್ನು ಒಪ್ಪಿಸಿಕೊಡುವನು ಭಕ್ತರು ಆ ರಾಜ್ಯವನ್ನು ಪಡೆದುಕೊಳ್ಳುವರು [ದಾನಿಯೇಲನು 7:22,27] ಇದನ್ನು ಕಾಲವು ಪ್ರಾರಂಭವಾಗುವುದಕ್ಕೆ ಮೊದಲೇ ದೇವರು ಆಲೋಚಿಸಿಕೊಂಡಿದ್ದರು. "ಬನ್ನಿರಿ ಲೋಕಾದಿಯಿಂದ ನಿಮಗೋಸ್ಕರ ಸಿದ್ದ ಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ" [ಮತ್ತಾಯ 25:34] ಎಂಬುದಾಗಿ ಎಲ್ಲಾ ಭಕ್ತರು ಆಹ್ವಾನಿಸಲ್ಪಟ್ಟಿದ್ದಾರೆ. ಈ ದೃಷ್ಟಿಕೋನದಲ್ಲಿ "ಆದಕಾರಣ ಯಾರೂ ಕದಲಿಸಲಾರದ ರಾಜ್ಯವನ್ನು ಹೊಂದುವವರಾದ ನಾವು ಕೃತಜ್ಞತೆಯುಳ್ಳವರಾಗಿದ್ದು ಆತನಿಗೆ ಸಮರ್ಪಕವಾದ ಆರಾಧನೆಯನ್ನು ಭಕ್ತಿಯಿಂದಲೂ ಭಯದಿಂದಲೂ ಮಾಡೋಣ" [ಇಬ್ರಿಯರಿಗೆ 12:28]

ಹೊಸ ಒಡಂಬಡಿಕೆಯಲ್ಲಿ "ದೇವರ ರಾಜ್ಯ" ಮತ್ತು "ಪರಲೋಕ ರಾಜ್ಯ" ಎಂಬುದಾಗಿ ಆಗಾಗ್ಗೆ ಉಪಯೋಗಿಸಲ್ಪಟ್ಟಿದೆ. ದೇವರ ರಾಜ್ಯವು ರಾಜ್ಯವಾಗಿದೆ. ಆತ್ಮಿಕ ಕ್ಷೇತ್ರವೆಂದು ಕರೆಯಲ್ಪಡುವ ಪರಲೋಕ, ಭೂಲೋಕ ಕ್ಷೇತ್ರದ ಹೊರಗಿನ ಕ್ಷೇತ್ರದಿಂದ ಇಂತಹ ರಾಜ್ಯವು ಉತ್ಪತ್ತಿಯಾಗಿದೆ ಎಂಬುದಾಗಿ ಪರಲೋಕ ರಾಜ್ಯವು ವಿಶ್ಲೇಷಿಸುತ್ತದೆ. "ನನ್ನ ರಾಜ್ಯವು ಈ ಲೋಕದ್ದಲ್ಲ" ಎಂಬುದಾಗಿ ಯೇಸುವು ಹೇಳಿದ್ದಾರೆ. [ಯೋಹಾನ 18:36].

# ದೇವರ ರಾಜ್ಯ ಮತ್ತು ಸಭೆ

**ಮತ್ತಾಯ 16:18–19**

**18 ನಾನು ನಿನಗೆ ಒಂದು ಮಾತನ್ನು ಹೇಳುತ್ತೇನೆ, ಅದೇನೆಂದರೆ – ನೀನು ಪೇತ್ರನು ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು. ಪಾತಾಳ ಲೋಕದ ಬಲವು ಅದನ್ನು ಸೋಲಿಸಲಾರದು. 19 ಪರಲೋಕರಾಜ್ಯದ ಬೀಗದ ಕೈಗಳನ್ನು ನಿನಗೆ ಕೊಡುವೆನು; ಮತ್ತು ಭೂಲೋಕದಲ್ಲಿ ನೀನು ಯಾವದನ್ನು ಕಟ್ಟುತ್ತೀಯೇ; ಅದು ಪರಲೋಕದಲ್ಲಿಯೂ ಕಟ್ಟಿರುವದು; ಮತ್ತು ಭೂಲೋಕದಲ್ಲಿ ನೀನು ಯಾವದನ್ನು ಬಿಚ್ಚುತ್ತೀಯೋ ಅದು ಪರಲೋಕದಲ್ಲಿಯೂ ಬಿಚ್ಚಿರುವದು ಅಂದನು.**

ಈ ಒಂದು ಯುಗದಲ್ಲಿ, ದೇವರ ರಾಜ್ಯವು, ತನ್ನ ಆತ್ಮಿಕ ರೂಪದಲ್ಲಿ (ತೋರಿಸುವಿಕೆಯಲ್ಲಿ) ಕ್ರಿಸ್ತನ ಅಂಗವಾದ ಸಭೆಯ ಮೂಲಕವಾಗಿ ಭೂಮಿಯ ಮೇಲೆ ಆಡಳಿತಗೊಳ್ಳಬೇಕು ಮತ್ತು ಬಿಡುಗಡೆಗೊಳ್ಳಬೇಕು. ಸಭೆಯು ದೇವರ ರಾಜ್ಯದ ಒಂದು ಭಾಗವಾಗಿದೆ ಮತ್ತು ದೇವರ ರಾಜ್ಯವನ್ನು ಭೂಮಿಯ ಮೇಲೆ ಪ್ರತಿನಿಧಿಸುವುದಾಗಿದೆ. "ನಿನ್ನ ರಾಜ್ಯವು ಬರಲಿ ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ [ಮತ್ತಾಯ 6:10] ಭೂಮಿಯ ಮೇಲೆ ಅರಸನಾದ ಕರ್ತನು ಅಪೇಕ್ಷಿಸುವಂತಹದ್ದನ್ನು ಜಾರಿಗೆ ತರುವಂತಹ ದೇವರ ರಾಜ್ಯದ ಅಧಿಕಾರದೊಂದಿಗೆ ಸಭೆಗಳು ಪಟ್ಟಭದ್ರಗೊಂಡಿವೆ. ಭೂಮಿಯ ಮೇಲೆ ದುರಾತ್ಮನ ಪ್ರಾಬಲ್ಯವನ್ನು ಪ್ರತಿಬಿಂಬಿಸುವ ಕೇಂದ್ರಗಳೆಂದು ಕರೆಯುವ "ನರಕದ ಬಾಗಿಲುಗಳ" [ಪಾತಾಳಲೋಕದ ಬಲವು] ಬಲವನ್ನು ಸೋಲಿಸುವುದಕ್ಕಾಗಿ ಸಭೆಯು ಅಧಿಕಾರ ಹೊಂದಿದೆ. ಯೇಸುವು ಮಾಡಿದ ರೀತಿಯಲ್ಲಿಯೇ, ನಾವು ದೇವರ ರಾಜ್ಯದ ಸುವಾರ್ತೆಯನ್ನು ಸಾರುವುದಕ್ಕಾಗಿ ನಾವು ಇಲ್ಲಿದ್ದೇವೆ.

[ಅಪೊಸ್ತಲರ ಕೃತ್ಯಗಳು 8:12, 14:22, 19:8, 20:2, 28:23, 31] ನಾವು ದೇವರ ರಾಜ್ಯದ ಕುರಿತು ಬೋಧಿಸುತ್ತೇವೆ, ದೇವರ ರಾಜ್ಯದ ಆಲೋಚನೆ (ಮನಸ್ಸು), ದೇವರ ರಾಜ್ಯದ ಸಂಸ್ಕೃತಿ, ಮತ್ತು ದೇವರ ರಾಜ್ಯದ ಜೀವನ ಶೈಲಿಯಲ್ಲಿ ಬೆಳೆಯುವುದನ್ನು ಕಲಿತಿದ್ದೇವೆ.

## ಸಭೆಯ ಸ್ವಾಭಾವಿಕ ವಿಸ್ತೀರ್ಣ

ಕರ್ತನಾದ ಯೇಸುಕ್ರಿಸ್ತನಲ್ಲಿರುವ ಎಲ್ಲಾ ವಿಶ್ವಾಸಿಗಳ ಆತ್ಮಿಕ ಅಂಗವು ಸಭೆಯಾಗಿದೆ. "ಪ್ರತಿಬುಡಕಟ್ಟಿನ, ಭಾಷೆಯ ಮತ್ತು ಜನರ ಮತ್ತು ರಾಷ್ಟ್ರಗಳಿಂದ" ಯಜ್ಞದ ಕುರಿಯಾದಾತನ ರಕ್ತದಿಂದ ಬಿಡುಗಡೆಹೊಂದಿದಂತಹ ಸ್ವಾಭಾವಿಕತೆ ತಿಳಪಡಿಸುವಂತಹ ಅಂಶವನ್ನು ಆತ್ಮಿಕ ಅಂಗವಾದ ಸಭೆಯು ಹೊಂದಿದೆ. ವಿಶ್ವಾಸಿಗಳಾಗಿ ನಾವು ವೈಯಕ್ತಿಕ ಆದ್ಯತೆಗಳನ್ನು, ಸ್ವಾಭಾವಿಕ ಸಂಸ್ಕೃತಿಗಳನ್ನು, ವಿಭಿನ್ನ ಸ್ಥಳೀಯ ಸಭೆಗಳಿಗೆ ಸೇರಿದವರು ಮತ್ತು ದೇವರು ನಮ್ಮ ಮಧ್ಯದಲ್ಲಿ ವಿವಿಧ ರೀತಿಯಲ್ಲಿ ಕಾರ್ಯ ಮಾಡುತ್ತಿರುವುದನ್ನು ನಾವು ಹೊಂದಿದ್ದೇವೆ. ನಾವುಗಳು, ಒಂದೇ ರೀತಿಯ ದೇವರ ರಾಜ್ಯಕ್ಕೆ ಸಂಬಂಧಿಸಿದವರು ಮತ್ತು ಅಂಗದ ಒಂದು ಭಾಗವಾಗಿದ್ದಾಗಲೂ ಸಹ ಇಂತಹ ಸ್ವಾಭಾವಿಕ ವಿಭಿನ್ನತೆಗಳು, ನಮ್ಮ ನಡುವೆ ಪ್ರತ್ಯೇಕತೆಗಳಿಗೆ ಕಾರಣಗಳಾಗಿವೆ. ಇಂತಹ ಭೇರ್ಪಡಿಸುವಂತಹ ಕಾರಣಗಳು, ಸಭೆಯು, ಇಬ್ಬಾಗವಾಗುವಂತಹ ಮನೆಯಾಗುವಂತೆ ಪರಿಣಾಮ ಬೀರುವ ಮತ್ತು ನಮ್ಮ ಮಧ್ಯದಲ್ಲಿ ವಿಭಾಗಗಳನ್ನುಂಟು ಮಾಡಲು ಕಾರಣಗಳಾಗುತ್ತವೆ ಮತ್ತು ದೇವರ ರಾಜ್ಯ ಇಬ್ಬಾಗವಾಗುತ್ತದೆ.

ದೇವರ ರಾಜ್ಯವನ್ನು ಸ್ಥಾಪಿಸುವುದಕ್ಕಾಗಿ ಒಟ್ಟಾಗಿ ಕೆಲಸ ಮಾಡುವುದು ಮತ್ತು ನಮ್ಮನ್ನು ವಿಭಾಗಿಸುವಂತಹ ಸಂಗತಿಗಳನ್ನು ಬಿಡಲು ಸಹಾಯ ಮಾಡುವುದಕ್ಕಾಗಿ "ದೇವರ ರಾಜ್ಯ ಕಟ್ಟುವವರ" ಬೋಧನೆಯ ಮುಖ್ಯ ಉದ್ದೇಶವಾಗಿದೆ.

## ವೈಯಕ್ತಿಕ ಅನ್ವಯ

ಪ್ರ.1. ನಿಮ್ಮ ಜೀವನ ಮತ್ತು ಸೇವೆಯಲ್ಲಿ ನೀವು ಹೋಗುವ ರೀತಿಯಲ್ಲಿ, ದೇವರ ರಾಜ್ಯದ ದೃಷ್ಟಿಕೋನದಿಂದ, ಸಂಗತಿಗಳನ್ನು ಸಾಮಾನ್ಯವಾಗಿ ನೀವು ವೀಕ್ಷಿಸುತ್ತೀರಾ?

ಪ್ರ.2. ಎಲ್ಲವನ್ನು ದೇವರ ರಾಜ್ಯದ ದೃಷ್ಟಿಕೋನದಿಂದ ಮಾಡುವುದಾದರೆ, ನಮ್ಮ ಜೀವಿತ ಮತ್ತು ಸೇವೆಗಳಲ್ಲಿ ಯಾವ ರೀತಿಯಲ್ಲಿ ವಿಷಯಗಳು ಬದಲಾಗಬಹುದು? ಅದು ಎಲ್ಲದರಲ್ಲಿಯೂ, ನೀವು ದೇವರ ರಾಜ್ಯವನ್ನು ಪ್ರತಿನಿಧಿಸುವುದು ಮತ್ತು ಜನರ ಹೃದಯಗಳಲ್ಲಿ

ಮತ್ತು ಜೀವಿತಗಳಲ್ಲಿ ದೇವರ ರಾಜ್ಯದ ವಿಸ್ತರಣೆಗಾಗಿ, ಕೆಲಸ ಮಾಡುವುದಾಗಿದೆ.

ಪ್ರ.3. ದೇವರ ರಾಜ್ಯದಿಂದ ಕಲಿಸಲ್ಪಟ್ಟ ಮೌಲ್ಯಗಳ ಮತ್ತು ಜೀವನ ಶೈಲಿ, ವೈಯಕ್ತಿಕ ಸಂಸ್ಕೃತಿ ಅಥವಾ ಆಧ್ಯತೆ ಅಥವಾ ಸಂಸ್ಕೃತಿ, ಮುಂತಾದವುಗಳು ನಿಮ್ಮ ಪರಿಶೀಲನೆಯಲ್ಲಿ, ಯಾವುದು ಬಹಳ ಪ್ರಾಮುಖ್ಯವಾಗಿದೆ?

ದೇವರ ರಾಜ್ಯದ ಕುರಿತ ಅಧ್ಯಯನಕ್ಕಾಗಿ, ಏ.ಪಿ.ಸಿ.ಯ “ದೇವರ ರಾಜ್ಯ” ಎಂಬ ಉಚಿತ ಪುಸ್ತಕವನ್ನು ದಯವಿಟ್ಟು ಉಪಯೋಗಿಸಿರಿ.

# ಅಧ್ಯಾಯ 2
# ಕ್ರಿಸ್ತನು - ದೇವರ ರಾಜ್ಯದ ಅರಸನು

ಭಾಗ್ಯವಂತನಾದ ಏಕಾಧಿಪತಿಯು ತನ್ನ ಕ್ಲುಪ್ತ ಸಮಯದಲ್ಲೇ ಆತನನ್ನು ಪ್ರತ್ಯಕ್ಷಪಡಿಸುವನು ಆ ಏಕಾಧಿಪತಿಯು ರಾಜಾಧಿರಾಜನೂ ಕರ್ತರ ಕರ್ತನೂ ತಾನೊಬ್ಬನೆ ಅಮರತ್ವ ಉಳ್ಳವನು ಆಗಮ್ಯವಾದ ಬೆಳಕಿನಲ್ಲಿ ವಾಸಮಾಡುವವನು ಆಗಿದ್ದಾನೆ. ಮನುಷ್ಯರಲ್ಲಿ ಯಾರೂ ಆತನನ್ನು ಕಾಣಲಿಲ್ಲ, ಯಾರೂ ಕಾಣಲಾರರು ಆತನಿಗೆ ಮಾನವೂ ನಿತ್ಯಾಧಿಪತ್ಯವೂ ಇರಲಿ. ಆಮೆನ್ (1 ತಿಮೊಥೆಯನಿಗೆ 6:15,16



# 2

# ಕ್ರಿಸ್ತನು - ದೇವರ ರಾಜ್ಯದ ಅರಸನು

ದೇವರ ರಾಜ್ಯವನ್ನು ಸ್ಥಾಪಿಸಲು ಮತ್ತು ವಿಸ್ತರಿಸುವ ಕಾರ್ಯದಲ್ಲಿ ಅಪೊಸ್ತಲನಾದ ಪೌಲನು ದೇವರಿಂದ ಅತಿಶಯವಾಗಿ ಉಪಯೋಗಿಸಲ್ಪಟ್ಟನು. ಅವನೊಬ್ಬ ನಿಜವಾದ ರಾಜ್ಯ ಕಟ್ಟುವವನು (ಸಂಸ್ಥಾಪಕ) ಅವನ ಹೃದಯವು ಕ್ರಿಸ್ತನನ್ನು ಮಹಿಮೆಪಡಿಸುವುದಕ್ಕಾಗಿಯೂ, ಜನರ ಜೀವಿತದಲ್ಲಿ ಆತನ ರಾಜ್ಯವು ಸ್ಥಾಪಿತವಾಗುವುದನ್ನು ಕಾಣುವುದಕ್ಕಾಗಿಯೂ ಮೀಸಲಾಗಿತ್ತು. ತನ್ನ ಪತ್ರಿಕೆಗಳಲ್ಲಿ ಪೌಲನು, ನಿಜವಾದ ರಾಜ್ಯ ಕಟ್ಟುವವ (ಸ್ಥಾಪಿಸುವವ)ರಾಗಲು ಬೇಕಾದ ಅರ್ಹತೆಗಳೇನೆಂಬುದನ್ನು ತಿಳಿಸಿಕೊಡುತ್ತಾನೆ. ಅಂತಹ ಒಂದು ವಾಕ್ಯ ಭಾಗದಿಂದ ನಾವು ಪ್ರಾರಂಭಿಸೋಣ.

1 ಕೊರಿಂಥದವರಿಗೆ 3 : 6, 9 - 11

**6ನಾನು ಸಸಿಯನ್ನು ನೆಟ್ಟೆನು, ಅಪೋಲ್ಲೋಸನು ನೀರು ಹೊಯಿದನು, ಆದರೆ ಬೆಳೆಸುತ್ತಾ ಬಂದವನು ದೇವರು, 9ನಾವು ದೇವರ ಜೊತೆ ಕೆಲಸದವರು, ನೀವು ದೇವರ ಹೊಲವು ದೇವರ ಕಟ್ಟಡವು ಆಗಿದ್ದೀರಿ. 10ದೇವರು ನನಗೆ ಕೃಪೆಯಿಂದ ಒಪ್ಪಿಸಿದ ಕೆಲಸವನ್ನು ನಡೆಸಿ ನಾನು ಪ್ರವೀಣಶಿಲ್ಪಿಯಂತೆ ಅಸ್ತಿವಾರ ಹಾಕಿದೆನು, ಮತ್ತೊಬ್ಬನು ಅದರ ಮೇಲೆ ಕಟ್ಟುತ್ತಾನೆ. ಪ್ರತಿಯೊಬ್ಬನು ತಾನು ಅದರ ಮೇಲೆ ಎಂಥದನ್ನು ಕಟ್ಟುತ್ತಾನೋ ಎಚ್ಚರಿಕೆಯಾಗಿರಬೇಕು. ''ಹಾಕಿರುವ ಅಸ್ತಿವಾರವು ಯೇಸು ಕ್ರಿಸ್ತನೇ ಅಸ್ತಿವಾರವನ್ನಲ್ಲದೆ ಮತ್ತೊಂದು ಅಸ್ತಿವಾರವನ್ನು ಯಾರೂ ಹಾಕಲಾರರಷ್ಟೆ''**

ನಾವು ಇಲ್ಲಿ ಹಲವು ಪ್ರಾಮುಖ್ಯವಾದ ವಿಷಯಗಳನ್ನು ನೋಡುತ್ತೇವೆ.

- ನಾವು ಅರಸನೊಂದಿಗೆ ಜೊತೆ ಕೆಲಸದವರು "ನಾವು ದೇವರ ಜೊತೆ ಕೆಲಸದವರು..." (ವ. 9) ಅರಸನೊಂದಿಗೆ ನಾವು ಜೊತೆ ಕೆಲಸದವರೆಂಬ ಸಂಗತಿ ನಮ್ಮನ್ನು ದೇವರ ಕಟ್ಟುವವರನ್ನಾಗಿ ಮಾಡುತ್ತದೆ. ಆತನ ರಾಜ್ಯವನ್ನು ಕಟ್ಟುವುದಕ್ಕಾಗಿ ಆತನೊಂದಿಗೆ ನಾವು ಕೆಲಸ ಮಾಡುತ್ತಿದ್ದೇವೆ.
- ದೇವರ ರಾಜ್ಯ ಕಟ್ಟುವದು ಜನರನ್ನು ಕಟ್ಟುವುದಾಗಿದೆ ''ನೀವು ದೇವರ ಕಟ್ಟಡವಾಗಿದ್ದೀರಿ''(ವ.9)
- ದೇವರ ರಾಜ್ಯದ ಕಟ್ಟುವಿಕೆಯು ಒಟ್ಟಾಗಿ ಕೆಲಸಮಾಡುವ ಪಾಲುಗಾರಿಕೆಯಾಗಿದೆ (ವಚನ 6.9.10)

- "ನಾನು ಸಸಿಯನ್ನು ನೆಟ್ಟೆನು ಅಪೋಲ್ಲೋಸನು ನೀರು ಹೊಯಿದನು," "ನಾನು ಅಸ್ತಿವಾರ ಹಾಕಿದೆನು ಮತ್ತೊಬ್ಬನು ಅದರ ಮೇಲೆ ಕಟ್ಟುತ್ತಾನೆ."
- ದೇವರು ಒಬ್ಬನನ್ನು ಬಿತ್ತಲು, ಮತ್ತೊಬ್ಬನನ್ನು ನೀರು ಹೊಯ್ಯಲು ಮತ್ತು ಇನ್ನೊಬ್ಬನನ್ನು ಕೊಯ್ಯಲು ಉಪಯೋಗಿಸುತ್ತಾನೆ. ದೇವರು ಒಬ್ಬನನ್ನು ಅಸ್ತಿವಾರ ಹಾಕಲು ಉಪಯೋಗಿಸಿದರೆ, ಮತ್ತೊಬ್ಬನ್ನು ಅದರ ಮೇಲೆ ಕಟ್ಟಲು ಮತ್ತು ಇನ್ನೊಬ್ಬನನ್ನು ಅದನ್ನು ಮುಂದುವರಿಸಲು ಉಪಯೋಗಿಸುತ್ತಾನೆ. ಪ್ರತಿಯೊಬ್ಬನ ಕೆಲಸವು ಏನು ಎಂಬುದಾಗಿ ಗಣನೆಗೆ ತೆಗೆದುಕೊಳ್ಳದೇ ಸಮಾನವಾಗಿ ಪ್ರಾಮುಖ್ಯವಾದುದಾಗಿದೆ. ಪ್ರತಿಯೊಬ್ಬನು ಸಮಾನವಾಗಿ ಪ್ರಮುಖನಾಗಿದ್ದಾನೆ.
- ದೇವರ ರಾಜ್ಯದ ಕಟ್ಟಡವು ಕ್ರಿಸ್ತನ ಕುರಿತಾಗಿದ್ದು (ವ 11) ಕ್ರಿಸ್ತನು ಅದರ ಅಸ್ತಿವಾರ ಮತ್ತು ಪ್ರಾರಂಭದ ಬಿಂದು (ಕಲ್ಲು) ಆಗಿದ್ದಾನೆ.

## ಅರಸನೊಂದಿಗಿನ ನಮ್ಮ ಸಂಬಂಧವು ಮುಖ್ಯ ಆದ್ಯತೆ

1 ಕೊರಿಂಥದವರಿಗೆ 3:11

**''ಹಾಕಿರುವ ಅಸ್ತಿವಾರವು ಯೇಸುಕ್ರಿಸ್ತನೇ; ಆ ಅಸ್ತಿವಾರವನ್ನಲ್ಲದೆ ಮತ್ತೊಂದು ಅಸ್ತಿವಾರವನ್ನು ಯಾರೂ ಹಾಕಲಾರರಷ್ಟೆ.''**

ದೇವರ ರಾಜ್ಯದ ಕಟ್ಟಡದಲ್ಲಿ ಕ್ರಿಸ್ತನು ಅದರ ಅಸ್ತಿವಾರ, ಮುಖ್ಯವಾದಾತನು ಮತ್ತು ಸರ್ವಶ್ರೇಷ್ಟನಾದಾತನೆಂಬುದನ್ನು ನಾವು ಯಾವಾಗಲು ಜ್ಞಾಪಕದಲ್ಲಿಟ್ಟುಕೊಳ್ಳಬೇಕು.

ದೇವರ ರಾಜ್ಯ ಕಟ್ಟುವವರಾಗಬೇಕಾದರೆ - ಅರಸನೊಂದಿಗಿನ ನಮ್ಮ ಸಂಬಂಧವು ಅತೀ ಪ್ರಾಮುಖ್ಯ. ಆತನಲ್ಲಿಯೇ ಎಲ್ಲವೂ ಪ್ರಾರಂಭವಾಗುತ್ತದೆ.

ನಮ್ಮಲ್ಲಿ ಅನೇಕ ಸಭಾಸೇವಕರು ಅರಸನೊಂದಿಗಿನ ಆಳವಾದ ವೈಯಕ್ತಿಕ ಸಂಬಂಧವನ್ನು ತ್ಯಜಿಸಿದವರಾಗಿ, 'ಧರ್ಮ ಪಂಗಡಗಳು' 'ಸಭಾಸೇವಕರುಗಳ ವ್ಯವಸ್ಥೆ' (ಜಾಲ) 'ಆತ್ಮಿಕ ಮುಚ್ಚಳ' 'ಸಭಾಸೇವಕರ ಸಂಸ್ಥೆ' ಅಥವಾ 'ಸಭಾಸೇವಕರ ಅನ್ಯೋನ್ಯತೆ' ಮುಂತಾದವುಗಳೊಂದಿಗೆ ತಮ್ಮ ಸಂಬಂಧದ ಕುರಿತು ತಲ್ಲೀನರಾಗಿರುವುದು ಕಂಡುಬರುತ್ತದೆ.

(ಧರ್ಮ ಪಂಗಡ, 'ಸಭಾ ಸೇವಕರ ವ್ಯವಸ್ಥೆ', 'ಆತ್ಮಿಕ ಮುಚ್ಚಳ' ಸಭಾ ಸೇವಕರ ಸಂಸ್ಥೆ ಅಥವಾ 'ಸುವಾರ್ತಾ ಸೇವಕನೊಂದಿಗಿನ ಅನ್ಯೋನ್ಯತೆ' ಮುಂತಾದವುಗಳು) ಅರಸನೊಂದಿಗಿನ ನಮ್ಮ ವೈಯ್ಯಕ್ತಿಕ ಸಂಬಂಧಕ್ಕೆ ಪ್ರತಿಯಾಗಿ ಆಗಲಾರವು.

ಜೊತೆ ಸಭಾಸೇವಕರೊಡನೆ ಉತ್ತಮ ಸಂಬಂಧ ಹೊಂದಿರುವುದು ಪ್ರಾಮುಖ್ಯ, ಆದರೆ ಅರಸನೊಂದಿಗಿನ ನಮ್ಮ ಸಂಬಂಧವು ನಮ್ಮನ್ನು ದೇವರರಾಜ್ಯ ಕಟ್ಟುವುದಕ್ಕೆ ಅರ್ಹರನ್ನಾಗಿ ಮಾಡುತ್ತದೆ.

ಕೊಲೊಸ್ಸೆಯವರಿಗೆ 1: 16-18

**[16]ಭೂಪರಲೋಕಗಳಲ್ಲಿರುವ ದೃಶ್ಯಾದೃಶ್ಯವಾದವುಗಳೆಲ್ಲವೂ ಸಿಂಹಾಸನಗಳಾಗಲಿ ಪ್ರಭುತ್ವಗಳಾಗಲಿ, ದೊರೆತನಗಳಾಗಲಿ, ಅಧಿಕಾರಗಳಾಗಲಿ ಆತನಲ್ಲಿ ಸೃಷ್ಟಿಸಲ್ಪಟ್ಟವು. ಸರ್ವವು ಆತನ ಮುಖಾಂತರವಾಗಿಯೂ, ಆತನಿಗೋಸ್ಕರವಾಗಿಯೂ ಸೃಷ್ಟಿಸಲ್ಪಟ್ಟಿತು. [17]ಆತನು ಎಲ್ಲಕ್ಕೂ ಮೊದಲು ಇದ್ದವನು, ಆತನು ಸಮಸ್ತಕ್ಕೂ ಆಧಾರಭೂತನು [18]ಸಭೆಯೆಂಬ ದೇಹಕ್ಕೆ ಆತನು ಶಿರಸ್ಸು, ಆತನು ಆದಿಸಂಭೂತನು, ಎಲ್ಲಾದರಲ್ಲಿ ಪ್ರಮುಖನಾಗುವಂತೆ ಸತ್ತವರೊಳಗಿಂದ ಮೊದಲು ಎದ್ದು ಬಂದವನು ಆತನೇ.**

ದೇವರ ರಾಜ್ಯದ ಕಟ್ಟಡದಲ್ಲಿ ಎಲ್ಲಾ ಸಂಗತಿಗಳು ಆತನಿಂದಲೇ, ಆತನಿಗಾಗಿ, ಆತನ ಮೂಲಕವೇ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು ಮತ್ತು ಎಲ್ಲಾ ವಿಷಯಗಳಲ್ಲೂ ಆತನೇ ಸರ್ವಶ್ರೇಷ್ಟನು ಮತ್ತು ಮೊದಲನೆಯವನು ಎಂಬುದನ್ನು ತಿಳಿಯಬೇಕು.

ಕ್ರಿಸ್ತನು ಅಗ್ರಗಣ್ಯನಾಗಿರದಿದ್ದರೆ, ನಾವು ಮಾಡುವಂತಹ ಕೆಲಸಗಳು ಕ್ರಿಸ್ತನ ರಾಜ್ಯದ ಕಟ್ಟಡದಲ್ಲಿ ಎಣಿಕೆಯಾಗಿರುವುದಿಲ್ಲ.

ನನ್ನ ಸಂದೇಶದ ಕೊನೆಯಲ್ಲಿ, ಜನರು ದೇವರು ಮತ್ತು ಆತನ ವಚನಕ್ಕೆ ಬದಲಾಗಿ ನನ್ನ ಬಗ್ಗೆ ಅಧಿಕವಾಗಿ ಆಸಕ್ತರಾಗಿ ಉದ್ರೇಕಗೊಂಡರೆ, ಆಗ ನನ್ನ ಸಂದೇಶವು ದೇವರ ರಾಜ್ಯದ ಕಟ್ಟುವಿಕೆಯಲ್ಲಿ ಸೇವೆ ಸಲ್ಲಿಸಲಿಲ್ಲವೆಂದು ಅರ್ಥವಾಗುತ್ತದೆ. ನಾನು ದೇವರ ರಾಜ್ಯದ ನಿರ್ಮಾಣಿಕನಾಗಿ ಸೇವೆಮಾಡಲಿಲ್ಲವೆಂದು ದೃಡಪಡುತ್ತದೆ.

## ದೇವರ ರಾಜ್ಯವು ನನ್ನದೂ ಅಲ್ಲ ನಿಮ್ಮದೂ ಅಲ್ಲ ಆದರೆ ಆತನದು.

ಮತ್ತಾಯ 6.10

**[10]ನಿನ್ನ ರಾಜ್ಯವು ಬರಲಿ. ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ.**

ಇದು ಆತನ ರಾಜ್ಯ. 'ನನ್ನ ಸೇವೆ', 'ನನ್ನ ಸಭೆ', 'ನಿಮ್ಮ ಸೇವೆ' ಅಥವಾ 'ನಿಮ್ಮ ಸಭೆ'ಗೆ ಸಂಬಂಧಪಟ್ಟದ್ದಲ್ಲ ನಮ್ಮಲ್ಲಿರುವಂತಹದ್ದು, ನಾವು ಮಾಡುವಂತಹದ್ದು ಎಲ್ಲವೂ ಆತನದೇ! ನಾವು ಒಟ್ಟಾಗಿ ಆತನ ರಾಜ್ಯವನ್ನು ಕಟ್ಟುತ್ತಿದ್ದೇವೆ.

ಆತನ ರಾಜ್ಯವು ಬರುವುದನ್ನು ನೋಡುವುದೊಂದೆ ನಮ್ಮ ಇಚ್ಛೆಯಾಗಿರಬೇಕು. ನಮ್ಮಲ್ಲಿ ಅನೇಕರು ''ನನ್ನ ಸೇವೆಯು ಬರಲಿ'' ಎಂಬುದನ್ನು ನೋಡುವುದರಲ್ಲಿ ಸಿಲುಕಿಕೊಂಡಿದ್ದಾರೆ. ಇದು ನಿಶ್ಚಿತವಾಗಿ ಅನಾರೋಗ್ಯಕರವಾದುದು.!

ಆತನು ಭೂಲೋಕದಲ್ಲಿ ಮಾಡಬೇಕಾದ ಕಾರ್ಯಗಳನ್ನು ಮಾಡಲು ನಾವು ಇಲ್ಲಿದ್ದೇವೆ. ಪರಲೋಕದಲ್ಲಿರುವ ತಂದೆಯು ಆತನ ಚಿತ್ತವನ್ನು ವ್ಯಕ್ತಪಡಿಸುತ್ತಾನೆ. ಭೂಮಿಯ ಮೇಲೆ ಆತನ ಜನರು ಇದನ್ನು ನಿರ್ವಹಿಸಬೇಕೆಂದು ಆತನು ನೋಡುತ್ತಾನೆ.

## ನಾವು ದೇವರೊಬ್ಬನನ್ನೇ ಮಹಿಮೆ ಪಡಿಸುವುದನ್ನು ಹುಡುಕಬೇಕು

ಮತ್ತಾಯ 6. 13

**13''ರಾಜ್ಯವೂ, ಬಲವೂ, ಮಹಿಮೆಯೂ ಸದಾಕಾಲ ನಿನ್ನವೇ'' ಆಮೇನ್.**

ಎಲ್ಲಾ ಮಹಿಮೆಯು ಆತನೊಬ್ಬನಿಗೇ ಸಲ್ಲಬೇಕು.

ದೇವರ ರಾಜ್ಯ ಕಟ್ಟುವವರಾಗಿ ದೇವರೊಬ್ಬನನ್ನೇ ಮಹಿಮೆಪಡಿಸುವುದೇ ನಮ್ಮ ಉದ್ದೇಶವಾಗಿರಬೇಕು. ನಮಗೋಸ್ಕರ ಒಂದು ಸಣ್ಣಪಾಲು ಮಹಿಮೆಯನ್ನೂ ಮತ್ತು ಯಾವುದೇ ಮಾನವನ್ನೂ ಬಯಸದೇ ಇರಬೇಕು.

ಯೋಹಾನ 7:18

**18ತನಗೆ ಮಾನಬರಬೇಕೆಂದು ಅಪೇಕ್ಷಿಸುತ್ತಾನೆ ತನ್ನನ್ನು ಕಳುಹಿಸಿದವನಿಗೆ ಮಾನ ಬರಬೇಕೆಂದು ಅಪೇಕ್ಷಿಸುವವನು ಸತ್ಯವಂತನು ಅಧರ್ಮವು ಅವನಲ್ಲಿ ಇಲ್ಲ.''**

ನಾವು ಯಾವಾಗ ದೇವರನ್ನೇ ಮಹಿಮೆಪಡಿಸಬೇಕೆಂದು ಹುಡುಕುತ್ತೇವೋ, ಆಗ ನಮ್ಮ ಹೃದಯಗಳು ಪವಿತ್ರವಾಗಿರುತ್ತವೆ ಮತ್ತು ಯಾವುದೇ ಅಧರ್ಮ ನಮ್ಮೊಳಗೆ ಇರುವುದಿಲ್ಲ.

ಅನೇಕ ವೇಳೆ ನಮ್ಮ ಹೃದಯಗಳು ದೇವರಿಗೆ ''ಅಧಿಕ ಪಾಲು ಮಹಿಮೆಕೊಡುವುದರಲ್ಲೂ ಆದರೆ ಸ್ವಲ್ಪ ಭಾಗ ಮಹಿಮೆಯನ್ನು ನಾವು ಹೊಂದಬೇಕೆಂಬ ಇಚ್ಛೆಯಿಂದಲೂ ಮಿಶ್ರಗೊಂಡು ಕಲುಷಿತವಾಗಿರುತ್ತವೆ. ನಾವು ಇಂತಹವುಗಳಿಂದ ದೂರಸರಿಯಬೇಕು ಮತ್ತು ಕರ್ತನಿಗೊಬ್ಬನಿಗೇ ಮಹಿಮೆ ಸಲ್ಲಿಸುವ ಸ್ಥಿತಿಗೆ ಬರಬೇಕು.

ಯೆಶಾಯ 42:8

**[8]ನಾನೇ ಯೆಹೋವನು; ಇದೇ ನನ್ನ ನಾಮವು; ನನ್ನ ಮಹಿಮೆಯನ್ನು ಮತ್ತೊಬ್ಬನಿಗೆ ಸಲ್ಲಗೊಡಿಸೆನು, ನನ್ನ ಸ್ತೋತ್ರವನ್ನು ವಿಗ್ರಹಗಳ ಪಾಲು ಮಾಡೆನು.**

ದೇವರು ಅಗೌರವ ಸಹಿಸದ ದೇವರಾಗಿದ್ದಾನೆ. ಆತನಿಗೆ ಸಲ್ಲತಕ್ಕ ಗೌರವನ್ನು ಮತ್ತೊಬ್ಬನಿಗೆ ಸಲ್ಲಗೊಡಿಸುವುದಿಲ್ಲ. (ವಿಮೋಚನಕಾಂಡ 20:5, 34:14) ಹೀಗಿರವುದರಿಂದ ಆತನ ಸಭಾ ಸೇವಕರಾದ ನಾವು ಯಾಕೆ ಎಚ್ಚರಿಕೆ ವಹಿಸುವುದರಲ್ಲಿ ಹಿಂಜರಿಯುತ್ತೇವೆ ನಮ್ಮ ಸ್ವಂತ ಬಲ, ಮಹತ್ಕಾರ್ಯಗಳು ಜರುಗಿದ ನಮ್ಮ ಸದ್ಗುಣ, ನಮ್ಮ ಮಾತುಗಳು, ನಮ್ಮ ಮೃದು ಜಾಹಿರಾತುಗಳು, ನಮ್ಮ ದೈಹಿಕ ಭಾಷೆ, ನಮ್ಮ ಸೇವೆಗಳ ವರದಿಗಳು ಮತ್ತು ಸಾಕ್ಷಿಗಳು ಇವುಗಳಿಂದ ಜನರ ದೃಷ್ಟಿ ನಮ್ಮ ಮೇಲೆ ಬೀಳಬೇಕೆಂದು ಸಜ್ಜುಗೊಳಿಸುತ್ತೇವೆ.

ಜನರೇನಾದರೂ ಒಂದು ಕ್ಷಣ ಬೇರೆ ಕಡೆ ದೃಷ್ಟಿಹರಿಸಿದರೆ ನಮಗೆ ಬೆದರಿಕೆ ಯುಂಟಾಗುತ್ತದೆ! ಇದು ಪೇತ್ರನು ಮತ್ತು ಯೋಹಾನನು ಹುಟ್ಟುಕುಂಟನನ್ನು ಸ್ವಸ್ಥ ಮಾಡಿ ಜನರ ಗುಂಪನ್ನು ಉದ್ದೇಶಿಸಿ ''ನೀವು ಯಾಕೆ ಇದಕ್ಕೆ ಆಶ್ಚರ್ಯ ಪಡುತ್ತೀರಿ? ನೀವು ನಮ್ಮ ಮೇಲೆ ದೃಷ್ಟಿಯಿಟ್ಟು ನೋಡುವುದೇನು? ನಾವು ಸ್ವಂತಃ ಶಕ್ತಿಯಿಂದಾಗಲಿ ದೇವಭಕ್ತಿಯಿಂದಾಗಲಿ ಇವನನ್ನು ನಡೆಯುವಂತೆ ಮಾಡಿದೆವೆಂದು ಭಾವಿಸಬೇಡಿರಿ'' ಎಂದು ಹೇಳಿದಂತೆ ಇಲ್ಲ. (ಅಪೊಸ್ತಲರ ಕೃತ್ಯಗಳು 3:12) ಆ ಮೇಲೆ ಅವರು ಜೀವಿಸುವ ದೇವರು ಮತ್ತು ಆತನ ಮಗನಾದ ಯೇಸುಕ್ರಿಸ್ತನನ್ನೇ ಎತ್ತಿ ತೋರಿಸಿದರು. ದೇವರಿಗೆ ಎಲ್ಲವುಗಳಲ್ಲಿ ಮಹಿಮೆ ಸಲ್ಲಿಸಲು ಹಿಂಜರಿಯಬಾರದು.

ಯೋಹಾನ 5 : 41

**[41]ನಾನು ಮನುಷ್ಯರಿಂದಾಗುವ ಮಾನವನ್ನು ಅಂಗೀಕರಿಸುವುದಿಲ್ಲ.**

ಮನುಷ್ಯರಿಂದ ಮಾನವನ್ನು ಹೊಂದುವ ಅಪೇಕ್ಷೆ ಇಲ್ಲದೆ ದೇವರ ಮುಂದೆ ನಿಲ್ಲುವ ಒಂದು ಸ್ಥಳಕ್ಕೆ ಬರಬೇಕು. ನಮ್ಮ ಹೃದಯಗಳು ಮಾನವನಿಂದ ಬರುವ ಯಾವುದೇ ಬಗೆಯ ಗೌರವವನ್ನು ಸಂಪೂರ್ಣವಾಗಿ ಶೂನ್ಯವೆಂದು ಪರಿಗಣಿಸಬೇಕು. ಇದು ನೈಜ ದೇವರ ರಾಜ್ಯ ಕಟ್ಟುವವನೆಂದು ವ್ಯಕ್ತಪಡಿಸುತ್ತದೆ.

ಯೋಹಾನ 8:54. ಅ

**[54]ಯೇಸು ಉತ್ತರಿಸಿದ್ದೇನೆಂದರೆ, ''ನನ್ನನ್ನು ನಾನೇ ಮಹಿಮೆ ಪಡಿಸಿಕೊಂಡರೆ ನನ್ನ ಮಹಿಮೆ ಹುರುಳಿಲ್ಲದ್ದು''**

ತನಗೆ ತಾನೇ ಕೊಟ್ಟುಕೊಂಡ ಗೌರವವು ನಿಜವಾದ ಗೌರವವಲ್ಲ ಮತ್ತು ಇದು ಯಾವುದೇ ಪ್ರಯೋಜನವಿಲ್ಲದ್ದು, ಬರಿದಾದುದಾಗಿದೆ.

ಯೋಹಾನ 5:44

**[44]ಒಬ್ಬನೇ ದೇವರಿಂದ ಬರುವಂಥ ಮಾನವನ್ನು ಅಪೇಕ್ಷಿಸದೇ ಒಬ್ಬರಿಂದೊಬ್ಬರು ಮಾನವನ್ನು ಅಂಗೀಕರಿಸುವವರಾದ ನೀವು ಹೇಗೆ ನಂಬೀರಿ?**

ದೇವರ ರಾಜ್ಯ ಕಟ್ಟುವವರಾಗಿ ನಾವು ಮನುಷ್ಯರಿಂದ ಯಾವುದೇ ರೀತಿಯಲ್ಲೂ ಮಾನವನ್ನು ಅಪೇಕ್ಷಿಸದೇ ದೇವರೊಬ್ಬನಿಂದ ಬರುವ ಮಾನವನ್ನು ಅಪೇಕ್ಷಿಸುವ ಸ್ಥಿತಿಗೆ ಬರಬೇಕು.

ಯಾವಾಗ ನಾವು ಮನುಷ್ಯನಿಂದ ಬರುವ ಮಾನವನ್ನು ಬಯಸದೇ ಪರಲೋಕದ ಮೆಚ್ಚಿಕೆಯಲ್ಲಿ ಜೀವಿಸುವವರಾಗಿದ್ದೇವೋ ಆಗ ನಾವು ನಿಜವಾಗಿ ದೇವರೊಬ್ಬನನ್ನೇ ಮಹಿಮೆ ಪಡಿಸುವುದನ್ನು ಹುಡುಕುವವರಾಗಿರುತ್ತೇವೆ. ಫರಿಸಾಯರು ಮತ್ತು ಕಪಟಿಗಳು ಜನರು ನೋಡಲಿ ಎಂದು ಕಾರ್ಯಗಳನ್ನು ಮಾಡಿದರು ಜನರಿಂದ ಹೊಗಳಿಸಿಕೊಳ್ಳಬೇಕೆಂದು ಬಯಸಿದರು ಇಂತಹ ಪ್ರೇರಣೆಗಳ ಬಗ್ಗೆ ಯೇಸುವು ಎಚ್ಚರಿಕೆ ನೀಡಿದ್ದನು ಮತ್ತು ದೇವರಿಂದ ನೋಡಲ್ಪಟ್ಟವರಾಗಿ, ಮೇಲಿನಿಂದ ಬರುವ ಬಹುಮಾನವನ್ನು ಹೊಂದಿಕೊಳ್ಳಬೇಕೆಂದು ನಮಗೆ ಉಪದೇಶಿಸಿದ್ದಾನೆ. (ಮತ್ತಾಯ 6:1-6; 23;5)

ಯೋಹಾನ 12:42,43

**[42]ಆದರೂ ಹಿರೀಸಭೆಯವರಲ್ಲಿಯೂ ಅನೇಕರು ಆತನನ್ನು ನಂಬಿದರು. ಆದರೆ ತಮಗೆ ಸಭೆಯಿಂದ ಬಹಿಷ್ಕಾರವಾದೀತೆಂದು ಫರಿಸಾಯರಿಗೆ ಅಂಜಿಕೊಂಡು ಅದನ್ನು ಜನರ ಮುಂದೆ ಹೇಳಲಿಲ್ಲ. [43]ಯಾಕೆಂದರೆ ದೇವರಿಂದ ಬರುವ ಮಾನಕ್ಕಿಂತ ಮನುಷ್ಯರಿಂದ ಬರುವ ಮಾನವೇ ಅವರಿಗೆ ಇಷ್ಟವಾಗಿತ್ತು.**

ದೇವರಿಂದ ಬರುವ ಮೆಚ್ಚಿಗೆ ಮತ್ತು ಮನುಷ್ಯರ ಗೌರವ ಇವುಗಳಲ್ಲಿ ನಮ್ಮ ಹೃದಯುವು ಯಾವುದಕ್ಕೆ ತವಕಿಸುತ್ತದೆಂದು ಪರೀಕ್ಷಿಸಿಕೊಳ್ಳಬೇಕು ಮನುಷ್ಯರಿಂದ ಅಂಗೀಕಾರವನ್ನು ಕಳೆದುಕೊಳ್ಳುವ ಪರಿಸ್ಥಿತಿ ಮತ್ತು ಅವರಿಂದ ತಿರಸ್ಕಾರಗಳನ್ನು ಎದುರಿಸುತ್ತಿರುವ ಸ್ಥಿತಿಗಳಲ್ಲಿ ನಾವು ಯಾವುದನ್ನು ಮಾಡಲು ಆರಿಸಿಕೊಳ್ಳುತ್ತೇವೆಂಬುದು ಪ್ರಾಮುಖ್ಯ. ಇಂತಹ ಪರಿಸ್ಥಿತಿಗಳಲ್ಲಿ ನಾವಿದ್ದೇವೋ ನಿಶ್ಚಿತವಾಗಿ ''ದೇವರ ಮೆಚ್ಚಿಗೆ''ಯನ್ನು ಆರಿಸಿಕೊಳ್ಳಿರಿ. ''ಮನುಷ್ಯರ ಮೆಚ್ಚಿಗೆ'' ಬೇಡವೇ ಬೇಡ?

ಗಲಾತ್ಯ 1:10

**[10]ನಾನೀಗ ಯಾರನ್ನು ಒಲಿಸಿಕೊಳ್ಳುತ್ತಾ ಇದ್ದೇನೆ? ಮನುಷ್ಯರನ್ನೋ? ದೇವರನ್ನೋ? ನಾನು ಮನುಷ್ಯರನ್ನು ಮೆಚ್ಚಿಸುವದಕ್ಕೆ ಪ್ರಯತ್ನಿಸುತ್ತಾಇದ್ದೇನೋ? ಇನ್ನು ಮನುಷ್ಯರನ್ನು ಮೆಚ್ಚಿಸುವವನಾಗಿದ್ದರೆ ನಾನು ಕ್ರಿಸ್ತನ ದಾಸನಲ್ಲ.**

ನೀನು ಮನುಷ್ಯನನ್ನು ಮೆಚ್ಚಿಸುವವನಾಗಿದ್ದರೆ ದೇವರ ಸೇವಕನಾಗಲು ಸಾಧ್ಯವಿಲ್ಲ.

1 ಥೆಸಲೋನಿಕದವರಿಗೆ 2:4-6 - ಅ

**[4]ದೇವರು ನಮ್ಮನ್ನು ಯೋಗ್ಯರೆಂದೆಣಿಸಿ ಸುವಾರ್ತೆಯನ್ನು ನಮ್ಮ ವಶಕ್ಕೆ ಒಪ್ಪಿಸಿದನಲ್ಲಾ ಎಂದು ಯೋಚಿಸುವವರಾಗಿ ಮನುಷ್ಯರನ್ನು ಮೆಚ್ಚಿಸಬೇಕೆನ್ನದೇ ಹೃದಯವನ್ನು ಪರಿಶೋಧಿಸುವ ದೇವರನ್ನೇ ಮೆಚ್ಚಿಸಬೇಕೆಂದು ಮಾತಾಡುತ್ತೇವೆ. [5]ನಿಮಗೆ ತಿಳಿದಿರುವ ಪ್ರಕಾರ ನಾವು ಎಂದಿಗೂ ಮುಖಸ್ತುತಿಯನ್ನು ಮಾಡುವವರಾಗಿ ಕಾಣಬಂದಿಲ್ಲ, ಮತ್ತು ದ್ರವ್ಯಾಶೆಯನ್ನು ಮರೆಮಾಡುವದಕ್ಕಾಗಿ ವೇಷವನ್ನು ಹಾಕಿಕೊಂಡವರಾಗಿಲ್ಲ ಇದಕ್ಕೆ ದೇವರೇ ಸಾಕ್ಷಿ [6]ಇದಲ್ಲದೆ ನಾವು ಕ್ರಿಸ್ತನ ಅಪೊಸ್ತಲರಾಗಿರುವದರಿಂದ ನಮಗೆ ಗೌರವವನ್ನು ಕೊಡಬೇಕೆಂದು ಹೇಳಬಹುದಾಗಿದ್ದರೂ ಮನುಷ್ಯರಿಂದ ಬರುವ ಮಾನವನ್ನು ನಿಮ್ಮಿಂದಾಗಲಿ ಇತರರಿಂದಾಗಲಿ ಹೊಂದಲಪೇಕ್ಷಿಸುವವರಾಗಿಲ್ಲ.**

ನಾವು ಪ್ರಸಂಗಿಸುವಾಗ/ಬೋಧಿಸುವಾಗ/ಸೇವೆ ಸಲ್ಲಿಸುವಾಗ, ನಮ್ಮ ಹೃದಯಗಳು ಯಾವಾಗಲೂ ಮನುಷ್ಯರ ಬದಲಾಗಿ ದೇವರನ್ನು ಮೆಚ್ಚಿಸುವಂತಹ ಪ್ರೇರಣೆಗಳಿಂದ ತುಂಬಿರಬೇಕು. ನಾವು ಮಾಡುವಂತಹ ಕಾರ್ಯಗಳಿಂದ ಮನುಷ್ಯರಿಂದ ಮೆಚ್ಚಿಗೆ ಬರಬೇಕೆಂಬುದಾಗಿ ಹಂಬಲಿಸಿದರೆ, ಆಗ ನಮ್ಮ ಹೃದಯಗಳ ಪ್ರಚೋದನೆಗಳು ಪವಿತ್ರವಾಗಿರುವುದಿಲ್ಲ.

ಕೀರ್ತನೆಗಳು 115:1

**[1]ನಮ್ಮನ್ನಲ್ಲ, ಯೆಹೋವನೇ, ನಮ್ಮನ್ನಲ್ಲ, ನಿನ್ನ ಪ್ರೀತಿ ಸತ್ಯತೆಗಳ ನಿಮಿತ್ತವಾಗಿ ನಿನ್ನ ಹೆಸರನ್ನೇ ಘನಪಡಿಸು.**

ನಮ್ಮ ಹೃದಯಗಳನ್ನು ಪವಿತ್ರವಾಗಿಡಲು ಮತ್ತು ಸರಿಯಾದ ಮಾರ್ಗದಲ್ಲಿ ಇಡಲು ಆಗಾಗ್ಗೆ ಪ್ರಾರ್ಥನೆಯನ್ನು ಮಾಡುವವರಾಗಿರಬೇಕು.

## ಭೂಮಿಯ ಮೇಲಿನ ನಮ್ಮ ಅಧಿಕಾರವು, ಅರಸನಿಗೆ ನಮ್ಮನ್ನು ಸಮರ್ಪಿಸಿಕೊಳ್ಳುವುದರ ಅಧೀನತೆಯಲ್ಲಿದೆ.

ಭೂಮಿಯ ಮೇಲಿನ ನಮ್ಮ ಅಧಿಕಾರವು, ಅರಸನಿಗೆ ನಾವು ನಮ್ಮನ್ನು ಸಮರ್ಪಿಸಿಕೊಳ್ಳುವುದರ ವಿಶಾಲತೆಯ ಮೇಲೆ ಆಧರಿಸಿದೆ.

ಯಾಕೋಬನು 4:7

**[7]ಹೀಗಿರಲಾಗಿ ದೇವರಿಗೆ ಒಳಗಾಗಿರಿ. ಸೈತಾನನನ್ನು ಎದುರಿಸಿರಿ. ಅವನು ನಿಮ್ಮನ್ನು ಬಿಟ್ಟು ಹೋಗುವನು**

ಏದೆನ್ ತೋಟದಲ್ಲಿ ಎರಡು ಮರಗಳಿದ್ದವು ಮೊದಲನೆಯದರ ಹಣ್ಣನ್ನು ತಿನ್ನುವುದು ಮನುಷ್ಯನು ದೀರ್ಘವಾದ ಜೀವಿತ ಜೀವಿಸಲು ಶಕ್ತಗೊಳಿಸುವಂಥದ್ದು. ಎರಡನೆಯದರ ಹಣ್ಣನ್ನು ತಿನ್ನದಿದ್ದರೆ - ಇದು ಮನುಷ್ಯನು ಭೂಮಿಯ ಮೇಲೆ ಪ್ರಭುತ್ವವನ್ನು ಪ್ರಯೋಗಿಸಲು ಶಕ್ತಗೊಳಿಸುವಂಥದ್ದು ಅವನು ತಿನ್ನಬಾರದ ಮರದ ಹಣ್ಣನ್ನು ತಿಂದ ದಿನವೇ ಅವನು ಭೂಮಿಯ ಮೇಲಿನ ಪ್ರಭುತ್ವ (ದೊರೆತನ) ಕಳೆದುಕೊಂಡನು.

ದೇವರಿಗೆ, ನಮ್ಮ ವಿಧೇಯತೆ ಮತ್ತು ಅಧೀನತೆಯು, ದೇವರ ರಾಜ್ಯದ ಅಧಿಕಾರದ ಕೀಲಿಕೈಗಳಾಗಿವೆ.

## ನಾವು ಮನುಷ್ಯನಲ್ಲಿ ಮಹಿಮೆ ಹೊಂದುವುದು ಬೇಡ

**1 ಕೋರಿಂಥದವರಿಗೆ 1:11–13**

**ಯಾಕೆಂದರೆ ನನ್ನ ಸಹೋದರರೇ, ನಿಮ್ಮಲ್ಲಿ ಜಗಳಗಳುಂಟೆಂದು ನಿಮ್ಮ ವಿಷಯದಲ್ಲಿ ಖ್ಲೋಯೆಯ ಮನೆಯವರಿಂದ ನನಗೆ ತಿಳಿದುಬಂತು. ನಿಮ್ಮೊಳಗೆ ಪ್ರತಿಯೊಬ್ಬನು– ನಾನು ಪೌಲನವನು, ಇಲ್ಲವೆ–ನಾನು ಅಪೊಲ್ಲೋಸನವನು, ಅಥವಾ–ನನು ಕೇಫನವನು,**

**ಇಲ್ಲವೆ– ನಾನು ಕ್ರಿಸ್ತನವನು ಎಂದು ಹೇಳಿಕೊಳ್ಳುತ್ತಾನಂತೆ. ಕ್ರಿಸ್ತನು ವಿಭಾಗವಾಗಿದ್ದಾನೋ? ನಿಮಗೋಸ್ಕರ ಶಿಲುಬೆಗೆ ಹಾಕಿಸಿಕೊಂಡವನು ಪೌಲನೋ? ನೀವು ಪೌಲನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಿರೋ?**

1 ಕೊರಿಂಥದವರಿಗೆ 3:21

**''ಆದಕಾರಣ ಮನುಷ್ಯ ಮಾತ್ರದವರ ವಿಷಯದಲ್ಲಿ ಯಾರೂ ಹಿಗ್ಗದಿರಲಿ ಯಾಕೆಂದರೆ ಸಮಸ್ತವೂ ನಿಮ್ಮದು.''**

1 ಕೊರಿಂಥದವರಿಗೆ 4:6

**6 ಸಹೋದರರೇ, ನಾನು ನಿಮಗೋಸ್ಕರವೇ ಹಿಂದಣ ಮಾತುಗಳನ್ನು ಸಾಮ್ಯರೂಪವಾಗಿ ನನ್ನ ವಿಷಯದಲ್ಲಿಯೂ ಅಪೊಲ್ಲೋಸನ ವಿಷಯದಲ್ಲಿಯೂ ಹೇಳಿದ್ದೇನೆ. ನೀವು ನಮ್ಮನ್ನು ದೃಷ್ಟಾಂತವಾಗಿ ಇಟ್ಟುಕೊಂಡು ಶಾಸ್ತ್ರದಲ್ಲಿ ಬರೆದಿರುವುದನ್ನು ಮೀರಿ ಹೋಗಬಾರದೆಂಬದನ್ನೂ ನಿಮ್ಮಲ್ಲಿ ಯಾರೋ ಒಬ್ಬ ಬೋಧಕನನ್ನು ವಿರೋಧಿಸಿ ಮತ್ತೊಬ್ಬನ ಪಕ್ಷವನ್ನು ಹಿಡಿದು ಉಬ್ಬಿಕೊಳ್ಳಬಾರದೆಂಬದನ್ನೂ ಕಲಿತುಕೊಳ್ಳಬೇಕು.**

ಕ್ರಿಸ್ತೀಯ ನಾಯಕರಾಗಿರುವವರನ್ನು ನಾವು ಗೌರವಿಸಬೇಕು ಮತ್ತು ಸನ್ಮಾನಿಸಬೇಕು. ''ಒಬ್ಬನನ್ನು ವಿರೋಧಿಸಿ ಮತ್ತೊಬ್ಬನ ಮುಖಸ್ತುತಿ ಮಾಡುವ'' ವಿಷಯಗಳಲ್ಲಿ ನಾವು ಅತಿ ಜಾಗರೂಕರಾಗಿರಬೇಕು.

ನಾವು ಯಾವಾಗ ಒಬ್ಬ ಮನುಷ್ಯನನ್ನು ಅಥವಾ ವ್ಯಕ್ತಿಯನ್ನು ಅವರ ಯುಕ್ತವಾದ ಸ್ಥಳದಿಂದ ಮೇಲಕ್ಕೆ ಎತ್ತಿ ತೋರಿಸುತ್ತೇವೋ ಆಗ ನಾವು ದೇವರ ರಾಜ್ಯದಲ್ಲಿ ವಿಭಾಗಗಳನ್ನು ಮತ್ತು ಒಡಕುಗಳನ್ನು ಉತ್ಪತ್ತಿಮಾಡಲು ಪ್ರಾರಂಭಿಸುತ್ತೇವೆ. ಆಗ ದೇವರ ರಾಜ್ಯದ ನಿರ್ಮಾಣಿಕರಾಗುವ ಬದಲು ದೇವರ ರಾಜ್ಯವನ್ನು ವಿಭಾಗಿಸುವವರಾಗಿ ಕಾಣಿಸಿಕೊಳ್ಳುತ್ತೇವೆ.

ನಿಮ್ಮಿಂದ ಎಲ್ಲಾ ಕಾರ್ಯಗಳು ಜರಗುತ್ತವೆ ಎಂಬುದಾಗಿ ಆಲೋಚಿಸಿದರೆ ಅಥವಾ ನೀವು ಮಾಡುತ್ತಿರುವ ಕಾರ್ಯಗಳಲ್ಲಿ, ನಿಮ್ಮನ್ನು ನೀವೇ ಮೇಲೆತ್ತಿ ಅಥವಾ ಹೆಚ್ಚಿಸಿಕೊಂಡರೆ, ನೀವು ಮನುಷ್ಯನಲ್ಲಿ ಹೆಚ್ಚಳ ಪಡುವವನಾಗಿರುತ್ತೀರಿ.

ನೀವು ಅಧಿಕವಾಗಿ ಆತ್ಮಿಕತೆಯುಳ್ಳವರು, ಅಧಿಕವಾಗಿ ದೇವರಿಗೆ ಸೂಕ್ಷ್ಮ ಮನಸ್ಸಿನವರು ಅಧಿಕವಾಗಿ ಪ್ರಾರ್ಥಿಸುವವರು, ಬೇರೆಯವರಿಗಿಂತ ಹೆಚ್ಚಾಗಿ ಅಭಿಷೇಕ

ಹೊಂದಿದವರಾಗಿದ್ದಾರೆಂಬುದಾಗಿ ನಿಮ್ಮನ್ನು ನೀವೇ ಮೇಲೆತ್ತಿಕೊಂಡರೆ ಅಥವಾ ಹೆಚ್ಚಿಸಿಕೊಂಡರೆ, ನೀವು ಮನುಷ್ಯನಲ್ಲಿ ಹೆಚ್ಚಳ ಪಡುವವನಾಗಿರುತ್ತೀರಿ.

## ಎಲ್ಲಾ ವಿಷಯಗಳಿಗೆ ನ್ಯಾಯ ತೀರ್ಪುಮಾಡುವ ಕರ್ತನಿಗೆ ನಾವು ಲೆಕ್ಕ ಒಪ್ಪಿಸುವವರಾಗಿದ್ದೇವೆ.

1 ಕೊರಿಂಥದವರಿಗೆ 4:3-5

**[3]ನನಗಾದರೋ ನಿಮ್ಮಿಂದಾಗಲಿ ಮನುಷ್ಯರು ನೇಮಿಸುವ ದಿನದಲ್ಲಾಗುವ ನ್ಯಾಯ ಸಭೆಯಿಂದಾಗಲಿ ವಿಚಾರಣೆಯಾಗುವದು ಅತ್ಯಲ್ಪ ಕಾರ್ಯವಾಗಿದೆ; ನಾನೂ ನನ್ನನ್ನು ವಿಚಾರಿಸಿಕೊಳ್ಳುವುದಿಲ್ಲ [4]ನನ್ನಲ್ಲಿ ದೋಷವಿದೆಯೆಂದು ನನ್ನ ಬುದ್ಧಿಗೆ ತೋರುವುದಿಲ್ಲವಾದರೂ ದೋಷವಿಲ್ಲದವನೆಂಬ ನಿರ್ಣಯವು ಇದರಿಂದಾಗುವುದಿಲ್ಲ; ನನ್ನನ್ನು ವಿಚಾರಣೆ ಮಾಡುವವನು ಕರ್ತನೇ [5]ಆದುದರಿಂದ ಕಾಲಕ್ಕೆ ಮೊದಲು ಯಾವದನ್ನು ಕುರಿತೂ ತೀರ್ಪು ಮಾಡಬೇಡಿರಿ; ಕರ್ತನು ಬರುವ ತನಕ ತಡೆಯಿರಿ. ಆತನು ಕತ್ತಲೆಯಲ್ಲಿರುವ ಗುಪ್ತಕಾರ್ಯಗಳನ್ನು ಬೆಳಕಿಗೆ ತರುವನು ಹೃದಯದ ಯೋಚನೆಗಳನ್ನು ಪ್ರತ್ಯಕ್ಷ ಪಡಿಸುವನು; ಆ ಕಾಲದಲ್ಲಿ ಪ್ರತಿಯೊಬ್ಬನಿಗೆ ಬರತಕ್ಕ ಹೊಗಳಿಕೆಯು ದೇವರಿಂದ ಬರುವದು.**

2 ಕೊರಿಂಥದವರಿಗೆ 5:9-11

**[9]ಆದುದರಿಂದ ನಾವು ದೇಹವೆಂಬ ಮನೆಯಲ್ಲಿದ್ದರೂ ಸರಿಯೇ, ಅದನ್ನು ಬಿಟ್ಟಿದ್ದರೂ ಸರಿಯೇ, ಕರ್ತನಿಗೆ ಮೆಚ್ಚುವವರಾಗಿರಬೇಕೆಂಬದೇ ನಮ್ಮ ಗುರಿಯಾಗಿದೆ [10]ಯಾಕೆಂದರೆ ಪ್ರತಿಯೊಬ್ಬನು ತನ್ನ ದೇಹದ ಮೂಲಕ ನಡೆಸಿದ ಒಳ್ಳೇದಕ್ಕಾಗಲಿ ಕೆಟ್ಟದ್ದಕ್ಕಾಗಲಿ ಸರಿಯಾಗಿ ಪ್ರತಿಫಲವನ್ನು ಹೊಂದುವದಕ್ಕೋಸ್ಕರ ನಾವೆಲ್ಲರೂ ಕ್ರಿಸ್ತನ ನ್ಯಾಯಾಸನದ ಮುಂದೆ ಯಥಾಸ್ಥಿತಿಯಲ್ಲಿ ಕಾಣಿಸಿಕೊಳ್ಳಬೇಕು.'' [11]ಕರ್ತನ ಭಯವು ನಮಗಿರುವದರಿಂದ ನಾವು ಮನುಷ್ಯರನ್ನು ಒಡಂಬಡಿಸುತ್ತೇವೆ. ನಾವು ಮನುಷ್ಯರನ್ನು ಒಡಂಬಡಿಸುತ್ತೇವೆ. ನಾವು ಯಥಾರ್ಥರೆಂಬುದು ದೇವರಿಗೆ ಗೊತ್ತುಂಟು ನಿಮ್ಮ ಮನಸ್ಸಿಗೆ ಕೂಡ ಗೊತ್ತಾಗಿದೆ ಎಂದು ನಂಬಿಕೊಂಡಿದ್ದೇನೆ.**

ಕರ್ತನು ನಮ್ಮ ಸುತ್ತಲೂ ಇರಿಸಿರುವ ಎಲ್ಲರಿಗೂ ನಾವು ಲೆಕ್ಕ ಒಪ್ಪಿಸುವವರಾಗಿವುದು ಪ್ರಾಮುಖ್ಯ. ಆದರೆ ದೇವರಿಗೆ ಜವಾಬ್ಧಾರರಾಗಿರುವದು ಇನ್ನೂ ಪ್ರಮುಖವಾದುದು. ಕೊನೆಯಲ್ಲಿ ಎಲ್ಲಾ ವಿಷಯಗಳಿಗೆ ನ್ಯಾಯತೀರ್ಪು ಮಾಡುವ ಕರ್ತನಿಗೆ ನಾವು ಜವಾಬ್ದಾರರಾಗಿದ್ದೇವೆ.

ಲೆಕ್ಕ ಒಪ್ಪಿಸುವಿಕೆ ಅಥವಾ ಜವಾಬ್ಧಾರಿಕೆ (ಹೊಣೆಗಾರಿಕೆ) ಎಂದರೆ, ಸರಳವಾಗಿ

- ದೇವರಿಗೆ ಯಥಾರ್ಥವಾಗಿರುವುದು

- ನಮಗೆ ಯಥಾರ್ಥವಾಗಿರುವುದು
- ನಮ್ಮ ಕುಟುಂಬಗಳಿಗೆ ಯಥಾರ್ಥವಾಗಿರುವುದು
- ನಾವು ಸೇವೆ ಸಲ್ಲಿಸುವವರಿಗೆ ಯಥಾರ್ಥವಾಗಿರುವುದು
- ನಮ್ಮ ಜೀವಿತಗಳನ್ನು ನೋಡಿಕೊಳ್ಳುವವರಿಗೆ ಯಥಾರ್ಥವಾಗಿರುವುದು

ನಾವು ಮೊದಲೆರಡರಲ್ಲಿ ಸೋತು ಹೋದರೆ, ಉಳಿದ ಮೂರು ವಿಷಯಗಳಲ್ಲಿ ಸೋಲಲು ಹಿಂಜರಿಯುವುದಿಲ್ಲ.

ನಾವು ನ್ಯಾಯತೀರ್ಪಿಗೆ ಒಳಗಾಗುತ್ತೇವೆ. ನಾವು ಸಾಧಿಸಿದ ಕಾರ್ಯಗಳ ಗಾತ್ರದ ಬದಲಾಗಿ ನಾವು ಯಾವ ಉದ್ದೇಶದಿಂದ ಪ್ರೇರಣೆ ಹೊಂದಿ ಕಾರ್ಯಗಳನ್ನು ಮಾಡಿದ್ದೇವೆಂಬುದಕ್ಕೆ ನ್ಯಾಯತೀರ್ಪಿಗೆ ಒಳಗಾಗುತ್ತೇವೆ.

ನಾವು ಮಾಡಿದ ಅನೇಕ ಮಹತ್ಕಾರ್ಯಗಳಿಂದ ನ್ಯಾಯ ತೀರ್ಪಿಗೆ ಒಳಗಾಗುವುದಿಲ್ಲ ಆದರೆ ತಂದೆಯ ಚಿತ್ತಕ್ಕೆ ನಮ್ಮ ವಿಧೇಯತೆಗಾಗಿ ನ್ಯಾಯತೀರ್ಪಿಗೆ ಒಳಗಾಗುತ್ತೇವೆ. (ಮತ್ತಾಯ 7:21-23)

ನಾವು ನಮ್ಮ ಕರೆಯ ಮಹತ್ವ ಅಥವಾ ವರಗಳಿಂದ ತೀರ್ಪಿಗೆ ಒಳಗಾಗುವುದಿಲ್ಲ ಆದರೆ ಅವುಗಳನ್ನು ಮಾಡಿ ಮುಗಿಸಿದ ನಂಬಿಗಸ್ತಿಕೆಗಾಗಿ ತೀರ್ಪಿಗೆ ಒಳಗಾಗುತ್ತೇವೆ. (ಮತ್ತಾಯ 25:21)

ಪ್ರಕಟನೆ 3:1.2

**[1]'ಸಾರ್ದಿಸಿನಲ್ಲಿರುವ ಸಭೆಯದೂತನಿಗೆ ಬರೆ - ದೇವರ ಏಳು ಆತ್ಮಗಳೂ ಏಳು ನಕ್ಷತ್ರಗಳೂ ಉಳ್ಳಾತನು ಹೇಳುವುದೇನೆಂದರೆ - ನಿನ್ನ ಕೃತ್ಯಗಳನ್ನು ಬಲ್ಲೆನು; ಜೀವಿಸುವವನು ಎಂದು ಹೆಸರು ನಿನಗಿದ್ದರೂ ಸತ್ತವನಾಗಿದ್ದೀ ಎಂಬುದನ್ನು ಬಲ್ಲೆನು. [2]ಎಚ್ಚರವಾಗಿರು; ಸಾಯುವ ಹಾಗಿದ್ದ ಉಳಿದವುಗಳನ್ನು ದೃಢಪಡಿಸು. ನನ್ನ ದೇವರ ಮುಂದೆ ನಿನ್ನ ಕೃತ್ಯಗಳೆಲ್ಲಾ ಒಂದಾದರೂ ಸಂಪೂರ್ಣವಾದದ್ದೆಂದು ನಾನು ಕಾಣಲಿಲ್ಲ.**

'ಜೀವಿ'ಸುವವರು ಎಂದು ನಾವು ಮನುಷ್ಯರ ಮಧ್ಯದಲ್ಲಿ ಪ್ರಸಿದ್ಧಿ ಹೊಂದುವುದು ಸಾಧ್ಯವೇ, ಆದರೆ ದೇವರ ಗಣನೆಯಲ್ಲಿ''ಸತ್ತವನಾಗಿದ್ದೀ'' ಎಂಬುದಾಗಿ ಕಾಣಿಸುತ್ತೇವೆ.

ಮನುಷ್ಯರ ಮುಂದೆ ''ಅಭಿಷೇಕಿಸಲ್ಪಟ್ಟವರು'' ಎಂಬುದಾಗಿ ಎಣಿಸಿಕೊಳ್ಳುವುದು ಸಾಧ್ಯವೇ ಆದರೆ ದೇವರು ನಮ್ಮೊಂದಿಗೆ ಆಶಾ ಭಂಗವುಳ್ಳವನಾಗಿರಬಹುದು.

ನಮ್ಮ ಕೃತ್ಯಗಳು ಮತ್ತು ಸಭಾಸೇವೆಗಳು ದೇವರ ಮುಂದೆ ಯೋಗ್ಯವಾಗಿರಬೇಕೆಂಬುದೇ ನಮ್ಮ ಇಚ್ಛೆಯಾಗಿರಬೇಕು.

## ದೇವರ ರಾಜ್ಯ ಕಟ್ಟುವವರ ಹೃದಯ ಹೊಂದಿದವರಾಗಿ

ದೇವರ ರಾಜ್ಯ ಕಟ್ಟುವವರ ಹೃದಯಗಳು ಸಂಪೂರ್ಣವಾಗಿ ಅರಸನಾದ ಕ್ರಿಸ್ತನಿಗೆ ಭಕ್ತಿಯುಳ್ಳದ್ದಾಗಿರಬೇಕು.

ದೇವರ ರಾಜ್ಯ ಕಟ್ಟುವವರ ಹೃದಯವು ಕ್ರಿಸ್ತನೊಬ್ಬನನ್ನೇ ಮಹಿಮೆಪಡಿಸುವುದನ್ನು ಮಾತ್ರ ಹುಡುಕುವುದಾಗಿರಬೇಕು.

ದೇವರ ರಾಜ್ಯ ಕಟ್ಟುವವರ ಹೃದಯವು ಮನುಷ್ಯರಿಂದ ಯಾವುದೇ ರೀತಿಯ ಮಾನವನ್ನು ಹೊಂದಿಕೊಳ್ಳುವುದಿಲ್ಲ.

ದೇವರ ರಾಜ್ಯ ಕಟ್ಟುವವರ ಹೃದಯವು ಮನುಷ್ಯನಿಂದ ಗೌರವ ಹೊಂದಿಕೊಳ್ಳುವುದಿಲ್ಲ.

ದೇವರ ರಾಜ್ಯ ಕಟ್ಟುವವರ ಹೃದಯವು, ಅದರ ಪ್ರಚೋದನೆಗಳಲ್ಲಿ ಪವಿತ್ರವಾಗಿರುತ್ತದೆ.

ದೇವರು ನಿಮ್ಮಲ್ಲಿ ದೇವರ ರಾಜ್ಯ ಕಟ್ಟುವವನ ಹೃದಯವನ್ನು ಸೃಷ್ಟಿಸುವಂತೆ ಪ್ರಾರ್ಥಿಸಿರಿ. ಇಲ್ಲಿಯೇ ದೇವರ ರಾಜ್ಯ ಕಟ್ಟುವ ಕೆಲಸ ಪ್ರಾರಂಭವಾಗುವುದು. ''ಕರ್ತನೇ ದೇವರ ರಾಜ್ಯ ಕಟ್ಟುವವನ ಹೃದಯವನ್ನು ನನಗೆ ಕೊಡು''

## (ವೈಯಕ್ತಿಕವಾಗಿ) ಸ್ವಂತಕ್ಕೆ ಅನ್ವಯಿಸಿಕೊಳ್ಳುವುದು

ಪ್ರ 1. ದೇವರ ರಾಜ್ಯವನ್ನು ಕಟ್ಟುವಾಗ, ಅರಸನೊಂದಿಗೆ ನಮ್ಮ ಸಂಬಂಧವನ್ನು ನಿರಂತರವಾಗಿ ನಿಕಟಗೊಳಸುವುದನ್ನು ಮರೆತು ಬಹಳ ಸುಲಭವಾಗಿ ರಾಜ್ಯವನ್ನು ಕಟ್ಟುವುದರಲ್ಲಿಯೇ ತಲ್ಲೀನವಾಗಿಬಿಡುವುದು ಸಾಧ್ಯವಿದೆ. ಕರ್ತನಾದ ಯೇಸುಕ್ರಿಸ್ತನೊಂದಿಗೆ ನಿನ್ನ ಸಂಬಂಧವನ್ನು ನಿರಂತರವಾಗಿ ನಿಕಟಗೊಳಸಲು ನೀನು ಕ್ರಮವಾಗಿ ಪಾಲಿಸುವ ಸಂಗತಿಗಳೇನು?

ಪ್ರ 2. ನಾವು ದೇವರನ್ನು ಮಾತ್ರ ಮಹಿಮೆ ಪಡಿಸಲು ಬಯಸಿದಾಗ ಮಾತ್ರವೇ ನಮ್ಮ ಹೃದಯಗಳು ಅನೀತಿಗೆ ಹೊರತಾಗಿ ಶುದ್ಧವಾಗಿರುತ್ತದೆ. ನೀನು ಮಾಡುವ ಸೇವೆಯಲ್ಲಿ ನೀನು ಪ್ರಾಮಾಣಿಕವಾಗಿ ದೇವರನ್ನು ಮಾತ್ರವೇ ಮಹಿಮೆ ಪಡಿಸುವಿಯೋ? ನಿನ್ನ ಸೇವೆಯು ಗುರುತಿಸಲ್ಪಡದೆ, ಮೆಚ್ಚಿಗೆ ಹೊಂದದೆ ಹೊಗಳಲ್ಪಡದೆ ಹೋದಾಗ ನಿನಗೆ ವ್ಯಥೆಯಾಗುತ್ತದೆಯೇ?

ಪ್ರ 3. ನೀನು ಉಳಿದ ದೇವರ ಸೇವಕರೊಂದಿಗೆ ವ್ಯವಹರಿಸುವಾಗ ನೀನು ಯಾವ ಸೇವಾ ಸಂಸ್ಥೆಯ ಭಾಗವಾಗಿದ್ದೇಯೋ ಅದರ ಹೆಸರಿನ ಮೇಲೆ ಗುರುತಿಸಿಕೊಂಡು ಗರ್ವ ಪಡುತ್ತೀಯೋ? ನೀನು ಇತರರ ಮಧ್ಯೆ ಉಬ್ಬಿಕೊಳ್ಳಲು ಇದು ಕಾರಣವಾಗಿದೆಯೋ?

ದೇವರ ಸೇವಕನಲ್ಲಿ ಸ್ವಾರ್ಥ, ಕಾಮಾಭಿಲಾಶೆ, ಗರ್ವ ಮತ್ತು ಹೊಟ್ಟೆಕಿಚ್ಚು ಇವುಗಳನ್ನು ವರ್ಜಿಸುವುದು ಹೇಗೆಂದು ತಿಳಿಯಲು ಉಚಿತವಾಗಿ ಪ್ರಕಾಶನ ಪಡಿಸಿರುವ ಎಪಿಸಿಯವರು 'ಬೇರುಗಳಿಗೆ ಕೊಡಲಿ ಹಾಕುವುದು' ಎಂಬ ಪುಸ್ತಕವನ್ನು ಪುನರಾವಲೋಕಿಸಿರಿ.

# ಅಧ್ಯಾಯ 3

# ಪವಿತ್ರಾತ್ಮನು ನಿರ್ದೇಶಕನು

ದೇವರ ಆತ್ಮನು ನೀನು ಏನು ಭೇದ ಮಾಡದೆ ಅವರ ಜೊತೆಯಲ್ಲಿ ಹೋಗು.... (ಅಪೊಸ್ತಲರ ಕೃತ್ಯಗಳು 11:12)



# 3
# ಪವಿತ್ರಾತ್ಮನು ನಿರ್ದೇಶಕನು

ದೇವರ ರಾಜ್ಯವನ್ನು ಕಟ್ಟುವ ಪ್ರಕ್ರಿಯೆಯಲ್ಲಿ ನಾವು ಪವಿತ್ರಾತ್ಮನಿಂದ ನಿರ್ದೇಶನ ಮತ್ತು ನಡಿಸುವಿಕೆಗೆ ನಾವು ಅಧೀನರಾಗುವುದು ಬಹು ಅವಶ್ಯವಾಗಿದೆ. ಸತ್ಯವೇನೆಂದರೆ, ನಮ್ಮ ಕ್ರಿಸ್ತೀಯ ಜೀವಿತದಲ್ಲಿ ನಾವು ಮಾಡುವ ಎಲ್ಲಾ ಸಂಗತಿಗಳಲ್ಲಿ ಮತ್ತು ಆಗ ಬಯಸುವುದರಲ್ಲಿ ಪವಿತ್ರಾತ್ಮನನ್ನು ಹಿಂಬಾಲಿಸುತ್ತಾ ನಡೆಯಬೇಕು. ನಮ್ಮ ಕಸುಬು ಯಾವುದಿದ್ದರೂ ನಮ್ಮನ್ನು ನಡೆಸುವವನು ದೇವರಾತ್ಮನೇ ಆಗಿರಬೇಕು.

## ಯಾರು ತಂದೆಯ ಚಿತ್ತವನ್ನು ಮಾಡುತ್ತಾರೋ ಅವರು ನಿತ್ಯತ್ವದಲ್ಲಿ ಬಹುಮಾನ ಹೊಂದಿದವರು

ಯಾರು ತಮ್ಮ ಸ್ವಂತ ಚಿತ್ತವನ್ನು ಮಾಡದೇ, ತಂದೆಯ ಚಿತ್ತವನ್ನು ಮಾತ್ರ ಮಾಡುತ್ತಾರೋ ಅವರು ನಿತ್ಯತ್ವದಲ್ಲಿ ಬಹುಮಾನ ಹೊಂದಿದವರಾಗಿರುತ್ತಾರೆ.

ಮತ್ತಾಯ 7:21-23

**21ನನ್ನನ್ನು ಸ್ವಾಮಿ ಸ್ವಾಮಿ, ಅನ್ನುವವರೆಲ್ಲರು ಪರಲೋಕ ರಾಜ್ಯದಲ್ಲಿ ಸೇರುವರೆಂದು ನೆನಸಬೇಡಿರಿ; ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ ನಡೆಯುವವನೇ ಪರಲೋಕ ರಾಜ್ಯಕ್ಕೆ ಸೇರುವನು 22ಸ್ವಾಮಿ, ಸ್ವಾಮಿ, ನಿನ್ನ ಹೆಸರಿನ ಮೇಲೆ ನಾವು ಬೋಧನೆ ಹೇಳಲಿಲ್ಲವೇ? ನಿನ್ನ ಹೆಸರಿನ ಮೇಲೆ ದೆವ್ವಗಳನ್ನು ಬಿಡಿಸಲಿಲ್ಲವೇ? ನಿನ್ನ ಹೆಸರಿನ ಮೇಲೆ ಅನೇಕ ಮಹತ್ಕಾರ್ಯಗಳನ್ನು ಮಾಡಲಿಲ್ಲವೇ ಎಂದು ಆ ದಿನದಲ್ಲಿ ಎಷ್ಟೋ ಜನರು ನನಗೆ ಹೇಳುವರು 23ಆಗ ನಾನು. ಅವರಿಗೆ - ನಾನೆಂದೂ ನಿಮ್ಮ ಗುರುತು ಕಾಣೆನು; ಧರ್ಮವನ್ನು ಮೀರಿನಡೆಯುವವರೇ, ನನ್ನಿಂದ ತೊಲಗಿ ಹೋಗಿರಿ ಎಂದು ಎಲ್ಲರ ಮುಂದೆ ಹೇಳಿ ಬಿಡುವೆನು.**

'ಆತನ ಹೆಸರಿನಲ್ಲಿ' ಹಲವು ಮಹತ್ಕಾರ್ಯಗಳನ್ನು ಮಾಡುವುದು ಸಾಧ್ಯ ಆದಾಗ್ಯೂ ಆತನೊಂದಿಗೆ ವೈಯಕ್ತಿಕ ಸಂಬಂಧ ಶೂನ್ಯವಾಗಿರಬಹುದು

'ಆತನ ಹೆಸರಿನಲ್ಲಿ' ಅನೇಕ ಅದ್ಭುತಕಾರ್ಯಗಳನ್ನುಮಾಡುವುದು ಸಾಧ್ಯ ಆದಾಗ್ಯೂ ಸ್ವೇಚ್ಛೆಗಳನ್ನು ಮಾಡುವ (ಕಾನೂನು ಕಟ್ಟಳೆ ಇಲ್ಲ)ದವನೆಂದು ಕರೆಯಲ್ಪಡಬಹುದು.

''ಆತನ ಹೆಸರಿನಲ್ಲಿ'' ಅನೇಕ ಅದ್ಭುತಕಾರ್ಯಗಳನ್ನು ಮಾಡುವದು ಸಾಧ್ಯವೇ ಆದಾಗ್ಯೂ ತಂದೆಯ ಚಿತ್ತವನ್ನು ಮಾಡುವುದರಲ್ಲಿ ಸೋತಿರಬಹುದು.

ಹಲವು ಬಾರಿ ಯೋಜನೆಗಳನ್ನು, ಕಾರ್ಯಕ್ರಮಗಳನ್ನು, ಸಭಾಸೇವೆಗಳನ್ನು ಆರಂಭಿಸಿ ಆಮೇಲೆ ಅದಕ್ಕೆ ಕರ್ತನ ಹೆಸರಿನಲ್ಲಿ ಎಂಬುದಾಗಿ ಸೇರಿಸುತ್ತೇವೆ. ಹೀಗೆ ಮಾಡುವದು ದೇವರ ಚಿತ್ತವಾಗುವುದೆಂದು ನೆನಸುತ್ತೇವೆ.

ಆತನನ್ನು ಅರಿಯುವುದು ಆತನ ಚಿತ್ತವನ್ನು ತಿಳಿಯುವುದು ನೀತಿಯನ್ನು ಅಭ್ಯಾಸಿಸುವುದು ನಮ್ಮ ಪ್ರಥಮ ಆದ್ಯತೆಯಾಗಿರಬೇಕು. ಆಮೇಲೆ ಆತನ ಹೆಸರಿನಲ್ಲಿ, ಆತನು ಕರೆಯಲ್ಪಟ್ಟ ಕಾರ್ಯಗಳನ್ನು ಮಾಡಲು ಮುಂದುವರಿಯಬೇಕು.

ಯಾವಾಗ ನಾವು ಒಳ್ಳೆಯ ಮರವನ್ನು ಬೆಳೆಸುತ್ತೇವೋ, ಆಗ ಅದರ ಹಣ್ಣುಗಳು ಸಹ ಒಳ್ಳೆಯದಾಗಿರುತ್ತದೆ.

## ಪವಿತ್ರಾತ್ಮನು ನಮಗೆ ಭೂಮಿಯ ಮೇಲೆ ತಂದೆಯ ಚಿತ್ತವನ್ನು ಪ್ರಕಟಪಡಿಸುತ್ತಾನೆ

ಯೋಹಾನ 16: 13-15

**13 ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡೆಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು. ಆತನು ತನ್ನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ಮಾತುಗಳನ್ನೇ ಆಡುವನು ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುತ್ತಾ ನನ್ನನ್ನೇ ಮಹಿಮೆ ಪಡಿಸುವನು. 15 ತಂದೆಗೆ ಇರುವದೆಲ್ಲಾ ನನ್ನದು ಆದುದರಿಂದಲೇ ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಸುವೆನೆಂದು ಹೇಳಿದೆನು.**

ಕರ್ತನಾದ ಯೇಸು ಮಾತಾಡುವ ವಿಷಯಗಳನ್ನೇ ಪವಿತ್ರಾತ್ಮನು ನಮ್ಮೊಳಗೆ ಮಾತನಾಡುತ್ತಾನೆ. ಇದನ್ನು ತಂದೆಯು ಮಗನಾದ ಯೇಸುವಿಗೆ ಪ್ರಕಟಿಸುತ್ತಾನೆ. ಮತ್ತು ಪವಿತ್ರಾತ್ಮನು ಇದನ್ನು ನಮ್ಮ ಹೃದಯಗಳಿಗೆ ಮಾತಾಡುತ್ತಾನೆ.

ಪವಿತ್ರಾತ್ಮನು ಕಾಲಕ್ಕೆ ಮೊದಲೇ ನಡೆಯಬೇಕಾದ ಸಂಗತಿಗಳನ್ನು ಪ್ರಕಟಿಸುತ್ತಾನೆ. ಭವಿಷ್ಯದಲ್ಲಿ ನಮ್ಮ ಜೀವಿತದಲ್ಲಿ ನಡೆಯಬೇಕಾದವುಗಳನ್ನು ಆತನು ಮೊದಲೇ ನಮ್ಮ ಹೃದಯದಲ್ಲಿ ಅರುಹುತ್ತಾನೆ. ನಾವದನ್ನು

ನಮ್ಮ ಆತ್ಮದಲ್ಲಿ ಇಟ್ಟುಕೊಂಡು ಆತನು ಯಾವ ಕೆಲಸ ಮಾಡಬೇಕೆಂದು ಸೂಚಿಸುತ್ತಾನೋ ಅದಕ್ಕಾಗಿ ತಾಳ್ಮೆಯಿಂದ ನಮ್ಮನ್ನು ಸಿದ್ಧಪಡಿಸಿಕೊಳ್ಳಬೇಕೆಂದು ಆತನು ಬಯಸುತ್ತಾನೆ.

ಪವಿತ್ರಾತ್ಮನು ಯಾವಾಗಲೂ ಯೇಸುವನ್ನೇ ಮಹಿಮೆ ಪಡಿಸುತ್ತಾನೆ. ಪವಿತ್ರಾತ್ಮನ ಮಾತುಗಳು ಕರ್ತನಾದ ಯೇಸುವನ್ನು ಹೊಗಳಿ ಮಹಿಮೆಪಡಿಸುತ್ತವೆ. ನಾನು ಇಂಥದನ್ನು ಮಾಡಲು ಕರ್ತನು ಬಯಸುತ್ತಾನೆ ಎಂದು ಪವಿತ್ರಾತ್ಮನು ನನಗೆ ಹೇಳಿದನೆಂದು ನಾನು ನಂಬಿದರೂ, ಆ ಕೆಲಸದಿಂದ ನನಗೆ ಹೊಗಳಿಕೆ ಮತ್ತು ಅನುಮೋದನೆ ಬರುವುದು ಎಂದಾದಲ್ಲಿ ಆ ವಿಷಯವು ನನಗೆ ಪವಿತ್ರಾತ್ಮನ ಕಡೆಯಿಂದ ಬಂದದ್ದಲ್ಲವೆಂದು ನಾನು ಖಚಿತಪಡಿಸಿಕೊಳ್ಳಬಹುದು.

ರೋಮಾಪುರದವರಿಗೆ 8:14

**[14]ಯಾರಾರು ದೇವರ ಆತ್ಮನಿಂದ ನಡೆಸಿಕೊಳ್ಳುತ್ತಾರೋ ಅವರು ದೇವರ ಮಕ್ಕಳು.**

ದೇವರ ಮಗನು ಮತ್ತು ಮಗಳಾಗಿ ದೇವರ ಆತ್ಮನಿಂದ ನಡೆಸಿಕೊಳ್ಳುವ ಅವಕಾಶವು ನಮಗಿದೆ.

ಆದುದರಿಂದ, ದೇವರ ಮನಸ್ಸು ಮತ್ತು ಹೃದಯವನ್ನು ನಾವು ತಿಳಿಯಬಹುದು. ಪವಿತ್ರಾತ್ಮನಿಂದ ಪ್ರಕಟಗೊಂಡಂತೆ ತಂದೆಯ ಚಿತ್ತವನ್ನು ಸಹ ತಿಳಿಯಬಹುದು.

ದೇವರ ಆತ್ಮನಿಂದ ನಡೆಸಿಕೊಳ್ಳುವುದರ ಪರಿಪೂರ್ಣ ಪ್ರಾಮುಖ್ಯತೆಯನ್ನು ನಾವು ಅರ್ಥ ಮಾಡಿಕೊಳ್ಳಬೇಕು ಮತ್ತು ತಂದೆಯ ಚಿತ್ತದಂತೆ ಎಲ್ಲಾ ಕಾರ್ಯಗಳನ್ನು ಮಾಡುವವರಾಗಿರಬೇಕು.

## ದೇಹದಿಂದ ಹುಟ್ಟಿದ್ದು ದೇಹವೇ ಆತ್ಮನಿಂದ ಹುಟ್ಟಿದ್ದು ಆತ್ಮವೇ

ಯೋಹಾನ 3:6

**[6]ದೇಹದಿಂದ ಹುಟ್ಟಿದ್ದು ದೇಹವೇ; ಆತ್ಮನಿಂದ ಹುಟ್ಟಿದ್ದು ಆತ್ಮವೇ.**

ದೇಹಕ್ಕೆ ಸಂಬಂಧಿಸಿದ ಯಾವುದು ಸಹ ಆತ್ಮಕ್ಕೆ ಸಂಬಂಧಿಸಿದ್ದಾಗಿ 'ರೂಪಾಂತರ'ಗೊಳ್ಳುವುದಿಲ್ಲ.

ಹಲವು ಬಾರಿ ನಮ್ಮ ದೇಹದ ಸಾಮರ್ಥ್ಯದಿಂದ ಅನೇಕ ವಿಷಯಗಳಿಗೆ ರೂಪ ನೀಡುತ್ತೇವೆ ಮತ್ತು ಹೇಗಾದರೂ ಇವುಗಳು ಆತ್ಮನ ಕಾರ್ಯಗಳಾಗಿ ಮಾರ್ಪಡುತ್ತವೆ ಎಂದು ನಿರೀಕ್ಷಿಸುತ್ತೇವೆ. ಇದು ನೆರವೇರಲು ಸಾಧ್ಯವೇ ಇಲ್ಲ.

ವಿಮೋಚನಾ ಕಾಂಡ 30:22-33

**22 ಅದಲ್ಲದೆ ಯೆಹೋವನು ಮೋಶೆಗೆ ಹೇಳಿದ್ದೇನೆಂದರೆ 23 ನೀನು ಮುಖ್ಯವಾದ ಸುಗಂಧ ದ್ರವ್ಯಗಳಲ್ಲಿ ದೇವರ ಸೇವೆಗೆ ನೇಮಕವಾದ ತೂಕದ ಮೇರೆಗೆ ಐನೂರು ತೊಲೆ ಅಚ್ಚ ರಕ್ತ ಬೋಳ, ಇನ್ನೂರೈವತ್ತು ತೊಲೆ ಶ್ರೇಷ್ಟವಾದ ಲವಂಗ ಚಕ್ಕೆ, ಇನ್ನೂರೈವತ್ತು ತೊಲೆ ಸುಗಂಧವಾದ ಬಜೆ, 24ಐನೂರು ತೊಲೆ ದಾಲ್ಚಿನ್ನಿ, ಆರುವರೆ ಸೇರು ಒಲೀವ ತೈಲ ಇವುಗಳನ್ನೆಲ್ಲಾ ತೆಗೆದುಕೊಂಡು ಬುಕ್ಕಿಟ್ಟುಗಾರರ ಪದ್ಧತಿಯ ಮೇರೆಗೆ ಮಿಶ್ರ ಮಾಡಿ ದೇವರ ಸೇವೆಗಾಗಿ ಅಭಿಷೇಕ ತೈಲವನ್ನು ಮಾಡಿಸಬೇಕು 26 ಅದರಿಂದ ದೇವ ದರ್ಶನ ಗುಡಾರ, ಆಜ್ಞಾಶಾಸನಗಳ ಮಂಜೂಷ 27 ಮೇಜು, ಮೇಜಿನ ಉಪಕರಣಗಳು, ದೀಪಸ್ತಂಭ, ದೀಪಸ್ಥಂಭದ ಉಪಕರಣಗಳು, ಧೂಪವೇಧಿ, ಯಜ್ಞವೇಧಿ, ಉಪಕರಣಗಳು ಗಂಗಾಳ, ಅದರ ಪೀಠ 29ಇವುಗಳನ್ನೆಲ್ಲಾ ಅಭಿಷೇಕಿಸಿ ಅವು ಅತಿ ಪರಿಶುದ್ಧವಾಗುವಂತೆ ಪ್ರತಿಷ್ಟಿಸಬೇಕು. ಅವುಗಳಿಗೆ ಸೋಂಕಿದೆಲ್ಲವು. ಪರಿಶುದ್ಧವಾಗಿರುವುದು 30ಅದಲ್ಲದೆ ಆರೋನನೂ ಅವನ ಮಕ್ಕಳೂ ನನಗೆ ಯಾಜಕರಾಗುವಂತೆ ಅವರನ್ನು ಅಭಿಷೇಕಿಸಿ ಪ್ರತಿಷ್ಟಿಸಬೇಕು. 31 ನೀನು ಇಸ್ರಾಯೇಲ್ಯರಿಗೆ ಆಜ್ಞಾಪಿಸತಕ್ಕದ್ದೇನೆಂದರೆ; ನೀವೂ ನಿಮ್ಮ ಸಂತತಿಯವರೂ ಈ ತೈಲವನ್ನು ನನ್ನ ಸೇವೆಗೆ ನೇಮಕವಾದ ಅಭಿಷೇಕ ತೈಲವೆಂದು ತಿಳಿದುಕೊಳ್ಳಬೇಕು 32ಮೈಗೆ ಹಚ್ಚಿಕೊಳ್ಳುವುದಕ್ಕೆ ಇದನ್ನು ಉಪಯೋಗಿಸಬಾರದು ಇದರಲ್ಲಿರುವ ಜೀನಸುಗಳ ಮೇರೆಗೆ ಬೇರೆ ಕೆಲಸಕ್ಕೆ ತೈಲವನ್ನು ಮಾಡಲೇಬಾರದು ಇವು ದೇವರ ವಸ್ತು ಇದನ್ನು ಮಿಾಸಲೆಂದು ನೀವು ತಿಳಿದುಕೊಳ್ಳಬೇಕು, 33ಇದರಂತೆ ತೈಲವನ್ನು ಮಾಡುವವನಾಗಲಿ ಇದನ್ನು ಯಾಜಕನಲ್ಲದವನ ಮೇಲೆ ಹಚ್ಚುವವನಾಗಲಿ ತನ್ನ ಕುಲದಿಂದ ತೆಗೆದುಹಾಕಲ್ಪಡಬೇಕು.**

ಹಳೇ ಒಡಂಬಡಿಕೆಯ ಪವಿತ್ರ ಅಭಿಷೇಕ ತೈಲವು, ಹೊಸ ಒಡಂಬಡಿಕೆಯ ಪವಿತ್ರಾತ್ಮನ ಅಭಿಷೇಕದ ''ಸಂಕೇತ ಮತ್ತು ಛಾಯೆ'' ಆಗಿದೆ.

ಹಳೆ ಒಡಂಬಡಿಕೆಯ ''ಸಂಕೇತ'' ಮತ್ತು ''ಛಾಯೆ'' ಯಿಂದ ನಾವು ಪವಿತ್ರಾತ್ಮನ ಅಭಿಷೇಕದ ಕುರಿತ ಕೆಲವು ಪ್ರಾಮುಖ್ಯ ಪಾಠಗಳನ್ನು ಕಲಿಯುತ್ತೇವೆ.

- ದೇವರ ಸೇವೆಯಲ್ಲಿ ಯಾವುದನ್ನು ಉಪಯೋಗಿಸಿದರೂ ಅದು ದೇವರಿಂದ ಅಭಿಷೇಕಿಸಲ್ಪಟ್ಟಿರಬೇಕು. (ವಚನಗಳು 26-28)

- ಏನಾದರೂ ದೇವರಿಂದ ಅಭಿಷೇಕಿಸಲ್ಪಟ್ಟರೆ ಅದು ದೇವರಿಗೆ ಮೀಸಲಾಗಿರಬೇಕು. (ವಚನ 29,30)
- ಮಾಂಸದಿಂದ ಹುಟ್ಟಿದ್ದನ್ನು ದೇವರು ಅಭಿಷೇಕಿಸುವುದಿಲ್ಲ (ವಚನ 32)
- ದೇವರು ಅಭಿಷೇಕದ ನಕಲಿಯನ್ನು ಸಹಿಸಿಕೊಳ್ಳುವುದಿಲ್ಲ (ವಚನ 33)

ದೇಹದಿಂದ ಹುಟ್ಟಿದ್ದನ್ನು ದೇವರು ಅಭಿಷೇಕಿಸುವುದಿಲ್ಲ. ದೇಹದಿಂದ ಜನಿಸಿರುವುದು ದೇವರ ಕಾರ್ಯಗಳ ನಕಲಿಯಾಗಿರುತ್ತದೆ. ಅಥವಾ ಅನುಕರಣೆಯಾಗಿರುತ್ತದೆ.

ಇದು ದೇವರ ಅಭಿಷೇಕ ಮತ್ತು ಪ್ರಸನ್ನತೆ, ಅಲ್ಲದೇ ಜೀವಿತಗಳಿಂದಲೂ ''ತೆಗೆದು ಹಾಕಲ್ಪಡಬೇಕು''.

**ಯಾವುದು ಆತ್ಮನಿಂದ ಹುಟ್ಟಬೇಕೆಂದು ದೇವರು ಬಯಸುತ್ತಾನೋ ಅದಕ್ಕೆ ದೇಹಭಾವದಿಂದ ಹುಟ್ಟಿದ್ದು ಅಡ್ಡಿಮಾಡುತ್ತದೆ.**

ಗಲಾತ್ಯದವರಿಗೆ 4:29

**29 ಆದರೆ ಪೂರ್ವದಲ್ಲಿ ಸ್ವಾಭಾವಿಕವಾಗಿ ಹುಟ್ಟಿದವನು ದೇವರಾತ್ಮ ಬಲದಿಂದ ಹುಟ್ಟಿದವನನ್ನು ಹಿಂಸೆಪಡಿಸಿದಂತೆಯೇ ಈಗಲೂ ಅದೆ.**

ದೇಹದಿಂದ ಹುಟ್ಟಿದ ಸಂಗತಿಗಳು ಆತ್ಮನಿಂದ ಹುಟ್ಟಿದ ಅನೇಕ ವಿಷಯಗಳಿಗೆ ಅಡ್ಡಿಯನ್ನುಂಟುಮಾಡುತ್ತವೆ. ಮತ್ತು ಆತ್ಮನಿಂದ ಹುಟ್ಟಿದವುಗಳನ್ನು ನಾಶಗೊಳಿಸಲು ಪ್ರಯತ್ನಿಸುತ್ತವೆ.

ಅನೇಕಾವರ್ತಿ ನಾವು ಮಾಡುವ ಹೋರಾಟಗಳು ವೈರಿಯಿಂದ ಬಂದವುಗಳಲ್ಲ ಆದರೆ ನಾವು ದೇಹದಿಂದ ಜನನ ನೀಡಿದ ಅವೇ ವಿಷಯಗಳಿಂದ ಬಂದಿರುವವುಗಳಾಗಿರುತ್ತವೆ.

ಗಲಾತ್ಯದವರಿಗೆ 5:17

**17 ಯಾಕೆಂದರೆ ಶರೀರಭಾವವು ಅಭಿಲಾಷಿಸುವದು ಆತ್ಮನಿಗೆ ವಿರುದ್ಧವಾಗಿದೆ, ಆತ್ಮನು ಅಭಿಲಾಷಿಸುವದು ಶರೀರಭಾವಕ್ಕೆ ವಿರುದ್ಧವಾಗಿದೆ. ನೀವು ಮಾಡಲಿಚ್ಛಿಸುವುದನ್ನು ಮಾಡದಂತೆ ಇವು ಒಂದಕ್ಕೊಂದು ಹೋರಾಡುತ್ತವೆ.**

ಶರೀರಭಾವದ್ದು ಯಾವಾಗಲೂ ಆತ್ಮನಿಗೆ ವಿರುದ್ಧವಾಗಿರುತ್ತದೆ. ಕಪಟತನವು (ನಕಲಿ) ಯಾವಾಗಲೂ ಯಥಾರ್ಥವಾದವುಗಳಿಗೆ ವಿರುದ್ಧವಾಗಿರುತ್ತದೆ. ಸುಳ್ಳು ಯಾವಾಗಲೂ ಸತ್ಯಕ್ಕೆ ವಿರುದ್ಧವಾಗಿರುತ್ತದೆ. ಆದುದರಿಂದ ಶರೀರಭಾವಕ್ಕೆ ಸಂಬಂಧಿಸಿದವುಗಳಿಗೆ ಜನನ ನೀಡದಂತೆ ಎಚ್ಚರಿಕೆಯಿಂದಿರಬೇಕು.

## ದೇಹಭಾವದಿಂದ ಹುಟ್ಟಿದ್ದು ಯಾವ ಪ್ರಯೋಜನಕ್ಕೂ ಬರುವುದಿಲ್ಲ

ಯೋಹಾನ 6:63

**63 ಬದುಕಿಸುವಂಥದ್ದು ಆತ್ಮವೇ, ಮಾಂಸವು ಯಾವದಕ್ಕೂ ಬರುವುದಿಲ್ಲ. ನಾನು ನಿಮಗೆ ಹೇಳಿರುವ ಮಾತುಗಳೇ ಆತ್ಮವಾಗಿಯೂ ಜೀವವಾಗಿಯೂ ಅವೆ.**

ದೇಹದಿಂದ ಹುಟ್ಟಿರುವಂಥವುಗಳಿಂದ ಜನರಿಗೆ ಯಾವುದೇ ಪ್ರಯೋಜನವಾಗುವುದಿಲ್ಲ. ಇದು ಜೀವವನ್ನು ಉತ್ಪತ್ತಿಮಾಡುವ ಬಲವನ್ನು ಹೊಂದಿಲ್ಲ.

ದೇಹಭಾವದಿಂದ ಹುಟ್ಟಿದ್ದು ನಮ್ಮ ಇಂದ್ರಿಯಗಳಿಗೆ ಆಕರ್ಷಕವಾಗಿ ಕಾಣಬಹುದು, ಹಿತಕರವೆನಿಸಬಹುದು, ಜನರನ್ನು ಭಾವೋದ್ವೇಗಗೊಳಿಸಿ ಸಂತೋಷಪಡಿಸಬಹುದು. ಆದರೆ ಯಥಾರ್ಥವಾದ ಜೀವಿತ, ಬಲ ಮತ್ತು ಬದಲಾವಣೆಯು ಪವಿತ್ರಾತ್ಮನ ಪ್ರಸನ್ನತೆ ಮತ್ತು ಬಲದಿಂದ ಮಾತ್ರವೇ ಸಾಧ್ಯವಾಗುತ್ತದೆ.

ನಮಗೆ ಶರೀರಭಾವದಿಂದ ಬಂದ ಮತ್ತು ಆತ್ಮನಭಾವದಿಂದ ಬಂದದ್ದರ ನಡುವಿನ ವ್ಯತ್ಯಾಸವನ್ನು ಅರಿಯುವ ಸಾಮರ್ಥ್ಯ ಬೇಕು. ಅನೇಕ ಕ್ರಿಸ್ತರು, ಶರೀರ ಭಾವದಿಂದ ನಡೆಸುವ ದೇವರ ಸೇವೆಯಲ್ಲಿ ತಮ್ಮ ಇಂದ್ರೀಯಗಳನ್ನು ಸಂತೋಷಪಡಿಸಿ ಅದರಲ್ಲೇ ತೃಪ್ತಿಪಟ್ಟುಕೊಂಡು ಪ್ರಾಮಾಣಿಕವಾಗಿ ಕ್ರಿಸ್ತನ ಸಾರೂಪ್ಯಕ್ಕೆ ಮಾರ್ಪಡುವ ಕರೆ ಇಲ್ಲದವರಾಗುತ್ತಾರೆ.

ಕೀರ್ತನೆಗಳು 127:1

**1ಯೆಹೋವನು ಮನೆ ಕಟ್ಟದಿದ್ದರೆ ಅದನ್ನು ಕಟ್ಟುವವರು ಕಷ್ಟ ಪಡುವುದು ವ್ಯರ್ಥ. ಯೆಹೋವನು ಪಟ್ಟಣವನ್ನು ಕಾಯದಿದ್ದರೆ ಕಾವಲುಗಾರರು ಅದನ್ನು ಕಾಯುವುದು ವ್ಯರ್ಥ.**

ದೇವರು ಕಟ್ಟದಿದ್ದರೆ, ನಾನು ಕಟ್ಟದವುಗಳೆಲ್ಲವೂ ವ್ಯರ್ಥವಾಗುತ್ತದೆ. ನಾವು ಕಟ್ಟಿದವುಗಳು ಅದ್ದೂರಿಯಾಗಿರಬಹುದು, ಶ್ರೇಷ್ಟವಾಗಿರಬಹುದು ಮತ್ತು ಮನುಷ್ಯರಿಂದ ಮೆಚ್ಚಿಕೆ ಪಡೆದಿರಬಹುದು ಆದರೆ ಪೌಲನು ಇವುಗಳನ್ನು ಕುರಿತು

ಹೇಳುವುದೇನೆಂದರೆ ''ಕಟ್ಟಿಗೆ, ಹುಲ್ಲು ಆಪು'' ಗಳಿಂದ ಕಟ್ಟಿರುವವುಗಳೆಂದು ಮತ್ತು ಇವುಗಳು ಬೆಂಕಿಯಲ್ಲಿ ಶೋಧಿಸಲ್ಪಟ್ಟಾಗ ಉಳಿಯುವುದಿಲ್ಲವೆಂದು ಹೇಳುತ್ತಾನೆ. (1 ಕೊರಿಂಥದವರಿಗೆ 3:12.13)

ದೇವರ ರಾಜ್ಯ ಕಟ್ಟುವವನಾಗಿ, ಆತ್ಮನ ವಿಷಯುಗಳಿಗೆ ಮಾತ್ರ ಜನನ ನೀಡುವವನಾಗಿ, ತಂದೆಯ ಚಿತ್ತವನ್ನು ಮಾಡುವುದಕ್ಕೆ ಏಕಮನಸ್ಸಿನ ಇಚ್ಛೆಯುಳ್ಳವನಾಗಿರಬೇಕು ಎಂಬುದು ನನ್ನ ಒಂದೇ ಗುರಿಯಾಗಿರಬೇಕು.

## ಆತ್ಮನಲ್ಲಿ ನಡೆಯಿರಿ ಆಗ ನೀವು ಶರೀರ ಭಾವದ ಆಸೆಗಳನ್ನು ನೆರವೇ-ರಿಸುವುದಿಲ್ಲ.

**ಗಲಾತ್ಯ: 5:16**
**"ಪವಿತ್ರಾತ್ಮನನ್ನು ಅನುಸರಿಸಿ ನಡೆದುಕೊಳ್ಳಿರಿ; ಆಗ ನೀವು ಶರೀರಭಾವದ ಅಭಿಲಾಷೆಗಳನ್ನು ಎಷ್ಟು ಮಾತ್ರಕ್ಕೂ ನೆರವೇರಿಸುವುದಿಲ್ಲ"**

ಆತ್ಮನಲ್ಲಿ ನಡೆಯುವುದೆಂದರೆ ಪವಿತ್ರಾತ್ಮನಿಗೆ ಸ್ಪಂಧಿಸುತ್ತಾ ಅಧೀನವಾಗಿರುವುದು. ಹೀಗೆ ಜೀವಿಸಬೇಕೆಂದುಕೊಂಡು ಜೀವಿಸುವಾಗ ನಾವು ಶರೀರದ ಆಸೆಗಳನ್ನು ನೆರವೇರಿಸುವುದಿಲ್ಲವೆನ್ನುವುದು ಖಚಿತಗೊಳ್ಳುತ್ತದೆ. ಶರೀರಭಾವದ ಆಣತಿಗಳಿಗೆ ಶರಣಾಗದೆ ಆತ್ಮನ ಪ್ರಭಾವದಲ್ಲಿ ಜೀವಿಸಬೇಕೆನ್ನುವ ಹಂಬಲದಿಂದ ನಾವು ಪ್ರತಿದಿನ ಮತ್ತು ಪ್ರತಿಕ್ಷಣವೂ ಆತ್ಮನಲ್ಲಿ ನಡೆಯಬೇಕೆಂದು ತೀರ್ಮಾನಿಸುತ್ತೇವೆ. ಅನೇಕಬಾರಿ ಸ್ವಯಂಪ್ರೇರಿತವಾಗಿ ಪವಿತ್ರಾತ್ಮನ ಪ್ರವಾಹದಲ್ಲಿ ಸಿದ್ಧ ಮನಸ್ಸಿನಿಂದ ಸುಲಲಿತವಾಗಿ ಹರಿಯುತ್ತ ನಾವು ಚಲಿಸುತ್ತಿರುವುದು ನಮ್ಮ ಅನುಭವಕ್ಕೆ ಬರುವುದುಂಟು ಇಂಥ ಸಂದರ್ಭಗಳಲ್ಲಿ ನಾವು ದೇವರಾತ್ಮನಿಂದ ಬಲವನ್ನು ಹೊಂದಿಕೊಂಡು ಶರೀರದ ಕೂಗನ್ನು ಬಂಧಿಸುತ್ತೇವೆ ಮತ್ತು ದೇವರಾತ್ಮವನ್ನು ಹಿಂಬಾಲಿಸಲು ದೃಢತೀರ್ಮಾನ ಮಾಡುತ್ತೇವೆ.

## ಅಧೀನರಾಗಿ ಮತ್ತು ತಗ್ಗಿದ ಭಾವದವರಾಗಿ ನಡೆಯಿರಿ

ನಮ್ಮಲ್ಲಿ ಸ್ವಯಂ ಸಾಧಕರು, ವಿಶೇಷ ನೈಪುಣ್ಯ ಹೊಂದಿದವರು, ಸಮರ್ಥರಾಗಿರುವವರು ಪವಿತ್ರಾತ್ಮನ ಮೇಲೆ ಆತುಕೊಳ್ಳುವ ಬದಲಾಗಿ ತಮ್ಮ ಶರೀರಭಾವವನ್ನು ಅನುಸರಿಸಿ ನಡೆಯುವ ಸೆಳೆತಕ್ಕೆ ಒಳಗಾಗಿಬಿಡುವ ಸಾಧ್ಯತೆ ಹೆಚ್ಚು. ಆದ್ದರಿಂದಲೇ ನಾವು ಅಧೀನತೆ ಮತ್ತು ತಗ್ಗಿದ ಭಾವವನ್ನು ಹೊಂದಿರಬೇಕು.

ಅಧೀನತೆಯು ನಮ್ಮದೇ ಆಯ್ಕೆಯಾಗಿದೆ, ಅಧೀನವಾಗುವುದೆಂದರೆ ಆಡಳಿತಕ್ಕೆ ಒಳಪಡುವುದು. ನಾವು ಸ್ವೇಚ್ಛೆಯಿಂದ ಪವಿತ್ರಾತ್ಮನಿಗೆ ಕಿವಿಗೊಡಲು ಮತ್ತು ಅಧೀನವಾಗಲು ಒಪ್ಪಿಕೊಳ್ಳುತ್ತೇವೆ. ಪವಿತ್ರಾತ್ಮನನ್ನು ನೋಯಿಸದಂತೆ ನಂದಿಸದಂತೆ ಎಚ್ಚರಿಕೆ ವಹಿಸುತ್ತೇವೆ. ನಿಜವಾಗಿಯೂ, ಈ ರೀತಿಯಲ್ಲಿ ಜೀವಿಸಬೇಕೆಂಬುದೇ ನಮ್ಮ ಆಸೆಯಾಗಿದೆ.

ತಗ್ಗಿದ ಭಾವವು ನಮ್ಮದೇ ಆಯ್ಕೆಯಾಗಿದೆ. ತಗ್ಗಿದ ಭಾವವೆಂದರೆ ಕರ್ತನನ್ನು ಸಂಪೂರ್ಣವಾಗಿ ಆತುಕೊಳ್ಳುವುದು. ನಾವೆಷ್ಟೇ ಮೇಧಾವಿಗಳೂ ಸಮರ್ಥರೂ ಆಗಿದ್ದರು ನಾವು ಕೇವಲ ಮಣ್ಣಿನ ಪಾತ್ರೆಗಳಾಗಿದ್ದೇವೆ ಮತ್ತು ನಮ್ಮ ಮೇಲೆ ನಮ್ಮ ಒಳಗೆ ಮತ್ತು ನಮ್ಮ ಮೂಲಕ ಕಾರ್ಯ ಮಾಡುವ ಅಭಿಷೇಕ ಮಾತ್ರದಿಂದ ನಾವು ಫಲನೀಡುತ್ತೇವೆ ಎನ್ನುವುದನ್ನು ಗುರುತಿಸಬೇಕು. ಆದ್ದರಿಂದ, ನಾವು ನಮಗಿರುವ ವರಗಳ ಆಧಾರಮಾಡಿಕೊಳ್ಳಲು ನಿರ್ಧರಿಸುತ್ತೇವೆ. ನಾವು ಸೇವೆ ಮಾಡಲು ಇದೇ ಮಾರ್ಗವನ್ನು ಆರಿಸಿಕೊಳ್ಳುತ್ತೇವೆ.

## ಎರಡು ಪರೀಕ್ಷಾರ್ಥ ಪ್ರಶ್ನೆಗಳು: ಯಾವುದು ನನ್ನನ್ನು ಪ್ರೇರೇಪಿಸುತ್ತದೆ? ಯಾರಿಗೆ ಮಹಿಮೆಯಾಗುತ್ತದೆ?

ನಾವು ಶರೀರಭಾವದಲ್ಲಿ ಕೆಲಸ ಮಾಡುತ್ತಿದ್ದೇವೆಯೋ ಅಥವಾ ಆತ್ಮಭಾವದಲ್ಲಿ ಕೆಲಸಮಾಡುತ್ತಿರುವೆವೋ ಎಂದು ಹೇಳುವುದು ಹೇಗೆ? ಒಂದು ಸರಳವಾದ ಪರೀಕ್ಷೆ ಎಂದರೆ, 'ಯಾವುದು ನನ್ನನ್ನು ಪ್ರೇರೇಪಿಸುತ್ತದೆ?' ಎಂದು ಕೇಳುವುದು. ಹಗೆತನ, ಜಗಳ, ಹೊಟ್ಟೆಕಿಚ್ಚು, ಸಿಟ್ಟು, ಸ್ವಾರ್ಥ, ಭಿನ್ನಮತ, ತಪ್ಪು ಬೋಧನೆ, ಮತ್ಸರ (ಗಲಾತ್ಯ 5:20) ಇವುಗಳ ಕಾರಣದಿಂದ ನಾವು ಯಾವುದೇ ಕೆಲಸವನ್ನು ಮಾಡಲು ಪ್ರೇರಿತರಾದಲ್ಲಿ ನಾವು ಆತ್ಮನಿಂದಲ್ಲದೆ ಶರೀರಭಾವದಿಂದ ನಡೆಸಲ್ಪಡುತ್ತಿದ್ದೇವೆ ಎಂದು ತಿಳಿಯಬೇಕು. ನಾವು ನೀತಿ ಸಮಾಧಾನ, ಸಂತೋಷ ಇತರರನ್ನು ಬಲಪಡಿಸುವುದು ಮುಂತಾದವುಗಳಿಂದ ಪ್ರೇರೇಪಿಸಲ್ಪಟ್ಟು ನಡಿಸುವುದಾದರೆ (ರೋಮಾಪುರದವರಿಗೆ 14:17–19) ಆತ್ಮನಿಂದ ನಡೆಸಲ್ಪಟ್ಟವರಾಗಿ ಸೇವೆ ಮಾಡುತ್ತೇವೆ ಎಂದು ತಿಳಿದುಬರುತ್ತದೆ.

ಮತ್ತೊಂದು ಸರಳ ಪರೀಕ್ಷೆ ಎಂದರೆ, 'ಯಾರಿಗೆ ಮಹಿಮೆಯಾಗುತ್ತಿದೆ?' ಎಂದು ಕೇಳುವುದು. ನಾವು ಮಾಡಿದ ಕೆಲಸದಲ್ಲಿನ ಹೊಗಳಿಕೆ ಘನ ಮತ್ತು ಮಹಿಮೆಗಳು ಕ್ರಿಸ್ತನಿಗೆ ಸಲ್ಲುವುದಾದಲ್ಲಿ ಅದು ಆತ್ಮನಿಂದ ಬಂದದ್ದಾಗಿರುತ್ತದೆ. ಒಂದು ವೇಳೆ, ಇದರಲ್ಲಿ ಒಂದು ಸಂಸ್ಥೆಗೆ ಎಂದಾದಲ್ಲಿ ಅದು ಬೆರಕೆಯ ಭಾವದಿಂದ ಕೂಡಿದ್ದಾಗಿರುತ್ತದೆ.

## ಪವಿತ್ರಾತ್ಮನು 'ಎಲ್ಲಿ' 'ಯಾವಾಗ' ಮತ್ತು 'ಹೇಗೆ' ಎಂಬುದನ್ನು ಪ್ರಕಟಮಾಡುತ್ತಾನೆ.

ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ ಪವಿತ್ರಾತ್ಮನು ಕೆಲಸವನ್ನು ನಿರ್ದೇಶಿಸುವುದನ್ನು ಮತ್ತು ವಿಶ್ವಾಸಿಗಳು ಅದರಂತೆ ನಡೆದುಕೊಳ್ಳುವುದನ್ನು ನೋಡುತ್ತೇವೆ. ಪವಿತ್ರಾತ್ಮನು ಎಲ್ಲಿ ಯಾವಾಗ ಮತ್ತು ಹೇಗೆ ಎನ್ನುವುದನ್ನು ತಿಳಸುತ್ತಿದ್ದನು ಮತ್ತು ವಿಶ್ವಾಸಿಗಳು ಆತನ ಮಾತಿನಂತೆಯೇ ಹೋಗುತ್ತಾ ಬರುತ್ತಿದ್ದರು.

ಅಪೊಸ್ತಲರ ಕೃತ್ಯಗಳು 8:29

**29 ದೇವರಾತ್ಮನು ಫಿಲಿಪ್ಪನಿಗೆ -ನೀನು ಆ ರಥದ ಹತ್ತಿರ ಹೋಗಿ ಅದರ ಸಂಗಡಲೇ ನಡೆ ಎಂದು ಹೇಳಿದನು.**

ಪವಿತ್ರಾತ್ಮನು, ಫಿಲಿಪ್ಪನನ್ನು - ಐಥಿಯೋಪ್ಯದವನನ್ನು ಸಂಧಿಸಲು ನೆಡೆಸಿದ ರೀತಿಯು ಬಹಳ ಕೌಶಲ್ಯಯುತವಾದುದು. ಆ ಐಥಿಯೋಪ್ಯದವನು ಫಿಲಿಪ್ಪನಿಂದ ಸೇವೆ ಹೊಂದುವ ಮತ್ತು ಯೇಸುಕ್ರಿಸ್ತನ ಬಳಿಗೆ ಬರುವ ಸ್ಥಿತಿಯಲ್ಲಿದ್ದನು. ಅದು ಜರುಗಿತು.

ಅಪೊಸ್ತಲರ ಕೃತ್ಯಗಳು 10:19-20

**19ಪೇತ್ರನು ಆ ದರ್ಶನದ ವಿಷಯದಲ್ಲಿ ಆಲೋಚನೆ ಮಾಡುತ್ತಿರಲು ದೇವರಾತ್ಮನು ಅವನಿಗೆ ''ಅಗೋ ಇಬ್ಬರು ಮನುಷ್ಯರು ನಿನ್ನನ್ನು ವಿಚಾರಿಸುತ್ತಾರೆ''. 20ನೀನೆದ್ದು ಕೆಳಗಿಳದು ಏನೂ ಸಂಶಯಪಡದೆ ಅವರ ಜೊತೆಯಲ್ಲಿ ಹೋಗು, ನಾನೇ ಅವರನ್ನು ಕಳುಹಿಸಿದ್ದೇನೆ ಎಂದು ಹೇಳದನು.**

ಅಪೊಸ್ತಲರ ಕೃತ್ಯಗಳು 11:12

**12ದೇವರಾತ್ಮನು - ನೀನು ಏನೂ ಭೇದಮಾಡದೆ ಅವರ ಜೊತೆಯಲ್ಲಿ ಹೋಗು ಎಂದು ನನಗೆ ಹೇಳಿದನು. ಈ ಆರು ಮಂದಿ ಸಹೋದರರು ಸಹ ನನ್ನ ಸಂಗಡ ಬಂದರು.**

ಪವಿತ್ರಾತ್ಮನು, ಪೇತ್ರನಿಗೆ, ಸಂಶಯಪಡದೇ ಹೋಗಿ ಕೊರ್ನೇಲ್ಯನನ್ನು ಸಂಧಿಸು ಎಂಬುದಾಗಿ ಮಾರ್ಗದರ್ಶಿಸಿದನು. ಇದು ಅನ್ಯರ ಮಧ್ಯದಲ್ಲಿ (ಗ್ರೀಕರ) ಸುವಾರ್ತೆಯು ಸಾರುವುದಕ್ಕೆ ಮಾರ್ಗ ಮಾಡಿತು.

ಫಿಲಿಪ್ಪನು ಮತ್ತು ಪೇತ್ರರಿಬ್ಬರಿಗೂ ಪವಿತ್ರಾತ್ಮನು ಏನು ಮಾಡಬೇಕೆಂದು ದೊಡ್ಡದಾದ ಸವಿಸ್ತಾರವಾದ ವಿವರಣಾತ್ಮಕ ಸೂಚನೆಗಳನ್ನು ನೀಡಲಿಲ್ಲವೆನ್ನುವುದನ್ನು ಗಮನಿಸಿರಿ. ಆತನು ಮುಂದೇನಾಗಬಹುದು ಎನ್ನುವುದನ್ನಾಗಲೀ, ಅದೆಷ್ಟು ಪ್ರಾಮುಖ್ಯವಾದದ್ದೆಂದಾಗಲೀ ಬಯಲು ಪಡಿಸಲಿಲ್ಲ. ಫಿಲಿಪ್ಪನ ವಿಷಯದಲ್ಲಾದರೂ ಸುವಾರ್ತೆಯು ಆಫ್ರಿಕಾಖಂಡವನ್ನು ತಲುಪಿತು. ಪೇತ್ರನ ವಿಷಯದಲ್ಲಿ, ಸುವಾರ್ತೆಯು ಪ್ರಥಮ ಬಾರಿಗೆ ಅನ್ಯರಿಗೆ ಸಾರಲ್ಪಟ್ಟಿತು. ಬೆಳವಣಿಗೆ ಮತ್ತು ವಿಸ್ತರಣೆಗಳ ಲೆಕ್ಕದಲ್ಲಿ ಎರಡಕ್ಕೂ ಬಹಳ ಪ್ರಾಮುಖ್ಯತೆ ಉಂಟು. ಆದಾಗ್ಯೂ, ಪವಿತ್ರಾತ್ಮನ ಸೂಚನೆಗಳು ಚಿಕ್ಕದಾಗಿಯೂ ಸರಳವಾಗಿಯೂ ಇದ್ದವು. ದೊಡ್ಡ ಬಾಗಿಲುಗಳು ಸಣ್ಣ ಕೀಲುಗಳ ಮೇಲೆ ತಿರುಗುತ್ತವೆ. ಅದರಂತೆ ಪವಿತ್ರಾತ್ಮನು ಕೊಡುವ ಚಿಕ್ಕ ಸೂಚನೆಗಳಿಗೆ ವಿಧೇಯವಾದಾಗ ದೊಡ್ಡದಾದ ಸಂಗತಿಗಳು ಜರುಗುತ್ತವೆ.

ಅಪೊಸ್ತಲರ ಕೃತ್ಯಗಳು 13:2-4

**2 ಇವರು ಕರ್ತನನ್ನು ಸೇವಿಸುತ್ತಾ ಉಪವಾಸ ಮಾಡುತ್ತಾ ಇದ್ದಾಗ ಪವಿತ್ರಾತ್ಮನು - ನಾನು ಬಾರ್ನಬ ಸೌಲರನ್ನು ಕರೆದ ಕೆಲಸಕ್ಕಾಗಿ ಅವರನ್ನು ಪ್ರತ್ಯೇಕಿಸಿರಿ ಎಂದು ಹೇಳಿದನು. 3 ಆಗ ಅವರು ಉಪವಾಸವಿದ್ದು ಪ್ರಾರ್ಥನೆ ಮಾಡಿ ಆ ಇಬ್ಬರ ಮೇಲೆ ಹಸ್ತಾರ್ಪಣ ಮಾಡಿ ಅವರನ್ನು ಕಳುಹಿಸಿ ಕೊಟ್ಟರು 4ಹೀಗೆ ಅವರು ಪವಿತ್ರಾತ್ಮನಿಂದ ಕಳುಹಿಸಿಕೊಂಡವರಾಗಿ ಸೆಲ್ಯೂಕಕ್ಕೆ ಬಂದರು. ಅಲ್ಲಿಂದ ಸಮುದ್ರ ಪ್ರಯಾಣವಾಗಿ ಕುಪ್ರದ್ವೀಪಕ್ಕೆ ಹೋದರು.**

ಇಲ್ಲಿ ಪವಿತ್ರಾತ್ಮನು, ಬಾರ್ನಬ ಮತ್ತು ಸೌಲರನ್ನು, ಅವರಿಗೆಂದೇ ಇರಿಸಿದ್ದ ಆತನ ಸೇವೆಗಾಗಿ ಕರೆದನು. ಅವರು ''ಪವಿತ್ರಾತ್ಮನಿಂದ ಕಳುಹಿಸಿಕೊಂಡವರಾಗಿ'' ಹೋದರು.

ತಾನು ನೇಮಿಸಿದ ನಿರ್ದಿಷ್ಟ ಕೆಲಸಗಳನ್ನು ಮಾಡಲು ಪವಿತ್ರಾತ್ಮನು ಜನರಿಗೆ ಕರೆನೀಡಲು ಸಾಧ್ಯವಾಗುವಂತೆ ನಮ್ಮ ಸಭೆಗಳಲ್ಲಿ ಆತ್ಮನಿಗೆ ಅವಕಾಶ ನೀಡುವ ಅವಶ್ಯಕತೆಯಿದೆ. ನಮ್ಮ ಸ್ಥಳೀಯ ಸಭಾ ಸೇವೆಯ ಹೊರವಲಯದಲ್ಲಿ ಸೇವೆಮಾಡಲು ಅವರಿಗೆ ಆತ್ಮನಿಂದ ಕರೆ ಬಂದಿದ್ದಲ್ಲಿ ನಾವು ಅವರನ್ನು ಆಶೀರ್ವದಿಸಿ ಕಳುಹಿಸಿಕೊಡಬೇಕು.

ಅಪೊಸ್ತಲರ ಕೃತ್ಯಗಳು 16:6-10

**6 ಆಸ್ಯ ಸೀಮೆಯಲ್ಲಿ ವಾಕ್ಯವನ್ನು ಹೇಳಬಾರದೆಂದು ಪವಿತ್ರಾತ್ಮನು ತಡೆದಿದ್ದರಿಂದ ಅವರು ಫ್ರುಗ್ಯ ಗಲಾತ್ಯ ಸೀಮೆಯನ್ನು ಹಾದು ಹೋಗಿ 7ಮೂಸ್ಯಕ್ಕೆ ಎದುರಾಗಿ ಬಂದಾಗ ಬಿಥೂನ್ಯಕ್ಕೆ ಹೋಗುವ ಪ್ರಯತ್ನ ಮಾಡಿದರು. ಅಲ್ಲಿಯೂ ಯೇಸುವಿನ ಆತ್ಮನು ಅವರನ್ನು ಹೋಗಗೂಡಿಸಲಿಲ್ಲ 8ಆಗ ಅವರು ಮೂಸ್ಯವನ್ನು ಸುಮ್ಮನೆ ದಾಟಿ ತ್ರೋವಕ್ಕೆ ಬಂದರು 9ಅಲ್ಲಿ ರಾತ್ರಿ ಕಾಲದಲ್ಲಿ ಪೌಲನಿಗೆ**

**ಒಂದು ದರ್ಶವಾಯಿತು, ಏನೆಂದರೆ ಮಕೆದೋನ್ಯ ದೇಶದವನಾದ ಒಬ್ಬ ಮನುಷ್ಯನು ನಿಂತುಕೊಂಡು ನೀನು ಸಮುದ್ರವನ್ನು ದಾಟಿ ಮಕೆದೋನ್ಯಕ್ಕೆ ಬಂದು ನಮಗೆ ನೆರವಾಗಬೇಕೆಂದು ಅವನನ್ನು ಬೇಡಿಕೊಳ್ಳುತ್ತಿದ್ದನು. [10]ಅವನಿಗೆ ಆ ದರ್ಶನವಾದ ಮೇಲೆ ಆ ಸೀಮೆಯವರಿಗೆ ಸುವಾರ್ತೆಯನ್ನು ಸಾರುವದಕ್ಕೆ ದೇವರು ನಮ್ಮನ್ನು ಕರೆದಿದ್ದಾನೆಂದು ನಾವು ನಿಶ್ಚಯಿಸಿಕೊಂಡು ಕೂಡಲೇ ಮಕೆದೋನ್ಯಕ್ಕೆ ಹೊರಟು ಹೋಗುವ ಪ್ರಯತ್ನ ಮಾಡಿದೆವು.**

ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ ಎಂಬುದಾಗಿ ಕರ್ತನಾದ ಯೇಸುವು ಮಹಾ ಆದೇಶ ಕೊಟ್ಟಿದ್ದಾನೆ. ಆದಾಗ್ಯೂ ಇಲ್ಲಿ ನಿಶ್ಚಿತ ಸಮಯದಲ್ಲಿ ಪವಿತ್ರಾತ್ಮನು, ಪೌಲನು ಮತ್ತು ಅವನ ಗುಂಪು ಆಸ್ಯಸೀಮೆ, ಬಿಥೂನ್ಯಕ್ಕೆ ಹೋಗಿ ಸುವಾರ್ತೆ ಸಾರಬಾರದೆಂದು ತಡೆದು ಅವರನ್ನು ಮಕೆದೋನ್ಯಕ್ಕೆ ನಡಿಸಿದ್ದನ್ನು ನೋಡುತ್ತೇವೆ.

ಪವಿತ್ರಾತ್ಮನಿಗೆ, ನಿಖರವಾಗಿ, 'ಯಾವಾಗ', 'ಎಲ್ಲಿ' ಮತ್ತು ದೇವರ ರಾಜ್ಯದ ಕೆಲಸಗಳನ್ನು 'ಹೇಗೆ' ಮಾಡಿಸಬೇಕೆಂಬುದು ಗೊತ್ತು.

2. ಕೊರಿಂಥದವರಿಗೆ 1;15-17

**[15] ನಾನು ಇಂಥ ಭರವಸೆವುಳ್ಳವನಾಗಿದ್ದು ನಿಮಗೆ ಎರಡು ಸಾರಿ ನಮ್ಮ ಮೂಲಕ ಕೃಪಾವರ ಉಂಟಾಗಬೇಕೆಂದು ಯೋಚಿಸಿದ್ದೆನು [16] ಮೊದಲು ನಿಮ್ಮ ಬಳಿಗೆ ಬಂದು ನಿಮ್ಮ ಮಾರ್ಗವಾಗಿ ಮಕೆದೋನ್ಯಕ್ಕೆ ಹೋಗಿ ಆ ಮೇಲೆ ಮಕೆದೋನ್ಯವನ್ನು ಬಿಟ್ಟು ತಿರುಗಿ ನಿಮ್ಮ ಬಳಿಗೆ ಬಂದು ನಿಮ್ಮಿಂದ ಯೂದಾಯಕ್ಕೆ ಸಾಗ ಕಳುಹಿಸಲ್ಪಡಬೇಕೆಂದು ಯೋಚಿಸಿದ್ದೆನು. [17] ಇದನ್ನು ಯೋಚಿಸಿದಾಗ ಚಪಲಚಿತ್ತನಾಗಿದ್ದೆನೋ? ನಾನು ಯೋಚಿಸುವದನ್ನು ಕೇವಲ ಮಾನುಷ ಬುದ್ಧಿಯಿಂದ ಯೋಚಿಸಿ ಹೌದು ಹೌದು ಅಂದ ಮೇಲೆ ಅಲ್ಲ ಅಲ್ಲ ಅನ್ನುವವನಾಗಿದ್ದೇನೋ?**

ನಾವು ಪವಿತ್ರಾತ್ಮ-ಪ್ರೇರಿತ ಯೋಜನೆಗಳನ್ನು ಅನುಸರಿಸಬೇಕು. ನಾವು ಮಾಡುವ ಯೋಜನಾ ವಿಷಯಗಳು ಮತ್ತು ಉದ್ದೇಶಗಳು ಕೂಡ ಪವಿತ್ರಾತ್ಮ - ದೈವೀಪ್ರೇರಣೆಯಿಂದ ಪ್ರೇರಿತವಾಗಿರಬೇಕು.

## ಆತ್ಮನು ಸೂಚಿಸುವವುಗಳು ವಿವಿಧ ರೀತಿಗಳಲ್ಲಿ ಬರುತ್ತವೆ

- ಬರೆಯಲ್ಪಟ್ಟ ವಚನಗಳಿಗೆ ಜೀವತುಂಬುವುದರಿಂದ (ಸಜೀವಗೊಳಿಸು)
- ನಿಶ್ಚಲವಾದ ಸಣ್ಣ ಆಂತರಿಕ ಸಾಕ್ಷಿ (ಅನಿಸಿಕೆ)
- ಆತ್ಮದಲ್ಲಿ ಭಾಸವಾಗುವ ಮಾಹಿತಿಗಳು

- ಆಂತರ್ಯದಲ್ಲಿ ತಿಳಿಯುವುದು
- ದೇವರ ಉದ್ದೇಶಗಳೊಂದಿಗೆ ಸಂಪರ್ಕ ಕಲ್ಪಿಸುವ ವಿಚಾರಗಳು (ಯೋಚನೆ) ಅಥವಾ ಚಿತ್ರಗಳು.
- ಪ್ರವಾಧನೆಗಳ ಮುಖಾಂತರ
- ಕನಸುಗಳು ಮತ್ತು ದರ್ಶನಗಳು
- ಭೌತಿಕ ತೋರ್ಪಡಿಸುವಿಕೆಗಳು (ಪ್ರದರ್ಶನ)
- ಇತರ ಮಾರ್ಗಗಳು.

## ಪವಿತ್ರಾತ್ಮನೊಂದಿಗೆ ಮುರಿಯಲ್ಪಡದ ಸಂಪರ್ಕ ಬೆಳೆಸಿಕೊಳ್ಳುವುದು ಅವಶ್ಯಕ

**2 ಕೊರಿಂಥದವರಿಗೆ 13:14**
**ನಮ್ಮ ಕರ್ತನಾದ ಯೇಸುಕ್ರಿಸ್ತನ ಕೃಪೆಯು ದೇವರ ಪ್ರೀತಿಯು ಪವಿತ್ರಾತ್ಮನ ಅನ್ಯೋನ್ಯತೆಯು ನಿಮ್ಮೆಲ್ಲರ ಸಂಗಡ ಇರಲಿ.**

ದೇವರಾತ್ಮನೊಂದಿಗೆ ನಿರಂತರವಾಗಿ ಅನ್ಯೋನ್ಯತೆಯಿಂದಿರಲು ನಾವು ಕರೆಯಲ್ಪಟ್ಟಿದ್ದೇವೆ. ಪವಿತ್ರಾತ್ಮನೊಂದಿಗೆ ಅಡೆತಡೆಯಿಲ್ಲದ ಸಂವಹನವನಿಟ್ಟುಕೊಳ್ಳುವುದು ಆತನೊಂದಿಗೆ ಅನ್ಯೋನ್ಯತೆಯಲ್ಲಿ ನಡೆಯುವುದರ ಭಾಗವಾಗಿದೆ. ನಾವು ಸತತವಾಗಿ ಆತನಿಗೆ ಕಿವಿಗೊಡುವ ಮತ್ತು ಆತನೊಂದಿಗೆ ಮಾತಾನಾಡುವ ಮನೋವೃತ್ತಿಯನ್ನು ಬೆಳೆಸಿಕೊಳ್ಳಬೇಕು. ಹೀಗಾದಾಗ ಆತ್ಮನು ಮಾತನಾಡಿದ್ದು ನಮಗೆ ಗೊತ್ತಾಗಿ ಆತನ ಸೂಚನೆಗಳಿಗೆ ನಾವು ತಪ್ಪಿಹೋಗುವುದಿಲ್ಲ.

ದೇವರ ವಾಕ್ಯವನ್ನು ಧಾನ್ಯಮಾಡುವುದಕ್ಕೂ, ಪ್ರಾರ್ಥನೆಗೂ ಸಮಯವನ್ನು ಪ್ರತ್ಯೇಕಿಸಿಡುವುದು ಬಹು ಪ್ರಮುಖ್ಯವಾಗಿದೆ. ಇದು ನಮ್ಮ ಮನಸ್ಸನ್ನು ನೂತನ ಪಡಿಸುವುದಕ್ಕೂ ಕರ್ತನೊಂದಿಗೆ ನಾವು ಒಮ್ಮತದಿಂದಿರುವುದಕ್ಕೂ ಸಹಾಯಮಾಡುತ್ತದೆ.

ಶಾಂತಯುತ ಮನಸ್ಸುಳವರಾಗಿ ಆತನ ಪ್ರಭಾವದಲ್ಲಿ ನಡೆಯುತ್ತಿದ್ದೇವೆ ಎನ್ನುವುದು ಖಾತರಿಯಾಗುತ್ತದೆ. ಎಲ್ಲಾ ಗ್ರಹಿಕೆಯನ್ನು ಮೀರುವ ದೇವರ

ಶಾಂತಿಯಲ್ಲಿ ನಾವು ನಡೆಯುವಾಗ, ನಮ್ಮ ಸುತ್ತಲೂ ಭೀಕರ ಹೋರಾಟಗಳಿದ್ದಾಗ್ಯೂ ನಮ್ಮೊಳಗಿನ ಶಾಂತಿ ಮತ್ತು ನಿಶ್ಚಲತೆಯು ಅಚಲವಾಗಿರುತ್ತದೆ. ಶಾಂತಿಯಲ್ಲಿ ನಡೆಯುವವರ ಮೇಲೆ ಪವಿತ್ರಾತ್ಮನು ಪಾರಿವಾಳದ್ದಂತೆ ನೆಲೆಗೊಳ್ಳುತ್ತಾನೆ ಶಾಂತಿಯಲ್ಲಿ ನಡೆಯುದೆಂದರೆ ಶಾಂತಿದಾಯಕನಾದ ದೇವರೊಂದಿಗೆ ನಡೆಯುವುದು ಮತ್ತು ಆತನು ಶೀಘ್ರವಾಗಿ ಸೈತಾನನ್ನು ನಮ್ಮ ಕಾಲುಗಳ ಕೆಳಗೆ ಹಾಕಿ ತುಳಿಸಿಬಿಡುವನು. (ರೋಮಾಪುರದವರಿಗೆ 16:20)

ನಿರ್ಮಲಚಿತ್ತರು ಧನ್ಯರು ಅವರು ದೇವರನ್ನು 'ನೋಡು'ವರು (ಮತ್ತಾಯ 5:8) ಎಂದು ಬರೆದಿರುವಂತೆ ಶುದ್ಧ ಹೃದಯವು ನಮಗೆ ದೈವೀಕ ಪ್ರಕಟಣೆಗಳು ದೊರಕುವಂತೆ ದೇವರನ್ನು ನೋಡುವ ಆಸೆಯು ಶರೀರ ಭಾವದಿಂದ ಹುಟ್ಟಿರುವುದಾದರೆ, ನಮಗೆ ದೇವರ ಕುರಿತು ತಪ್ಪಾದ ಚಿತ್ರಣ ದೊರೆಯುತ್ತದೆ. ಮಿಥ್ಯಾ ಪ್ರಕಟಣೆಗಳು ಆಗುತ್ತವೆ. ಇದನ್ನು ನಾವು ಪಾಕ್ಷಾಂಡ ಮತ (ಸುಳ್ಳು ಬೋಧನೆ) ಎನ್ನುತ್ತೇವೆ. ಪರಿಶುದ್ಧಾತ್ಮನು ಪರಿಶುದ್ಧನಾಗಿದ್ದಾನೆ ಮತ್ತು ಸಂತೋಷಿಸುವ ಪರಿಶುದ್ಧತೆಯನ್ನು ಯಾರ್ಯಾರು ಪ್ರೀತಿಸುತ್ತರೋ ಅವರಲ್ಲಿ ಆತನು ಹರ್ಷಿಸುತ್ತಾನೆ. " ಯೆಹೋವನು ತನ್ನ ಭಕ್ತನನ್ನು ತನಗೋಸ್ಕರ ಪ್ರತ್ಯೇಕಿಸಿಕೊಂಡಿದ್ದಾನೆಂದು ತಿಳಿದುಕೊಳ್ಳಿರಿ" (ಕೀರ್ತನೆ 4:3)

ಪ್ರೀತಿಯಲ್ಲಿ ನಡೆಯುವುದೇ ಪವಿತ್ರಾತ್ಮನೊಂದಿಗೆ ಅನ್ಯೋನ್ಯತೆಯಲ್ಲಿ ನಡೆಯುವ ಸೂತ್ರವಾಗಿದೆ. ದೇವರು ನಮ್ಮಲ್ಲಿಟ್ಟಿರುವ ಪ್ರೀತಿಯನ್ನು ನಾವು ತಿಳಿದುಕೊಂಡಿದ್ದೇವೆ ಅದನ್ನು ನಂಬಿದ್ದೇವೆ. (1 ಯೋಹಾನ 4:16) ನಾವು ಪ್ರೀತಿಯಲ್ಲಿ ನಡೆಯುವುದ್ದಿಲ್ಲವಾದರೆ ನಾವು ಆತನೊಂದಿಗೆ ನಡೆಯಲಾರೆವು, ಪವಿತ್ರಾತ್ಮನೊಂದಿಗೆ ನಡೆಯಲಾರೆವು.

## ಆತ್ಮನ ಸಮಯವನ್ನು ಗ್ರಹಿಸುವುದು ಅವಶ್ಯ

ಕಾರ್ಯಪ್ರವೃತ್ತರಾಗಲು ಪವಿತ್ರಾತ್ಮನ ಸಮಯವನ್ನು ಗೊತ್ತುಮಾಡಿಕೊಳ್ಳುವುದು ಅತ್ಯವಶ್ಯವಾಗಿದೆ–ಅದು ತುರ್ತಾದ ಕೆಲಸವಿರಬಹುದು, ವಿಳಂಬವಾಗಿ ಮಾಡುವುದಿರಬಹುದು ಅಥವ ಮುಂದೆ ಭವಿಷ್ಯದಲ್ಲೆಲ್ಲೋ ಮಾಡುವ ಕೆಲಸವಿರಬಹುದು.

ಕೆಲವೊಮ್ಮೆ ಆತನು, "ನೀನು ಆ ರಥದ ಹತ್ತಿರಹೋಗಿ ಅದರ ಸಂಗಡದಲ್ಲಿಯೇ ನಡೆ" (ಅಪೊಸ್ತಲರ ಕೃತ್ಯಗಳು 8:29) ಎಂದು ಹೇಳೂವುದುಂಟು. ಆಗ ಮರುಮಾತಿಲ್ಲದೆ ತಕ್ಷಣವೇ ವಿಧೇಯರಾಗಬೇಕು ಇಲ್ಲದ್ದಿದ್ದರೆ ನಾವು ದೇವರ ಯೋಜನೆಯನ್ನು ತಪ್ಪಿಸಿಕೊಳ್ಳುವ ಸಾಧ್ಯತೆ ಇರುತ್ತದೆ, ಇನ್ನಿತರ ಸಮಯಗಳಲ್ಲಿ ಆತನು ಮಾತನಾಡಿದಾಗ ನಮಗೆ ಪ್ರಾರ್ಥಿಸಿ, ಸಿದ್ಧತೆ ಮಾಡಿಕೊಂಡು ಅನಂತರ ಆತನ ಸೂಚನೆಗಳನ್ನು ಕೈಗೊಳ್ಳಲು ಸಮಯಾವಕಾಶ ಇರುತ್ತದೆ (ಅಪೊಸ್ತಲರ ಕೃತ್ಯಗಳು 13:1–4)

## ಆತ್ಮನಲ್ಲಿ ಪ್ರಾರ್ಥಿಸುವಾಗ, ದೇವರ ಉದ್ದೇಶಗಳನ್ನು ನನ್ನ ಆತ್ಮವು ಗ್ರಹಿಸುವಂತೆ ಸಿದ್ಧಗೊಳಿಸುತ್ತದೆ.

1 ಕೊರಿಂಥದವರಿಗೆ 2:9,10,16

**[9] ಆದರೆ ಬರೆದಿರುವ ಪ್ರಕಾರ ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧ ಮಾಡಿರುವಂಥದ್ದೆಲ್ಲವನ್ನು ಕಣ್ಣು ಕಾಣಲಿಲ್ಲ ಕಿವಿ ಕೇಳಲಿಲ್ಲ, ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ [10] ನಮಗಾದರೋ ದೇವರು ತನ್ನ ಆತ್ಮನ ಮೂಲಕ ಅದನ್ನು ಪ್ರಕಟಿಸಿದನು ಆತ್ಮನು ಎಲ್ಲಾ ವಿಷಯಗಳನ್ನು ದೇವರ ಅಗಾಧವಾದ ವಿಷಯಗಳನ್ನು ಕೂಡ ಪರಿಶೋಧಿಸುವವನಾಗಿದ್ದಾನೆ. [16] ಕರ್ತನ ಮನಸ್ಸನ್ನು ತಿಳಿದುಕೊಂಡು ಆತನಿಗೆ ಉಪದೇಶಿಸುವವನಾರು ಎಂದು ಬರೆದದೆಯಲ್ಲಾ. ನಮಗಾದರೋ ಕ್ರಿಸ್ತನ ಮನಸ್ಸು ದೊರಕಿತು.**

ದೇವರು ನನಗಾಗಿ ಸಿದ್ಧಮಾಡಿರುವಂಥದ್ದೆಲ್ಲವನ್ನು ಪವಿತ್ರಾತ್ಮನು ನನಗೆ ಪ್ರಕಟಿಸುತ್ತಾನೆ. ಇವುಗಳು ಮೊದಲು ನನಗೆ ರಹಸ್ಯಕಾರಿಯಾಗಿರಬಹುದು, ಕಣ್ಣಿಗೆ ಕಾಣದಿರಬಹುದು, ಕಿವಿಗೆ ಕೇಳದಿರಬಹುದು, ನನ್ನ ಆಲೋಚನೆಯಲ್ಲಿ ಹುಟ್ಟದಿರಬಹುದು ಆದರೆ ಪವಿತ್ರಾತ್ಮನು ಅಗಾಧವಾದ ವಿಷಯಗಳನ್ನು ನನಗೆ ಪ್ರಚುರಪಡಿಸುತ್ತಾನೆ. ಆದುದರಿಂದ ನಾನು ಕ್ರಿಸ್ತನ ಮನಸ್ಸನ್ನು ಹೊಂದಬೇಕು. ಆತನ ಮನಸ್ಸಿನಲ್ಲಿರುವ ಉದ್ದೇಶಗಳು ಯೋಜನೆಗಳು ಮತ್ತು ಆಲೋಚನೆಗಳು ನನಗೆ ತಿಳಿದಿವೆ.

1ಕೊರಿಂಥದವರಿಗೆ 14:2

**[2]ವಾಣಿಯನ್ನಾಡುವವನು ದೇವರ ಸಂಗಡ ಮಾತಾಡುತ್ತಾನೆ ಹೊರತು ಮನುಷ್ಯರ ಸಂಗಡ ಆಡುವುದಿಲ್ಲ. ಅವನು ಆತ್ಮಪ್ರೇರಿತವಾಗಿ ರಹಸ್ಯಾರ್ಥಗಳನ್ನು ನುಡಿಯುತ್ತಿದ್ದರೂ ಯಾರೂ ತಿಳುಕೊಳ್ಳುವುದಿಲ್ಲ.**

ನಾನು ಆತ್ಮನಿಂದ ಪ್ರಾರ್ಥಿಸುವಾಗ, ನಾನು ರಹಸ್ಯಗಳನ್ನು ನುಡಿಯುತ್ತೇನೆ. ನನ್ನ ಜೀವಿತಗಳಿಗಿರುವ ದೇವರ ಉದ್ದೇಶ ಯೋಜನೆ, ಆಲೋಚನೆಗಳು ರಹಸ್ಯಾರ್ಥಗಳು ಎಂದು ತಿಳಿಯುವುದು ಸೂಕ್ತವೆನಿಸುತ್ತದೆ.

## ಆತ್ಮಪ್ರೇರಿತರಾಗಿ ಆತ್ಮನಲ್ಲಿ ಪ್ರಾರ್ಥಿಸುವಾಗ ತಂದೆಯ ಚಿತ್ತಕ್ಕೆ ನಮ್ಮ ಚಿತ್ತವನ್ನು ಸಮರೇಖೆಗೊಳಿಸುತ್ತದೆ.

ಇಬ್ರಿಯರಿಗೆ 5:7-9

**[7]ಕ್ರಿಸ್ತನು ತಾನು ಭೂಲೋಕದಲ್ಲಿದ್ದಾಗ ಮರಣಕ್ಕೆ ತಪ್ಪಿಸ ಕಾಪಾಡಶಕ್ತನಾಗಿರುವಾತನಿಗೆ ಬಲವಾಗಿ ಕೂಗುತ್ತಾ ಕಣ್ಣೀರನ್ನು ಸುರಿಸುತ್ತಾ ಪ್ರಾರ್ಥನೆ ವಿಜ್ಞಾಪನೆಗಳನ್ನು ಸಮರ್ಪಿಸಿ ದೇವರ ಮೇಲಣ ಭಯಭಕ್ತಿಯ ನಿಮಿತ್ತ ಕೇಳಲ್ಪಟ್ಟನು. [8]ಹೀಗೆ ಆತನು ಮಗನಾಗಿದ್ದರೂ ಅನುಭವಿಸಿದ ಭಾದೆಗಳಿಂದಲೇ ವಿಧೇಯತೆಯನ್ನು ಕಲಿತುಕೊಂಡನು. [9]ಇದಲ್ಲದೆ ಆತನು ಸಿದ್ಧಿಗೆ ಬಂದು ದೇವರಿಂದ ಮೇಲ್ಕಿಜೆದೇಕನ ತರಹದ ಮಹಾಯಾಜಕನೆನಿಸಿಕೊಂಡವನಾಗಿ ತನಗೆ ವಿಧೇಯರಾಗಿರುವವರೆಲ್ಲರಿಗೂ ನಿರಂತರವಾದ ರಕ್ಷಣೆಗೆ ಕಾರಣನಾದನು.**

ಆತನು ಅನುಭವಿಸಿದ ಭಾಧೆಗಳಿಂದಲೇ ''ವಿಧೇಯತೆಯನ್ನು ಕಲಿತುಕೊಂಡನು'' ಎಂಬುದನ್ನು ಗಮನಿಸುವಾಗ ಇದು ಬಹಳ ಆಸಕ್ತಿಯುಳ್ಳದ್ದಾಗಿದೆ ಆತನು ''ವಿಧೇಯತೆ ಕಲಿತುಕೊಂಡನು'' - ಇದರಲ್ಲಿ ಆತನ ಚಿತ್ತವು ತಂದೆಯ ಚಿತ್ತದೊಂದಿಗೆ ಸಮರೇಖೆಗೊಂಡದ್ದನ್ನು ನೋಡಬಹುದು.

ಗೆತ್ಸೇಮನೆ ತೋಟದಲ್ಲೂ ಇಂತಹ ಘಟನೆ ಜರುಗಿತೆಂದು ನಾವು ನೋಡುತ್ತೇವೆ.

ಮತ್ತಾಯ 26:38,39,42

**[26]ಅವರಿಗೆ - ನನ್ನ ಪ್ರಾಣವು ಸಾಯುವಷ್ಟು ದುಃಖಕ್ಕೆ ಒಳಗಾಗಿದೆ, ನೀವು ಇಲ್ಲೇ ಇದ್ದು ನನ್ನ ಸಂಗಡ ಎಚ್ಚರವಾಗಿರ್ರಿ ಎಂದು ಹೇಳಿ [39]ಸ್ವಲ್ಪ ಮುಂದೆ ಹೋಗಿ ಬೋರಲು ಬಿದ್ದು - ನನ್ನ ತಂದೆಯೇ ಸಾಧ್ಯವಾಗಿದ್ದರೆ ಈ ಪಾತ್ರೆಯು ನನ್ನನ್ನು ಬಿಟ್ಟು ಹೋಗಲಿ; ಹೇಗೋ ನನ್ನ ಚಿತ್ತದಂತಾಗದೆ ನಿನ್ನ**

**ಚಿತ್ತದಂತೆಯೇ ಆಗಲಿ ಎಂದು ದೇವರನ್ನು ಪ್ರಾರ್ಥಿಸಿದನು. [42]ತಿರಿಗಿ ಎರಡನೆಯ ಸಾರಿ ಹೋಗಿ - ನನ್ನ ತಂದೆಯೇ, ನಾನು ಕುಡಿದ ಹೊರತು ಈ ಪಾತ್ರೆ ಬಿಟ್ಟು ಹೋಗಕೂಡದಾಗಿದ್ದರೆ ನಿನ್ನ ಚಿತ್ತವೇ ಆಗಲಿ ಎಂದು ಪ್ರಾರ್ಥನೆ ಮಾಡಿದನು.**

ಪ್ರಾರ್ಥನೆಯು ನನ್ನನ್ನು ಬದಲು ಮಾಡುತ್ತದೆ. ಪ್ರಾರ್ಥನೆಯು, ನನ್ನ ಚಿತ್ತವನ್ನು ತಂದೆಯ ಚಿತ್ತದೊಡನೆ ಸಮರೇಖಗೊಳಿಸಲು ಸಹಾಯಿಸುತ್ತದೆ. ಪ್ರಾರ್ಥನೆಯ ಸಮಯದಲ್ಲಿ ದೇವರು ನಮ್ಮ ಹೃದಯಗಳಲ್ಲಿ ಕೆಲಸ ಮಾಡುತ್ತಾನೆ. ನನ್ನ ಚಿತ್ತ ಇಚ್ಛೆಗಳು ಮತ್ತು ಕನಸುಗಳನ್ನು ಆತನ ಚಿತ್ತ, ಯೋಜನೆ ಮತ್ತು ಉದ್ದೇಶಗಳಿಗೆ ಸಮಗೊಳಿಸುತ್ತಾನೆ.

ರೋಮಾಪುರದವರಿಗೆ 8:26,27

**[26]ಹಾಗೆ ಪವಿತ್ರಾತ್ಮನು ಸಹ ನಮ್ಮ ಆಸಕ್ತಿಯನ್ನು ನೋಡಿ ಸಹಾಯ ಮಾಡುತ್ತಾನೆ. ಹೇಗೆಂದರೆ ನಾವು ತಕ್ಕ ಪ್ರಕಾರ ಏನು ಬೇಡಿಕೊಳ್ಳಬೇಕೋ ನಮಗೆ ಗೊತ್ತಿಲ್ಲದ್ದರಿಂದ ಪವಿತ್ರಾತ್ಮನು ತಾನೇ ಮಾತಿಲ್ಲದಂಥ ನರಳಾಟದಿಂದ ನಮಗೋಸ್ಕರ ಬೇಡಿಕೊಳ್ಳುತ್ತಾನೆ [27]ಆದರೆ ಹೃದಯಗಳನ್ನು ಶೋಧಿಸಿ ನೋಡುವಾತನಿಗೆ ಪವಿತ್ರಾತ್ಮನ ಮನೋಭಾವವು ಏನೆಂದು ತಿಳಿದರೆ ಆ ಆತ್ಮನು ದೇವರ ಚಿತ್ತಾನುಸಾರವಾಗಿ ದೇವಜನರಿಗೋಸ್ಕರ ಬೇಡಿಕೊಳ್ಳುವನೆಂದು ಆತನು ಬಲ್ಲನು.**

ನನ್ನ ಸ್ವಂತ ಭಾಷೆಯಲ್ಲಿ ನಾನು ಪ್ರಾರ್ಥಿಸಬಹುದು. ದೇವರು ನನಗೆ ಪವಿತ್ರಾತ್ಮನೆಂಬ ಸಹಾಯಕನನ್ನು ದಯಪಾಲಿಸಿದ್ದಾನೆ. ಆತನು ಬಲಾಢ್ಯವಾಗಿ ಪ್ರಾರ್ಥಿಸಲು ಸಹಾಯ ಮಾಡುತ್ತಾನೆ. ನಾನು ಅನ್ಯಭಾಷೆಯ ಮೂಲಕ ಪ್ರಾರ್ಥಿಸುವಾಗ ನಾನು ಆತ್ಮನಿಂದ ಪ್ರಾರ್ಥಿಸುವವನಾಗಿರುತ್ತೇನೆ. ಅಂತಹ ಪ್ರಾರ್ಥನೆಯು ತಂದೆಯ ಚಿತ್ತದಂತೆ, ಆತ್ಮನಿಂದ ಹುಟ್ಟಿದ ಪ್ರಾರ್ಥನೆಯಾಗಿರುತ್ತದೆಂದು ನನಗೆ ಗೊತ್ತು ಆದುದರಿಂದ ಆತ್ಮನಿಂದ ಪ್ರಾರ್ಥಿಸುವುದು ನನ್ನ ಚಿತ್ತವನ್ನು ತಂದೆಯ ಚಿತ್ತದೊಡನೆ ಸಮಗೊಳಿಸುವ ಕಾಲೋಚಿತ ಸಮಯವಾಗಿ ಕಂಡುಬರುತ್ತದೆ.

## ಆತ್ಮನ ಕಾರ್ಯಗಳಿಗೆ ಜನನ ನೀಡುವುದು - 'ಮರಿಯಳ ಅದ್ಭುತ'ದಿಂದ ಕೆಲವು ಪಾಠಗಳು

ಕರ್ತನಾದ ಯೇಸುಕ್ರಿಸ್ತನು ಕನ್ಯೆಯಾದ ಮರಿಯಳ ಗರ್ಭದಲ್ಲಿ ಉದಿಸಿ ಮನುಷ್ಯನಾಗಿ ಅವತರಿಸಿದ್ದು ಪವಿತ್ರಾತ್ಮನ ಕಾರ್ಯವೇ ಸರಿ. ದೇವರು ನಮ್ಮ ಮೂಲಕ ಮಾಡುವ ಕ್ರಿಯೆಗಳು ದೇವಕುಮಾರನ ಜನನದಷ್ಟು ಮಹತ್ವದಿಲ್ಲದಿದ್ದರೂ 'ಮರಿಯಳ ಅದ್ಭುತ'ವನ್ನು ಗಮನಿಸುವುದರಿಂದ, ಪವಿತ್ರಾತ್ಮನು ಮಾನವರ ಮೂಲಕ ಪವಿತ್ರಾತ್ಮನ ಕಾರ್ಯಗಳನ್ನು ನಡೆಸುವ ಕುರಿತು ಅನೇಕ ವಿಷಯಗಳನ್ನು ಕಲಿಯುತ್ತೇವೆ.

### 1. ನೇಮಿಸಲ್ಪಟ್ಟ ಸಮಯದಲ್ಲಿ ಭೂಮಿಯ ಮೇಲೆ ಬಿಡುಗಡೆಗೊಳ್ಳುತ್ತವೆ.

ಆದಿಕಾಂಡ 3:15

**15ನನಗೂ ಈ ಸ್ತ್ರೀಗೂ, ನಿನ್ನ ಸಂತಾನಕ್ಕೂ ಈ ಸ್ತ್ರೀಯ ಸಂತಾನಕ್ಕೂ ಹಗೆತನವಿರುವ ಹಾಗೆ ಮಾಡುವೆನು ಈಕೆಯ ಸಂತಾನವು ನಿನ್ನ ತಲೆಯನ್ನು ಜಜ್ಜುವದು  ನೀನು ಅದರ ಹಿಮ್ಮಡಿಯನ್ನು ಕಚ್ಚುವಿ.**

ಗಲಾತ್ಯ 4:4

**4ಆದರೆ ಕಾಲವು ಪರಿಪೂರ್ಣವಾದಾಗ ದೇವರು ತನ್ನ ಮಗನನ್ನು ಕಳುಹಿಸಿಕೊಟ್ಟನು. ಆತನು ಸ್ತ್ರೀಯಲ್ಲಿ ಹುಟ್ಟಿದವನಾಗಿಯೂ ಧರ್ಮಶಾಸ್ತ್ರಾಧೀನನಾಗಿಯೂ ಬಂದನು.**

ಸ್ತ್ರೀಯಲ್ಲಿ ಹುಟ್ಟಬೇಕಾದ ''ಸಂತಾನ''ವು ಏದೆನ ತೋಟದಲ್ಲಿಯೇ ಹೇಳಲ್ಪಟ್ಟಿತ್ತು. ನಾಲ್ಕು ಸಾವಿರ ವರ್ಷಗಳ ಬಳಿಕ ಕ್ರಿಸ್ತನು ಭೂಲೋಕಕ್ಕೆ ಬಂದನು. ಪರಿಪೂರ್ಣ ಕಾಲದಲ್ಲಿ ದೇವರ ಕಾರ್ಯಗಳು ಭೂಮಿಯ ಮೇಲೆ ಬಿಡುಗಡೆಗೊಳ್ಳುತ್ತವೆ.

## 2. ಆತ್ಮನ ಕಾರ್ಯಗಳು ಸಾಮಾನ್ಯ ಜನರ ಮೂಲಕ ಬಿಡುಗಡೆಗೊಳ್ಳುತ್ತವೆ.

ಯೆಶಾಯ 7:14

**[14]ಇದರಿಂದ ಕರ್ತನು ತಾನೇ ನಿಮಗೆ ಗುರುತನ್ನು ಕೊಡುವನು ಇಗೋ ಒಬ್ಬ ಕನ್ನಿಕೆಯು ಗರ್ಭಿಣಿಯಾಗಿ ಮಗನನ್ನು ಹಡೆದು ಅವನಿಗೆ ಇಮ್ಮಾನುವೇಲ್ ಎಂದು ಹೆಸರಿಡುವಳು**

ದೇವರು ಲೋಕದ ರಕ್ಷಕನನ್ನು ಕಳುಹಿಸುವಾಗ ಆತನು ಒಬ್ಬಳು ರಾಜಕುಮಾರಿ ಅಥವಾ ಅಧಿಕವಾಗಿ ವಿದ್ಯಾಭ್ಯಾಸ ಮಾಡಿದ ಸ್ತ್ರೀಯನ್ನು ಆರಿಸಿಕೊಳ್ಳಲಿಲ್ಲ ಬದಲಾಗಿ ಮರಿಯಳೆಂಬ ಸಾಮಾನ್ಯ ಕನ್ಯೆಯನ್ನು ಆರಿಸಿಕೊಂಡನು.

ನಮ್ಮ ದೃಷ್ಟಿಕೋನದಿಂದ ನೋಡಿದ್ದಲ್ಲಿ, ದೇವರು ಲೋಕ ರಕ್ಷಕನಾದ ದೇವಕುಮಾರನಿಗೆ ಜನ್ಮನೀಡಲು ಒಬ್ಬ ಅನನುಭವಿಯಾದ ಕನ್ಯೆಯನ್ನು ಅರಿಸಿಕೊಳ್ಳುವುದರಲ್ಲಿ ಒಂದು ದೊಡ್ಡ ಗಂಡಾಂತರಕ್ಕೆ ತನ್ನನ್ನು ಒಡ್ಡಿಕೊಳ್ಳುತ್ತಿದ್ದನೆಂದು ಅನಿಸಬಹುದು. ಅವಳಿಗೆ ಗರ್ಭಪಾತವಾಗಿ ಬಿಟ್ಟರೆ? ಗರ್ಭಕಾಲದಲ್ಲಿ ಆಕೆ ತನ್ನ ಆಯ್ಕೆಮಾಡಿಕೊಳ್ಳಲು ವಿಫಲಳಾಗಿ ಬಿಟ್ಟರೆ? ದೇವರ ದೃಷ್ಟಿಕೋನವೆಂದರೆ ಇದರ ಪರಿಣಾಮ ಆತನ ಮೇಲೆಯೇ ಆಧಾರಗೊಂಡಿರುತ್ತದೆ. ಹೊರತು ಮನುಷ್ಯರ ಮೇಲಲ್ಲ ನಮ್ಮಿಂದ ಆತನು ನಮ್ಮ ಲಭ್ಯತೆ ಮತ್ತು ವಿಧೆಯತೆಯನ್ನಷ್ಟೆ ಬಯಸುತ್ತಾನೆ. ಮರಿಯಳಾದರೋ ತನು ಕರ್ತನಿಗೆ ಲಭ್ಯಳೆಂದು ತಿಳಿಸಿದಳು ಆಕೆ, "ಇಗೋ, ನಾನು ಕರ್ತನ ದಾಸಿ; ನಿನ್ನ ಮಾತಿನಂತೆ ನನಗಾಗಲಿ" (ಲೂಕ 1:38) ಎಂದಳೋ ದೇವರು ಆಕೆಗೆ, "ನಂಬಿದವಳಾದ ನೀನು ಧನ್ಯಳೇ; ಕರ್ತನು ನಿನಗೆ ಹೇಳಿದ ಮಾತುಗಳು ನೆರವೇರುವವು" (ಲೂಕ 1:45) ಎಂದು ಆಶ್ವಾಸನೆ ನೀಡುತಾನೆ.

ದೇವರು ತನ್ನ ನಿತ್ಯರಾಜ್ಯದ ಕೆಲಸದ ಜವಾಬ್ದಾರಿಯನ್ನು ಸಾಧಾರಣ ಜನರ ಕೈಗೆ ಒಪ್ಪಿಸಲು ಅಂಜುವುದಿಲ್ಲ.

## 3. ಆತ್ಮನ ಕಾರ್ಯಗಳು ಅಕಲಂಕಿತವಾದುದಾಗಿರಬೇಕು–ಆತನ ಆತ್ಮನಿಂದ ಪವಿತ್ರವಾಗಿ ಹುಟ್ಟಿದ್ದು.

ಲೂಕ 1:35

**[35]ನಿನ್ನ ಮೇಲೆ ಪವಿತ್ರಾತ್ಮ ಬರುವದು ಪರಾತ್ಪರನ ಶಕ್ತಿಯ ನೆರಳು ನಿನ್ನ ಮೇಲೆ ಬೀಳುವದು ಆದದರಿಂದ ಹುಟ್ಟುವ ಆ ಪವಿತ್ರ ಶಿಶು ದೇವರ ಮಗನೆನಿಸಿಕೊಳ್ಳುವದು.**

ದೇವರು ನಮ್ಮ ಮೂಲಕ ಬಿಡುಗಡೆಮಾಡುವ ಪ್ರತಿಯೊಂದು ಕಾರ್ಯವು ಪವಿತ್ರವಾಗಿ ಆತನ ಆತ್ಮನಿಂದ ಜನಿಸಿದ್ದು, ಮತ್ತು ಪರಿಶುದ್ಧ ಶರೀರದ ಕಾರ್ಯವಾಗಿರುತ್ತವೆ.

ನಾವುಗಳು ದೇಹದಿಂದ ಹುಟ್ಟಿದವುಗಳಿಗೆ ಇಲ್ಲ ಮತ್ತು ಆತ್ಮನಿಂದ ಹುಟ್ಟಿದವುಗಳಿಗೆ ಮಾತ್ರ ಹೌದು ಎನ್ನುವ ದೃಢವಾದ ತೀರ್ಮಾನ ಮಾಡಬೇಕು.

## 4. ಆತ್ಮನ ಕಾರ್ಯಗಳು ತೊಡಕು ಉಂಟಾಗುವುದಕ್ಕೆ ಕಾರಣವಾಗಬಹುದು

ಮರಿಯಳು ತನ್ನ ಗರ್ಭದಲ್ಲಿ ದೇವಕುಮಾರನನ್ನು ಹೊತ್ತಿದ್ದರೂ ಅದಕ್ಕಾಗಿ ಅವಳು ಸಂಕೋಚಪಡಲಿಲ್ಲ. ಅವಳು ತಾನು ಗರ್ಭವತಿಯಾಗಿರುವ ತನ್ನ ಸ್ವಂತ ಕುಟುಂಬದವರಿಗೆ, ತನ್ನ ನೆರೆಹೊರೆಯವರಿಗೆ ಮತ್ತು ಎಲ್ಲಕ್ಕಿಂತ ಮಿಗಿಲಾಗಿ ತನಗೆ ಗೊತ್ತು ಮಾಡಲ್ಪಟ್ಟ ಯೋಸೇಫನಿಗೆ ಹೇಗೆ ವಿವರಿಸಿಯಾಳು? ಅವಳಿಗೆ ದೇವದೂತ ದರ್ಶನವಾಗಿದ್ದು, ಮತ್ತು ಅವಳಲ್ಲಿರುವ ಕೂಸು ಪವಿತ್ರಾತ್ಮನ ಬಲದಿಂದಾದದ್ದು ಎಂದು ಆಕೆ ಹೇಳಿದ್ದಲ್ಲಿ ಅದನ್ನು ನಂಬುವವರು ಯಾರು?

ಅದೇನೇ ಇದ್ದರೂ ಯಾರಿಗೆ ಸಂಬಂಧಪಟ್ಟಿತ್ತೋ ಅವರೊಂದಿಗೆ ದೇವರು ಸಂಭಾಷಿಸಿದನು. ಆತನು ಯೋಸೇಫನೊಂದಿಗೆ ಕನಸ್ಸಿನಲ್ಲಿ ಮಾತಾಡಿದನು ಪರಿಶುದ್ಧಾತ್ಮನು ಮರಿಯಳ ಬಂಧುವಾದ ಎಲಿಸಬೇತಳ ಮೂಲಕ ಆ ಮಾತನ್ನು ಸ್ಪಷ್ಟೀಕರಿಸಿದನು.

ನಮ್ಮ ಜೀವನದಲ್ಲಿ ನಾವು ದೇವರ ನಿಜ ಕಾರ್ಯವನ್ನು ನಡೆಸುವಾಗ ನಮಗೆ ಮುಖಭಂಗವಾಗುವಂತಹ ಸನ್ನಿವೇಶಗಳು ಎದುರಾಗುವುದುಂಟು. ಜನರು ನಮ್ಮನ್ನು ಅರ್ಥಮಾಡಿಕೊಳ್ಳದೆಯೆ ಇರಬಹುದು. ಕೆಲವರು ನಮ್ಮನ್ನು ಅಪಾರ್ಥಮಾಡಿಕೊಳ್ಳಬಹುದು ಹೀಗಾದಾಗ ನಾವು ಕೈಗೊಳ್ಳುತ್ತಿರುವುದು ದೇವರಿಂದ ಬಂದದ್ದಲ್ಲವೆಂದು ಅರ್ಥವಲ್ಲ ಅವಮಾನ, ಗೊಂದಲ, ನಾಚಿಕೆ, ಅಪಾರ್ಥ ಮತ್ತು ಧೈರ್ಯಗೆಡಿಸುವಿಕೆಗಳ ಮಧ್ಯೆ ನಿಮ್ಮನ್ನು ಅರ್ಥಮಾಡಿಕೊಳ್ಳುವ ಕೆಲವರಾದರೂ ಇರುತ್ತಾರೆ, ಯಾದೆಂದರೆ ಕರ್ತನು ಅವರ ಹೃದಯಗಳಲ್ಲಿ ಮಾತನಾಡಿರುತ್ತಾನೆ. ದೇವರು ನಿಮ್ಮ ಮೂಲಕ ನಡೆಸಲು ಉದ್ದೇಶಿಸಿರುವ ಕಾರ್ಯವನ್ನು ಮಾಡಲು ನಿಮಗೆ ಸಹಾಯ ಮಾಡುವ ಮತ್ತು ನಿಮ್ಮನ್ನು ಪ್ರೋತ್ಸಾಹಿಸುವವರೊಂದಿಗೆ ನೀವು ಸಮಯ ಕಳೆಯಿರಿ.

ಮತ್ತಾಯ 1:19

**[19]ಆಕೆಯ ಗಂಡನಾದ ಯೋಸೇಫನು ಸಜ್ಜನನಾಗಿದ್ದು ಆಕೆಯನ್ನು ಬೈಲಿಗೆ ತರುವದಕ್ಕೆ ಮನಸ್ಸಿಲ್ಲದೆ ಯಾರಿಗೂ ತಿಳಿಯದಂತೆ ಆಕೆಯನ್ನು ಬಿಟ್ಟುಬಿಡಬೇಕೆಂದಿದ್ದನು.**

ಮರಿಯಳು ದೇವರ ಮಗನನ್ನು ತನ್ನ ಗರ್ಭದಲ್ಲಿ ಹೊತ್ತುಕೊಂಡಿದ್ದಳು. ಅದು ಆಕೆಗೆ ತೊಡಕನ್ನು ತಂದಿತ್ತು.

## 5. ಆತ್ಮನ ಕಾರ್ಯಗಳು ಸಾಧಾರಣ ಸ್ವಾಭಾವಿಕ ವಿಧಾನಗಳಲ್ಲಿ ಬಿಡುಗಡೆಗೊಳ್ಳುತ್ತವೆ.

1.ಕೊರಿಂಥದವರಿಗೆ 15:10

**[10]ಆದರೆ ನಾನು ಎಂಥವನಾಗಿದ್ದೇನೋ ದೇವರ ಕೃಪೆಯಿಂದಲೇ ಅಂಥವನಾಗಿದ್ದೇನೆ. ನನಗುಂಟಾದ ಆತನ ಕೃಪೆಯು ನಿಷ್ಫಲವಾಗಲಿಲ್ಲ ನಾನು ಅವರೆಲ್ಲರಿಗಿಂತಲೂ ಹೆಚ್ಚಾಗಿ ಪ್ರಯಾಸಪಟ್ಟೆನು! ಆದರೆ ಪ್ರಯಾಸಪಟ್ಟವನು ನಾನಲ್ಲ ನನ್ನೊಂದಿಗಿರುವ ದೇವರ ಕೃಪೆಯೇ.**

ಗರ್ಭಧಾರಣೆಯು ಒಂದು ಅದ್ಭುತವೇ ಆಗಿದ್ದರೂ ಮರಿಯಳು ಆ ಕೂಸನ್ನು ಸಂಪೂರ್ಣ ಒಂಬತ್ತು ತಿಂಗಳೂ ಹೊತ್ತು ಸಲಹಬೇಕಿತ್ತು! ದೇವರು ಅದೆಲ್ಲವನ್ನು ಆ ಅದ್ಭುತದಲ್ಲೇ ಸೇರಿಸಿಬಿಡಲಿಲ್ಲವೇಕೆ? ಮೊದಲನೇ ದಿನ ಗರ್ಭಧಾರಣೆ, ಎರಡನೆಯದಿನ ಪೂರ್ಣಾವಧಿ ಗರ್ಭ, ಮೂರನೆಯ ದಿನ ಪ್ರಸವ! ಎನಾಶ್ಚರ್ಯ– ಮೂರೇ ದಿನದಲ್ಲಿ ಮಗುವೊಂದು ಜನಿಸಿಬಿಟ್ಟಿತು ಇಷ್ಟು ಮಾತ್ರದಿಂದಲೇ ದೇವರ ಮಗನು, ಮೆಸ್ಸೀಯನು ಈ ಲೋಕದಲ್ಲಿ ಹುಟ್ಟಿ ಬಂದನೆನ್ನುವದಕ್ಕೆ ನಿರ್ವ್ಯಾಜ ಗುರುತಾಗಿ ಬಿಡುತ್ತಿತ್ತಲ್ಲವೇ?

ಅದಾಗ್ಯೂ, ಅದು ನಡೆದದ್ದು ಹಾಗಲ್ಲ, ಗರ್ಭಧಾರಣೆಯು ಪವಿತ್ರಾತ್ಮನಿಂದ ಅಲೌಕಿಕವಾದ ರೀತಿಯಲ್ಲಿ ನಡೆದಿದ್ದರೂ ಮರಿಯಳು ಗರ್ಭಾವಸ್ಥೆಯನ್ನು ಮತ್ತು ಹೆರಿಗೆಯನ್ನು ಮಾನವ ಸಹಜವಾದ ರೀತಿಯಲ್ಲಿ ದೇವರು ನಮ್ಮಲ್ಲಿ ತನ್ನ ಆತ್ಮನ ಕಾರ್ಯವನ್ನು ಮಾಡುತ್ತಾನೆ. ಆತನ ಕಾರ್ಯವು ಭೂಲೋಕದಲ್ಲಿ ಜರುಗ ಬೇಕಾದರೆ ನಾವು ಆತನ ಕೃಪೆಯಿಂದ ಸಬಲರಾಗಿ ಆತನೊಂದಿಗೆ ಕೆಲಸಮಾಡುವವರಾಗಬೇಕು. ನಾವು ತ್ಯಾಗ, ಶ್ರಮೆ, ಸತತ ಪ್ರಯತ್ನ, ಯೋಜನೆ, ಸಂಘಟನೆ, ನಿರ್ಮಹಣೆ ಇವುಗಳನ್ನು ಒಟ್ಟುಗೂಡಿಸಿ ಮಾಡಬೇಕಾದ ಕೆಲಸವನ್ನು ಪೂರೈಸಬೇಕು. ಅಪೊಸ್ತಲನಾದ ಪೌಲನು, ತಾನು ಉಳಿದೆಲ್ಲ ಅಪೊಸ್ತಲರಿಗಿಂತ ಹೆಚ್ಚಾಗಿ ಸೇವೆಮಾಡಿದ್ದೇನೆ ಎಂದು ಹೇಳುತ್ತಾನೆ.

## 6. ದೇವರ ನೇಮಿತ ಸ್ಥಳ ಮುಟ್ಟುವವರೆಗೂ ಮುಚ್ಚಲ್ಪಟ್ಟ ಬಾಗಿಲನ್ನು ಸಂಧಿಸಬಹುದು.

ಲೂಕ 2:7

**[7]ಆಕೆಯು ತನ್ನ ಚೊಚ್ಚಲು ಮಗನನ್ನು ಹೆತ್ತು ಬಟ್ಟೆಯಲ್ಲಿ ಸುತ್ತಿ ಛತ್ರದಲ್ಲಿ ಅವರಿಗೆ ಸ್ಥಳವಿಲ್ಲದ ಕಾರಣ ಅವನನ್ನು ಗೋದಲಿಯಲ್ಲಿ ಮಲಗಿಸಿದಳು.**

ಯೇಸುವು ನಿಗದಿತ ಸಮಯದಲ್ಲಿ ಜನಿಸುತ್ತಾನೆಂದು ತಂದೆಗೆ ತಿಳಿದಿದ್ದರೂ ಆತನಿಗಾಗಿ ಛತ್ರದಲ್ಲಿ ಒಂದು ಕೊಠಡಿಯನ್ನು ''ಕಾದಿರಿಸಲಿಲ್ಲ'' ಎಂಬ ಸಂಗತಿಯು ಆಶ್ಚರ್ಯವೇ. ಮರಿಯಳು ಮತ್ತು ಯೋಸೇಫನು ಯೇಸುವು ಜನಿಸಿದ ಗೋದಲಿಯನ್ನು ತಲುಪುವ ಮೊದಲು ಅನೇಕ ಛತ್ರದ ಬಾಗಿಲುಗಳನ್ನು ತಟ್ಟಿರಬಹುದು.

ಯೋಸೇಫನೊಂದಿಗೆ ಮರಿಯಳು ಬೇತ್ಲೆಹೇಮಿನ ಕಡೆಗೆ ಪ್ರಯಾಣ ಮಾಡುವಾಗ ತಾವು ಹೋಗುವ ಪ್ರಥಮ ಛತ್ರದಲ್ಲೇ ತಮಗೆ ಸಕಲ ಸೌಕರ್ಯಗಳುಳ್ಳ ಶುಚಿಯಾದ ಕೋಣೆಯು ದೊರಕಬಹುದೆಂಬ ವಿಶ್ವಾಸ ಹೊಂದಿದ್ದಳೇನೋ. ನಿಜವಾಗಿಯೂ, ದೇವರು ತನ್ನ ಮಗನ ಜನನಕ್ಕೆಂದು ಸಕಲ ಸಿದ್ಧತೆಗಳನ್ನು ಮಾಡಬಹುದಾಗಿತ್ತು. ಆದರೆ ಮರಿಯಳು ಮತ್ತು ಯೋಸೇಫರು ಒಂದಾದ ಮೇಲೊಂದರಂತೆ ಛತ್ರಗಳಿಗೆ ಹೋಗಿ ವಿಚಾರಿಸಲು ಅವುಗಳೆಲ್ಲ ತುಂಬಿಹೋಗಿ ಎಲ್ಲಿಯೂ ಸ್ಥಳವಿಲ್ಲವೆಂದು ತಿಳದಾಗ ಅವರಿಗಾದ ಆಘಾತ, ನಿರಾಶೆ, ಅಧೈರ್ಯ ಮತ್ತು ಅವರು ಸತತವಾಗಿ ಎದುರಿಸಬೇಕಾದ ಪ್ರಶ್ನೆಗಳು, ಇವುಗಳನ್ನೊಮ್ಮೆ ಯೋಚಿಸಿನೋಡಿರಿ. ಅಂತಿಮವಾಗಿ, ಅವರು ಅನೇಕ ಛತ್ರಗಳ ಬಾಗಿಲ ಬಡಿದರು ನಂತರ, ಒಬ್ಬಾತನು ಅವರಿಗೆ ಯೇಸು ಜನಿಸಬೇಕಾಗಿದ್ದ ದನದ ಕೊಟ್ಟಿಗೆಯನ್ನು ನೀಡಿದನು.

ದೇವಕುಮಾರನ ಜನ್ಮಸ್ಥಳವು ದನದ ಕೊಟ್ಟಿಗೆಯಾಗಿರುತ್ತದೆ ಎಂದು ಅವರೆಂದೂ ಊಹಿಸಿರಲಿಲ್ಲ! ಆದರೂ ಆ ರಾತ್ರಿ ದೇವಕುಮಾರನು ಜನಿಸಬೇಕಾದ ಸ್ಥಳವು ಅದೇ ಆಗಿತ್ತು.

ದೇವರು ನಮ್ಮೊಳಗೆ ಉದಿಸಿದ್ದನ್ನು ಕಾರ್ಯಗತಗೊಳಿಸುವಾಗ ಮುಚ್ಚಿದ ಬಾಗಿಲುಗಳು ಎದುರಾದಾಗ್ಯೂ ನಾವು ನಿರಾಶರಾಗಬೇಕಿಲ್ಲ. ಆತನು ತನ್ನ ಚಿತ್ತದ ಕಾರ್ಯಗಳನ್ನೆಸಗಬೇಕಾದ ಸ್ಥಳಕ್ಕೆ ಈ ಮುಚ್ಚಿದ ಬಾಗಿಲುಗಳ ಮೂಲಕವೇ ನಡೆಸುತ್ತಾನೆ. ದೇವರ ಕಾರ್ಯವೆಲ್ಲಿ ಜರುಗಬೇಕಾಗಿದೆಯೋ ಅಲ್ಲಿಗೆ ಸೇರುವ ತನಕ ನಾವು ಹೋಗುತ್ತಿರಬೇಕು.

## 7. ಪವಿತ್ರಾತ್ಮನ ಕೆಲಸವು ಅನೇಕಬಾರಿ ಸರಳವಾದ ಕನಿಷ್ಠ ಸ್ಥಿತಿಗತಿಗಳ ನಡುವೆ ಪ್ರಾರಂಭಗೊಳ್ಳುತ್ತದೆ

ವಿಶ್ವದ ದೇವರು, ಲೋಕ ರಕ್ಷಕನು, ರಾಜಾಧಿರಾಜನು, ದನದ ಕೊಟ್ಟಿಗೆಯಲ್ಲಿ ಅವುಗಳು ಮೇಯುವ ಗೋದಲಿಯಲ್ಲಿ ಜನಿಸಿದನೆನ್ನುವುದನ್ನು ಕಲ್ಪಿಸಿಕೊಳ್ಳಿರಿ.

ಖಂಡಿತವಾಗಿಯೂ ದೇವರಿಗೆ ಮನಸ್ಸಿದಿದ್ದರೆ ಇದನ್ನು ಬೇರೆ ರೀತಿಯಲ್ಲಿ ನಡೆಯುವಂತೆ ಮಾಡಬಹುದಾಗಿತ್ತು. ಆತನು ಬೇತ್ಲೆಹೇಮಿನಲ್ಲಿ ಒಂದು ಅರಮನೆಯನ್ನೋ, ಒಂದು ಶ್ರೀಮಂತರ ಮನೆಯನ್ನೋ ಅಥವಾ ಒಂದು ಉತ್ತಮ ಛತ್ರದಲ್ಲಿ ಐಷಾರಾಮಿ ಕೋಣೆಯನ್ನೋ ಆರಿಸಿಕೊಳ್ಳಬಹುದಾಗಿತ್ತು. ಅದರ ಬದಲಾಗಿ ಆತನು ಅತಿ ಕನಿಷ್ಠ ಸ್ಥಳವನ್ನು ಅಂದರೆ ದನದ ದೊಡ್ಡಿಯನ್ನು ಆರಿಸಿಕೊಂಡನು.

ದೇವರು ತನ್ನ ಕಾರ್ಯವನ್ನು ಸಣ್ಣ ಪ್ರಮಾಣದಲ್ಲಿ ಪ್ರಕಟಿಸುತ್ತಾ ಹೋಗುತ್ತಾನೆ. ಈ ಸರಳವಾದ ಪ್ರಾರಂಭಗಳು ದೇವರ ಕೆಲಸವೇ ಹೌದು ಮತ್ತು ಇದು ಇಡೀ ಪ್ರಪಂಚದ ಮೇಲೆ ಪ್ರಭಾವ ಬೀರುತ್ತದೆ.

ದೇವರು ತನ್ನ ಕಾರ್ಯದ ಬಗ್ಗೆ ಹೀಗೆ ಹೇಳುತ್ತಾನೆ, 'ಪರಾಕ್ರಮದಿಂದಲ್ಲ, ಬಲದಿಂದಲ್ಲ, ನನ್ನ ಆತ್ಮದಿಂದಲೇ (ಜೆಕರ್ಯ 4:6)) ಇದಕ್ಕೆ ಹೊಂದಿಕೆಯಾಗಿ "ಹೀಗಿರುವಲ್ಲಿ ಅಲ್ಪಕಾರ್ಯಗಳ ದಿನವನ್ನು ಯಾರು ತಿರಸ್ಕರಿಸಿಯಾರು?" (ಜೆಕರ್ಯ 4:10) ಎಂದು ಕೇಳುತ್ತಾನೆ. ಕನಿಷ್ಠ ಸ್ಥಿತಿಯಲ್ಲಿ ಪ್ರಾರಂಭಗೊಂಡದ್ದನ್ನು, ಅಲ್ಪಕಾರ್ಯಗಳ ದಿನವನ್ನು ಅಲಕ್ಷ್ಯ ಮಾಡಬೇಡಿರಿ.

## 8. ಆತ್ಮನ ಕಾರ್ಯಗಳು ಸಂರಕ್ಷಿಸಲ್ಪಡಬೇಕು ಮತ್ತು ಪೋಷಿಸಲ್ಪಡಬೇಕು

ಲೂಕ 2:40

**40ಆ ಬಾಲಕನು ಬೆಳೆದು ಬಲಗೊಂಡು ಜ್ಞಾನದಿಂದ ತುಂಬಿದವನಾದನು ಮತ್ತು ಆತನ ಮೇಲೆ ದೇವರ ದಯವಿತ್ತು**

ಮತ್ತಾಯ 2:12-16

**12ಆ ಮೇಲೆ ದೇವರು ಕನಸಿನಲ್ಲಿ ಅವರಿಗೆ ನೀವು ಹೆರೋದನ ಬಳಿಗೆ ತಿರುಗಿ ಹೋಗಬಾರದೆಂದು ಅಪ್ಪಣೆಕೊಟ್ಟಿದ್ದರಿಂದ ಅವರು ಮತ್ತೊಂದು ದಾರಿಯಿಂದ ತಮ್ಮ ದೇಶಕ್ಕೆ ಹೊರಟು ಹೋದರು.**
**13ಅವರು ಹೋದ ಮೇಲೆ ಕರ್ತನ ದೂತನು ಯೋಸೇಫನಿಗೆ ಕನಸಿನಲ್ಲಿ ಕಾಣಿಸಿಕೊಂಡು ನೀನು ಎದ್ದು ಈ ಕೂಸನ್ನು ಇದರ ತಾಯಿಯನ್ನು ಕರಕೊಂಡು ಐಗುಪ್ತ ದೇಶಕ್ಕೆ ಓಡಿಹೋಗಿ ನಾನು ನಿನಗೆ ಹೇಳುವ ತನಕ ಅಲ್ಲೇ ಇರು. ಹೆರೋದನು ಈ ಕೂಸನ್ನು ಕೊಲ್ಲಬೇಕೆಂದು ಅದನ್ನು ಹುಡುಕುತ್ತಿರುವನು ಅಂದನು.**
**14ಆಗ ಅವನು ಎದ್ದು ಕೂಸನ್ನೂ, ಅದರ ತಾಯಿಯನ್ನೂ ರಾತ್ರಿವೇಳೆಯಲ್ಲಿ ಕರಕೊಂಡು ಐಗುಪ್ತ ದೇಶಕ್ಕೆ ಹೊರಟುಹೋಗಿ**
**15ಹೆರೋದನು ತೀರಿಹೋಗುವ ತನಕ ಅಲ್ಲೇ ಇದ್ದನು ಇದರಿಂದ**

**- ನನ್ನ ಮಗನನ್ನು ಐಗುಪ್ತದೇಶದೊಳಗಿಂದ ಕರೆದೆನೆಂದು ಕರ್ತನು ಪ್ರವಾದಿಯ ಮುಖಾಂತರ ಹೇಳಿದ ಮಾತು ನೆರವೇರಿತು.[16]ಆಗ ಹೆರೋದನು ತನಗೆ ಜೋಯಿಸರು ಮೋಸಮಾಡಿದರೆಂದು ತಿಳಿದು ಸಿಟ್ಟಾಗಿ ಆಳುಗಳನ್ನು ಕಳುಹಿಸಿ ತಾನು ಜೋಯಿಸರಿಂದ ತಿಳುಕೊಂಡ ಕಾಲಕ್ಕೆ ಸರಿಯಾಗಿ ಬೆತ್ಲಹೇಮಿನಲ್ಲಿಯೂ ಅದರ ಎಲ್ಲಾ ನೆರೆಹೊರೆ ಹಳ್ಳಿಗಳಲ್ಲಿಯೂ ಎರಡು ವರುಷದೊಳಗಿನ ಗಂಡು ಕೂಸುಗಳನ್ನೆಲ್ಲಾ ಕೊಲ್ಲಿಸಿದನು.**

ಮರಿಯಳು ಮಗುವಿಗೆ ಜನ್ಮನೀಡಿದ ಬಳಿಕ, 'ನಾನು ಅದಕ್ಕೆ ಹಾಲುಣಿಸುವುದಿಲ್ಲ, ಸ್ನಾನ ಮಾಡಿಸುವುದಿಲ್ಲ, ಅದರ ಆರೈಕೆ ಮಾಡುವುದಿಲ್ಲ ಹೇಗೂ ಅದು ದೇವಕುಮಾರನಲ್ಲವೇ' ಎಂದು ಬಿಟ್ಟಿದ್ದರೆ ಏನಾಗುತ್ತಿತ್ತೆಂದು ಊಹಿಸಿ ನೋಡಿರಿ. ಅದು ಮೂರ್ಖತನವಾಗುತ್ತಿತ್ತು. ಹೌದು ಆತನು ದೇವರ ಮಗನೇ ಆದರೂ ಇತರ ಯಾವುದೇ ತಂದೆ ತಾಯಿಗಳಂತೆ ಮರಿಯಳು ಮತ್ತು ಯೋಸೆಫನು ಆ ಮಗುವನ್ನು ಆರೈಕೆ ಮಾಡಿ. ಪೋಷಿಸಿ ಸಂರಕ್ಷಿಸಬೇಕಾಗಿದ್ದಿತು.

ಭೂಲೋಕದಲ್ಲಿ ಜರುಗುವ ಯಾವುದೇ ದೇವರ ಕಾರ್ಯವನ್ನು ನಾವು ಪೋಷಿಸಿ ಸಂರಕ್ಷಿಸಬೇಕು. ಅದು ದೇವರಾತ್ಮನ ಕಾರ್ಯವೆಂದ ಮಾತ್ರಕ್ಕೆ ನಾವದನ್ನು ಜವಾಬ್ದಾರಿಕೆಯಿಂದ ನಡೆಸಬಾರದೆಂದೇನೂ ಅಲ್ಲ. ಬದಲಾಗಿ, ದೇವರು ಉದ್ದೇಶಿಸಿದ ಕಾರ್ಯಗಳ ನಿತ್ಯಮಹತ್ತನ್ನು ಅರಿತು ಆತನು ನಮ್ಮ ಮೂಲಕ ನಡೆಸಲಿರುವ ಚಟುವಟಿಕೆಗಳನ್ನು ಜವಾಬ್ದಾರಿಯುತವಾಗಿ ಕೈಗೊಳ್ಳಬೇಕು.

# ವೈಯಕ್ತಿಕವಾಗಿ ಅನ್ವಯಿಸಿಕೊಳ್ಳುವುದು

ಪ್ರಶ್ನೆ 1. ನೀವು ಮಾಡಲು ನಿರ್ಧರಿಸಿದ ಮತ್ತು ಯೋಜಿಸಿದ ಸಂಗತಿಗಳ ಕುರಿತು ನೀವು ಪವಿತ್ರಾತ್ಮನ ಸ್ವರಕ್ಕೆ ಕಿವಿಗೊಡುತ್ತೀರೋ?

ಪ್ರಶ್ನೆ 2. 'ಮರಿಯಳ ಅದ್ಭುತ'ವನ್ನು ಪುನರವಲೋಕಿಸಿ ನೀವು ಇಂದು ಆತ್ಮನ ಯಾವ ಕೆಲಸಗಳೊಂದಿಗೆ ಅದು ಹೋಲಿಕೆಯಾಗುತ್ತದೆಂದು ಗುರುತಿಸುತ್ತೀರಿ.

ದೇವರಾತ್ಮನ ಸ್ವರವನ್ನು ಕೇಳುವುದು ಹೇಗೆ ಎನ್ನುವುದನ್ನು ಕಲಿತುಕೊಳ್ಳಬೇಕಾದಲ್ಲಿ ಎಪಿಸಿ ಪ್ರಕಾಶನದವರ 'ಪ್ರವಾದನೆಯುನ್ನು ಅರ್ಥೈಸಿಕೊಳ್ಳುವುದು' ಪುಸ್ತಕವನ್ನು ಉಚಿತವಾಗಿ ಪಡೆದು ಓದಿರಿ ಪವಿತ್ರಾತ್ಮನಲ್ಲಿ ಪ್ರಾರ್ಥಿಸುವುದರ ಕುರಿತು ಹೆಚ್ಚಿನ ಅಧ್ಯಯನ ಮಾಡಬೇಕಾದಲ್ಲಿ ಎಪಿಸಿ ಪ್ರಕಾಶನದವರು ಪ್ರಕಟಿಸುವ ಅನ್ಯಭಾಷೆಗಳಲ್ಲಿ ಮಾತನಾಡುವುದರಿಂದ ದೊರಕುವ ಅದ್ಭುತವಾದ ಲಾಭಗಳು' ಎಂಬ ಪುಸ್ತಕವನ್ನು ಉಚಿತವಾಗಿ ಪಡೆದು ಓದಿರಿ.

# ಅಧ್ಯಾಯ 4

# ದೈವ-ದತ್ತ ದರ್ಶನಗಳ ಸ್ವರೂಪ

ಆದಕಾರಣ ಅಗ್ರಿಪ್ಪ ರಾಜನೇ, ಪರಲೋಕದಿಂದ ನನಗೆ ಉಂಟಾದ ಆ ದರ್ಶನಕ್ಕೆ ನಾನು ಅವಿಧೇಯನಾಗದೆ... (ಅಪೊಸ್ತಲರ ಕೃತ್ಯಗಳು 26:19)



# 4
# ದೈವ-ದತ್ತ ದರ್ಶನಗಳ ಸ್ವರೂಪ

ಇದು ಕನಸುಗಳ ಮತ್ತು ದರ್ಶನಗಳ ಗಳಿಗೆಯಾಗಿದೆ. 'ಕನಸುಗಳ ಮತ್ತು ದರ್ಶನಗಳು' ಎನ್ನುವುದು ನಾವು ಮಲಗಿದ್ದಾಗ ನಮ್ಮ ಕನಸಿನಲ್ಲಿ ದೇವರು ನಮ್ಮೊಂದಿಗೆ ಮಾತನಾಡುವುದು ಅಥವಾ ನಾವು ಕಾಣುವ ದರ್ಶನಗಳು ಎಂದಷ್ಟೇ ಅಲ್ಲ ಅವು ಪವಿತ್ರಾತ್ಮನು ತನ್ನ ಜನರಲ್ಲಿ ಹುಟ್ಟಿಸುವ ಯೋಚನೆಗಳು, ಯೋಜನೆಗಳು, ಉದ್ದೇಶಗಳು, ಗುರಿಗಳು ಮತ್ತು ಕೌಶಲ್ಯಗಳನ್ನು ಕುರಿತು ನಾವು ಹೇಳುತ್ತೇವೆ. ಇವೆಲ್ಲವನ್ನು ಪವಿತ್ರಾತ್ಮನು ಪ್ರಥಮವಾಗಿ ಯಾರೊಬ್ಬರ ಹೃದಯದಲ್ಲಿ ಒಂದು ಸಿದ್ಧಾಂತವಾಗಿ, ಆಲೋಚನೆಯಾಗಿ, ಒಂದು ದೃಶ್ಯವಾಗಿ, ಒಂದು ಬಯಕೆಯಾಗಿ ಹುಟ್ಟಿಸುತ್ತಾನೆ– ಇದನ್ನೇ ನಾವು ದೇವರು ಕೊಟ್ಟ ದರ್ಶನ'ವೆಂದು ಹೇಳುತ್ತೇವೆ.

ಅಪೊಸ್ತಲರ ಕೃತ್ಯಗಳು 2:17, 18

**[17] ಕಡೇ ದಿವಸಗಳಲ್ಲಿ ನಾನು ಎಲ್ಲಾ ಮನುಷ್ಯರ ಮೇಲೆ ನನ್ನ ಆತ್ಮವನ್ನು ಸುರಿಸುವೆನು, ನಿಮ್ಮಲ್ಲಿರುವ ಗಂಡಸರೂ ಹೆಂಗಸರೂ ಪ್ರವಾದಿಸುವರು, ನಿಮ್ಮ ಯೌವನಸ್ಥರಿಗೆ ದಿವ್ಯದರ್ಶನಗಳಾಗುವವು ನಿಮ್ಮ ಹಿರಿಯರಿಗೆ ಕನಸುಗಳು ಬೀಳುವವು; [18] ಇದಲ್ಲದೆ ಆ ದಿನಗಳಲ್ಲಿ ನನ್ನ ದಾಸದಾಸಿಯರ ಮೇಲೆಯೂ ನನ್ನ ಆತ್ಮವನ್ನು ಸುರಿಸುವೆನು ಅವರೂ ಪ್ರವಾದಿಸುವರು.**

ದರ್ಶನಗಳು ಮತ್ತು ಕನಸುಗಳು ಪವಿತ್ರಾತ್ಮನ ಭಾಷೆಯಾಗಿದೆ. ದೇವರಾತ್ಮನ ದರ್ಶನಗಳು ಮತ್ತು ಕನಸುಗಳ ಮೂಲಕ ನಮ್ಮೊಂದಿಗೆ ಸಂವಹಿಸುತ್ತಾನೆ–ಇವು ಅತಿಮಾನುಷ ಆಧ್ಯಾತ್ಮಿಕ ಅನುಭವಗಳಾಗಿರಬಹುದು ಅಥವಾ ಆತನೇ ನಮ್ಮಲ್ಲಿ ಹುಟ್ಟಿಸುವ ಸಾಧಾರಣವೆನಿಸುವ ಆಲೋಚನೆಗಳು ಸಿದ್ಧಾಂತಗಳು ಧೋರಣೆಗಳೂ ದೃಶ್ಯಗಳು ಆಶಯಗಳಾಗಿರಲು ಸಾಧ್ಯವಿದೆ.

ಪ್ರತಿಯೊಂದು ದರ್ಶನ ಮತ್ತು ಕನಸಿಗೆ ಉದ್ದೇಶವಿದೆ. ನಮಗಾಗಿ ಆತನ ಇಚ್ಛೆಯೇನು, ಭೂಮಿಯ ಮೇಲೆ ನಾವು ಏನು ಕಾರ್ಯನಿರ್ವಹಿಸಬೇಕು ಎಂಬುದನ್ನು ದೇವರು ಆಗಾಗ್ಗೆ ನಮಗೆ ಪ್ರಚುರಪಡಿಸುತ್ತಾನೆ.

ನಮ್ಮಲ್ಲಿ ಅನೇಕರು ದೇವರಿಗೆ ಏನಾದರೂ ಕಾರ್ಯ ಮಾಡಲು, ಆತನಿಂದ ದರ್ಶನ, ಕನಸು ಇಚ್ಛೆಗಳನ್ನು ಹೊಂದಿದ್ದೇವೆ. ಅರ್ಥಗರ್ಭಿತವಾದ ಜೀವಿತ ಜೀವಿಸಬೇಕು

ಮತ್ತು ದೇವರ ರಾಜ್ಯಕ್ಕಾಗಿ ಯಾವುದಾದರೊಂದು ವ್ಯತ್ಯಾಸವನ್ನುಂಟುಮಾಡುವ ಕಾರ್ಯ ಮಾಡಬೇಕು. ನಾವು ದೇವರ ರಾಜ್ಯ ಕಟ್ಟುವವರಾಗಿರಲು ಇಚ್ಛೆಯುಳ್ಳವರಾಗಿರದ್ದೇವೆ.

ಇಲ್ಲಿ ದೈವ-ದತ್ತದರ್ಶನಗಳ ಕುರಿತ ಹಲವು ಒಳನೋಟಗಳಿವೆ

## ಒಂದು ದೈವದತ್ತ ದರ್ಶನವು ದೈವಿಕ ಆಜ್ಞೆ ಮತ್ತು ಅಧಿಕಾರ ಹೊಂದಿರುತ್ತದೆ

**ಅಪೊಸ್ತಲರ ಕೃತ್ಯಗಳು 26:19**

**"ಆದಕಾರಣ ಅಗ್ರಿಪ್ಪ ರಾಜನೇ, ಪರಲೋಕದಿಂದ ನನಗೆ ಉಂಟಾದ ಆ ದರ್ಶನಕ್ಕೆ ನಾನು ಅವಿಧೇಯನಾಗದೆ..."**

ದೈವದತ್ತವಾದ ದರ್ಶನವು ಭೂಮಿಯ ಮೇಲೆ ಆತನ ರಾಜ್ಯವನ್ನು ಸ್ಥಾಪಿಸುವ ಮತ್ತು ವಿಸ್ತರಿಸುವ ಕಾರ್ಯದ ಕುರಿತಾಗಿ ಆತನು ನೀಡುವ ಆಜ್ಞೆ ಮತ್ತು ಅನುಮತಿಯಾಗಿದೆ.

- ಅದು ವಿಧೇಯವಾಗಲೇಬೇಕಾದ ಆಜ್ಞೆಯಾಗಿದೆ.
- ಪರಲೋಕದ ಅನುಮತಿಯು ನಮ್ಮನ್ನು ಧೈರ್ಯವುಳ್ಳವರಾಗಿ, ಭೀತಿ ಇಲ್ಲದವರಾಗಿ ಮತ್ತು ಆತ್ಮ ವಿಶ್ವಾಸವುಳ್ಳವರಾಗಿ ಮಾಡುತ್ತದೆ ದೇವರು ನಮ್ಮ ಹಿಂಬಲವಾಗಿದ್ದಾನೆನ್ನುವುದನ್ನು ತಿಳಿದು ಈ ದರ್ಶನವನ್ನು ಸಾಕಾರಗೊಳಿಸಲು ನಾವು ಮುಂದಾಗಬಹುದು. ತಾನು ನೀಡುವ ಪ್ರತಿಯೊಂದು ದರ್ಶನವು ಸಂಪೂರ್ಣವಾಗಿ ನೆರವೇರಬೇಕೆನ್ನುವುದಕ್ಕೆ ದೇವರು ನೂರಕ್ಕೆ ನೂರರಷ್ಟು ಬದ್ಧನಾಗಿದ್ದಾನೆ. ಈ ವಿಶ್ವದ ಒಡೆಯನೇ ನಮ್ಮ ಹಿಂಬಲವಾಗಿ ನಿಲ್ಲುತ್ತಾನೆಂದ ಮೇಲೆ, ನಮ್ಮ ಒಲ್ಲದ ಮನಸ್ಸಿನ ಧೋರಣೆ ಮಾತ್ರದಿಂದಲೇ ಆತನ ಕಾರ್ಯಗಳು ನಮ್ಮಲ್ಲಿ ಮತ್ತು ನಮ್ಮ ಮೂಲಕವಾಗಿ ನಡೆಯದಿರುವಂತೆ ಮಾಡುತ್ತದೆ.
- ದೈವದತ್ತ ದರ್ಶನವನ್ನು ಹೊಂದಿದವನು ದರ್ಶನಧಾರಿಯಾಗುತ್ತಾನೆ. ಈ ದರ್ಶನವು ನೆರವೇರುವಂತೆ ದೇವರು ಈ ವ್ಯಕ್ತಿ ಯಲ್ಲಿಯೂ ಮತ್ತು ಅವನ ಮೂಲಕವೂ ಕೆಲಸ ಮಾಡುತ್ತಾನೆ. ಆದಾಗ್ಯೂ ಇದು ಯಾರಿಗೂ ಕಾಣದಂತೆ ದೂರದಲ್ಲೆಲ್ಲೋ ನಡೆಯುವ ಸಂಗತಿಯಲ್ಲ. ಈ ದರ್ಶನವು ಈಡೇರಬೇಕಾದಲ್ಲಿ ಅನೇಕ ಜನರು ಮತ್ತು ಘಟನೆಗಳು ಒಟ್ಟುಗೂಡಬೇಕಾಗಿದೆ.

- ದೇವರು ಭೂಮಿಯಲ್ಲಿ ಏನನಾದರೂ ಒಂದು ಸಂದೇಶವನ್ನು ಪ್ರಕಟಿಸಬೇಕೆನ್ನುವಾಗ ಆತನು ಸಾಧಾರಣವಾಗಿ ಒಂದು ನಿರ್ಧಿಷ್ಟ ಸ್ಥಳದಲ್ಲಿ ಒಬ್ಬ ವ್ಯಕ್ತಿಯನ್ನು ಎಬ್ಬಿಸುತ್ತಾನೆ. ಇದರ ಮೂಲಕ ಒಂದು ಗುಂಪೇ ಎದ್ದು ನಿಂತು ದೇವರ ಉದ್ದೇಶವನ್ನು ನೆರವೇರಿಸುತ್ತದೆ.

- ದೇವರ ಒಬ್ಬ ಮನುಷ್ಯನನ್ನು (ಒಬ್ಬ ಪುರುಷ ಅಥವಾ ಸ್ತ್ರಿಯನ್ನು ಉಪಯೋಗಿಸಿ) ಒಂದು ನಿರ್ದಿಷ್ಟ ಕೆಲಸಕ್ಕೆಂದು ಆರಿಸಿಕೊಳ್ಳುತ್ತಾನೆ. ಒಂದು ಸಂದೇಶವನ್ನು ಹೇಳಲು, ಒಂದು ಸೇವೆಯನ್ನು ಅವನಿಗೆ ಕೊಡುತ್ತಾನೆ. ತನ್ನ ಜನರಲ್ಲಿ ಆತನು ದರ್ಶನ ಹೊಂದಿದವನು ಅಥವಾ ದರ್ಶನ ದಾರಿಯಾಗುತ್ತಾನೆ. ಆ ಕೆಲಸವನ್ನು ನಿರ್ವಹಿಸಲು ಬೇಕಾದ ವಿಧಾನಗಳನ್ನು ಮತ್ತು ಅದನ್ನು ನಡೆಸಲು ಬೇಕಾದ ಸಹಾಯಗಳನ್ನು ನೀಡಿ ಅದನ್ನು ಈಡೇರುಸುತ್ತಾನೆ.

ಸತ್ಯವೇದದಲ್ಲಿ ಕಂಡುಬರುವ ಕೆಲವು ದೇವ ಜನರನ್ನು ಉಪಯೋಗಿಸಿ ದೇವರು ಅವರ ಮೂಲಕ ಹೇಗೆ ಕಾರ್ಯನಡೆಸಿದನೆನ್ನುವ ಉದಾಹರಣೆಗಳನ್ನು ನೋಡೋಣ. ದೇವರು ಮೋಶೆಗೆ ದರ್ಶನವೊಂದನ್ನು ನೀಡಿ ಅದಕ್ಕಾಗಿ ತರಬೇತಿಗೊಳಿಸಿದರ ತಾತ್ಪರ್ಯ ಇಲ್ಲಿದೆ.

ಅಪೊಸ್ತಲರ ಕೃತ್ಯಗಳು 7:17-36

**[17]ಆದರೆ ದೇವರು ಅಬ್ರಹಾಮನಿಗೆ ವಾಗ್ದಾನ ಮಾಡಿದ್ದ ಕಾಲವು ಹತ್ತಿರಕ್ಕೆ ಬರುತ್ತಿರುವಾಗ
ನಮ್ಮ ಜನರು ಐಗುಪ್ತದೇಶದಲ್ಲಿ ಹೆಚ್ಚಿ ಬಹಳವಾದರು. [18]ಕಡೆಗೆ ಯೋಸೇಫನನ್ನು ಅರಿಯದ
ಬೇರೊಬ್ಬ ಅರಸನು ಆಳ್ವಿಕೆಗೆ ಬಂದನು. [19]ಈ ಅರಸನು ನಮ್ಮ ಜನರಲ್ಲಿ ಕುಯುಕ್ತಿ ಮಾಡಿ ಅವರ
ಕೂಸುಗಳನ್ನು ಜೀವದಿಂದುಳಿಸಬಾರದೆಂದು ಹೊರಗೆ ಹಾಕಿಸಿ ನಮ್ಮ ಪಿತೃಗಳನ್ನು ಕ್ರೂರವಾಗಿ
ನಡಿಸಿದನು. [20]ಆ ಸಮಯದಲ್ಲೇ ಮೋಶೆಯು ಹುಟ್ಟಿದನು. ಅವನು ದಿವ್ಯಸುಂದರನಾಗಿದ್ದನು;
ಮತ್ತು ತಂದೆಯ ಮನೆಯಲ್ಲಿ ಮೂರು ತಿಂಗಳು ಸಾಕಲ್ಪಟ್ಟನು. [21]ಆಮೇಲೆ ಅವನನ್ನು ಹೊರಗೆ
ಹಾಕಿದಾಗ ಫರೋಹನ ಮಗಳು ಅವನನ್ನು ಎತ್ತಿಕೊಂಡು ಹೋಗಿ ತನ್ನ ಮಗನಾಗಿ ಸಾಕಿದಳು.
[22]ಮೋಶೆಯು ಐಗುಪ್ತದೇಶದವರ ಸರ್ವವಿದ್ಯೆಗಳಲ್ಲಿಯೂ ಉಪದೇಶಹೊಂದಿ ಮಾತುಗಳಲ್ಲಿಯೂ
ಕಾರ್ಯಗಳಲ್ಲಿಯೂ ಸಮರ್ಥನಾದನು [23]ಅವನಿಗೆ ನಾಲ್ವತ್ತು ವರುಷ ವಯಸ್ಸು ತುಂಬುತ್ತಾ ಇರಲು
ಇಸ್ರಾಯೇಲ್ ವಂಶಸ್ಥರಾದ ತನ್ನ ಸಹೋದರರನ್ನು ಹೋಗಿ ನೋಡಬೇಕೆಂಬ ಆಸೆಯು ಅವನ
ಹೃದಯದಲ್ಲಿ ಹುಟ್ಟಿತು. [24]ಅವರಲ್ಲಿ ಒಬ್ಬನಿಗೆ ಅನ್ಯಾಯವಾಗುವುದನ್ನು ಅವನು ನೋಡಿ ಅವನಿಗೆ
ಆಶ್ರಯಕೊಟ್ಟು ಪೀಡಿಸುವ ಐಗುಪ್ತನನ್ನು ಹೊಡೆದುಹಾಕಿ ಮುಯ್ಯಿಗೆ ಮುಯ್ಯಿ ತೀರಿಸಿದನು.
[25] ದೇವರ ತನ್ನ ಕೈಯಿಂದ ಬಿಡುಗಡೆಯನ್ನು ಉಂಟುಮಾಡುತ್ತಾನೆಂಬದು ತನ್ನ ಸಹೋದರರಿಗೆ
ತಿಳಿದು ಬರುವದೆಂದು ಭಾವಿಸಿದನು; ಆದರೆ ಅವರು ಹಾಗೆ ತಿಳುಕೊಳ್ಳಲಿಲ್ಲ. [26]ಮರುದಿನ
ತಾವು ತಾವೇ ಹೊಡೆದಾಡಿಕೊಳ್ಳುತ್ತಿರುವಾಗ ಅವನು ಎದುರಾಗಿ ಬಂದು - ಜನರೇ ನೀವು**

ಸಹೋದರರಲ್ಲವೇ? ನೀವೇಕೆ ಒಬ್ಬರಿಗೊಬ್ಬರು ಅನ್ಯಾಯ ಮಾಡುತ್ತೀರಿ ಎಂದು ಹೇಳಿ ಅವರನ್ನು ಸಮಾಧಾನಪಡಿಸಬೇಕೆಂದಿದ್ದನು. [27] ಆದರೆ ತನ್ನ ಸ್ವಕುಲದವನಿಗೆ ಅನ್ಯಾಯ ಮಾಡುತ್ತಿದ್ದವನು ನಿನ್ನನ್ನು ನಮ್ಮ ಮೇಲೆ ಅಧಿಕಾರಿಯನ್ನಾಗಿಯೂ ನ್ಯಾಯಾಧಿಪತಿಯನ್ನಾಗಿಯೂ ಇಟ್ಟವನು ಯಾರು? [28]ನಿನ್ನೆ ಆ ಐಗುಪ್ತನನ್ನು ಕೊಂದಂತೆ ನನ್ನನ್ನೂ ಕೊಲ್ಲಬೇಕೆಂದಿದ್ದೀಯೋ ಎಂದು ಅವನನ್ನು ನೂಕಿಬಿಟ್ಟನು. [29]ಈ ಮಾತನ್ನು ಕೇಳಿ ಮೋಶೆಯು ಓಡಿಹೋಗಿ ಮಿದ್ಯಾನ್ ದೇಶದಲ್ಲಿ ಪ್ರವಾಸಿಯಾದನು. ಅಲ್ಲಿ ಇಬ್ಬರು ಗಂಡು ಮಕ್ಕಳನ್ನು ಪಡೆದನು. [30]ನಾಲ್ವತ್ತು ವರುಷ ತುಂಬಿದ ಮೇಲೆ ದೇವದೂತನು ಸೀನಾಯಿ ಬೆಟ್ಟದ ಅಡವಿಯಲ್ಲಿ ಮುಳ್ಳಿನ ಪೊದೆಯೊಳಗೆ ಉರಿಯುವ ಬೆಂಕಿಯಲ್ಲಿ ಅವನಿಗೆ ಕಾಣಿಸಿಕೊಂಡನು [31]ಮೋಶೆಯು ಅದನ್ನು ಕಂಡು ಆ ನೋಟಕ್ಕೆ ಆಶ್ಚರ್ಯಪಟ್ಟು ಚೆನ್ನಾಗಿ ನೋಡಬೇಕೆಂದು ಹತ್ತಿರಬರಲು [32]ನಾನು ನಿನ್ನ ಪಿತೃಗಳ ದೇವರು, ಅಬ್ರಹಾಮ ಇಸಾಕ ಯಾಕೋಬರ ದೇವರು ಎಂದು ಕರ್ತನ ಶಬ್ದವುಂಟಾಯಿತು. ಆಗ ಮೊಶೆಯು ನಡುಗುತ್ತಾ ಸ್ಥಿರವಾಗಿ ನೋಡುವುದಕ್ಕೆ ಧೈರ್ಯವಿಲ್ಲದವನಾದನು. [33]ಮತ್ತು ಕರ್ತನು ಅವನಿಗೆ - ನಿನ್ನ ಕಾಲಿನ ಕೆರಗಳನ್ನು ತೆಗೆ, ನೀನು ನಿಂತಿರುವ ಸ್ಥಳವು ಪರಿಶುದ್ಧ ಭೂಮಿ. [34]ಐಗುಪ್ತದೇಶದಲ್ಲಿರುವ ನನ್ನ ಜನರ ದುರವಸ್ಥೆಯನ್ನು ನೋಡೇ ನೋಡಿದ್ದೇನೆ; ಅವರ ಮೊರೆಯನ್ನು ಕೇಳಿ ಅವರನ್ನು ಬಿಡಿಸುವುದಕ್ಕೆ ಇಳಿದುಬಂದಿದ್ದೇನೆ. ಈಗ ನಿನ್ನನ್ನು ಐಗುಪ್ತದೇಶಕ್ಕೆ ಕಳುಹಿಸುತ್ತೇನೆ ಬಾ, ಎಂದು ಹೇಳಿದನು [35]ಅವರು ಯಾವ ಮೋಶೆಯನ್ನು ನಿನ್ನನ್ನು ಅಧಿಕಾರಿಯನ್ನಾಗಿಯೂ ನ್ಯಾಯಾಧಿಪತಿಯನ್ನಾಗಿಯೂ ಇಟ್ಟವರು ಯಾರೆಂದು ಹೇಳಿ ಬೇಡವೆಂದರೋ ಅವನನ್ನೇ ದೇವರು ಪೊದೆಯಲ್ಲಿ ಕಾಣಿಸಿಕೊಂಡ ದೂತನ ಕೈಯಿಂದ ಅಧಿಕಾರಿಯನ್ನಾಗಿಯೂ ಬಿಡುಗಡೆಮಾಡುವವನ್ನಾಗಿಯೂ ನೇಮಿಸಿದನು. [36]ಅವನೇ ಐಗುಪ್ತದೇಶದಲ್ಲಿಯೂ ಕೆಂಪು ಸಮುದ್ರದಲ್ಲಿಯೂ ನಾಲ್ವತ್ತು ವರುಷ ಅಡವಿಯಲ್ಲಿಯೂ ಅದ್ಭುತಕಾರ್ಯಗಳನ್ನೂ, ಸೂಚಕ ಕಾರ್ಯಗಳನ್ನೂ ಮಾಡುತ್ತಾ ಅವರನ್ನು ನಡೆಸಿಕೊಂಡು ಬಂದವನು.

## ದೈವದತ್ತ ದರ್ಶನಗಳು ಹಲವು ಬಾರಿ ನಮ್ಮ ಹೃದಯಗಳ ಸಾಮಾನ್ಯ ಪ್ರೇರಣೆ ಅಥವಾ ಕದಡುವಿಕೆಯಿಂದ ಪತ್ತೆಯಾಗುತ್ತವೆ

ದೇವರು ಅತಿಮಾನುಷ ರೀತಿಯಲ್ಲಿ ತನ್ನ ಯೋಜನೆ ಮತ್ತು ಉದ್ದೇಶಗಳನ್ನು ಪ್ರಕಟಿಸುತ್ತಾನೆನ್ನುವುದು ನಮ್ಮ ಹೃದಯದಲ್ಲಾಗುವ ಸರಳವಾದ ಕ್ರಿಯಾಶೀಲಭಾವಗಳ ಮೂಲಕ ಸತ್ಯವಾದರೂ ಪರಲೋಕದ ದರ್ಶನವನ್ನು ಗುರುತಿಸುವುದು ಸಾಧ್ಯವಿದೆ. ಏನೋ ಒಂದು ನಮ್ಮ ಹೃದಯವನ್ನು ತಟ್ಟುತ್ತದೆ. ಯಾವುದೋ ವಿಷಯ ನಮ್ಮನ್ನು ಬಹಳ ಆಕರ್ಷಿಸುತ್ತದೆ ಅಲ್ಲಿ ದೇವರ ಪ್ರಸನ್ನತೆ ಇರುವುದು ಅದರ ಕಾರಣವಾಗಿರಬಹುದು.

ಮೋಶೆ ಅಡವಿಯಲ್ಲಿ ಉರಿಯುವ ಪೊದೆಯನ್ನು ನೋಡಿದಂತೆ ಅಲ್ಲಿ ಇತರ ಪೊದೆಗಳೂ ಇದ್ದಿರಬಹುದು ಆದರೆ ಒಂದು ಮಾತ್ರ ಅವನ ಗಮನ ಸೆಳೆಯಿತು ಯಾಕೆಂದರೆ ಅದರ ಮೇಲೆ ದೇವರ ಪ್ರಸನ್ನತೆ ಇತ್ತು. ಅಲ್ಲಿಂದ ದೇವರು ಅವನಿಗೆ

ತನ್ನ ಕರೆ ನೀಡಿದನು. ಯಾವುದು ಬಹಳವಾಗಿ ಆಕರ್ಷಿಸುತ್ತದೋ–ನಿಮ್ಮ ಉರಿಯುವ ಪೊದೆ–ಅಲ್ಲಿ ದೇವರ ಪ್ರಸನ್ನತೆಯು ನೆಲೆಸಿದ್ದು ನಿಮ್ಮ ಕರೆ ಮತ್ತು ಜೀವನದ ಉದ್ದೇಶ ಇದೇ ಆಗಿದೆ ಎನ್ನುವ ದೇವರ ಸ್ವರ ಅಲ್ಲಿಂದಲೇ ಹೊರಡುತ್ತದೆ.

ಹೇಗೂ, ನಾಲ್ವತ್ತು ವರ್ಷಗಳ ಹಿಂದೆ ದೇವರು ಅವನಿಗೆ ಕೊಟ್ಟ ಕರೆಯನ್ನೇ ಉರಿಯುವ ಪೊದೆಯಲ್ಲಿ ಅವನಿಗೆ ಉಚ್ಚರಿಸಿದನು.

ಅಪೊಸ್ತಲರ ಕೃತ್ಯಗಳು 7:23

**[23] ಅವನಿಗೆ ನಾಲ್ವತ್ತು ವರುಷ ವಯಸ್ಸು ತುಂಬುತ್ತಾ ಇರಲು ಇಸ್ರಾಯೇಲ್ ವಂಶಸ್ಥರಾದ ತನ್ನ ಸಹೋದರರನ್ನು ಹೋಗಿ ನೋಡಬೇಕೆಂಬ ಆಸೆಯು ಅವನ ಹೃದಯದಲ್ಲಿ ಹುಟ್ಟಿತ್ತು.**

ಉರಿಯುವ ಪೊದೆಯ ಅನುಭವಕ್ಕೆ ನಲ್ವತ್ತು ವರ್ಷಗಳ ಮೊದಲು, ದೇವರು ಮೋಶೆಯ ಹೃದಯದಲ್ಲಿ ಒಂದು ಕದಡುವಿಕೆಯ ಭಾವವನ್ನು ಹುಟ್ಟಿಸಿದನು. ಅದು ಉರಿಯುವ ಪೊದೆಯ ಘಟನೆಯಂತೆ ಅದ್ಭುತವಾದ ದೃಶ್ಯವೇನೂ ಆಗಿರಲಿಲ್ಲ, ಆದರೆ ಅಂದಿಗೂ ಅದೇ ದೇವರು ತನ್ನ ಜನರನ್ನು ಮೋಶೆಯೇ ಬಿಡಿಸುತ್ತಾನೆಂಬ ಅದೇ ದರ್ಶನವನ್ನು ಅವನಿಗೆ ತಿಳಿಸುತ್ತಿದ್ದನು. ತಾನು ದೇವರ ಜನರನ್ನು ಬಿಡಿಸಲೆಂದೇ ಹುಟ್ಟಿ ಬಂದಿರುವ ದೇವರ ಮನುಷ್ಯನೆನ್ನುವ ಸಂಗತಿಯು (ಅಪೊಸ್ತಲರ 7:28) ಮೋಶೆಗೆ ನಲ್ವತ್ತು ವರ್ಷಗಳ ಹಿಂದೆಯೇ ತಿಳಿದಿತ್ತು. ಇದು ಸರಳವಾದ ಉತ್ಸಾಹ, ಸರಳವಾಗಿ ಹಿಂದೆಯೇ ತಿಳಿದಿತ್ತು. ಇದು ಸರಳವಾದ ತಿಳುವಳಿಕೆಯು ಅವರ ಹೃದಯದಲ್ಲಿ ಹುಟ್ಟಿ ಬೆಳೆಯುತ್ತಿತ್ತು.

ನೆಹಮೀಯನನ್ನು ಆಲೋಚಿಸಿರಿ, ಯೆರೂಸಲೇಮಿನ ಗೋಡೆಗಳನ್ನು ಕಟ್ಟುವ ಕೆಲಸಕ್ಕಾಗೆಂದೇ ಅವನನ್ನು ಸಿದ್ಧಪಡಿಸಿದ್ದನು ನೆಹೆಮೀಯನು ದೇವರ ದರ್ಶನವನ್ನು ಹೇಗೆ ಹೊಂದಿಕೊಂಡನು?

ನೆಹೆಮಿಾಯ 1:1-4

**[1]ಹಕಲ್ಯನ ಮಗನಾದ ನೆಹೆಮಿಾಯನ ಮಾತುಗಳು ಇಪ್ಪತ್ತನೆಯ ವರುಷದ ಮಾರ್ಗಶೀರ್ಷ ಮಾಸದಲ್ಲಿ ನಾನು ಶೂಷನ್ ಪಟ್ಟಣದ ಅರಮನೆಯಲ್ಲಿದ್ದಾಗ [2] ನನ್ನ ಸಹೋದರರಲ್ಲಿ ಒಬ್ಬನಾದ ಹನಾನೀಯನೂ ಬೇರೆ ಕೆಲವು ಜನರೂ ಯೆಹೂದದಿಂದ ನನ್ನ ಬಳಿಗೆ ಬಂದರು ಸೆರೆಯವರೊಳಗೆ ತಪ್ಪಿಸಿಕೊಂಡ ಯೆಹೂದ್ಯರ ಮತ್ತು ಯೆರೂಸಲೇಮಿನ ಸಮಾಚಾರವನ್ನು ನಾನು ಅವರ ಹತ್ತಿರ ವಿಚಾರಿಸುವಲ್ಲಿ [3] ಅವರು ನನಗೆ ಸೆರೆಯವರೊಳಗೆ ತಪ್ಪಿಸಿಕೊಂಡು ಆ ಸಂಸ್ಥಾನದಲ್ಲಿ ವಾಸಿಸುತ್ತಿರುವವರು ಮಹಾ ಕಷ್ಟನಿಂದೆಗಳಿಗೆ ಒಳಗಾಗಿದ್ದಾರೆ. ಯೆರೂಸಲೇಮಿನ ಪೌಳಿಗೋಡೆಯು ಕೆಡವಲ್ಪಟ್ಟಿರುತ್ತದೆ. ಅದರ ಬಾಗಿಲುಗಳು ಬೆಂಕಿಯಿಂದ ಸುಡಲ್ಪಟ್ಟಿರುತ್ತದೆ ಎಂದು ಹೇಳಿದರು [4] ನಾನು ಈ ವರ್ತಮಾನವನ್ನು ಕೇಳಿದಾಗ ನೆಲದ ಮೇಲೆ ಕೂತುಕೊಂಡು ಅತ್ತೆನು. ಕೆಲವು ದಿವಸಗಳವರೆಗೂ ಶೋಕಿಸುತ್ತಾ ಉಪವಾಸವಾಗಿದ್ದು ಪರಲೋಕ ದೇವರ ಮುಂದೆ ವಿಜ್ಞಾಪನೆ ಮಾಡುತ್ತಾ ಇದ್ದೆನು.**

ನೆಹೆಮಿಯ 2:12

**[12] ಅಲ್ಲಿ ಮೂರು ದಿನಗಳಿದ್ದ ಮೇಲೆ ಯೆರೊಸಲೇಮಿಗೋಸ್ಕರ ಮಾಡತಕ್ಕ ಕಾರ್ಯದ ವಿಷಯವಾಗಿ ನನ್ನ ದೇವರು ನನ್ನಲ್ಲಿ ಯಾವ ಆಲೋಚನೆಯನ್ನು ಹುಟ್ಟಿಸಿದ್ದಾನೆಂದು ಯಾರಿಗೂ ತಿಳಿಸದೇ ರಾತ್ರಿಯಲ್ಲೆದ್ದು ಕೆಲವು ಜನರನ್ನು ಮಾತ್ರ ಕರೆದುಕೊಂಡು ಹೊರಟೆನು. ನನ್ನ ವಾಹನ ಪಶುವಿನ ಹೊರತು ಬೇರೆ ಯಾವ ಪಶುವೂ ನನ್ನೊಂದಿಗಿರಲಿಲ್ಲ.**

## ಒಂದು ದೈವ-ದತ್ತ ದರ್ಶನವು ಪ್ರಾರಂಭವಾಗಲು ಮತ್ತು ನಿರ್ವಹಣೆಯಾಗಲು ನಿಯಮಿತ ಸಮಯ ಹೊಂದಿದೆ

ಅಪೊಸ್ತಲರ ಕೃತ್ಯಗಳು 7:17,20

**[17]ಆದರೆ ದೇವರು ಅಬ್ರಹಾಮನಿಗೆ ವಾಗ್ದಾನ ಮಾಡಿದ್ದ ಕಾಲವು ಹತ್ತಿರಕ್ಕೆ ಬರುತ್ತಿರುವಾಗ ನಮ್ಮ ಜನರು ಐಗುಪ್ತದೇಶದಲ್ಲಿ ಹೆಚ್ಚಿ ಬಹಳವಾದರೂ [20] ಆ ಸಮಯದಲ್ಲಿ ಮೋಶೆಯು ಹುಟ್ಟಿದನು. ಅವನು ದಿವ್ಯಸುಂದರನಾಗಿದ್ದನು ಮತ್ತು ತಂದೆಯ ಮನೆಯಲ್ಲಿ ಮೂರು ತಿಂಗಳು ಸಾಕಲ್ಪಟ್ಟನು**

ಕ್ರೋನೋಸ್ (Chronos) -ಕಾಲಾವಧಿ, ದಿವಸಗಳ ಅಂಕಿ (ಸಂಖ್ಯೆ).

'ಕೈರೋಸ್' ಭೂಮಿಯ ಮೇಲೆ ''ಕಾಲವು ಪೂರ್ಣವಾಗುವುದು'' ಇದು ಭೂಮಿಯ ಮೇಲೆ ಒಂದು ವಿದ್ಯಮಾನ ಪರಿಸ್ಥಿತಿ ''ಸಂಪೂರ್ಣತೆಯ ಸಮಯ'' - ಇವು ಆಂತರಿಕ ಮತ್ತು ಬಾಹ್ಯ ವಿಷಯಗಳನ್ನು ಒಟ್ಟಾಗಿ ತರುವುದಾಗಿದೆ.

'ಕೈರೋಸ್' ಸಮಯವನ್ನು ನಿರ್ಧರಿಸುವ ಹೊರಗಿನ ಅಂಶಗಳು:

- ಜನರು: ದರ್ಶನಧಾರಿಯ ಜೊತೆಜೊತೆಗೆ, ಆ ದರ್ಶನದ ಭಾಗವಾಗಿ ತಮ್ಮನ್ನು ಸೇವೆಗೆ ಒಪ್ಪಿಸಿಕೊಂಡವರು ಸಹ ಸಿದ್ಧರಾಗುವ ಅವಶ್ಯಕತೆಯಿದೆ. ಕೆಲಮೊಮ್ಮೆ ಅಡಚಣೆ ಉಂಟುಮಾಡುವ ಕೆಲಜನರನ್ನು ಈ ಕೆಲಸದಿಂದ ಹೊರ ಕಳುಹಿಸಬೇಕಾದ ಸಂದರ್ಭಗಳು ಎದುರಾಗಬಹುದು. ಕೆಲವೊಮ್ಮೆ ಹಳೆ ತಲೆಮಾರಿನವರು ತಮ್ಮ ಕಾಲಗತಿಯನ್ನು ಮುಗಿಸಿದ ಮೇಲೆ ಹೊಸ ಪೀಳಿಗೆಗೆ ಅವಕಾಶ ದೊರೆಯುತ್ತದೆ.
- ಸ್ಥಳ(ಗಳು): ಕಾರ್ಯವು ನಡೆಯಬೇಕಾದ ಸ್ಥಳವನ್ನು (ನಗರ, ಪ್ರದೇಶ, ಪರಿಸರ) ದೇವರೇ ಸಿದ್ಧಮಾಡುವನು.
- ದರ್ಶನಧಾರಿಯನ್ನು ಸುತ್ತುವರೆದ ಸಂಗತಿಗಳು, ಉದಾಹರಣೆಗೆ ಅವನ ಹಣಕಾಸಿನ ಸ್ಥಿತಿಗತಿ, ಅವನ ಕುಟುಂಬ ಮುಂತಾದವು ತನ್ನ ಕಾರ್ಯಗಳನ್ನು ಈಡೇರಿಸಿಕೊಳ್ಳಲು ದೇವರು ಇವೆಲ್ಲವನ್ನೂ ಒಗ್ಗೂಡಿಸುತ್ತಾನೆ.

ಇವೆಲ್ಲವುಗಳನ್ನು ದೇವರು ತಾನೇ ಒಟ್ಟಾಗಿ ತಂದರೆ ಆತನ ಉದ್ದೇಶಗಳು ನೆರವೇರಿಸಲು ಸಾಧ್ಯ.

ದರ್ಶನಧಾರಿಯ ತಯಾರಿ ಮತ್ತು ಸಿದ್ಧತೆಯು ಜೀವಿತದ ನಿಬಂಧನೆ ಅಥವಾ ಷರತ್ತುಗಳಲ್ಲಿ ಆಂತರಿಕ ಅಂಶಗಳು ಸೇರಿವೆ.

ನಿಬಂಧನೆಗಳು/ಷರತ್ತುಗಳು

- ಸರಿಯಾದ ಹೃದಯದ ಮನೋಭಾವನೆಗಳು
- ಜನರೊಂದಿಗೆ ಸರಿಯಾದ ಸಂಬಂಧ
- ಎಲ್ಲಾ ವಿಷಯಗಳಲ್ಲೂ ಪ್ರೌಢತೆ
- ಮನೆಯನ್ನು ಕ್ರಮದಲ್ಲಿರಿಸುವುದು
- ಸೇವಕನ ಹೃದಯ ಹೊಂದಿದವನಾಗಿರುವುದು
- ಅಲ್ಪವಿಷಯಗಳಲ್ಲೂ ನಂಬಿಗಸ್ತನಾಗಿರುವದು
- ಕ್ರಿಸ್ತನಂತೆ ಗುಣ ಸ್ವಭಾವ

ನಮ್ಮ ಜೀವನದಲ್ಲಿ ಘಟಿಸುವ ಸಂಗತಿಗಳ ಗತಿಗನುಸಾರವಾಗಿ ನಾವು 'ಕೈರೋಸ್' ಕ್ಷಣಗಳನ್ನು ತ್ವರಿತಗೊಳಿಸಬಹುದು ಇಲ್ಲವೇ ನಿಧಾನಗೊಳಿದುವ ಸಾಧ್ಯತೆ ಇದೆ. ಜೀವನವು ಅವಧಿ, ಘಟ್ಟ ಇಲ್ಲವೆ ಮಜಲುಗಳಲ್ಲಿ ನಡೆದು ಹೋಗುತ್ತದೆ. ಅಂದರೆ ಜೀವನದಲ್ಲಿ ಹಲವಾರು 'ಕ್ರೋನೋಸ್' ಘಟ್ಟಗಳು ಮತ್ತು 'ಕೈರೋಸ್' ಕ್ಷಣಗಳು ಇದ್ದು ದೇವರು ಅವುಗಳ ಮೂಲಕ ನಮ್ಮನ್ನು ನಡೆಸಿಕೊಂಡು ಹೋಗುತ್ತಾನೆ. ನಾವು ಇಸ್ಸಾಕಾರ್ಯರಂತೆ ಇರಬೇಕು, 'ಇವರು ಸಮಯೋಚಿತ ಜ್ಞಾನವುಳ್ಳವರಾಗಿ ಇಸ್ರಾಯೇಲ್ಯರು ಮಾಡತಕ್ಕದ್ದನ್ನು ಅರಿತವರು' (1 ಪೂರ್ವಕಾಲ ವೃತಾಂತ 12:32) ದೇವರು ತನ್ನ ರಾಜ್ಯದ ಉದ್ದೇಶಗಳನ್ನು ನಮ್ಮ ಮುಂದೆ ಬಿಚ್ಚಿಡುತ್ತಾ, ಆತನ ದರ್ಶನ ಮತ್ತು ಕನಸುಗಳು ನಮ್ಮ ಜೀವನದಲ್ಲಿ ನೆರವೇರುವಂತೆ ಮಾಡುತ್ತಿರುವಾಗಲೇ ಆತನು ನಮ್ಮನ್ನು ನಡೆಸುತ್ತಿರುವ ಕಾಲ ಮತ್ತು ಸಮಯವನ್ನು ಗುರುತಿಸಬೇಕು.

## ದೈವದತ್ತ ದರ್ಶನವನ್ನು ನೆರವೇರಿಸಲು ಸಿದ್ಧತೆಬೇಕು

ದೈವದತ್ತ ದರ್ಶನವನ್ನು ನೆರವೇರಿಸುವಲ್ಲಿ ಸಿದ್ಧತೆಯು ಬಹುಮುಖ್ಯವಾಗಿದೆ. ಆತನು ತನ್ನ ದರ್ಶನ, ಕರೆ ಮತ್ತು ವರವನ್ನು ನಮ್ಮ ಮೂಲಕ ಬಿಡುಗಡೆಗೊಳಿಸುವ ಮೊದಲು ಅದಕ್ಕಾಗಿ ನಮ್ಮನ್ನು ಸಿದ್ಧಗೊಳಿಸಲು ಮತ್ತು ರೂಪಿಸಲು ದೇವರು ಸಮಯ ಕೊಡುತ್ತಾನೆ.

ದೇವರು ನಮ್ಮನ್ನು ಅನೇಕ ವಿಧದಲ್ಲಿ ಸಿದ್ಧಗೊಳಿಸುತ್ತಾನೆ. ಇದರಲ್ಲಿ ಪ್ರಾಥಮಿಕ ಹಂತದ ಸಿದ್ಧತೆಯೆಂದರೆ, ದೇವರೊಂದಿಗೆ ವೈಯಕ್ತಿಕವಾಗಿ ನಡೆಯುವುದು ಮತ್ತು ಕ್ರಿಸ್ತನ ಗುಣಗಳನ್ನು ಬೆಳೆಸಿಕೊಳ್ಳುವುದಾಗಿದೆ.

ನಮ್ಮ ಸಿದ್ಧತೆಯ ಅವಧಿಯಲ್ಲಿ, ಇತರ ನಾಯಕರ ಜೊತೆಗೂಡಿ ಅವರೊಂದಿಗೆ ಕೆಲಸಮಾಡುವ ಅವಕಾಶಗಳನ್ನು ದೇವರು ಕಲ್ಪಿಸಿಕೊಡುತ್ತಾನೆ. ಇದು ನಮಗೆ ಅತ್ಯಧಿಕವಾಗಿ ಸಹಾಯಮಾಡುತ್ತದೆ. ನಾವು ಇತರರ ದರ್ಶನ ಮತ್ತು ಕನಸನ್ನು ಸಾಕಾರಗೊಳಿಸಲು ನಂಬಿಗಸ್ತರಾಗಿ ಸೇವೆಮಾಡಬೇಕು. ಬೇರೆಯವರ ಕನಸನ್ನು ಈಡೇರಿಸಲು ಸಹಾಯ ಮಾಡುತ್ತಿರುವಾಗ ನಾವು ತರಬೇತಿ ಹೊಂದುತ್ತೇವೆ ಮತ್ತು ನಮ್ಮಲ್ಲಿ ದೇವರ ಕಾರ್ಯವು ನೆರವೇರಲು ಸಜ್ಜುಗೊಳ್ಳುತ್ತೇವೆ.

ಈ ನಮ್ಮ ಸಿದ್ಧತೆಯ ಸಮಯದಲ್ಲಿ, ಕೆಲವೊಂದು ಬಾರಿ ನಮ್ಮ ಹೃದಯದಲ್ಲಿರುವ ದರ್ಶನಕ್ಕೆ ನೇರವಾಗಿ ಸಂಬಂಧಿಸದ ಕೆಲಸಗಳನ್ನು ಮಾಡಬೇಕಾಗಬಹುದು. ನಮ್ಮ ಹೃದಯದಲ್ಲಿ ಮೂಡಿರುವ ಸಂಗತಿಗೆ ಯಾವುದೇ ರೀತಿಯಲ್ಲೂ ಸರಿಹೊಂದದ ಮತ್ತು ಗ್ರಹಿಸಲಸಾಧ್ಯವಾದ ಕೆಲಸಗಳನ್ನು ನಾವು ಮಾಡಬೇಕಾಗಬಹುದು. ಆದಾಗ್ಯೂ ಮೇಲ್ನೋಟಕ್ಕೆ 'ಹೊಂದಿಕೆಯಾಗದ ಸಮಯ ಸ್ಥಿತಿ'ಗಳಂತಿರುವ ಈ ಸಂದರ್ಭಗಳ ಮೂಲಕವೇ ನಮ್ಮ ದರ್ಶನಕ್ಕೆ ಮುಖ್ಯವಾದ ಜೀವನದ ಇತರ ಕ್ಷೇತ್ರಗಳಲ್ಲೂ ನಾವು ಅಭಿವೃದ್ಧಿ ಹೊಂದುತ್ತೇವೆ. ಪ್ರತಿ ಸ್ತರವೂ ಯಾವುದೋ ಒಂದು ನಿರ್ದಿಷ್ಟ ಕ್ಷೇತ್ರದಲ್ಲಿ ಬೆಳವಣಿಗೆಯಾಗಲು ರೂಪುಗೊಂಡಿದ್ದು, ದೇವರು ನಮ್ಮನ್ನು ಜೀವನದ ವಿವಿಧ ಸ್ತರಗಳ ಮೂಲಕ ನಡೆಸುತ್ತಾನೆ.

ಸಿದ್ಧತೆಯ ಸಮಯವು ಎಂದಿಗೂ ವ್ಯರ್ಥವಾಗುವುದಿಲ್ಲ. ದೇವರೊಂದಿಗೆ ಕೆಲಸಮಾಡುವುದು ನಮ್ಮ ಗುರಿಯಾಗಬೇಕು ಮತ್ತು ಪ್ರತಿ ಸಮಯದಲ್ಲೂ ಆತನು ನಮ್ಮ ಜೀವಿತದಲ್ಲಿ ಕೆಲಸಮಾಡಲು ನಾವು ಒಪ್ಪಿಸಿಕೊಡಬೇಕು.

## ಯೋಸೇಫನು

**ಕೀರ್ತನೆ 105:17–22**

**ಆತನು ಅವರ ಮುಂದಾಗಿ ಒಬ್ಬನನ್ನು ಕಳುಹಿಸಿದನು ದಾಸತ್ವಕ್ಕೆ ಮಾರಲ್ಪಟ್ಟ ಯೋಸೇಫನೆ ಅವನು. ಅವನ ಕಾಲುಗಳು ಕೊಳದಲ್ಲಿ ನೊಂದವು ಕಬ್ಬಿಣದ ಬೇಡಿಗಳಿಂದ ಅವನು ಬಂಧಿತನಾದನು. ಅವನು ತನ್ನ ಮಾತು ನೆರವೇರುವ ತನಕ ಯಹೋವನ ವಾಕ್ಯದಿಂದ ಶೋದಿತನಾದನು. ಅರಸನು ಅಪ್ಪಣೆ ಮಾಡಿ ಅವನನ್ನು ತಪ್ಪಿಸಿದನು.**

**ಜನಪತಿ ಅವನನ್ನು ಬಿಡಿಸಿದನು ಅವನನ್ನು ತನ್ನ ಮನೆಗೆ ಯಜಮಾನನ್ನಗಿಯೂ, ತನ್ನ ಆಸ್ತಿಗೆಲ್ಲಾ ಅಧಿಕಾರಿಯನ್ನಾಗಿಯೂ ಮಾಡಿದನು. ತನ ಪ್ರಧಾನರನ್ನು ಇಷ್ಟಾನುಸಾರವಾಗಿ ಬಂಧಿಸುವುದಕ್ಕು ತನ್ನ ಮಂತ್ರಿಗಳಿಗೆ ಬುದ್ಧಿ ಕಲಿಸುವುದಕ್ಕೂ ಅವನಿಗೆ ಅಧಿಕಾರ ಕೊಟ್ಟನು.**

ಯೋಸೇಫನು ಯೌವನಸ್ಥನಾಗಿದ್ದಾಗಿ, ಬಹುಶಃ ಹದಿವಯಸ್ಸಿದ್ದರೂ ಇರಬಹುದು, ದೇವರು ಅವನ ಜೀವಿತಕ್ಕಾಗಿ ಇಟ್ಟ ಯೋಜನೆಗಳನ್ನು ಕನಸುಗಳ ಮೂಲಕ ಹೊಂದಿಕೊಂಡನು. ಆದರೆ ಅವನ ಸಹೋದರರು ಅವನನ್ನು ಗುಲಾಮನಾಗಿ ಮಾರಿಬಿಟ್ಟಾಗ ಅವೆಲ್ಲವೂ ಏರುಪೇರಾದಂತೆ ಕಂಡಿತು. ಐಗುಪ್ತದ ಪೋಟೀಫರನಿಗೆ ಸೇವೆ ಮಾಡುತ್ತಾ, ಯೋಸೇಫನು ಅನ್ಯದೇಶದಲ್ಲಿ ಒಂಟಿಯಾದನು. ಹೇಗೂ ದೇವರು ಅವನನ್ನು ಪೋಟೀಫರನ ಮನೆಯಲ್ಲಿ ಆಶೀರ್ವದಿಸುತ್ತಿದ್ದಾಗ ಎಲ್ಲವೂ ಸಹಜವಾಗಿಯೇ ಕಂಡುಬಂದಿತು; ಆದರೆ ಅನಿರೀಕ್ಷಿತವಾಗಿ ಅವನು ಸುಳ್ಳು ಆರೋಪ ಹೊತ್ತು ಸೆರೆಮನೆ ಸೇರಬೇಕಾಯಿತು. ಇದರಿಂದಾಗಿ ಯೋಸೇಫನು ದೇವರಲ್ಲಿ ಮತ್ತು ತಾನು ಹೊಂದಿದ ದರ್ಶನದಲ್ಲಿ ನಂಬಿಕೆ ಕಳೆದುಕೊಳ್ಳಲು ಸಾಧ್ಯವಿತ್ತು. ಇದೆಲ್ಲವೂ ಅನಾವಶ್ಯಕವೂ ಕೇವಲ ನೋವು ತರುವಂತದ್ದು ಆಗಿತ್ತಷ್ಟೆ. ನಿಜಸಂಗತಿಯೆಂದರೆ ದೇವರು ಘಟನೆಗಳನ್ನು ಸರಿಹೊಂದಿಸುತ್ತಾ ಯೋಸೇಫನ ಕನಸುಗಳು ಸಾಕಾರಗೊಳ್ಳುವೆಡೆಗೆ ಅವನನ್ನು ನಡಿಸುತ್ತಿದ್ದನು. ಅದಾಗಿ, ಇದ್ದಕ್ಕಿದ್ದಂತೆ ಯೋಸೇಫನು ಐಗುಪ್ತದ ಸೆರೆಮನೆಯಿಂದ ಬಿಡುಗಡೆಗೊಂಡು ಪ್ರಧಾನಮಂತ್ರಿಯ ಹುದ್ದೆಗೇರಿ, ಫರೋಹನ ಬಲಗೈ ಭಂಟನಾದನು. ಯೋಸೇಫನ ಕನಸುಗಳು ಸಾಕಾರಗೊಂಡವು.

ಕಾಲಗತಿಯಲ್ಲಿ ನಾವು ಯೋಸೇಫನ ಜೀವಿತದಲ್ಲಿ ದೇವರು ಕಾರ್ಯ ನಡೆಸಿದ ರೀತಿಯನ್ನು ಪರಿಶೀಲಿಸುವುದಾದರೆ ಈ ಕೆಳಗಿನ ಅಂಶಗಳನ್ನು ಗುರುತಿಸುತ್ತೇವೆ.

- ಯೋಸೇಫನು ತಾನು ಐಗುಪ್ತಕ್ಕೆ ಮಾರಲ್ಪಟ್ಟಾಗ ಹದಿನೇಳು ವರ್ಷದವನಾಗಿದ್ದನು (ಆದಿಕಾಂಡ 37:2)

- ಅವನನ್ನು ಸೆರೆಮನೆಯಿಂದ ಹೊರತಂದು ಐಗುಪ್ತದೇಶದ ಪ್ರಧಾನ ಮಂತ್ರಿಯಾಗಿ ಮಾಡಿದಾಗ 30 ವರ್ಷದವನಾಗಿದ್ದನು (ಆದಿಕಾಂಡ 41:46). ಅಂದರೆ ಅವನು ಪ್ರಧಾನಮಂತ್ರಿಯ ಸ್ಥಾನಕ್ಕೆ ಏರಿಸಲ್ಪಡುವ ಮೊದಲು ಸೆರೆಮನೆಯಲ್ಲಿ ಸುಮಾರು 13 ವರ್ಷಗಳನ್ನು ಕಳೆದನು, ಅಂದರೆ ಪೋಟೀಫರನ ಮನೆಯಲ್ಲಿ 11 ವರ್ಷಗಳು ಮತ್ತು ಸೆರೆಮನೆಯಲ್ಲಿ 2 ವರ್ಷಗಳು (ಆದಿಕಾಂಡ 41:1)

- ಅವನು ಒಂಬತ್ತು ವರ್ಷಗಳ ಕಾಲ ನಂಬಿಗಸ್ತನಾಗಿ ಸೇವೆಸಲ್ಲಿಸಿದ ನಂತರ ತನ್ನ 39 ವಯಸ್ಸಿನಲ್ಲಿ ಅವನ ಸಹೋದರರು ಆಹಾರವನ್ನು ಅರಸಿ (ಬರಗಾಲ ಬಂದ ಎರಡನೆಯ ವರ್ಷ ಅಥವಾ ಅಧಿಕಾರಿಯಾಗಿ ಮಾಡಲ್ಪಟ್ಟ 9 ವರ್ಷಗಳ ಬಳಿಕ) ಐಗುಪ್ತಕ್ಕೆ ಬಂದಾಗ ಅವರನ್ನು ಭೇಟಿಯಾದನು.
- ಎರಡನೆಯ ಬಾರಿ ಅವನ ಸಹೋದರರು ತಮ್ಮ ತಂದೆಯಾದ ಯಾಕೋಬನೊಂದಿಗೆ ಐಗುಪ್ತಕ್ಕೆ ಬಂದು ಅವನ ಕನಸು ನಿಜವಾಗಿಯೂ ಸಾಕಾರಗೊಳ್ಳುವ ವೇಳೆಗೆ ಅವನಿಗೆ 41 ವರ್ಷ ವಯಸ್ಸಾಗಿತ್ತು. ಆದ್ದರಿಂದ ಅವನು ಕನಸು ಕಂಡಂದಿನಿಂದ ಅದು ನೆರವೇರುವುದರೊಳಗೆ 30 ವರ್ಷಗಳು ಕಳೆದು ಹೋದವು.
- ಅಲ್ಲಿಂದ ಮುಂದೆ 70 ವರ್ಷಗಳ ಕಾಲ ದೇವರು ತನಗೆ ನೇಮಿಸಿದ ಕೆಲಸವನ್ನು ಮಾಡಿ, 110 ವರ್ಷದವನಾದಾಗ ಪಿತೃಗಳ ಬಳಿ ಸೇರಿದನು.

ದೈವದತ್ತವಾದ ದರ್ಶನವನ್ನು ಪೂರೈಸಲು ಮುಂದಾಗುವುದು ಬಹಳ ಪ್ರಾಮುಖ್ಯವಾಗಿದೆ. ಯೋಸೇಫನ ಜೀವಿತದಲ್ಲಿ ಇದು ಅವನ 40ನೇ ವಯಸ್ಸಿನಲ್ಲಿ ನೆರವೇರಿತು. ಆದರೆ ಅದೇ ದಿಕ್ಕಿನಲ್ಲಿ ಮುನ್ನಡೆಯುವುದು ಅಷ್ಟೇ ಪ್ರಾಮುಖ್ಯವಾಗಿದೆ. ಯೋಸೇಫನು ಆ ದಾರಿಯಲ್ಲಿ ಅನೇಕ ವರ್ಷಗಳ ಕಾಲ ನಡೆದನು, ಬಹುಶಃ ಸುಮಾರು 70 ವರ್ಷಗಳ ಕಾಲ.

**ಮೋಶೆ**

- ಮೋಶೆಯು ಫರೋಹನ ಅರಮನೆಯಲ್ಲಿ ಸರ್ವವಿದ್ಯೆ ಉಪದೇಶ ಮತ್ತು ತರಬೇತಿ ಪಡೆಯಲು ದೇವರು ಪ್ರಕೃತ್ಯಾತೀತವಾಗಿ ಅವನನ್ನು ಸಿದ್ಧಗೊಳಿಸಿದನು ಮೋಶೆಯ ಜೀವಿತಕ್ಕೆ ಇದು ದೇವರ ''ಆತ್ಮಿಕ ವಿಧಾತದ (ನಿಯತಿಯ) ಮೂಲ ಅಥವಾ ಬೀಜ'' ಅಪೊಸ್ತಲರ ಕೃತ್ಯಗಳು 7:22. ಇವುಗಳು ಮೋಶೆಯ ಪರಲೋಕದ ಉದ್ದೇಶದ ಪ್ರವೃತ್ತಿ ಹೊಂದುವುದಾಗಿ ಅವನ ಪ್ರಾರಂಭಿಕ ತಯಾರಿ ಮತ್ತು ಅವನ ಸ್ಥಿತಿ ಸ್ಥಾಪನೆಯಾಗಿತ್ತು.
- ಮೋಶೆಯು ನಲ್ವತ್ತು ವರುಷದವನಾದಾಗ ಅವನ ದೈವಿಕ ಉದ್ದೇಶಗಳನ್ನು ಅರ್ಥಮಾಡಿಕೊಳ್ಳಲು ಪ್ರಾರಂಭಿಸಿದನು. ಹೀಗಿದ್ದರೂ ಅವನು ತನ್ನ ಸ್ವಂತ ಮಾದರಿಗಳಲ್ಲಿ ಅವುಗಳನ್ನು ಸಾಧಿಸುವ ಪ್ರಯತ್ನದ ತಪ್ಪನ್ನು ಮಾಡಿದನು.

- ನಾವು ಪ್ರತಿ ಸಮಯದಲ್ಲೂ ನಮ್ಮ ಸ್ವಂತ ಯೋಗ್ಯತೆಗಳಿಂದ ಏನಾದರೂ ಮಾಡಲು ಪ್ರಯತ್ನಿಸುತ್ತೇವೆ. ಇದರಿಂದ ಮುಂದೆ ದೇವರ ಯೋಜನೆಗಳ ವಿಸ್ತರಿಸುವಿಕೆಗೆ ನಿಧಾನ ಮಾಡುತ್ತೇವೆ. ಎಲ್ಲಾ ವಿಷಯಗಳು ನಲ್ವತ್ತು ವರುಷ ನಿಧಾನವಾಗಲು, ಮೋಶೆಯು ಸ್ವತಹ ಪ್ರಯತ್ನಿಸಿದುದರ ಕಾರಣವೇ ಮತ್ತು ಇದು ತಡೆಗೊಳಿಸಿತು.
- ಮೋಶೆಯನ್ನು ಕೊಲ್ಲಿಸಬೇಕೆಂದು ಆಲೋಚಿಸಿದ ಅರಸನು ಸಾಯುವವರೆಗೂ, ಮೋಶೆಯು 40 ವರ್ಷಗಳು ಮರುಭೂಮಿ ಪ್ರದೇಶದಲ್ಲಿ ಸಮಯ ಕಳೆಯಬೇಕಾಯಿತು. ಮತ್ತು ಕಾದುಕೊಂಡಿರಬೇಕಾಯಿತು. (ಅಪೊಸ್ತಲರ ಕೃತ್ಯಗಳು 7:29,30, ವಿಮೋಚನಕಾಂಡ 2:15,23)
- ಮೋಶೆಯು ಎಂಬತ್ತು ವರುಷದವನಾದಾಗ, ಅವನ ದೈವಿಕ ಸೇವೆ ಪಡೆದನು.
- ಮುಂದಿನ ನಲ್ವತ್ತು ವರುಷಗಳು ಅವನು ಜೀವಿತದ ಉದ್ದೇಶಗಳನ್ನು ನಿರ್ವಹಿಸಿದನು.
- ಮೋಶೆಯೂ ದೊಡ್ಡ ವ್ಯಕ್ತಿಯಾಗಿದ್ದರೂ ಸಹ ಒಂದು ಗಂಭೀರ ತಪ್ಪಿನಿಂದಾಗಿ ಬರೀ ದೂರದಿಂದ ನಿಂತು ನೋಡಿದರೂ ವಾಗ್ದಾನ ಮಾಡಿದಂತಹ ಸ್ಥಳವನ್ನು ಪ್ರವೇಶಿಸಲು ಸಾಧ್ಯವಾಗಲಿಲ್ಲ. (ಅರಣ್ಯಕಾಂಡ 20:12, ಧರ್ಮೋಪದೇಶಕಾಂಡ 31:2; 34:4). ಮೋಶೆಯು 120 ವರ್ಷದವನಾದಾಗ ಮರಣ ಹೊಂದಿದನು (ಧರ್ಮೋಪದೇಶಕಾಂಡ 34:7)

## ದಾವೀದನು

- ದಾವೀದನು ಚಿಕ್ಕ ಹುಡುಗನಾಗಿದ್ದಾಗ ಅರಸನಾಗಿ ಅಭಿಷೇಕಿಸಲ್ಪಟ್ಟಿದ್ದನು. ಈ ಸಮಯದಲ್ಲಿ ಅವನಿಗೆ 17 ವರ್ಷವಾಗಿತ್ತು ಎಂಬುದಾಗಿ ನಾವು ಹೇಳಬಹುದು.
- ಅವನ ತಂದೆಯ ಕುರಿಗಳನ್ನು ಕಾಯುವುದರಲ್ಲಿ ಅವನು ತನ್ನ ಪ್ರಾರಂಭಿಕ ತರಭೇತಿ ಹೊಂದಿದನು ಮತ್ತು ಈ ಸಮಯವು ಅವನ ಸಂಗೀತದ ಬೆಳವಣಿಗೆ, ಸಿಂಹವನ್ನು ಮತ್ತು ಕರಡಿಯನ್ನು ಕೊಂದು ಇಸ್ರಾಯೇಲ್ ಜನರ ಮಧ್ಯದಲ್ಲಿ ಒಳ್ಳೆಯ ಕೀರ್ತಿ, ಗೌರವ ಸಂಪಾದಿಸುವ ಸಮಯವಾಗಿತ್ತು.
- ದಾವೀದನು ಗೊಲ್ಯಾತನನ್ನು ಕೊಂದಾಗ ಅವನ ಆರಂಭಿಕ ವಿಜಯ ಪಡೆದನು ಮತ್ತು ರಾಷ್ಟ್ರೀಯ ನಾಯಕನಾದನು.

- ಅರಸನಾದ ಸೌಲನು, ದಾವೀದನನ್ನು ಕೊಲ್ಲಬೇಕೆಂದು ತೀರ್ಮಾನಿಸದಾಗ ತಪ್ಪಿಸಿಕೊಳ್ಳಲು ತನ್ನ ಜೀವಿತದಲ್ಲಿ ಓಡಿ ಹೋಗಬೇಕಾಯಿತು ಮತ್ತು ದಿಕ್ಕು ಬದಲಾಯಿತು.
- ದಾವೀದನು ಮುಂದಿನ 5-6 ವರ್ಷಗಳು 'ಸಂಚಾರಿ' ಯಂತೆ ಜೀವಿಸಿದನು (1ಸಮುವೇಲನು 22:1.2) ಅರಸನಾಗಿ ಅಭಿಷೇಕಗೊಂಡ ಮನುಷ್ಯನು ಗವಿಯಲ್ಲಿ ಸಮಯ ಕಳೆಯಬೇಕಾಯಿತು.
- ಆದಾಗ್ಯೂ ಈ ಸಮಯದಲ್ಲಿ ದೇವರು ಸರ್ವಜನರನ್ನು ದಾವೀದನೊಂದಿಗೆ ಸೇರಲು ಕಳುಹಿಸಿದನು ಬಳಿಕ ಅವನು ಬಲಾಢ್ಯ ಸೈನ್ಯದ ಪ್ರಮುಖ ನಾಯಕನಾದ ಸಮಯವಾಗಿತ್ತು!
- ದಾವೀದನು ಇಪ್ಪತ್ತೂರು ವರುಷದವನಾದಾಗ ಯೆಹೂದದ ಅರಸನಾದನು. 7 ವರ್ಷ 6 ತಿಂಗಳು ಯೆಹೂದವನು ಆಳಿದನು (2 ಸಮುವೇಲನು 2:1-11)
- ದಾವೀದನು ಮೂವತ್ತು ವರುಷದವನಾದಾಗ ಇಸ್ರಾಯೇಲ ಮತ್ತು ಯೆಹೂದ ದೇಶದ ಅರಸನಾದನು (2 ಸಮುವೇಲನು 5:4,5) ಮತ್ತು ನಾಲ್ವತ್ತು ವರುಷ ಆಳಿದನು. (2 ಅರಸುಗಳು 2:11)
- ದಾವೀದನು 13 ವರ್ಷದವನಾಗಿದ್ದಾಗ ಪ್ರವಾದಿಯಾದ ಸಮುವೇಲನಿಂದ 'ಕರೆಯಲ್ಪಟ್ಟು' 'ಆದೇಶ' ಹೊಂದಿದನು ಮತ್ತು ಮೂವತ್ತನೇ ವಯಸ್ಸಿನಲ್ಲಿ ಇಸ್ರಾಯೇಲ್ಯರ ಅರಸನಾಗಿ ತನ್ನ ಕರೆಗೆ ಹೆಜ್ಜೆ ಇಟ್ಟನು. ಕರೆಯಲ್ಪಟ್ಟ ಸಮಯದಿಂದ, ಸುಮಾರು 17 ವರ್ಷ ದಾವೀದನ ಸಿದ್ಧತೆಯ ಕಾಲವಾಗಿತ್ತು.

## ಪೌಲನು

- ಪೌಲನು ಮೂವತ್ತೂರು (33) ವರುಷದವನಿದ್ದಾಗ ದಮಸ್ಕದ ಹಾದಿಯಲ್ಲಿ ಕರ್ತನಾದ ಯೇಸುವನ್ನು ಸಂಧಿಸಿದನು. ಇದು ಅವನು ಅನೇಕ ವರ್ಷ ತರಬೇತಿ ಹೊಂದುವಂತೆ ಮಾಡಿತು.
- ಅವನನ್ನು ಸಂಧಿಸಿದ ಸಮಯದಲ್ಲಿ ಕರ್ತನಾದ ಯೇಸುವು ಕ್ರಿಸ್ತ ನಂಬಿಕೆಯ ಅಪೊಸ್ತಲನಾಗಿಯೂ, ಅನ್ಯಜನರಿಗೆ ಬೆಳಕಾಗಿಯೂ, ತನ್ನ ಕರೆಯನ್ನು

ಪ್ರಕಟಮಾಡಿದನು.

- ಪೌಲನು ಮೂರು ಪ್ರಾರಂಭಿಕವರ್ಷಗಳನ್ನು ದಮಸ್ಕ ಮತ್ತು ಅರೆಬಿಯಾದಲ್ಲಿ ಕಳೆದನು. (ಗಲಾತ್ಯದವರಿಗೆ 1:16,17; ಅಪೊಸ್ತಲರ ಕೃತ್ಯಗಳು 9:19-25) ದಮಸ್ಕದಲ್ಲಿ ಅವನನ್ನು ಕೊಲ್ಲಿಸಬೇಕೆಂದು ಜನರು ಪ್ರಯತ್ನಿಸಿದಾಗ ಅವನು ಅರೆಬಿಯಾಕ್ಕೆ ಹೋಗಬೇಕಾಯಿತು. ಅನಂತರ ಅವನು ಅಲ್ಲಿಂದ ಹಿಂತಿರುಗಿದನು. ಈ ಸಮಯವು ಅವನು ಸಾರಿದ ಸುವಾರ್ತೆಯ ಪ್ರಕಟಣೆಯನ್ನು ಹೊಂದಿದ ಅಥವಾ ಪಡೆದುಕೊಂಡ ಸಮಯವಾಗಿತ್ತು.
- ಇದಾದ ಬಳಿಕ ಅವನು ಯೆರೂಸಲೇಮಿಗೆ ಹದಿನೈದು ದಿವಸಗಳು ಭೇಟಿನೀಡಿದನು. (ಗಲಾತ್ಯದವರಿಗೆ 1:18;ಅಪೊಸ್ತಲರ ಕೃತ್ಯಗಳು 9:26-30) ಈ ಅವಧಿಯಲ್ಲಿ ಧೈರ್ಯವಾಗಿ ಸುವಾರ್ತೆ ಸಾರಿದನು. ಆದರೆ ಜನರು ತಿರಿಗಿ ಅವನನ್ನು ಕೊಲ್ಲಬೇಕೆಂದು ಪ್ರಯತ್ನಿಸಿದರು. ಅವನು ಅಲ್ಲಿಂದ ತಾರ್ಸಕ್ಕೆ ಕಳುಹಿಸಲ್ಪಟ್ಟನು.
- ತಾರ್ಸದ ಸೀಮೆಗಳಾದ, ಸಿರಿಯಾ ಮತ್ತು ಕಿಲಿಕ್ಯ ಪ್ರಾಂತ್ಯಗಳಲ್ಲಿ ಸುಮಾರು ಹದಿಮೂರು ವರುಷ ಕಳೆದನು (ಗಲಾತ್ಯದವರಿಗೆ 1;21;24 2;1).
- ಈ ಹದಿಮೂರು ವರುಷದ ಮುಕ್ತಾಯದ ಅವಧಿಯಲ್ಲಿ ಬಾರ್ನಬನು ತಾರ್ಸಕ್ಕೆ ಬಂದು ಅವನನ್ನು ಕಂಡು ಅಂತಿಯೋಕ್ಯಕ್ಕೆ ಕರೆದುಕೊಂಡು ಹೋದನು. (ಅಪೊಸ್ತಲರ ಕೃತ್ಯಗಳು 11:25,26).
- ಪೌಲನು ಆ ಒಂದು ವರುಷ ಪೂರ್ತಿ ಅಂತಿಯೋಕ್ಯ ಸಭೆಯಲ್ಲಿ ಉಪದೇಶಿಸಲು ಕಳೆದನು.
- ಆ ವರುಷದಲ್ಲಿ, ಪೌಲನು ಮತ್ತು ಬಾರ್ನಬನು ದೊಡ್ಡ ಕ್ಷಾಮ ಬರುವ ಸೂಚನೆಯಿಂದ ದ್ರವ್ಯ ಸಹಾಯವನ್ನು ತೆಗೆದುಕೊಂಡು ಯೆರೂಸಲೇಮಿಗೆ ಹೋದರು (ಅಪೊಸ್ತಲರ ಕೃತ್ಯಗಳು 11:29,30)
- ಹದಿನಾಲ್ಕು ವರುಷಗಳ ಬಳಿಕ ಪೌಲನು ಯೆರೂಸಲೇಮಿಗೆ ಬಂದನು (ಗಲಾತ್ಯದವರಿಗೆ 2:1)
- ಈ ಸಂದರ್ಭದಲ್ಲಿ, ಪೌಲನು ದಮಸ್ಕದ ಹಾದಿಯಲ್ಲಿ ಕರ್ತನನ್ನು ಸಂಧಿಸಿದ ಸಮಯದಿಂದ ಸುಮಾರು ಹದಿನೇಳು ವರುಷಗಳು ಕಳೆದು ಹೋದ ವರುಷಗಳಾಗಿದ್ದ ಸಂದರ್ಭವಾಗಿತ್ತು ಈ ಸಮಯದಲ್ಲಿ ಪೌಲನು ಸುಮಾರು ಐವತ್ತು ವರುಷದವನಾಗಿದ್ದನು.

- ಪೌಲನ ಮೊದಲ ಹದಿನೇಳು ವರುಷಗಳ ಕ್ರಿಸ್ತೀಯ ಜೀವಿತ ಮತ್ತು ದೇವರೊಂದಿಗಿನ ನೆಡೆಯುವಿಕೆಯ ಬಗ್ಗೆ ಹೆಚ್ಚಾಗಿ ದಾಖಲೆಗಳಿಲ್ಲ. ಈ ಅವಧಿಯಲ್ಲಿ ಪೌಲನು ಸುವಾರ್ತೆ ಸಾರಿದನು ಮತ್ತು ಉಪದೇಶಿಸಿದನು, ಅವನು ಮಾಡಿದ ಕಾರ್ಯಗಳ ಬಗ್ಗೆ ಹೆಚ್ಚಾಗಿ ದಾಖಲೆಗಳಿಲ್ಲ ಈ ಅವಧಿಯಲ್ಲಿ ಪೌಲನು ಸುವಾರ್ತೆ ಸಾರಿದನು ಮತ್ತು ದೇವರಿಂದ ಉಪದೇಶಿಸಲ್ಪಟ್ಟನು. ಅವನು ದೇವರಿಂದ ರಹಸ್ಯಗಳನ್ನು ಅರ್ಥ ಮಾಡಿಕೊಂಡನು. ಎಂಬುದು ನಮಗೆ ತಿಳಿದಿದೆ. ಹೀಗಿದ್ದರೂ ಅವನು ಸಾರಿದ, ಮಾಡಿದ ಕಾರ್ಯಗಳ ಬಗ್ಗೆ ಹೆಚ್ಚಾಗಿ ದಾಖಲೆಗಳಿಲ್ಲ. ಇವುಗಳು ಪೌಲನ ಜೀವಿತದ ''ನಿಶ್ಯಬ್ದವರ್ಷ'' ವರ್ಷಗಳೆಂದು ಪ್ರಸ್ತಾಪಿಸಲ್ಪಟ್ಟಿದೆ. ಇವುಗಳ ಜೊತೆಗೆ ಅವನ ತರಭೇತಿಯ ಭಾಗದಿಂದ ಸ್ವರೂಪ ಪಡೆದ ಯಹೂದೀಮತದ ಕೆಳಗಿನ ಅವನ ಪೂರ್ವ ತರಭೇತಿಯ ಸೇರ್ಪಡೆಯು ಇದೆ.
- ಅಪೊಸ್ತಲರ ಕೃತ್ಯಗಳು ಹದಿಮೂರನೇ ಅಧ್ಯಾಯದಲ್ಲಿ ಪೌಲನು ಹದಿನೇಳು (17) ವರುಷಗಳ ಮೇಲೆ ಬಾರ್ನಬನೊಂದಿಗೆ ಮೊದಲ ಸುವಾರ್ತಾ ಸೇವಾ ಪ್ರಯಾಣಕ್ಕೆ ಕರೆಯಲ್ಪಟ್ಟನು (ಅಪೊಸ್ತಲರ ಕೃತ್ಯಗಳು 13:1-4)
- ಅಪೊಸ್ತಲರ ಕೃತ್ಯಗಳು 14:14 ರಲ್ಲಿ ಮೊದಲ ಬಾರಿಗೆ ಪೌಲನು ಬಾರ್ನಬನೊಂದಿಗೆ ಅಪೊಸ್ತಲನೆಂದು ಉಲ್ಲೇಖಿಸಲ್ಪಟ್ಟಿದ್ದಾನೆ.
- ಕರ್ತನೊಂದಿಗಿನ ಭೇಟಿಯ, ಹದಿನೇಳು ವರುಷಗಳ ಬಳಿಕ ಪೌಲನು, ಅವನ ಅಪೊಸ್ತಲ ಸೇವೆಯಲ್ಲಿ ನಿಜವಾಗಿ ಮಗ್ನನಾದನು ಅಪೊಸ್ತಲನಾದ ಪೌಲನಿಗೆ ಸುಮಾರು ಹದಿನೇಳು ವರುಷಗಳ ಸಿದ್ಧತೆ ಮತ್ತು ತರಭೇತಿ! ದೇವರು ಅವಸರ ಪಡುವವನಲ್ಲ!

## ಯೆರೆಮೀಯನು

- ಯೆರೆಮೀಯನು ಜನಿಸುವ ಮೊದಲೇ, ಅವನ ಪ್ರವಾದನಾ ಕರೆ ಹೊಂದಿದ್ದನು. ದೇವರು ಅವನಿಗೆ ಜನರು ನಿನ್ನನ್ನು ಬಹಳ ಯೌವ್ವನ ಪ್ರಾಯದವನೆಂದು ಬಾಲಕನು ಎಂದು ಹೇಳುವಂತೆ ಅವಕಾಶ ನೀಡದಿರು ಎಂಬುದಾಗಿ ಹೇಳಿದ್ದನು.
- ಆದಾಗ್ಯೂ, ಐತಿಹಾಸಿಕವಾಗಿ ಯೆರೆಮೀಯನು ಅಧಿಕೃತ ಭೇಟಿಯ ಸಮಯಕ್ಕಾಗಿ ಅವನ ಮೊದಲ ಪ್ರವಾದನೆಯ ಉಚ್ಛಾರಣೆಗಾಗಿ ಸುಮಾರು ಹದಿನಾರು ವರುಷ ಕಾಯಬೇಕಾಯಿತು. ಇದನ್ನು ಯೆರೆಮೀಯನ ಮೊದಲ ಅಧ್ಯಾಯದಲ್ಲಿ ನೋಡಬಹುದು.

ದೈವದತ್ತವಾದ ಪ್ರತಿಯೊಂದು ದರ್ಶನವೂ ನಿರ್ದಿಷ್ಟವಾಗಿ ಪ್ರಾರಂಭಗೊಳ್ಳುತ್ತದೆ, ಕಾರ್ಯಗತಗೊಳ್ಳುತ್ತದೆ ಮತ್ತು ನೆರವೇರುತ್ತದೆ. ಈಗಿನಿಂದ ಮೊದಲುಗೊಂಡು ದೈವದತ್ತವಾದ ದರ್ಶನವು ಪ್ರಾರಂಭಗೊಳ್ಳುವವರೆಗಿನ ಸಮಯವು ಸಿದ್ಧತೆಯ ಸಮಯವಾಗಿರುತ್ತದೆ. ಸಿದ್ಧತೆಯ ಸಮಯವು ಪ್ರಾರಂಭಗೊಳ್ಳುವುದು ಮತ್ತು ಕಾರ್ಯಗತಗೊಳ್ಳುವುದಕ್ಕೆ ಕಾಯುವಿಕೆಯ ಸಮಯವನ್ನು ಒಳಗೊಂಡಿರುತ್ತದೆ. ಅಂದ ಮಾತ್ರಕ್ಕೆ ಕಾಯುವುದೆಂದರೆ ಕೆಲಸಮಾಡದೆ ಇರುವುದಲ್ಲ ಕಾಯುವುದೂ ಕೆಲಸವಿಲ್ಲದೆ ಇರುವುದೂ ಎರಡು ವಿಭಿನ್ನವಾದ ವಿಷಯಗಳು. ಕೆಲಸಮಾಡದೆ ಇರುವುದು ಎಂದರೆ ಏನನ್ನು ಮಾಡದೆ, ಅಪ್ರಯೋಜಕನಾಗಿ ಇರುವುದಲ್ಲ. ಸಿದ್ಧತೆಯ ಸಮಯದಲ್ಲಿ ದೇವರ ದರ್ಶನವು ಅನಾವರಣಗೊಳ್ಳುವುದಕ್ಕೆ ನಾವು ಕಾಯುತ್ತಿದ್ದರೂ ಆ ಸಮಯದಲ್ಲಿ ದೇವರು ನಮಗೆ ಕೊಟ್ಟ ಯಾವುದೇ ಜವಾಬ್ದಾರಿಯಲ್ಲಿ ಚಟುವಟಿಕೆಯಿಂದ ತೊಡಗಿಕೊಳ್ಳಬೇಕು.

ಯೋಸೇಫನು ತನ್ನ ಕಾಯುವಿಕೆಯ ಸಮಯದಲ್ಲಿ ಪೋಟೀಫರನ ಮನೆಯಲ್ಲೂ, ಅನಂತರ ಸೆರೆಮನೆಯಲ್ಲೂ ಅತ್ಯುತ್ತಮವಾಗಿ ತನ್ನ ಕೆಲಸಕಾರ್ಯಗಳನ್ನು ನಿಭಾಯಿಸುತ್ತಿದ್ದನು. ಮೋಶೆಯು ತನ್ನ ಕಾಯುವಿಕೆಯ ಸಮಯದಲ್ಲಿ ಮದುವೆ ಮಾಡಿಕೊಂಡು ತನ್ನ ಮಾವನ ಕುರಿಗಳನ್ನು ಕಾಯುತ್ತಿದ್ದನು. ದಾವೀದನು ತನ್ನ ಕಾಯುವಿಕೆಯ ಸಮಯದಲ್ಲಿ ಒಂದು ಸೈನ್ಯವನ್ನೇ ಸಿದ್ಧ ಮಾಡಿಕೊಂಡು, ಅಲ್ಲಲ್ಲಿ ಹೋರಾಟಗಳನ್ನು ಮಾಡುತ್ತಾ ಜಯಹೊಂದುವುದಕ್ಕಾಗಿ ದೇವರನ್ನು ಬೇಡಿಕೊಳ್ಳಲು ಮತ್ತು ವಿಶ್ವಾಸವಿಡಲು ಕಲಿತುಕೊಂಡನು. ಪೌಲನು ತನ್ನ ಕಾಯುವಿಕೆಯ ಸಮಯದಲ್ಲಿ ಅನೇಕ ಪ್ರಕಟಣೆಗಳನ್ನು ಹೊಂದಿಕೊಳ್ಳುತ್ತಿದ್ದನು ಮತ್ತು ಮುಂದೆ ಅದನ್ನೇ ಪ್ರಸಂಗಿಸುತ್ತಾ, ಬೋಧಿಸುತ್ತಾ ಬರೆದನು.

ದೇವರೊಂದಿಗಿರುವ ನಮ್ಮ ಪ್ರಯಾಣದಲ್ಲಿ, ಸಿದ್ಧತೆಯ ಸಮಯ ಕೊನೆಗೊಳ್ಳುವುದೇ ಇಲ್ಲ ಜೀವನದ ಪ್ರತಿ ಹಂತವೂ ಮುಂದಿನ ಹಂತಕ್ಕೆ ಸಿದ್ಧತೆಯಾಗಿರುತ್ತದೆ. ಪ್ರತಿ ಘಟ್ಟವೂ ಮುಂದಿನ ಘಟ್ಟಕ್ಕೆ ಸಿದ್ಧತೆಯಾಗಿರುತ್ತದೆ ಅಥವಾ ಮುಂದೆ ಇನ್ನೇನೋ ನಡೆಯುವುದಕ್ಕೆ ತಯಾರಿಯಾಗಿರುತ್ತದೆ. ಆದ್ದರಿಂದ ನಾವು ನಿರಂತರ ಕಲಿಯುವಿಕೆ, ಬೆಳವಣಿಗೆ ಮತ್ತು ಪ್ರೌಢತೆಗಳ ಸಮ್ಮಿಲನದ ಸ್ಥಿತಿಯನ್ನು ಕಾಯ್ದುಕೊಳ್ಳಬೇಕು.

## ದೈವದತ್ತವಾದ ದರ್ಶನವು ಅನಾವರಣಗೊಳ್ಳುವ ರೀತಿಯು ನಾವು ನಿರೀಕ್ಷಿಸಿದ್ದಕ್ಕಿಂತಲೂ ವಿಭಿನ್ನವಾಗಿರಬಹುದು

ದೇವರು ನಮಗೆ ನೀಡಿದ ದರ್ಶನವನ್ನು ನೆರವೇರಿಸುವ ರೀತಿಯನ್ನು ನಾವು ಕೆಲವೊಮ್ಮೆ ತಪ್ಪಾಗಿ ಅರ್ಥಮಾಡಿಕೊಳ್ಳುವ ಸಾಧ್ಯತೆ ಇರುತ್ತದೆ. ನಾವು

ಊಹಿಸಿದ ಅಥವಾ ನಿರೀಕ್ಷಿಸಿದ ರೀತಿಗಿಂತಲೂ ಭಿನ್ನವಾಗಿ ಈ ದರ್ಶನಗಳು ಅನಾವರಣಗೊಳ್ಳುವ ಮತ್ತು ವ್ಯಕ್ತಗೊಳ್ಳುವ ಸಾಧ್ಯತೆ ಇರುತ್ತದೆ.

ದೇವರು ಯಾವುದೇ ರೀತಿಯಲ್ಲಿ ಈ ಕನಸುಗಳನ್ನು ಸಾಕಾರಗೊಳಿಸಲು ಬಯಸಿದರೂ ನಾವದಕ್ಕೆ ಸಂಪೂರ್ಣವಾಗಿ ತೆರೆದುಕೊಳ್ಳಬೇಕು. ಇಲ್ಲಿ ದರ್ಶನವು ಸಾಕಾರಗೊಳ್ಳುವುದು ಮುಖ್ಯವಾಗಬೇಕೇ ಹೊರತು ಅದು ನೆರವೇರುವ ರೀತಿಯಲ್ಲ.

ಯೋಸೇಫನ ಕುರಿತು ಆಲೋಚಿಸಿರಿ. ಅವನು ತಾನು ಐಗುಪ್ತದಲ್ಲಿ ಪ್ರಧಾನ ಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳುವ ಮೊದಲು ದಾಸನಾಗಿ ಮಾರಲ್ಪಟ್ಟು, ಸೇವಕನಾಗಿ ದುಡಿದು, ಸುಳ್ಳು ಆರೋಪ ಹೊತ್ತು ಸೆರೆಮನೆಗೆ ಸೇರಬೇಕಾಗಬಹುದೆಂದು ಅವನೆಂದೂ ಊಹಿಸಿರಲು ಸಾಧ್ಯವಿರಲಿಲ್ಲ. ಅದರಂತೆಯೇ, ಮೋಶೆಯ ಕುರಿತು ಆಲೋಚಿಸಿರಿ. ತನ್ನ ಸ್ವಂತ ಇಬ್ರಿಯ ಸಹೋದರನೊಬ್ಬನಿಗೆ ನ್ಯಾಯ ದೊರಕಿಸಿಕೊಡುವ ಅವಸರದಲ್ಲಿ ಅವನು ಮಾಡಿದ ಒಂದು ಕಾರ್ಯದಿಂದ ಮುಂದಿನ 40 ವರ್ಷಗಳನ್ನು ಅವನು ಅಡವಿಯಲ್ಲಿ ಕಳೆಯಬೇಕಾಯಿತು. ಇದ್ದಕ್ಕಿದ್ದಂತೆ ಅವನಿಗೆ ಐಗುಪ್ತ ದೇಶದ ಅರಮನೆಯಿಂದ ಮಿದ್ಯಾನ ದೇಶದ ಅಡವಿಗಲಲ್ಲಿ ಅಲೆಮಾರಿಯಂತಿರುವ ದುರ್ದೆಸೆ ಒದಗಿತು. ದಾವೀದನ ವಿಷಯವನ್ನು ಪರಿಗಣಿಸಿರಿ. ಪ್ರವಾದಿಯಾದ ಸಮುವೇಲನಿಂದ ಅಭಿಷೇಕಗೊಂಡಂದಿನಿಂದ ತಾನು ಅರಸನಾಗುವವರೆಗೂ ಅನೇಕ ಪ್ರತಿಕೂಲ ಪರಿಸ್ಥಿತಿಗಳನ್ನು ಎದುರಿಸಬೇಕಾಗಿ ಬಂದದ್ದೇಕೆಂದು ಅವನಿಗೆ ತಿಳಿಯದೆ ಹೋಯಿತು.

ದೇವರು ಕನಸುಗಳು, ಅನ್ವೇಷಣೆಗಳು ದೈವೀಕ ಸಂಕಲ್ಪಗಳು, ಪರಲೋಕದ ಉದ್ದೇಶಗಳು ಮತ್ತು ಪವಿತ್ರಾತ್ಮನ ದರ್ಶನಗಳನ್ನು ನಮ್ಮ ಹೃದಯದಲ್ಲಿರಿಸುತ್ತಾನೆ. ಇವುಗಳು ಈಡೇರುವ ದಿಕ್ಕಿನಲ್ಲಿ ನಮ್ಮ ಪ್ರಯಾಣವು ಕಠಿಣವಾದರೂ ನೀವು ನೆನೆಸಿದಂತೆ ಅವು ನಡೆಯದೆ ಹೋದರೂ, ನಾವಂದುಕೊಂಡದಕ್ಕಿಂತ ಅದು ಹೆಚ್ಚಿನ ಸಮಯ ತಿಗೆದುಕೊಳ್ಳುತ್ತಿದ್ದರೂ ನಾವು ಕೈಚೆಲ್ಲಿ ಕುಳುತುಕೊಳ್ಳಬಾರದು. ಆತನ ಚಿತ್ತವು ನೆರವೇರುವ ತನಕ ಮುನ್ನಡೆಯುತ್ತಲೇ ಇರಬೇಕು.

ದೇವರು ನಮ್ಮ ಜೀವಿತದಲ್ಲಿ ಅನಾವರಣಗೊಳಿಸುವ ಸಂಗತಿಗಳು ನಾವು ಯಾರಿಗಿದ್ದೇವೆ, ನಮ್ಮ ಬಳಿ ಏನಿದೆ ಅಥವಾ ಈ ಗಳಿಗೆಯಲ್ಲಿ ನಾವೆಲ್ಲಿದ್ದೇವೆ ಎನ್ನುವುದರ ಮೇಲೆ ಆಧಾರಗೊಳ್ಳುವುದಿಲ್ಲ. ಮೂರ್ಖರು, ಬಲಹೀನರು, ಅಜ್ಞಾತರು, ತೊರೆದುಬಿಟ್ಟವರು ಮತ್ತು ಬೆಲೆ ಇಲ್ಲದವರ ಮೂಲಕ ದೇವರು ತನ್ನ ಮಹಿಮೆಯನ್ನು ಪ್ರಕಟಿಸುತ್ತಾನೆ (1 ಕೊರಿಂಥ 1:26–31)

## ‘ಕೈರೋಸ್’ - ಕ್ಷಣವು (ಪರಿಪೂರ್ಣತೆಯ ಸಮಯದ ಕ್ಷಣ) ‘ಸ್ವ’ದಿಂದ ಪ್ರಯತ್ನಿಸಿದರೆ ತಡಗೊಳ್ಳುತ್ತದೆ.

ಪ್ರತಿ ಸಮಯದಲ್ಲೂ, ನಾವು ನಮ್ಮ ಸ್ವಂತ ಯೋಗ್ಯತೆಗಳಿಂದ ಯಾವುದಾದರೊಂದು ಕಾರ್ಯ ಮಾಡಲು ಪ್ರಯತ್ನಿಸುತ್ತೇವೆ ಆದರೆ ಅದು ‘ಸಂಪೂರ್ಣತೆ ಸಮಯ’ (ಕೈರೋಸ್) ಕ್ಷಣವನ್ನು ತಡೆಗೊಳಿಸುತ್ತದೆ. ಮೋಶೆಯು, ಎಲ್ಲವೂ ತನ್ನ ಸ್ವಂತದಂತೆ ಜರುಗಬೇಕೆಂದು ಪ್ರಯತ್ನಿಸಿದುದರ ನಿಮಿತ್ತ ನಾಲ್ವತ್ತು ವರ್ಷಗಳ ವರೆಗೂ ವಿಷಯಗಳು ತಡಗೊಂಡವು.

ಅಪೊಸ್ತಲರ ಕೃತ್ಯಗಳು 7:29,30

**[29] ಈ ಮಾತನ್ನು ಕೇಳಿ ಮೋಶೆಯು ಓಡಿಹೋಗಿ ಮಿದ್ಯಾನ ದೇಶದಲ್ಲಿ ಪ್ರವಾಸಿಯಾದನು. ಅಲ್ಲಿ ಇಬ್ಬರು ಗಂಡುಮಕ್ಕಳನ್ನು ಪಡೆದನು. [30] ನಾಲ್ವತ್ತು ವರುಷ ತುಂಬಿದ ಮೇಲೆ ದೇವದೂತನು ಸೀನಾಯಿಬೆಟ್ಟದ ಅಡವಿಯಲ್ಲಿ ಮುಳ್ಳಿನ ಪೊದೆಯೊಳಗೆ ಉರಿಯುವ ಬೆಂಕಿಯಲ್ಲಿ ಅವನಿಗೆ ಕಾಣಿಸಿಕೊಂಡನು**

ವಿಮೋಚನಕಾಂಡ 2:15,23

**[15]ನಡೆದ ಸಂಗತಿಯು ಫರೋಹನಿಗೆ ತಿಳಿದು ಅವನು ಮೋಶೆಯನ್ನು ಕೊಲ್ಲಿಸಬೇಕೆಂದು ಆಲೋಚಿಸಿದ್ದರಿಂದ ಮೋಶೆ ಫರೋಹನ ಬಳಿಯಿಂದ ಓಡಿಹೋಗಿ ಮಿದ್ಯಾನ್ ದೇಶವನ್ನು ಸೇರಿದನು. ಈ ಮೇರೆಗೆ ಬಹಳ ದಿನಗಳು ಕಳೆದ ಮೇಲೆ ಐಗುಪ್ತ ದೇಶದ ಅರಸನು ಸತ್ತನು. ಇಸ್ರಾಯೇಲ್ಯರು ತಾವು ಮಾಡಬೇಕಾದ ಬಿಟ್ಟೀ ಕೆಲಸಕ್ಕಾಗಿ ನಿಟ್ಟುಸುರು ಬಿಟ್ಟು ಗೋಳಾಡುತ್ತಾ ಇದ್ದರು. ಆ ಗೋಳು ದೇವರಿಗೆ ಮುಟ್ಟಿತು.**

ದೈವದತ್ತ ದರ್ಶನವನ್ನು ನಮ್ಮ ಜೀವಿತದಲ್ಲಿ ಈಡೇರುವ ಪ್ರಯಾಣದಲ್ಲಿ ಅನೇಕರು ತಪ್ಪುಗಳನ್ನೆಸಗುವುದು ಖಚಿತವೇ. ನಮ್ಮ ತಪ್ಪುಗಳಿಂದಾಗಿ ನಮ್ಮ ಪ್ರಯಾಣವು ಬಳಸುದಾರಿ ಹಿಡಿಯಬಹುದು, ವಿಳಂಬಗೊಳ್ಳಬಹುದು, ನಿರಾಶೆಗಳೆದುರಾಗಬಹುದು ಕೆಲವೊಮ್ಮೆ ನಾವೇ ಎದೆಗುಂದಬಹುದು. ಅದರೂ ನಾವು ಬಿಡದೆ ಮುಂದೆ ಸಾಗಬೇಕು.

ದೇವರು ಪುನಃ ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸುತ್ತನೆ. ನಾವು ನಮ್ಮ ತಪ್ಪುಗಳನ್ನು ದೇವರ ಮುಂದೆ ಅರಿಕೆ ಮಾಡುವಾಗ, ಆತನ ಕ್ಷಮೆಯನ್ನು ಬೇಡಿ ಆತನೊಂದಿಗೆ ನಮ್ಮ ಸಂಬಂಧವನ್ನು ಪುನಃ ಸ್ಥಾಪಿಸಬೇಕೆಂದು ಕೇಳಿಕೊಳ್ಳುವಾಗ ಆತನು ಹಾಗೆಯೇ ಮಾಡುತ್ತಾನೆ. ದೇವರು ನಮ್ಮ

ತಪ್ಪುಗಳಿಗಿಂತಲೂ ಬಲುದೊಡ್ಡವನಾಗಿದ್ದಾನೆ. ಆತನು ಭೇದಿಸಲಾಗದಂತ ಪರಿಸ್ಥಿತಿಯೇ ಇಲ್ಲ.

ಕೆಲವೊಮ್ಮೆ ನಮ್ಮ ತಪ್ಪುಗಳು, ನಮ್ಮನ್ನು ನಾವು ಬಿಡಿಸಿಕೊಳ್ಳಲಾಗದ 'ಬಲೆ'ಯೊಳಗೆ ಕೆಡವಿ ಬಿಡುತ್ತವೆ. ಆದರೆ ದೇವರಿಗೆ ನಮ್ಮನ್ನು ಹೊರತರಲು ಸಾಧ್ಯವಿದೆ. 'ನನ್ನ ದೃಷ್ಟಿ ಯಾವಾಗಲೂ ಯೆಹೋವನಲ್ಲಿದೆ; ಆತನೇ ತನ್ನ ಕಾಲುಗಳನ್ನು ಬಲೆಯಿಂದ ಬಿಡಿಸುವವನು' (ಕೀರ್ತನೆ 25:15) ಕೆಲವೊಮ್ಮೆ ನಮ್ಮ ತಪ್ಪುಗಳು ನಮ್ಮನ್ನು ಕೆಸರಿನ ಗುಂಡಿಯಲ್ಲಿ ಒಗೆದು ಬಿಡುತ್ತವೆ. ನಮ್ಮಲ್ಲಿ ಕೆಲವರು, ಒಂದಾದ ಮೇಲೊಂದರಂತೆ ತಪ್ಪುಗಳನ್ನು ಮಾಡುತ್ತಲೇ ಇದ್ದು, ಗುಂಡಿಯಿಂದ ಗುಂಡಿಗೆ ಹೆಜ್ಜೆಯಿಡುತ್ತ ಬೀಳುತ್ತೇವೆ. ನಾವು ಗುಂಡಿಗೆ ಬೀಳುವ ಕಾರಣವೇನೇ ಇದ್ದರು ದೇವರು ನಮ್ಮನ್ನು ಅಲ್ಲಿಂದ ಮೇಲೆತ್ತಿ ಗಟ್ಟಿ ನೆಲದಲ್ಲಿ ನಿಲ್ಲಿಸುತ್ತಾನೆ. "ನಾನು ಯೆಹೋವನಿಗೋಸ್ಕರ ನಿರೀಕ್ಷಿಸಿಯೇ ನಿರೀಕ್ಷಿಸಿದನು; ಅತನು ನನ್ನ ಮೊರೆಗೆ ಕಿವಿಗೊಟ್ಟು ಲಕ್ಷಿಸಿದನು, ನನ್ನನ್ನು ನಾಶನದ ಗುಂಡಿಯೊಳಗೆ ಎತ್ತಿದನು; ಕೆಸರಿನೊಳಗಿಂದ ನನ್ನನ್ನು ತೆಗೆದು ಬಂಡೆಯ ಮೇಲೆ ನಿಲ್ಲಿಸಿ ನಾನು ದೃಢವಾಗಿ ಹೆಜ್ಜೆಯಿಡುವಂತೆ ಮಾಡಿದನು. ಆತನು ನನ್ನ ಬಾಯಲ್ಲಿ ನೂತನ ಕೀರ್ತನೆಯನ್ನು ಹುಟ್ಟಿಸಿದ್ದಾನೆ; ಅದು ನಮ್ಮ ದೇವರ ಸ್ತೋತ್ರವೇ. ಆತನ ಮಹತ್ಕಾರ್ಯಗಳನ್ನು ನೋಡಿದ ಅನೇಕರು ಭಯಭಕ್ತಿಯುಳ್ಳವರಾಗಿ ಯೆಹೋವನಲ್ಲಿ ನಂಬಿಕೆಯಿಡುವರು. (ಕೀರ್ತನೆಗಳು 40:1)

ನಮ್ಮ ತಪ್ಪುಗಳಿಂದ ಕೆಲಸಗಳೂ ನಿಧಾನಗೊಳ್ಳಬಹುದು ಆದರೆ ದೇವರು ಸಮಯವನ್ನು ನವೀಕರಿಸಿ ಕೊಡುತ್ತಾನೆ. ಪೂರ್ಣಗೊಳ್ಳಲು ಅನೇಕ ವರ್ಷಗಳು ಹಿಡಿಯಬಹುದಾದ ಕೆಲಸಗಳು ಕಡಿಮೆ ಅವಧಿಯಲ್ಲಿ ಪೂರ್ಣಗೊಳ್ಳುತ್ತವೆ. ದೇವರು ಕರುಣಾಮಯಿಯಾಗಿದ್ದಾನೆ. ನಾವು ವ್ಯರ್ಥವಾಗಿ ಕಳೆದ ಸಮಯವನ್ನು ಆತನು ಪುನಃ ಸ್ಥಾಪಿಸಿ ಕೊಡುತ್ತಾನೆ. 'ಗುಂಪುಮಿಡತೆ, ಸಣ್ಣ ಮಿಡತೆ, ದೊಡ್ಡ ಮಿಡತೆ, ಚೂರಿಮಿಡತೆ, ಅಂತು ನಾನು ನಿಮ್ಮ ಮೇಲೆ ಕಳುಹಿಸಿದ ನನ್ನ ದೊಡ್ಡದಂಡು, ತಿಂದುಬಿಟ್ಟ ವರುಷಗಳನ್ನು ನಾನು ನಿಮಗೆ ಕಟ್ಟಿಕೊಡುವೆನು.' (ಯೋವೇಲ 2:25)

ಆತನು ಜ್ಞಾನಪೂರ್ಣವಾಗಿ ನಮ್ಮ ಹೃದಯದಲ್ಲಿಟ್ಟ ದರ್ಶನವನ್ನು ಈಡೇರಿಸುವ ನಿಟ್ಟಿನಲ್ಲಿ ನಾವು ಹಿಂದಿನ ತಪ್ಪುಗಳಿಂದ ಪಾಠಕಲಿತು, ವಿವೇಕಿಗಳಾಗಿ ನಡೆಯುತ್ತಾ ಸಾಗಬೇಕು.'ನೀನು ನಡೆಯುವ ದಾರಿಯನ್ನು ಸಮಮಾಡು; ನಿನ್ನ ಮಾರ್ಗಗಳೆಲ್ಲ ದೃಢವಾಗಿರಲಿ' (ಜ್ಞಾನೋಕ್ತಿ 4:26)

## ಒಂದು ದೈವದತ್ತ ದರ್ಶನವನ್ನು ಪ್ರತಿಯೊಬ್ಬರು ಅರ್ಥ ಮಾಡಿಕೊಳ್ಳ-ಲಾಗುವುದಿಲ್ಲ.

ಅಪೊಸ್ತಲರ ಕೃತ್ಯಗಳು 7:23-25

**[23]''ಅವನಿಗೆ ನಾಲ್ವತ್ತು ವರುಷ ವಯಸ್ಸು ತುಂಬುತ್ತಾ ಇರಲು ಇಸ್ರಾಯೆಲ್ ವಂಶಸ್ಥರಾದ ತನ್ನ ಸಹೋದರರನ್ನು ಹೋಗಿ ನೋಡಬೇಕೆಂಬ ಆಸೆಯು ಅವನ ಹೃದಯದಲ್ಲಿಹುಟ್ಟಿತು. [24]ಅವರಲ್ಲಿ ಒಬ್ಬನಿಗೆ ಅನ್ಯಾಯವಾಗುವದನ್ನು ನೋಡಿ ಅವನಿಗೆ ಆಶ್ರಯಕೊಟ್ಟು ಪೀಡಿಸುವ ಐಗುಪ್ತ್ಯನನ್ನು ಹೊಡೆದುಹಾಕಿ ಮುಯ್ಯಿಗೆ ಮುಯ್ಯಿ ತೀರಿಸಿದನು. [25]ದೇವರು ತನ್ನ ಕೈಯಿಂದ ಬಿಡುಗಡೆಯನ್ನು ಉಂಟುಮಾಡುತ್ತಾನೆಂಬುದು ತನ್ನ ಸಹೋದರರಿಗೆ ತಿಳಿದು ಬರುವದೆಂದು ಭಾವಿಸಿದನು; ಆದರೆ ಹಾಗೆ ತಿಳಿದುಕೊಳ್ಳಲಿಲ್ಲ.**

ಮೋಶೆಯು ದೇವರು ತನ್ನ ಜೀವಿತದಲ್ಲಿ ಮಾಡಿದ್ದನ್ನು ಮತ್ತು ಮಾಡುತ್ತಿರುವುದನ್ನು ತನ್ನ ಇಬ್ರಿಯ ಬಾಂಧವರು ಗುರುತಿಸುವರೆಂದು ಭಾವಿಸಿದನು. ದೇವರು ಅವನನ್ನು ಬದುಕಿಸಿ ಫರೋಹನ ಅರಮನೆಯಲ್ಲಿ ಬೆಳೆಸಿದ್ದರ ಹಿಂದಿನ ಉದ್ದೇಶವನ್ನು ತನ್ನ ಜನರು ಅರಿತುಕೊಳ್ಳುವರೆಂದು ಯೋಚಿಸಿದನು. ವಿಪರ್ಯಾಸವೆಂದರೆ ಅವರದನ್ನು ಗ್ರಹಿಸಲಿಲ್ಲ. ಮೋಶೆಯು ತಮ್ಮ ವಿಮೋಚಕನಾಗಿದ್ದಾನೆಂಬ ಅಲ್ಪಕಲ್ಪನೆಯೂ ಅವರಲ್ಲಿ ಮೂಡಲಿಲ್ಲ.

ಅಪೊಸ್ತಲನಾದ ಪೌಲನ ಜೀವಿತದಲ್ಲೂ ಇಂತಹುದೇ ಸ್ಥಿತಿಯನ್ನು ನೋಡುತ್ತೇವೆ. ಕ್ರಿಸ್ತನು ಅವನನ್ನು ಸಂಧಿಸಿದ್ದು ಬಹಳ ಪ್ರಬಲವಾದ ಅನುಭವವಾಗಿದ್ದು ಅವನನ್ನು ಮಾರ್ಪಡಿಸಿ ಬಿಟ್ಟಿತ್ತು. ಅವನ ಜೀವನವು ಆಮೂಲಾಗ್ರವಾಗಿ ಬದಲಾಯಿತು. ಕರ್ತನಾದ ಯೇಸುವು ವೈಯಕ್ತಿಕವಾಗಿ ಅವನಿಗೆ ಕಾಣಿಸಿಕೊಂಡು ತನ್ನ ಸೇವೆ ಮಾಡಲು ದೊಡ್ಡ ಕರೆಯನ್ನು ನೀಡಿದ್ದನು. ಆದಾಗ್ಯೂ, ಪ್ರಾರಂಭಿಕ ವರ್ಷಗಳಲ್ಲಿ ಅಲ್ಲಿದ್ದ ಸಭೆಯು ಇದನ್ನು ನಂಬದೆ ಭಯಪಟ್ಟು, ಅವನಿಂದ ದೂರ ಸರಿದರು. ಪೌಲನು ದೀರ್ಘ ಸಮಯವನ್ನು ಏಕಾಂತವಾಗಿ ಕಳೆಯಬೇಕಾಯಿತು. ಅವನು ತನಗಾದ ದರ್ಶನವನ್ನು ಬಲವಾಗಿ ಆತುಕೊಂಡು ತನ್ನನ್ನು ಕರ್ತನಲ್ಲಿ ಬಲಪಡಿಸಿಕೊಳ್ಳುತ್ತಾ ಏಕಾಂಗಿಯಾಗಿ ನಿಂತನು.

ಗಲಾತ್ಯ 1:15,16

**[15] ಆದರೆ ನಾನು ತಾಯಿಯ ಗರ್ಭದಲ್ಲಿದ್ದಾಗಲೇ ನನ್ನನ್ನು ಪ್ರತ್ಯೇಕಿಸಿ ತನ್ನ ಕೃಪೆಯಿಂದ ಕರೆದ ದೇವರು [16] ತನ್ನ ಮಗನನ್ನು ನಾನು ಅನ್ಯ ಜನರಲ್ಲಿ ಪ್ರಸಿದ್ಧಿಪಡಿಸುವುದಕ್ಕೆ ಇಚ್ಛೈಸಿದಾಗಲೇ ನಾನು ಮನುಷ್ಯರ ಆಲೋಚನೆಯನ್ನು ವಿಚಾರಿಸಿದೆ**

ನಮಗೆ ದೈವದತ್ತವಾಗಿ ಬಂದ ದರ್ಶನವನ್ನು ಜನರು ನಂಬದೆ ಹೋದಾಗ್ಯೂ ನಾವು ಅದನ್ನು ಭದ್ರವಾಗಿ ಹಿಡಿದುಕೊಳ್ಳಬೇಕು. ನಾವದನ್ನು ಶರೀರಭಾವದಿಂದ ಅವಸರವಾಗಿ ಹಿಡಿಯುವುದಕ್ಕೆ ಪ್ರಯತ್ನಿಸದೆ, ಪೌಲನ ಜೀವಿತದಿಂದ ಕಲಿತುಕೊಳ್ಳಬೇಕಾಗಿದೆ. ದೇವರು ನಮಗೆ ಕೊಟ್ಟ ದರ್ಶನವನ್ನು ಮನುಷ್ಯರು ಅನುಮೋದಿಸಲೇ ಬೇಕೆಂದಿಲ್ಲ. ದೇವರು ನಮ್ಮ ಸಂಗಡ ಮಾತಾಡಿದ್ದಾನೆ ಎನ್ನುವುದನ್ನು ಮಾತ್ರ ನಾವು ಗಟ್ಟಿಯಾಗಿ ಹಿಡಿದುಕೊಳ್ಳಬೇಕು.

ತನ್ನದೇ ಸಮಯುದಲ್ಲಿ, ದೇವರು ಈ ದೈವದತ್ತ ದರ್ಶನವನ್ನು ದೃಢಪಡಿಸುತ್ತಾನೆ. ದೇವರು ನಮಗೆ ಹೇಳಿದ್ದನು ದೃಢಪಡಿಸಲು ಸಾಧ್ಯವಾಗುವಂತಹ ವ್ಯಕ್ತಿಗಳನ್ನು ನಮ್ಮ ಬಳಿಗೆ ಕಳುಹಿಸುತ್ತಾನೆ.

ತನ್ನದೇ ಸಮಯದಲ್ಲಿ, ದೇವರು ಈ ದರ್ಶನವನ್ನು ಕೈಗೂಡಿಸಲು ಬೇಕಾದ ಸ್ಪಷ್ಟತೆ, ಮಾರ್ಗದರ್ಶನ, ನಿರ್ದೇಶನ ಮತ್ತು ಜ್ಞಾನವನ್ನು ನೀಡಲಿ. ನಮ್ಮ ಹೃದಯದಲ್ಲಿರುವ ದರ್ಶನವನ್ನು ಪ್ರಾಯೋಗಿಕವಾಗಿ ಕಾರ್ಯಗತಗೊಳಿಸುವುದು ಹೇಗೆಂದು ತಿಳಿಸಲು ಯೋಗ್ಯರಾದಂತ ಜನರನ್ನು ಕಳುಹಿಸಿ ಆತನು ನಮಗೆ ಆಲೋಚನೆ ಮತ್ತು ಮಾರ್ಗದರ್ಶನವನ್ನು ಕೊಡಿಸುತ್ತಾನೆ. ದೇವರು ನಮ್ಮ ಬಳಿಗೆ ಕಳುಹಿಸುವ ಜನರ ಮೂಲಕವಾಗಿ ಏನು ಮಾತನಾಡುವನೆಂದು ತಿಳಿದು ನಾವದನ್ನು ಸ್ವೀಕರಿಸಬೇಕು.

## ದೈವದತ್ತ ದರ್ಶನಗಳು ದುರಾತ್ಮನ ವಿರೋಧವನ್ನು ಎದುರಿಸುತ್ತದೆ

ನೆಹೆಮಿಯ 2:18-20

**18 ನನ್ನ ದೇವರ ಕೃಪಾಹಸ್ತವು ನನ್ನನ್ನು ಪಾಲಿಸಿದ್ದನ್ನೂ ಅರಸನು ನನಗೆ ಹೇಳಿದ್ದನ್ನೂ ಅವರಿಗೆ ವಿವರಿಸಿದೆನು. ಆಗ ಅವರು ಬನ್ನಿರಿ ಕಟ್ಟೋಣ ಎಂದು ಹೇಳಿ ಆ ಒಳ್ಳೇ ಕೆಲಸಕ್ಕೆ ಕೈ ಹಾಕಲು ಧೈರ್ಯಗೊಂಡರು. 19ಹೋರೋನಿನವನಾದ ಸನ್ಬಲ್ಲಟನೂ ಅಮ್ಮೋನ್ ದೇಶದವನಾದ ಟೋಬೀಯ ಎಂಬ ದಾಸನೂ ಅರಬಿಯನಾದ ಗೆಷೆಮನೂ ಈ ವರ್ತಮಾನವನ್ನು ಕೇಳಿದಾಗ ಅವರು ನಮ್ಮನ್ನು ತಿರಸ್ಕರಿಸಿ ಗೇಲಿ ಮಾಡಿ ನೀವು ಇಲ್ಲಿ ಮಾಡುವದೇನು ? ಅರಸನಿಗೆ ವಿರೋಧವಾಗಿ ತಿರುಗಿಬೀಳಬೇಕೆಂದಿದ್ದೀರೋ ಎಂದು ಕೇಳಿದರು 20ನಾನು ಅವರಿಗೆ ಪರಲೋಕ ದೇವರು ನಮಗೆ ಸಾಫಲ್ಯವನ್ನನುಗ್ರಹಿಸುವನು. ಆದುದರಿಂದ ಆತನ ಸೇವಕರಾದ ನಾವು ಕಟ್ಟುವದಕ್ಕೆ ಮನಸ್ಸು ಮಾಡಿದ್ದೇವೆ. ನಿಮಗಾದರೋ ಯೆರೂಸಲೇಮಿನಲ್ಲಿ ಪಾಲೂ ಹಕ್ಕೂ ಹೆಸರೂ ಇರುವುದಿಲ್ಲ ಎಂದು ಉತ್ತರಕೊಟ್ಟನು.**

ಇದು ಮೇಲ್ನೋಟಕ್ಕೆ ಗೋಚರವಾಗುವುದಾದರೂ ಮತ್ತೊಮ್ಮೆ ಒತ್ತಿಹೇಳುವುದು ಅವಶ್ಯವಾಗಿದೆ. ಯಾರಾದರೂ ದೇವರ ರಾಜ್ಯವನ್ನು ವಿಸ್ತರಿಸುತ್ತ ಕತ್ತಲೆಗೆ ಸಂಬಂಧಪಟ್ಟ ಕಾರ್ಯಗಳನ್ನು ಕೆಡವಿಹಾಕುವ ಅನುಮತಿಯನ್ನು ಹೊಂದಿರುವುದು ಸೈತಾನನಿಗೆ ಸ್ವಲ್ಪಮಾತ್ರವೂ ಇಷ್ಟವಿಲ್ಲ. ನಾವು ರಾಜ್ಯದ ಕೆಲಸವನ್ನು ಮಾಡದಂತೆ ವಿರೋಧಿಸಿ, ಅಡಚಣೆಯನ್ನುಂಟುಮಾಡಿ, ಚಂಚಲಗೊಳಿಸಿ, ಬೇರೆಡೆಗೆ ನಮ್ಮ ಗಮನ ಹರಿಸುವಂತೆ ಮಾಡಲು ಸೈತಾನನು ಏನನ್ನು ಬೇಕಾದರೂ ಮಾಡಲು ಸಿದ್ಧನಾಗಿರುತ್ತಾನೆ.

ನೆಹೆಮಿಾಯನು ಯೆರೂಸಲೇಮ ಪಟ್ಟಣದ ಗೋಡೆಗಳನ್ನು ಕಟ್ಟಲು ಮುಂದಾದಾಗ ಅರಬ್ಬಿಯರು ಮತ್ತು ಅಮ್ಮೋನಿಯ ಅಧಿಕಾರಿಗಳು ಅವನನ್ನು ಹಾಸ್ಯಮಾಡಿ ಅವನ ಕೆಲಸವನ್ನು ವಿರೋಧಿಸಿದರು. ಆದರೆ ನೆಹೆಮಿಾಯನು ಕರ್ತನ ಕಡೆಗೆ ದೃಷ್ಟಿಯನಿಟ್ಟು ಆತನು ಮಾಡಲು ಕೊಟ್ಟ ಕೆಲಸದಲ್ಲಿ ಮುಂದುವರಿದನು.

ಅನೇಕ ಸಂದರ್ಭಗಳಲ್ಲಿ ದುರಾತ್ಮನ ವಿರೋಧವು ಮೋಸಕರವಾಗಿ ಬರುವುದರಿಂದ ನಾವದನ್ನು ಗುರುತಿಸಲು ವಿಫಲರಾಗುತ್ತೇವೆ.

ದುರಾತ್ಮನ ವಿರೋಧವು ನಮ್ಮನ್ನು ಚಂಚಲಗೊಳಿಸುವಂತೆ ಬರಬಹುದು. ನಮ್ಮ ಗಮನ, ಸಮಯ ಮತ್ತು ಶಕ್ತಿಯನ್ನು ವ್ಯಯಿಸಲು ಸಾಧ್ಯವಿರುವಂತಹ ಇತರ ಒಳ್ಳೆಯ ಕೆಲಸಗಳು, ಮುಖ್ಯವಾದ ಕೆಲಸಗಳು, ಇಲ್ಲವೇ ಸಂದಿಗ್ಧ ಸ್ಥಿತಿಗತಿಗಳು ತಲೆದೋರಬಹುದು. ಇವುಗಳ ವ್ಯತ್ಯಾಸವನ್ನು ನಾವು ವಿವೇಚಿಸಿ ತಿಳಿದುಕೊಂಡು ದೇವರು ನಮ್ಮಲ್ಲಿ ಹುಟ್ಟಿಸಿದ ದರ್ಶನದ ಕಡೆಗೆ ನಾವು ಕೇಂದ್ರೀಕೃತಗೊಳ್ಳಬೇಕು. ಚಂಚಲತ್ವವು ನಮ್ಮ ಏಕಾಗ್ರತೆಗೆ ಭಂಗ ತರುವುದಲ್ಲದೆ ಸಮಯ, ಶಕ್ತಿ ಮತ್ತು ಸಂಪನ್ಮೂಲಗಳು ಸೋರಿ ಹೋಗುವಂತೆ ಮಾಡುತ್ತದೆ.

ದುರಾತ್ಮನ ವಿರೋಧವು ನಿರುತ್ಸಾಹದಂತೆ ಬರಲು ಸಾಧ್ಯವಿದೆ. ನಮ್ಮೆಲ್ಲರಿಗೂ ನಿರುತ್ಸಾಹದ ಸ್ಥಿತಿಗಳು ಎದುರಾಗಿವೆ ಮತ್ತು ಕೆಲಸದಿಂದ ಕೈತೆಗೆದು ಬಿಡಬೇಕು ಎನ್ನಿಸಿದೆ. ಕೆಲವೊಮ್ಮೆ ನಮ್ಮ ಜೊತೆಕೆಲಸದವರು ನಮ್ಮನು ನಿರುತ್ಸಾಹಗೊಳಿಸಬಹುದು. ಅದರೆ ನಾವು ದೇವರಲ್ಲಿ ನಮ್ಮನ್ನು ಬಲಪಡಿಸಿಕೊಳ್ಳುವುದನ್ನು ಅರಿತುಕೊಂಡು ಮುನ್ನಡೆಯಬೇಕು.

ನಾವು ಜಯಶಾಲಿಗಳಾಗುವಂತೆ ಮಾಡಲು ದೇವರು ನಮ್ಮ ಸಂಗಡ ಇರುತ್ತಾನೆ.

## ದೈವದತ್ತ ದರ್ಶನಗಳು ಯಾವಾಗಲೂ ವ್ಯಕ್ತಿಗಿಂತ ದೊಡ್ಡದಾಗಿರುತ್ತವೆ

ಪ್ರತಿಯೊಂದು ದೈವ-ದತ್ತದರ್ಶನವು ವ್ಯಕ್ತಿಗಿಂತ ದೊಡ್ಡದಾಗಿರುತ್ತದೆ. ಒಬ್ಬನು ವ್ಯಕ್ತಿಯಾಗಿ ದೇವರ ದರ್ಶನವನ್ನು ನೆರವೇರಿಸಬೇಕೆಂದು ದೇವರು ಸಂಕಲ್ಪಿಸುವುದಿಲ್ಲ.

ನೆಹೆಮಿಾಯ 2:12

**12 ಅಲ್ಲಿ ಮೂರು ದಿನಗಳಿದ್ದ ಮೇಲೆ ಯೆರೂಸಲೇಮಿಗೋಸ್ಕರ ಮಾಡತಕ್ಕ ಕಾರ್ಯದ ವಿಷಯವಾಗಿ ನನ್ನ ದೇವರು ನನ್ನಲ್ಲಿ ಯಾವ ಆಲೋಚನೆಯನ್ನು ಹುಟ್ಟಿಸಿದ್ದಾನೆಂದು ಯಾರಿಗೂ ತಿಳಿಸದೇ ರಾತ್ರಿಯಲ್ಲೆದ್ದು ಕೆಲವು ಜನರನ್ನು ಮಾತ್ರ ಕರೆದುಕೊಂಡು ಹೊರಟೆನು.**

ನೆಹೆಮಿಾಯ 2:17,18

**17ಆಗ ನಾನು ಅವರಿಗೆ - ನಮ್ಮ ದುರವಸ್ಥೆ ನಿಮ್ಮ ಕಣ್ಣ ಮುಂದಿರುತ್ತದಲ್ಲವೋ; ಯೆರೊಸಲೇಮ್ ಪಟ್ಟಣವು ಹಾಳುಬಿದ್ದಿದೆ ಅದರ ಬಾಗಲುಗಳು ಬೆಂಕಿಯಿಂದ ಸುಡಲ್ಪಟ್ಟಿರುತ್ತವೆ; ಬನ್ನಿರಿ ಯೆರೂಸಲೇಮಿನ ಗೋಡೆಯನ್ನು ಕಟ್ಟೋಣ. ಹೀಗೆ ಮಾಡಿದರೆ ನಮ್ಮ ಮೇಲಣ ನಿಂದೆಯು ಹೋಗುವದು ಎಂದು ಹೇಳಿದೆನು 18 ಇದಲ್ಲದೆ ನನ್ನ ದೇವರ ಕೃಪಾಹಸ್ತವು ನನ್ನನ್ನು ಪಾಲಿಸಿದ್ದನ್ನೂ ಅರಸನು ನನಗೆ ಹೇಳಿದ್ದನ್ನೂ ಅವರಿಗೆ ವಿವರಿಸಿದೆನು. ಆಗ ಅವರು ಬನ್ನಿರಿ ಕಟ್ಟೋಣ ಎಂದು ಹೇಳಿ ಆ ಒಳ್ಳೆ ಕೆಲಸಕ್ಕೆ ಕೈಹಾಕಲು ಧೈರ್ಯಗೊಂಡರು.**

ಸ್ವಲ್ಪ ಕಾಲದವರೆಗೆ ನೆಹೆಮೀಯನು ದೈವದತ್ತವಾದ ತನ್ನ ದರ್ಶನವನ್ನು ಯಾರಿಗೂ ತಿಳಿಸದಂತೆ ಹೃದಯದಲ್ಲೇ ಇಟ್ಟುಕೊಂಡಿದ್ದನು. ಆದರೆ ಬಹು ಶೀಘ್ರದಲ್ಲಿಯೇ, ತನ್ನ ದರ್ಶನವನ್ನು ಇತರರೊಂದಿಗೆ ಹಂಚಿಕೊಳ್ಳುವ ಸಮಯ ಬಂದೊದಗಿತು. ಅವನು ತನ್ನ ದರ್ಶನದಲ್ಲಿ ಪಾಲ್ಗೊಳ್ಳಲು ಇತರರನ್ನೂ ಆಹ್ವಾನಿಸಿ, ಅದರ ನೆರವೇರಿಕೆಗೆ ಎಲ್ಲರೂ ಕೈಜೋಡಿಸುವಂತಾಯಿತು. "ಬನ್ನಿರಿ, ಯೆರೂಸಲೇಮಿನ ಗೋಡೆಯನ್ನು ಕಟ್ಟೋಣ' (ನೆಹಮೀಯ 2:17) ಅವನು, ಅಲ್ಲಿಯತನಕ ದೇವರು ಅವನನ್ನು ನಡೆಸಿದ ರೀತಿಯನ್ನು ವಿವರಿಸಿ ಅವರಿಗೂ ತನ್ನ ದರ್ಶನದಲ್ಲಿ ಭಾಗಿಯಾಗುವ ನಂಬಿಕೆ ಮತ್ತು ಪ್ರೇರೇಪಣೆಯನ್ನು ಹುಟ್ಟಿಸಿದನು ಅವರು 'ಬನ್ನಿರಿ ಕಟ್ಟೋಣ' ಎಂದು ಪ್ರತಿಕ್ರಿಯಿಸಿದರು.

ಅಪೊಸ್ತಲರ ಕೃತ್ಯಗಳ ಪುಸ್ತಕ ಮತ್ತು ಪೌಲನ ಅನೇಕ ಪತ್ರಿಕೆಗಳಲ್ಲಿ ಅವನ 'ಜೊತೆ ಕೆಲಸದವರ' ಕುರಿತು ಓದುತ್ತೇವೆ. ಪೌಲನು ಸ್ವತಃ ಅವನೊಂದಿಗಿದ್ದಂತಹ ಜೊತೆ ಕೆಲಸದವರ ಹೆಸರುಗಳ ಪಟ್ಟಿ ಮಾಡುತ್ತಾನೆ. ಅವನು ''ಜೊತೆ ಸೇರೆಯುವರು''

''ಜೊತೆ ಕೆಲಸದವರು'' ''ಜೊತೆಗಾರ ಮತ್ತು ಜೊತೆ ಸಹಾಯಕ'', ''ಸಂಕಟದಲ್ಲಿ (ನೊಗ) ಪಾಲುಗಾರ'' ''ಜೊತೆ ಕೂಲಿಗಾರರು'' ಮತ್ತು ''ಜೊತೆ ಸೇವಕರು'' ಎಂಬುದಾಗಿ ಕರೆದಿದ್ದಾನೆ. ಸತ್ಯವೇದದಲ್ಲಿ ಈ ಕೆಳಕಂಡವರ ಹೆಸರುಗಳನ್ನು ನೋಡಬಹುದು. ಬಾರ್ನಬನು, ಸೀಲನು, ಲೂಕನು, ಅಂದ್ರೋನಿಕನು, ಯೂನ್ಯನು, ತಿಮೊಥೆಯನು, ಲೂಕ್ಯನು ಯಾಸೋನನು, ಸೋಸಿಪತ್ರನು, ತೀತನು, ಕ್ಲೆಮೆಂಟನು ಎಫ್ರಫ್ರೆನು, ತುಖಿಕನು, ಅರಿಸ್ತಾರ್ಕನು, ಮಾರ್ಕನು, ಯೂಸ್ತನು, ಫಿಲೆಮೋನನು, ಅಂಪ್ಲಿಯಾತನು, ಅರ್ಖಿಪ್ಪನು, ದೇಮನು ಮತ್ತು ನಿಶ್ಚಯವಾದ ''ಇತರ ಸಹೋದರರು'' ಸುವಾರ್ತಾ ಸೇವೆಯಲ್ಲಿ ಅವನೊಂದಿಗೆ ಕೆಲಸ ಮಾಡಿದ ಸ್ತ್ರೀಯರು'' ಮತ್ತು ''ಜೀವಬಾಧ್ಯರ ಪುಸ್ತಕದಲ್ಲಿರುವ ಉಳಿದ ಇತರ ಜೊತೆ ಕೆಲಸಗಾರರು''

ನಮ್ಮಲ್ಲಿ ಅನೇಕರಿಗಿರುವ ಸಮಸ್ಯೆಯೆಂದರೆ ದೇವರು ನಮಗೆ ಕೊಟ್ಟದರ್ಶನದಲ್ಲಿ ಇತರರು ಪಾಲ್ಗೊಳ್ಳುವಂತೆ ನಾವು ಅವಕಾಶ ನೀಡದೆ ಇರುವುದಾಗಿದೆ. ನಮ್ಮಲ್ಲಿ, ಇದೆಲ್ಲವನ್ನೂ ನಾನೊಬ್ಬನೇ/ಳೇ ಮಾಡಬೇಕೆನ್ನುವ ಭಾವನೆ ಇರುತ್ತದೆ. ದೇವರು ದಯಪಾಲಿಸುವ ದರ್ಶನವು ವ್ಯಕ್ತಿ ಪ್ರತಿಷ್ಠೆಗಿಂತಲೂ ದೊಡ್ಡದು. ಸಾಧಾರಣವಾಗಿ ದೇವರು ಒಂದು ದರ್ಶನವನ್ನು ಒಬ್ಬ ವ್ಯಕ್ತಿಗೆ ನೀಡಿದರೂ ಅದರ ನೆರವೇರುವಿಕೆಗೆ ಅನೇಕರು ಒಗ್ಗೂಡಬೇಕೆಂದು ಬಯಸುತ್ತಾನೆ. ಅದೇ ದರ್ಶನಕ್ಕೆ ಇತರರನ್ನು ಬೆಸೆಯುತ್ತಾ ಅದು ಸಾಕಾರಗೊಳ್ಳುವಂತೆ ಮಾಡುತ್ತಾನೆ.

ಇತರರು ನಮ್ಮ ದೈವದತ್ತ ದರ್ಶನವನ್ನು ಅರ್ಥಮಾಡಿಕೊಂಡು ಅದರಲ್ಲಿ ಜೊತೆಗೂಡುವಂತೆ ನಮಗಿರುವ ದರ್ಶನವನ್ನು ಅವರಿಗೆ ಸ್ಪಷ್ಟಪಡಿಸಬೇಕು ಮತ್ತು ಅನೇಕರು ನಾವು ಹೀಗೆ ಮಾಡುವಲ್ಲಿ ಸೋತು ಹೋಗುತ್ತೇವೆ. ಮೇಲಾಗಿ ಇದನ್ನು ಸರಿಯಾದ ಭಾವದಲ್ಲಿ ನಡೆಸಬೇಕು. ದೇವರು ಕೆಲವರೊಂದಿಗೆ ಮಾತನಾಡಿ ನಮಗೆ ನೀಡಿದ ಹಾಗೆಯೇ ಅವರಲ್ಲಿಯೂ ಅಂಥ ಆಲೋಚನೆಯನ್ನು ಪ್ರಚೋದಿಸುತ್ತಾನೆ. ಆಗ ನಮ್ಮಿರ್ವರಿಗೂ ಸಂತೋಷವಾಗುತ್ತದೆ. ಕೆಲವರು ನಮ್ಮ ಮಾತುಗಳನ್ನು ಕೇಳಬಹುದು ಆದರೆ ನಮ್ಮೊಳಗಿರುವ ಭಾವ ಅವರಲ್ಲಿ ಮೂಡದಿರಬಹುದು. ನಮ್ಮ ದರ್ಶನಕ್ಕೆ ಪ್ರತಿಕ್ರಿಯೆ ತೋರದೆ ಹೋದವರ ಕುರಿತು ನಾವು ನಿರುತ್ಸಾಹಗೊಳ್ಳಬಾರದು, ಅದರ ಮೇಲೆ ಬೇಸರಿಸಿಕೊಳ್ಳಬಾರದು, ಸಿಟ್ಟುಗೊಳ್ಳಲೂಬಾರದು. ಅವರಿಗಾಗಿ ದೇವರು ಬೇರೆನೋ ಯೋಜನೆಯನ್ನು ಇಟ್ಟಿರಬಹುದು.

ದೇವರು ನಮಗೆ ಕೊಡುವ ದರ್ಶನವನ್ನು ಇತರರೊಂದಿಗೆ ಹಂಚಿಕೊಳ್ಳಬೇಕು. ಹೊಂದಿಕೆಯಾಗದ ಜನರನ್ನು ನಾವು ಸೇರಿಸಿಕೊಳ್ಳಲಾಗುವುದಿಲ್ಲ. ಅಂಥವರು ದೇವರು ನಮಗೆ ನೀಡಿದ ದರ್ಶನವನ್ನು ನಾಶಮಾಡಿ ಬಿಡುವ ಸಾಧ್ಯತೆ ಇದೆ.

## ದೈವದತ್ತ ದರ್ಶನಗಳನ್ನು ಇತರ ಜನರು ಗುರ್ತಿಸುತ್ತಾರೆ ಮತ್ತು ಅವರ ಜೀವಿತಗಳ ಕರೆಯಲ್ಲಿ ಭಾಗಿಯಾಗಿ ಅದನ್ನು ನೆರವೇರಿಸುತ್ತಾರೆ

ಅನೇಕ ಜನರು ದೈವದತ್ತ ದರ್ಶನಗಳನ್ನು ಕಂಡು ಹಿಡಿಯುತ್ತಾರೆ ಮತ್ತು ಅವರ ಜೀವಿತಗಳ ಕರೆಯನ್ನು ನೆರವೇರಿಸಲು ಹೆಜ್ಜೆಯಿಟ್ಟು ದೈವದತ್ತದರ್ಶನಗಳ ಭಾಗಗಳಾಗುತ್ತಾರೆ.

ನಮ್ಮ ದರ್ಶನವನ್ನು ಹಂಚಿಕೊಳ್ಳುವುದೆಂದರೆ ಇತರರನ್ನು ನಮ್ಮ ಉದ್ದೇಶಕ್ಕಾಗಿ ಬಳಸಿಕೊಳ್ಳುವುದೆಂದಲ್ಲ. ಅದು ಸಂಪೂರ್ಣವಾಗಿ ತಪ್ಪು.

ನಮ್ಮ ಹೃದಯದಲ್ಲಿರುವ ದೈವದತ್ತವಾದ ದರ್ಶನದಲ್ಲಿ ಪಾಲ್ಗೊಳ್ಳಲು ಇತರರನ್ನು ಆಹ್ವಾನಿಸುವಾಗ ನಾವು ಅವರ ಒಳಿತನ್ನು ಗಮನದಲ್ಲಿಟ್ಟುಕೊಳ್ಳಬೇಕು. ದೇವರು ನಿಮಗೆ ಕೊಟ್ಟ ದರ್ಶನವನ್ನು ಸಾಕಾರಗೊಳಿಸುವಲ್ಲಿ ಅವರು ನಮ್ಮ ಜೊತೆಗಾರರಾದಾಗ, ದೇವರು ಅವರ ಜೀವಿತದಲ್ಲಿ ಏನನ್ನು ಇಟ್ಟಿದ್ದಾನೋ, ಏನನ್ನು ಮಾಡಲು ಕರೆದಿದ್ದನೋ ಅದು ಅವರಲ್ಲಿ ನೆರವೇರುವಂತಾಗಬೇಕು ಎನ್ನುವುದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು.

## ಕ್ರಿಸ್ತನ ದೇಹಕ್ಕೆ ಕೊಡಲ್ಪಟ್ಟ ಕನಸುಗಳು ಮತ್ತು ದರ್ಶನಗಳು ಪರಸ್ಪರ ಸಂಬಂಧ ಕಲ್ಪಿಸುತ್ತವೆ.

ನಾವು ಅಂಗಗಳಾಗಿರುವುದರಿಂದ ಆತನ ಜನರಿಗೆ ದೇವರಿಂದ ಕೊಡಲ್ಪಟ್ಟ ಕನಸುಗಳು ಮತ್ತು ದರ್ಶನಗಳು ಪರಸ್ಪರ ಅವಲಂಬಿಸಿರುತ್ತವೆ. ಮತ್ತು ಪರಸ್ಪರ ಸಂಬಂಧ ಕಲ್ಪಿಸುತ್ತವೆ.

ಎಫೆಸದವರಿಗೆ 4:4

**4ನೀವೆಲ್ಲರೂ ಒಂದೇ ದೇಹಕ್ಕೆ ಸೇರಿದವರು, ಒಬ್ಬನೇ ಆತ್ಮನನ್ನು ಹೊಂದಿದವರು, ಒಂದೇ ಪದವಿಯನ್ನು ನಿರೀಕ್ಷಿಸುವದಕ್ಕೆ ಕರೆಯಲ್ಪಟ್ಟವರು**

ಒಂದೇ ದೇಹಕ್ಕೆ ಸೇರದೇ, ನಿಮ್ಮ ಕರೆಗಳನ್ನು ನೆರವೇರಿಸಲು ಆಗುವುದಿಲ್ಲ. ನಾವೆಲ್ಲರೂ ಒಂದೇ ನಿರೀಕ್ಷೆಗೆ ಕರೆಯಲ್ಪಟ್ಟವರಾಗಿದ್ದೇವೆ.

ಎಫೆಸದವರಿಗೆ 4:16

**[16] ಆತನೇ ಶಿರಸ್ಸು; ದೇಹವೆಲ್ಲಾ ಆತನ ದೊರೆತನದಲ್ಲಿದ್ದು ತನ್ನಲ್ಲಿರುವ ಎಲ್ಲಾ ನರಗಳಿಂದ ಬಿಗಿಯಾಗಿ ಜೋಡಿಸಲ್ಪಟ್ಟು ಪ್ರತಿ ಅಂಗದಿಂದ ಅದರದರ ಶಕ್ತಿಯ ಪ್ರಕಾರ ಸಹಾಯ ಹೊಂದಿ ಪ್ರೀತಿಯಿಂದ ಐಕ್ಯವಾಗಿದ್ದು ಕ್ಷೇಮಾಭಿವೃದ್ಧಿಯನ್ನು ಹೊಂದುತ್ತವೆ**

ನಾವು ಒಬ್ಬರಿಗೊಬ್ಬರು ಒದಗಿಸಬೇಕು, ಆಗ ನಾವೆಲ್ಲರೂ ಒಟ್ಟಾಗಿ ಕ್ರಿಸ್ತನ ದೇಹವನ್ನು ಕಟ್ಟಬಹುದು.

ನೀನು, ಬೇರೆಯವರ ಕನಸುಗಳಿಗೆ ಹೆಜ್ಜೆಯಿಟ್ಟು ಅವರ ದರ್ಶನಗಳನ್ನು ನೆರವೇರಿಸಲು ಸಹಾಯ ಮಾಡಿದರೆ ನೀನು ನಿನ್ನ ಸ್ವಂತ ಜೀವಿತಗಳಿಗಿರುವ ದೇವರ ದರ್ಶನಗಳನ್ನು ಮತ್ತು ಅದರ ಫಲಗಳನ್ನು ಹೊಂದುವಿ.

## ನಿಮಗೆ ದೊಡ್ಡ ಹೃದಯ ಕೊಡುವಂತೆ ದೇವರನ್ನು ಕೇಳಿರಿ

ನಮ್ಮಲ್ಲಿ ಹಲವರು ದೊಡ್ಡ ದರ್ಶನಗಳನ್ನು ಹೊಂದಿದ್ದಾರೆ ಆದರೆ ಚಿಕ್ಕ ಹೃದಯವಿದೆ ಒಬ್ಬ ವ್ಯಕ್ತಿಗೆ ಮಾತ್ರವೇ ಸ್ಥಳವಿದೆ ಅಂದರೆ ಅದು 'ಸ್ವ'ಕ್ಕೆ ಎಂದು ಅನ್ನಿಸುತ್ತದೆ.

ನನ್ನ ಹೃದಯವು ನನಗೆ ಮಾತ್ರವೇ ಅಲ್ಲದೇ ಇತರರಿಗೂ ಸ್ಥಳವನ್ನು ಹೊಂದಿರಬೇಕು.

ದೊಡ್ಡ ದರ್ಶನವು ದೊಡ್ಡ ಹೃದಯವನ್ನು ಅಪೇಕ್ಷಿಸುತ್ತದೆ!

ನಮಗೆ ಕೊಡಲ್ಪಟ್ಟ ಆತನ ದರ್ಶನಗಳಲ್ಲಿ ಪ್ರತಿಯೊಬ್ಬರು ಭಾಗಿಗಳಾಗಿರುವಂತೆ ದೇವರು ಸಂಕಲ್ಪಿಸಿದ್ದರೆ, ಅಂತಹವುಗಳಿಗೆ ಆಸ್ಪದ ಕಲ್ಪಿಸುವ ದೊಡ್ಡ ಹೃದಯಗಳನ್ನು ನಾವು ಹೊಂದಿರಬೇಕು.

ಅಭದ್ರತೆ, ಹೊಟ್ಟೆಕಿಚ್ಚು, ಸ್ಪರ್ಧೆ, ಸ್ವಕೇಂದ್ರೀಕೃತದಿಂದ ಮುಕ್ತವಾಗಿರುವ ದೊಡ್ಡ ಹೃದಯ ಬೇಕು. ಇತರ ಜನರ ಜೀವಿತಗಳಲ್ಲಿ ದೇವರು ಮಾಡುತ್ತಿರುವ ಕಾರ್ಯಗಳಲ್ಲಿ ಸಂತೋಷಪಡುವುದು ಮತ್ತು ಗುರುತಿಸುವಂತಹ ಹೃದಯ ದೊಡ್ಡ ಹೃದಯವಾಗಿದೆ. ದೇವರು ಕರೆದದ್ದನು ಮಾಡಲು ಇತರರರಿಗೆ ಅಧಿಕಾರ ಕೊಡುವ ಮತ್ತು ಪ್ರೋತ್ಸಾಹ ಪಡಿಸುವ ಹೃದಯ ಇದಾಗಿದೆ.

## ವೈಯಕ್ತಿಕ ಅನ್ವಯಿಸುವಿಕೆ

ಪ್ರ. 1. ದೇವರ ರಾಜ್ಯವನ್ನು ಕಟ್ಟಲು ಆತನು ನಿಮ್ಮಲ್ಲಿ ಇಟ್ಟಿರುವ ದರ್ಶನವೇನಾಗಿದೆ? ನಿಮ್ಮ ಜೀವನದ ಈ ಹಂತದಲ್ಲಿ ಆತನು ನಿಮ್ಮೊಂದಿಗೆ ಏನು ಮಾತನಾಡುತ್ತಿದ್ದಾನೆ. ಅದು ನಿಮಗಿನ್ನೂ ಅಸ್ಪಷ್ಟವಾಗಿರುವುದಾದರೆ, ಹಬಕ್ಕೂಕನಂತೆ ಕರ್ತನ ಸ್ವರವನ್ನು ಕೇಳಲು ನಿಮ್ಮನ್ನು ಸಿದ್ಧಪಡಿಸಿಕೊಳ್ಳಿರಿ. "ನನ್ನ ಕೋವರದಲ್ಲಿ ನಿಂತುಕೊಳ್ಳುವೆನು, ಬರುಜಿನ ಮೇಲೆ ನೆಲೆಯಾಗಿರುವೆನು, ನಿವಾರಿಸಿಕೊಳ್ಳಲು ಯಾವ ಉತ್ತರಕೊಡಬೇಕೋ ಎಂದು ಎದುರು ನೋಡುವೆನು (ಹಬ್ಬಕ್ಕೂಕ 2:1)

ಪ್ರ. 2. ತನ್ನ ರಾಜ್ಯದ ಉದ್ದೇಶಗಳು ನಿನ್ನ ಮೂಲಕವಾಗಿ ನೆರವೇರುವಂತೆ ಸದ್ಯದ ನಿನ್ನ ಜೀವಿತದದಲ್ಲಿ, ನಿನ್ನ ಕಾರ್ಯಮಾಡುತ್ತಿದ್ದಾನೆಂದು ಹೇಳಬಹುದಾದ ವಿಷಯಗಳು ಯಾವುವು? ಅವು ನಿನ್ನಲ್ಲಿ ಪ್ರಗತಿ ಹೊಂದಲು ದೇವರೊಂದಿಗೆ ನೀನು ಸಹಕರಿಸಬಹುದಾದ ಸಂಗತಿಗಳು ಯಾವುವು?

ಪ್ರ. 3. ದೇವರು ನಿನಗೆ ನೀಡಿರುವ ದರ್ಶನವನ್ನು ಈಡೇರಿಸಲು ಇತರರೂ ಕೈಗೂಡಿಸುವಂತೆ ನೀನು ಅವರಿಗೆ ಹೃದಯಪೂರ್ವಕವಾಗಿ ಸ್ಥಳಮಾಡಿಕೊಡುತ್ತೀಯೋ?

ದೇವರ ಯೋಜನೆಯನ್ನು ಕಂಡುಕೊಂಡು ಅದನ್ನು ಈಡೇರಿಸುವುದು ಹೇಗೆಂದು ತಿಳಿದುಕೊಳ್ಳಲು, ಎಪಿಸಿ ಪ್ರಕಾಶನ ಸಂಸ್ಥೆಯ 'ನಿಮ್ಮ ಜೀವಿತಕಿರುವ ದೇವರ ಉದ್ದೇಶಗಳನ್ನು ನೆರವೇರಿಸುವುದು' ಎಂಬ ಪುಸ್ತಕವನ್ನು ದಯವಿಟ್ಟು ಪುನರಾವಲೋಕಿಸಿರಿ.

ದೇವರ ಉದ್ದೇಶಗಳನ್ನು ಹಿಂಬಾಲಿಸುವುದರ ಕುರಿತು ಪ್ರಭಾವಿತರಾಗಲು, ದಯಮಾಡಿ ಎಪಿಸಿ ಪ್ರಕಾಶನ ಸಂಸ್ಥೆಯ, 'ದೇವರ ಉದ್ದೇಶಗಳಿಗೆ ಜನ್ಮ ಕೊಡುವುದು' ಮತ್ತು 'ನಿನ್ನ ಕರೆಯನ್ನು ಕಡೆಗಣಿಸದಿರು' ಪುಸ್ತಕಗಳನ್ನು ಓದಿರಿ.

ಕಾಲ ಮತ್ತು ಗಳಿಗೆಗಳ ಕುರಿತು ಹೆಚ್ಚಿನ ಅಧ್ಯಯನಕ್ಕಾಗಿ ದಯಮಾಡಿ ಎಪಿಸಿ ಪ್ರಕಾಶನ ಸಂಸ್ಥೆಯವರ, 'ಪ್ರತಿ ಉದ್ದೇಶಗಳಿಗೂ ಒಂದು ಸಮಯವಿದೆ, ಪುಸ್ತಕವನ್ನು ಅಭ್ಯಾಸಿಸಿರಿ.

# ಅಧ್ಯಾಯ 5

## ದೇವರ ರಾಜ್ಯ ಕಟ್ಟುವವರ ಜೀವನ ಶೈಲಿ

ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ ಹೀಗಾದರೆ ಅವರು ನಿಮ್ಮ ಒಳ್ಳೇ ಕ್ರಿಯೆಗಳನು ನೋಡಿ ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಕೊಂಡಾಡುವರು. (ಮತ್ತಾಯ 5:16)



# 5

# ದೇವರ ರಾಜ್ಯ ಕಟ್ಟುವವರ ಜೀವನ ಶೈಲಿ

ನಾವು ಮಾಡುವ ಕೆಲಸಕ್ಕಿಂತಲೂ ನಾವು ಯಾರಾಗಿದ್ದೇವೋ ಅದು ಮುಖ್ಯವಾಗಿದೆ. ನಾವು ಮಾಡುವುದಕ್ಕಿಂತಲೂ ನಮ್ಮ ಇರುವಿಕೆ ಮುಖ್ಯವಾಗಿದೆ.

ರಾಜ್ಯವನ್ನು ಕಟ್ಟುವುದರಲ್ಲಿ ಅನೇಕ ಬಾರಿ ನಾವು ಮಾಡುವ ಕೆಲಸದಲ್ಲಿ ನಾವು ಎಷ್ಟೊಂದು ಮಗ್ನರಾಗಿ ಬಿಡುತ್ತೇವೆಂದರೆ, ದೇವರು ನಮ್ಮ ಮೂಲಕ ನಡೆಸುವ ಕೆಲಸಕ್ಕಿಂತಲೂ ತನ್ನ ಜನರಾದ ನಮ್ಮಲ್ಲಿ ಹೆಚ್ಚು ಆಸಕ್ತಿಯುಳ್ಳವನಾಗಿದ್ದಾನೆ ಎನ್ನುವುದನ್ನು ಮರೆತು ಬಿಡುತ್ತೇವೆ.

ಆದುದರಿಂದ ಈ ಅಧ್ಯಾಯದಲ್ಲಿ ರಾಜ್ಯವನ್ನು ಕಟ್ಟುವವರಾದ ನಾವು ಯಾರಾಗಿದ್ದೇವೆ ಮತ್ತು ನಮ್ಮ ಜೀವನ ಶೈಲಿ ಹೇಗಿರಬೇಕು ಎನ್ನುವ ಕುರಿತು ಮುಖ್ಯವಾದ ಅಂಶಗಳನ್ನು ಈ ಅಧ್ಯಾಯದಲ್ಲಿ ಗಮನಿಸೋಣ. ಇಲ್ಲಿ ಮೂರು ಮುಖ್ಯ ವಿಷಯಗಳು ನಮ್ಮ ಮುಂದಿವೆ: (ಅ) ದೈವೀಕ ಗುಣಗಳು (ಆ) ಆತ್ಮೀಕ ಪ್ರೌಢಿಮೆ (ಇ)ವ್ಯವಸ್ಥಾಪಕತ್ವ.

## ಗುಣನಡತೆ ಪ್ರಾಮುಖ್ಯವಾದದ್ದು

### ಗುಣನಡತೆ ಎಂದರೇನು?

- ಸ್ವಾಭಾವ, ಗುಣಮಟ್ಟ, ಪ್ರಕೃತಿ ಸ್ವಭಾವ, ವ್ಯಕ್ತಿತ್ವ, ಶೀಲ, ಆತ್ಮ, ನೈತಿಕಸತ್ವ.
- ನಾನು ಒಬ್ಬ ವ್ಯಕ್ತಿಯಾಗಿ ನೈಜವಾಗಿ ಏನಾಗಿದ್ದೇನೆ ಎಂಬುದು ನನ್ನ ಗುಣ ನಡತೆಯಾಗಿದೆ.
- ನಾನು ಇತರರ ಮುಂದೆ ಏನಾಗಿರಬೇಕೆಂಬುದನ್ನು ಊಹಿಸುವುದು ಇದಲ್ಲಾ ಬೇರೆಯವರು ನನಗೆ ಹೇಗಿರಬೇಕೆಂಬುದಾಗಿಯೂ ಭಾವಿಸುವುದು ಅಲ್ಲ.
- ನಾನು ಒಬ್ಬ ನೈಜ ವ್ಯಕ್ತಿಯಾಗಿ ಯಾರಾಗಿದ್ದೇನೆಂಬುದು. ಇದು ನನ್ನ ನಡವಳಿಕೆಯ ಮೂಲಕ ಪ್ರಕಟಗೊಳ್ಳುತ್ತದೆ.

- ಕಷ್ಟ ಮತ್ತು ಆಕಸ್ಮಿಕ ಕೆಡುಕಿನ ಸ್ಥಿತಿಗಳಲ್ಲಿ ನನ್ನ ಕೃತ್ಯ ಮತ್ತು ಪ್ರತಿಕ್ರಿಯೆಗಳ ಮೂಲಕ ನನ್ನ ಗುಣ ನಡತೆ ಪ್ರಕಟಗೊಳ್ಳುತ್ತದೆ.
- ನನ್ನ ರಹಸ್ಯವಾದ ಆಯ್ಕೆಗಳಿಂದ ನನ್ನ ಗುಣ ನಡತೆ ಬಹಿರಂಗಗೊಳ್ಳುತ್ತದೆ.
- ನನ್ನ ನುಡಿಗಳು, ಆಲೋಚನೆಗಳು ಮತ್ತು ತೀರ್ಮಾನಗಳು ನನ್ನ ಗುಣ ನಡತೆಯನ್ನು ಪ್ರಕಟಿಸುತ್ತವೆ.
- ನಾನು ಮಾಡುವ ಆಯ್ಕೆಗಳನ್ನು ನನ್ನ ಮೌಲ್ಯ ವ್ಯವಸ್ಥೆಯು ಪ್ರಭಾವಿತಗೊಳಿಸಿರುತ್ತದೆ.

## *ಯೋಸೇಫನು*

ಬೈಬಲ್‌ನಲ್ಲಿ ದೈವಭಕ್ತಿಯಿಂದ ಜೀವಿಸಿದವರಲ್ಲಿ ಅತ್ಯುತ್ತಮ ಉದಾಹರಣೆಯೆಂದರೆ ಯೋಸೇಫನು. ಅವನು ಪೋಟೀಫರನ ಮನೆಯಲ್ಲಿ ಹನ್ನೊಂದು ವರ್ಷಗಳ ಕಾಲ ನಂಬಿಗಸ್ತನಾಗಿ ಸೇವೆ ಮಾಡಿದನು. ಇಷ್ಟರ ವೇಳೆಗೆ ಅವನೆಷ್ಟು ಸಮರ್ಥನಾಗಿದ್ದನೆಂದರೆ, ಪೋಟೀಫರನು ತನ್ನ ಮನೆಯ ಸಮಸ್ತ ಆಡಳಿತವನು ಯೋಸೇಫನ ಕೈಗೆ ಒಪ್ಪಿಸಿಬಿಟ್ಟಿದ್ದನು. ಆದಾಗ್ಯೂ ಯೋಸೇಫನ ಜೀವಿತದಲ್ಲಿ ಒಂದು ಕಷ್ಟಕರವಾದ ಪರಿಸ್ಥಿತಿ ಎದುರಾಯಿತು. ಅದರ ವಿವರಣೆ ಇಲ್ಲಿದೆ.

ಆದಿಕಾಂಡ 39:1-13

**1ಯೋಸೇಫನನ್ನು ತೆಗೆದುಕೊಂಡು ಹೋದ ಇಷ್ಮಾಯೇಲ್ಯರು ಐಗುಪ್ತ ದೇಶಕ್ಕೆ ಸೇರಿದಾಗ ಒಬ್ಬ
ಐಗುಪ್ತದವನು ಅವನನ್ನು ಅವರಿಂದ ಕ್ರಯಕ್ಕೆ ತೆಗೆದುಕೊಂಡನು; ಇವನು ಯಾರೆಂದರೆ ಫರೋಹನ
ಉದ್ಯೋಗಸ್ಥನೂ ಮೈಗಾವಲಿನವರ ದಳವಾಯಿಯೂ ಆಗಿದ್ದ ಪೋಟೀಫರನು 2ಯೆಹೋವನು
ಯೋಸೇಫನ ಸಂಗಡ ಇದ್ದದರಿಂದ ಅವನು ಏಳಿಗೆಯಾಗಿ ಐಗುಪ್ತ್ಯನಾದ ತನ್ನ ಧಣಿಯ ಮನೆಯೊಳಗೆ
ಸೇವಕನಾದನು. 3ಯೆಹೋವನು ಯೋಸೇಫನ ಸಂಗಡವಿದ್ದು ಅವನು ಮಾಡುವ ಕೆಲಸವನ್ನೇಲ್ಲಾ
ಸಫಲವಾಗುವಂತೆ ಮಾಡುತ್ತಾನೆಂದು ಅವನ ದಣಿಯು ತಿಳಿದು 4ಅವನ ಮೇಲೆ ದಯೆ ಇಟ್ಟು ಅವನನ್ನು
ಸ್ವಂತ ಸೇವಕನನ್ನಾಗಿ ನೇಮಿಸಿಕೊಂಡನು. ಇದಲ್ಲದೆ ಆ ದಣಿಯು ಅವನಿಗೆ ತನ್ನ ಮನೆಯಲ್ಲಿ
ಪಾರುಪತ್ಯವನ್ನು ಕೊಟ್ಟು ತನ್ನ ಆಸ್ತಿಯನ್ನೆಲ್ಲಾ ಅವನ ವಶಕ್ಕೆ ಒಪ್ಪಿಸಿದನು. 5ಅವನು ಯೋಸೇಫನನ್ನು
ತನ್ನ ಮನೆಯ ಮೇಲೆಯೂ ಆಸ್ತಿಯ ಮೇಲೆಯೂ ಅಧ್ಯಕ್ಷನಾಗಿ ಇಟ್ಟಂದಿನಿಂದ ಯೆಹೋವನು
ಯೋಸೇಫನ ನಿಮಿತ್ತವಾಗಿ ಆ ಐಗುಪ್ತ್ಯನ ಮನೆಯನ್ನು ಅಭಿವೃದ್ಧಿಗೆ ತಂದನು ಮನೆಯಲ್ಲಾಗಲಿ
ಹೊಲದಲ್ಲಾಗಲಿ ಅವನಿಗಿದ್ದ ಎಲ್ಲದರ ಮೇಲೆ ಯೆಹೋವನ ಆಶೀರ್ವಾದವುಂಟಾಯಿತು. 6ಅವನು**

**ತನ್ನ ಆಸ್ತಿಯನ್ನೆಲ್ಲಾ ಯೋಸೇಫನ ವಶಕ್ಕೆ ಒಪ್ಪಿಸಿದನು. ಇವನು ತನ್ನ ಬಳಿಯಲ್ಲೇ ಇದ್ದದರಿಂದ ತಾನು ತಿನ್ನುವ ಆಹಾರ ಒಂದನ್ನೇ ಹೊರತು ಬೇರೆ ಯಾವುದನ್ನೂ ಚಿಂತಿಸಲಿಲ್ಲ ಇದಲ್ಲದೆ ಯೋಸೇಫನು ರೂಪದಲ್ಲಿಯೂ ಮುಖಭಾವದಲ್ಲಿಯೂ ಸುಂದರನಾಗಿದ್ದನು. [7]ಹೀಗಿರುವಲ್ಲಿ ಅವನ ದಣಿಯ ಹೆಂಡತಿಯು ಅವನ ಮೇಲೆ ಕಣ್ಣುಹಾಕಿ ತನ್ನೊಡನೆ ಸಂಗಮಕ್ಕೆ ಕರೆದಳು . [8]ಆದರೆ ಅವನು ಒಪ್ಪದೇ ನನ್ನ ದಣಿಯು ತನ್ನ ಆಸ್ತಿಯನ್ನೆಲ್ಲಾ ನನ್ನ ವಶಕ್ಕೆ ಒಪ್ಪಿಸಿ ನಾನು ಇರುವುದರಿಂದ ಮನೆಯೊಳಗೆ ನಡೆಯುವ ಯಾವ ಕೆಲಸವನ್ನೂ ಚಿಂತಿಸದೇ ಇದ್ದಾನೆ; [9]ಈ ಮನೆಯಲ್ಲಿ ಅವನೂ ನನಗಿಂತ ದೊಡ್ಡವನಲ್ಲ; ನೀನು ಅವನ ಧರ್ಮಪತ್ನಿಯಾದದರಿಂದ ನಿನ್ನನ್ನು ಮಾತ್ರ ನನಗೆ ಅಧೀನ ಮಾಡಲಿಲ್ಲ; ಹೀಗಿರುವಲ್ಲಿ ನಾನು ಇಂಥಾ ಮಹಾ ದುಷ್ಕೃತ್ಯವನ್ನು ನಡಿಸಿ ದೇವರಿಗೆ ವಿರುದ್ಧವಾಗಿ ಹೇಗೆ ಪಾಪಮಾಡಲಿ ಎಂದು ತನ್ನ ಧಣಿಯ ಹೆಂಡತಿಗೆ ಉತ್ತರ ಕೊಟ್ಟನು. [10]ಆಕೆ ಯೋಸೇಫನ ಸಂಗಡ ಪ್ರತಿದಿನವೂ ಈ ಮಾತನ್ನು ಆಡಿದಾಗ್ಯೂ ಅವನು ಅದಕ್ಕೆ ಕಿವಿಗೊಡದೆ ಆಕೆಯಲ್ಲಿ ಸಂಗಮ ಮಾಡುವದಕ್ಕಾಗಲಿ ಆಕೆಯ ಬಳಿಯಲ್ಲಿರುವದಕ್ಕಾಗಲಿ ಒಪ್ಪಿಕೊಳ್ಳಲೇ ಇಲ್ಲ. [11]ಹೀಗಿರಲು ಒಂದು ದಿನ ಅವನು ತನ್ನ ಕೆಲಸದ ಮೇಲೆ ಮನೆಗೆ ಬಂದಾಗ ಮನೆಯವರು ಯಾರೂ ಒಳಗೆ ಇಲ್ಲದಿರುವಲ್ಲಿ [12]ಆಕೆ ಅವನ ಬಟ್ಟೆಯನ್ನು ಹಿಡಿದುಕೊಂಡು - ನನ್ನ ಸಂಗಮಕ್ಕೆ ಬಾ ಅನ್ನಲು [13]ಅವನು ತನ್ನ ಬಟ್ಟೆಯನ್ನು ಆಕೆಯ ಕೈಯಲ್ಲೇ ಬಿಟ್ಟು ತಪ್ಪಿಸಿಕೊಂಡು ಓಡಿಹೋದನು. ಅವನು ತನ್ನ ಬಟ್ಟೆಯನ್ನು ಆಕೆಯ ಕೈಯಲ್ಲೇ ಬಿಟ್ಟು ತಪ್ಪಿಸಿಕೊಂಡು ಹೋದನಲ್ಲಾ ಎಂದು ಆಕೆ ನೋಡಿ.**

''ಇಲ್ಲಾ'' ಎಂಬುದಾಗಿ ಹೇಳಲು ಬಲವು, ಬಲಿಷ್ಟ ನೈತಿಕ ಗುಣದಿಂದ ಬಂದಿರುವುದಾಗಿರುತ್ತದೆ. (ವಚನ 8)

ಯಾರೂ ಸಹ ಗಮಸನಿಸದೇ ಇರುವಾಗಲೂ ನಿಮ್ಮ ಮನಸ್ಸಾಕ್ಷಿಯೂ ದೇವರಿಗೆ ನೀವು ಜವಾಬುದಾರರಾಗಿರುವಂತೆ ಇರಿಸುತ್ತದೆ. (ವಚನ 9)

ಪ್ರಬಲ ಗುಣವು ಎಂದಿಗೂ ದುರ್ಬಲಗೊಳ್ಳುವುದಿಲ್ಲ ಮತ್ತು ಶೋಧನೆಯು ಮುಂದುವರಿದಾಗಲೂ ಬಿದ್ದು ಹೋಗುವುದಿಲ್ಲ. (ವಚನ 10)

ಶೋಧನೆಗಳು ದೃಢವಾಗಿ ನಿಲ್ಲುವ ಸಮಯದಲ್ಲಿ ನೀನು ದೈವಿಕ ಗುಣಗಳನ್ನು ಹೊಂದಿದ್ದರೆ ಮಾತ್ರ ''ಇಲ್ಲ'' ಎಂಬುದಾಗಿ ಹೇಳಲು ಸಾಮರ್ಥ್ಯವುಳ್ಳವನಾಗಿರುತ್ತೀ

## ವೈಯಕ್ತಿಕ ಗುಣನಡತೆಯು ಹೇಗೆ ರೂಪುಗೊಂಡು ಬೆಳೆಯುತ್ತದೆ?

ಯಾವುದು ಒಬ್ಬರ ವೈಯಕ್ತಿಕ ನಡತೆಯನ್ನು ಪ್ರಭಾವಿಸುತ್ತದೆ ಮತ್ತು ರೂಪಿಸುತ್ತದೆ? ಸತ್ಯವೇದದಲ್ಲಿ ಬಲವಾದ ನೈತಿಕ ಗುಣವನ್ನು ಬಾಳದ

ಮತ್ತೊಬ್ಬ ವ್ಯಕ್ತಿಯೆಂದರೆ ದಾನಿಯೇಲನು. ದೇವರು ಅವನಲ್ಲಿ ಅಂಥಹ ನಡತೆಯನ್ನು ಪೋಷಿಸಿದ್ದನ್ನು ತಿಳಿಯಬೇಕಾದರೆ ದಾನಿಯೇಲನ ಜೀವನವನ್ನು ಪರಿಶೀಲಿಸಬೇಕು.

## ದಾನಿಯೇಲನು

ಯೆರೂಸಲೇಮಿನಲ್ಲಿ ಜನಿಸಿರಬಹುದಾದ ಈ ದಾನಿಯೇಲನು ಯೂದಕುಲಕ್ಕೆ ಸೇರಿದವನಾಗಿದ್ದು, ಯೆರೂಸಲೇಮಿನಿಂದ ಬಾಬಿಲೋನ್ ದೇಶಕ್ಕೆ ಸೆರೆ ಒಯ್ಯಲ್ಪಟ್ಟಿದ್ದನು. ಬಾಬಿಲೋನಿನಲ್ಲಿ, ದಾನಿಯೇಲನು ಮತ್ತು ಅವನ ಮೂರು ಸ್ನೇಹಿತರನ್ನು ತರಬೇತಿಗೆಂದು ಆರಿಸುವಾಗ ಅವರು ಹದಿವಯಸ್ಸಿನವರಾಗಿದ್ದರು. ಮುಂದೆ ದಾನಿಯೇಲನು ವಿವಿಧ ಕಾಲಗಳಲ್ಲಿ ಮೂರು ರಾಜ್ಯಗಳ ವಿವಿಧ ಅರಸರುಗಳ ಓಲಗದಲ್ಲಿ ಸೇವೆ ಸಲ್ಲಿಸಿದನು. ಅವರಲ್ಲಿ ನೆಬೂಕದ್ನೆಚ್ಚರನು ಮತ್ತು ಬೇಲ್ಶೆಚ್ಚರನು (ಬಾಬಿಲೋನಿನ ಅರಸರು) ದಾರ್ಯಾವೆಷನು (ಮೇದ್ಯನು) ಮತ್ತು ಅವನ ನಂತರ ಕೋರೆಷನು (ಪಾರಸಿಯ ರಾಜನು) ಆಗಿದ್ದಾರೆ. ದಾನಿಯೇಲನ ಜೀವಿತವು ಈ ಪ್ರಬಲವಾದ ಅರಸರುಗಳನ್ನು ಮುಟ್ಟಿತಲ್ಲದೆ. ಇಬ್ರಿಯರ ದೇವರೇ ಸತ್ಯದೇವರಾಗಿದ್ದಾನೆ ಎನ್ನುವ ಮಾತನ್ನು ಅವರು ಒಪ್ಪಿಕೊಳ್ಳುವಂತೆ ಮಾಡಿತು.

ಅವನು ತನ್ನ ಗಾಢನಂಬಿಕೆಗೆ ಅಂಟಿಕೊಂಡಿರಲು ಬಹಳ ಚಿಕ್ಕವಯಸ್ಸಿನಿಂದಲೇ ದಾನಿಯೇಲನಲ್ಲಿ ಸನ್ನಡತೆಯು ರೂಪುಗೊಳ್ಳುತಾ ಬಂದಿತು (ದಾನಿಯೇಲನು 1:8)

**ದಾನಿಯೇಲನು 1:8**
**'ದಾನಿಯೇಲನು ತಾನು ರಾಜನ ಭೋಜನ ಪದಾರ್ಥಗಲನ್ನು ತಿಂದು ರಾಜನು ಕುಡಿಯುವ ದ್ರಾಕ್ಷಾರಸವನು ಕುಡಿದು ತನ್ನನ್ನು ಅಶುದ್ಧಮಾಡಿಕೊಳ್ಳಬಾರದೆಮ್ದು ನಿಶ್ಚಯಿಸಿ ಕಂಚುಕಿಯರ ಅಧ್ಯಕ್ಷನಿಗೆ – ನಾನು ಅಶುದ್ಧನಾಗಲಾರೆ, ಕ್ಷಮಿಸು ಎಂದು ವಿಜ್ಞಾಪಿಸಿದಾಗ...'**

ದೈವೀಕ ಗುಣವನ್ನು ಬೆಳೆಸಿಕೊಳ್ಳಲು ಪ್ರಾರಂಭಿಸುವುದನ್ನು ಎಂದಿಗೂ ತಡಮಾಡಬಾರದು.

- ಚಿಕ್ಕ ವಯಸ್ಸಿನಲ್ಲೇ ಪ್ರಬುದ್ಧಗೊಳ್ಳಲು ಪ್ರಾರಂಭಿಸಿದನು.
- ಒಬ್ಬ ಮನುಷ್ಯನ ಜೊತೆಗಾರರು, ಅವನ ಗುಣ ನಡತೆಯ ಮೇಲೆ ಪ್ರಭಾವ ಬೀರುತ್ತಾರೆ.

ದಾನಿಯೇಲನು 2:17

**[17]ಬಳಿಕ ದಾನಿಯೇಲನು ತನ್ನ ಮನೆಗೆ ಹೋಗಿ ಹನನ್ಯ, ಮಿಶಾಯೇಲ, ಅಜರ್ಯ ಎಂಬ ತನ್ನ ಸ್ನೇಹಿತರಿಗೆ ಆ ಸಮಾಚಾರವನ್ನು ತಿಳಿಸಿದನು.**

1 ಕೊರಿಂಥದವರಿಗೆ 15:33

**[33]ಮೋಸಹೋಗಬೇಡಿರಿ; ದುಸ್ಸಹವಾಸವು ಸದಾಚಾರವನ್ನು ಕೆಡಿಸುತ್ತದೆ.**

- ಬಲಿಷ್ಟ ನೈತಿಕ ಗುಣನಡತೆಯು ಶಿಸ್ತು ಮತ್ತು ಅಭ್ಯಾಸಗಳ ಮೂಲಕ ದೀರ್ಘಾವಧಿಯಲ್ಲಿ ಕಟ್ಟಲ್ಪಡುತ್ತದೆ.

ದಾನಿಯೇಲನು 6:10

**[10]ಶಾಸನಕ್ಕೆ ರುಜುವಾದದ್ದು ದಾನಿಯೇಲನು ತಿಳಿದಾಗ ಅವನು ತನ್ನ ಮನೆಗೆ ಹೋಗಿ ಯೆರೂಸಲೇಮಿನ ಕಡೆಗೆ ಕದವಿಲ್ಲದ ಕಿಟಕಿಗಳುಳ್ಳ ತನ್ನ ಮಹಡಿಯ ಕೋಣೆಯಲ್ಲಿ ಯಥಾಪ್ರಕಾರ ದಿನಕ್ಕೆ ಮೂರಾವರ್ತಿ ಮೊಣಕಾಲೂರಿ ತನ್ನ ದೇವರಿಗೆ ಪ್ರಾರ್ಥನೆ ಮಾಡಿ ಸ್ತೋತ್ರಸಲ್ಲಿಸಿದನು.**

- ಸುಭದ್ರ ನೈತಿಕ ಗುಣನಡತೆಯು ಸಂಕಟಗಳ ಮೂಲಕ ಬಲಗೊಳ್ಳುತ್ತದೆ.

ರೋಮಾಪುರದವರಿಗೆ 5:3.4

**[3]ಇದು ಮಾತ್ರವಲ್ಲದೆ ನಮಗೆ ಉಂಟಾಗುವ ಉಪದ್ರವಗಳಲ್ಲಿಯೂ ಉಲ್ಲಾಸವಾಗಿದ್ದೇವೆ. ಯಾಕೆಂದರೆ ಉಪದ್ರವದಿಂದ ತಾಳ್ಮೆ ಹುಟ್ಟುತ್ತದೆ. [4]ತಾಳ್ಮೆಯಿಂದ ಅನುಭವಸಿದ್ಧಿ ಹುಟ್ಟುತ್ತದೆ. ಅನುಭವದಿಂದ ನಿರೀಕ್ಷಣ ಹುಟ್ಟುತ್ತದೆಂದು ಬಲ್ಲೆವು.**

## ಗುಣನಡತೆಯ ಏಕೆ ಪ್ರಾಮುಖ್ಯ?

*(1) ದೈವಿಕ ಗುಣನಡತೆಯು ಸಭಾಸೇವೆಗೆ ಪೂರ್ವಾಗತ್ಯವಸ್ತುವಾಗಿದೆ.*

ಅಪೊಸ್ತಲನಾದ ಅಪೌಲನು ಸಭಾ ಹಿರಿಯರನ್ನು ನೇಮಿಸುವ ಕುರಿತು ತಿಮೊಥೆ ಮತ್ತು ತೀತನಿಗೆ ಪತ್ರ ಬರೆಯುವಾಗ ಅವರಲ್ಲಿರಬೇಕಾದ ಅರ್ಹತೆಯ ಪಟ್ಟಿಯಲ್ಲಿ ವರಗಳಗಿಂತಲೂ ಮಿಗಿಲಾಗಿ ಗುಣನಡತೆಗೆ ಆದ್ಯತೆ ನೀಡಿದನು.

ಅಭಿಷೇಕ ಮತ್ತು ವರಗಳು ಅವಶ್ಯವೇ, ಆದರೆ ಅವುಗಳಿಗೇ ಬೆಲೆಕೊಟ್ಟು ಗುಣ ನಡತೆಯನ್ನು ಕಡೆಗಣಿಸಬಾರದು.

1 ತಿಮೊಥೆಯನಿಗೆ 3:1-15

[1]ಸಭಾಧ್ಯಕ್ಷನ ಉದ್ಯೋಗವನ್ನು ಪಡಕೊಳ್ಳಬೇಕೆಂದಿರುವವನು ಒಳ್ಳೇ ಕೆಲಸವನ್ನು
ಅಪೇಕ್ಷಿಸುವವನಾಗಿದ್ದಾನೆಂಬ ಮಾತು ನಂಬತಕ್ಕದಾಗಿದೆ [2]ಸಭಾಧ್ಯಕ್ಷನು
ದೋಷಾರೋಪಣೆಯಿಲ್ಲದವನೂ ಜಿತೇಂದ್ರಿಯನೂ ಮಾನಸ್ಥನೂ ಅತಿಥಿಸತ್ಕಾರ ಮಾಡುವವನೂ
ಬೋಧಿಸುವದರಲ್ಲಿ ಪ್ರವೀಣನೂ ಆಗಿರಬೇಕು [3]ಅವನು ಕುಡಿದು ಜಗಳವಾಡುವವನೂ
ಹೊಡೆದಾಡುವವನೂ ಆಗಿರಬಾರದು; ಸಾತ್ವಿಕನೂ ಕುತರ್ಕಮಾಡದವನೂ ದ್ರವ್ಯಾಶೆಯಿಲ್ಲದವನೂ
ಆಗಿರಬೇಕು. [4]ಪೂರ್ಣಗೌರವದಿಂದ ತನ್ನ ಮಕ್ಕಳನ್ನು ಅಧೀನದಲ್ಲಿಟ್ಟುಕೊಂಡು[5] ಸ್ವಂತ
ಮನೆಯವರನ್ನು ಆಳುವುದಕ್ಕೆ ತಿಳಿಯದವನು ದೇವರ ಸಭೆಯನ್ನು ಹೇಗೆ ಪರಾಂಬರಿಸುವನು
? [6]ಅವನು ಹೊಸದಾಗಿ ಸಭೆಯಲ್ಲಿ ಸೇರಿದವನಾಗಿರಬಾರದು. ಅಂಥವನಾದರೆ ಉಬ್ಬಿಕೊಂಡು
ಸೈತಾನನಿಗೆ ಪ್ರಾಪ್ತವಾದ ಶಿಕ್ಷಾವಿಧಿಗೆ ಒಳಗಾದಾನು. [7]ಇದಲ್ಲದೆ ಅವನು ಹೊರಗಣದವರಿಂದ
ಒಳ್ಳೆಯವನೆನಿಸಿಕೊಂಡಿರಬೇಕು; ಇಲ್ಲದಿದ್ದರೆ ನಿಂದೆಗೆ ಗುರಿಯಾಗುವನು ಮತ್ತು ಸೈತಾನನ
ಉರ್ಲಿನೊಳಗೆ ಸಿಕ್ಕಿಬಿದ್ದಾನು. [8]ಅದೇ ರೀತಿಯಾಗಿ ಸಭಾಸೇವಕರು ಗೌರವವುಳ್ಳವರಾಗಿರಬೇಕು,
ಅವರು ಎರಡು ಮಾತಿನವರೂ [9]ಮದ್ಯನಿರತರೂ ನೀಚಲಾಭವನ್ನು ಅಪೇಕ್ಷಿಸುವವರೂ ಆಗಿರದೆ
ನಂಬಿದವರಿಗೆ ಪ್ರಕಟವಾಗಿರುವ ಸತ್ಯಾರ್ಥವನ್ನು ಶುದ್ಧಮನಸಾಕ್ಷಿಯಿಂದ ಕೈಕೊಳ್ಳುವವರಾಗಿರಬೇಕು
ಇದಲ್ಲದೆ [10]ಅವರು ಮೊದಲು ಪರೀಕ್ಷಿಸಲ್ಪಡಬೇಕು: ತರುವಾಯ ಅವರ ಮೇಲೆ ಯಾರೂ ತಪ್ಪು
ಹೊರಿಸದಿದ್ದರೆ ಸಭಾಸೇವಕರ ಉದ್ಯೋಗವನ್ನು ನಡಿಸಲಿ. ಹಾಗೆಯೇ [11]ಸಭಾಸೇವಕಿಯರಾದ
ಸ್ತ್ರೀಯರೂ ಗೌರವವುಳ್ಳವರಾಗಿರಬೇಕು; ಚಾಡಿಹೇಳುವವರಾಗಿರದೆ ಮದ್ಯಾಸಕ್ತಿಯಿಲ್ಲದವರಾಗಿಯೂ
ಎಲ್ಲಾ ವಿಷಯಗಳಲ್ಲಿ ನಂಬಿಗಸ್ತರಾಗಿಯೂ ಇರಬೇಕು.[12]ಸಭಾಸೇವಕರು ಏಕಪತ್ನಿಯುಳ್ಳವರೂ
ತಮ್ಮ ಮಕ್ಕಳನ್ನೂ ಮನೆಯವರನ್ನೂ ಚೆನ್ನಾಗಿ ಆಳುವವರೂ ಆಗಿರಬೇಕು [13]ಸಭಾಸೇವಕರಾಗಿ
ಚೆನ್ನಾಗಿ ಕೆಲಸ ಮಾಡಿದವರು ತಮಗೆ ಒಳ್ಳೇ ಪದವಿಯನ್ನೂ ಕ್ರಿಸ್ತಯೇಸುವಿನಲ್ಲಿರುವ ನಂಬಿಕೆಯ
ಸಂಬಂಧವಾಗಿ ಬಹು ಧೈರ್ಯವನ್ನೂ ಸಂಪಾದಿಸಿಕೊಳ್ಳುತ್ತಾರೆ. [14]ಬೇಗನೆ ನಿನ್ನ ಬಳಿಗೆ ಬರುವೆನೆಂದು
ನನಗೆ ನಿರೀಕ್ಷೆಯುಂಟು: [15]ಆದರೆ ಒಂದು ವೇಳೆ ನಾನು ತಡ ಮಾಡಿದರೂ ದೇವರ ಮನೆಯಲ್ಲಿ ಅಂದರೆ
ಜೀವಸ್ವರೂಪನಾದ ದೇವರ ಸಭೆಯಲ್ಲಿ ನಡೆದುಕೊಳ್ಳಬೇಕಾದ ರೀತಿಯು ನಿನಗೆ ಗೊತ್ತಾಗಬೇಕೆಂದು
ಈ ಸಂಗತಿಗಳನ್ನು ಬರೆದಿದ್ದೇನೆ. ಸಭೆಯು ಸತ್ಯಕ್ಕೆ ಸ್ತಂಭವೂ ಆಧಾರವೂ ಆಗಿದೆ.

ತೀತನು 1:5-9

[5]ನೀನು ಕ್ರೇತ ದ್ವೀಪದಲ್ಲಿ ಇನ್ನೂ ಕ್ರಮಕ್ಕೆ ಬಾರದಿರುವ ಕಾರ್ಯಗಳನ್ನು ಕ್ರಮಪಡಿಸಿ ಪಟ್ಟಣ
ಪಟ್ಟಣಗಳಲ್ಲೂ ಸಭೆಯ ಹಿರಿಯರನ್ನು ನೇಮಿಸಬೇಕೆಂದು ನಾನು ನಿನಗೆ ಅಪ್ಪಣೆಕೊಟ್ಟು ನಿನ್ನನ್ನು

**ಅಲ್ಲೇ ಬಿಟ್ಟು ಬಂದೆನಲ್ಲಾ [6]ಸಭೆಯ ಹಿರಿಯನು ನಿಂದಾರಹಿತನೂ ಏಕಪತ್ನಿಯುಳ್ಳವನೂ ಆಗಿರಬೇಕು. ಅವನ ಮಕ್ಕಳು ಕರ್ತನನ್ನು ನಂಬಿದವರಾಗಿರಬೇಕು. ಅವರು ದುರ್ಮಾರ್ಗಸ್ಥರೆನಿಸಿಕೊಂಡವರಾಗಲಿ ಅಧಿಕಾರಕ್ಕೆ ಒಳಗಾಗದವರಾಗಲಿ ಆಗಿರಬಾರದು. [7]ಯಾಕೆಂದರೆ ಸಭಾಧ್ಯಕ್ಷನು ದೇವರ ಮನೆವಾರ್ತೆಯವನಾಗಿರುವದರಿಂದ ನಿಂದಾರಹಿತನಾಗಿರಬೇಕು. ಅವನು ಸ್ವೇಚ್ಛಾಪರನಾದರೂ ಮುಂಗೋಪಿಯಾದರೂ ಕುಡಿದು ಜಗಳಮಾಡುವವನಾದರೂ ಹೊಡೆದಾಡುವವನಾದರೂ [8]ನೀಚಲಾಭವನ್ನು ಅಪೇಕ್ಷಿಸುವವನಾದರೂ ಆಗಿರದೆ ಅತಿಥಿ ಸತ್ಕಾರ ಮಾಡುವವನೂ, ಒಳ್ಳೇದನ್ನು ಪ್ರೀತಿಸುವವನೂ, ಸ್ವಸ್ಥಚಿತ್ತನೂ, ನ್ಯಾಯವಂತನೂ, ದೇವಭಕ್ತನೂ, [9]ಜಿತೇಂದ್ರಿಯನೂ ಆಗಿದ್ದು ತಾನು ಸ್ವಸ್ಥಬೋಧನೆಯಿಂದ ಜನರನನ್ನು ಎಚ್ಚರಿಸುವದಕ್ಕೂ, ಎದುರಿಸುವವರ ಬಾಯಿಕಟ್ಟುವದಕ್ಕೂ ಶಕ್ತನಾಗಿರುವಂತೆ ಕ್ರಿಸ್ತಬೋಧಾನುಸಾರವಾದ ನಂಬತಕ್ಕ ವಾಕ್ಯವನ್ನು ದೃಢವಾಗಿ ಹಿಡಿದುಕೊಂಡವನಾಗಿರಬೇಕು.**

## 1 ಪ್ರೇತ್ರನು 5:1-4

**[1]ಸಭೆಯ ಹಿರಿಯರೇ, ಜೊತೆಹಿರಿಯವನಾದ ನಾನು ಕ್ರಿಸ್ತನ ಬಾಧೆಗಳನ್ನು ಕಣ್ಣಾರೆ ಕಂಡವನೂ ಇನ್ನು ಮುಂದೆ ಪ್ರತ್ಯಕ್ಷವಾಗುವ ಪ್ರಭಾವದಲ್ಲಿ ಪಾಲುಗಾರನೂ ಆಗಿದ್ದು ನಿಮ್ಮನ್ನು ಎಚ್ಚರಿಸಿ ಹೇಳುವದೇನೆಂದರೆ [2]ನಿಮ್ಮಲಿರುವ ದೇವರ ಮಂದೆಯನ್ನು ಕಾಯಿರಿ ಬಲಾತ್ಕಾರದಿಂದಲ್ಲ ದೇವರ ಚಿತ್ತದ ಪ್ರಕಾರ ಇಷ್ಟಪೂರ್ವಕವಾಗಿಯೂ ನೀಚವಾದ ದ್ರವ್ಯಾಸೆಯಿಂದಲ್ಲ ಸಿದ್ಧಮನಸ್ಸಿನಿಂದಲೂ ಮೇಲ್ವಿಚಾರಣೆ ಮಾಡಿರಿ [3]ದೇವರು ನಿಮ್ಮ ವಶದಲ್ಲಿಟ್ಟಿರುವ ಸಭೆಗಳ ಮೇಲೆ ದೊರೆತನ ಮಾಡುವವರಂತೆ ನಡೆಯದೆ ಮಂದೆಗೆ ಮಾದರಿಯಾಗಿಯೇ ನಡೆದುಕೊಳ್ಳಿರಿ [4] ಹಿರೀ ಕುರುಬನು ಪ್ರತ್ಯಕ್ಷನಾಗುವಾಗ ನೀವು ದೇವ ಪ್ರಭಾವವೆಂಬ ಎಂದಿಗೂ ಬಾಡದ ಜಯಮಾಲೆಯನ್ನು ಹೊಂದುವಿರಿ [5]ಯೌವನಸ್ಥರೇ, ಅದೇ ರೀತಿಯಾಗಿ ಹಿರಿಯರಿಗೆ ಅಧೀನರಾಗಿರಿ.**

ಸಭಾ ಸೇವೆಯ ತಳಹದಿ -ನಿಮ್ಮ ಸಭಾಸೇವೆಯ ನಿಜ ಸಂಪನ್ನತೆಯು, ನಿಮ್ಮ ಅಭಿಷೇಕವಲ್ಲಾ ಆದರೆ ಅದು ನಿಮ್ಮ ಗುಣನಡತೆಯಾಗಿದೆ.

## ಮತ್ತಾಯ 9:17

**[17]ಇದಲ್ಲದೆ ಹಳೆಯ ಬುದ್ದಲಿಗಳಲ್ಲಿ ಹೊಸ ದ್ರಾಕ್ಷಾರಸವನ್ನು ಹಾಕಿಡುವುದಿಲ್ಲ; ಇಟ್ಟರೆ ಬುದ್ದಲಿಗಳು ಒಡೆದು ದ್ರಾಕ್ಷಾರಸವು ಚೆಲ್ಲಿ ಹೋಗುವದು. ಬುದ್ದಲಿಗಳು ಕೆಟ್ಟುಹೋಗುವವು; ಆದರೆ ಹೊಸ ದ್ರಾಕ್ಷಾರಸವನ್ನು ಹೊಸ ಬುದ್ದಲಿಗಳಲ್ಲಿ ಹಾಕಿಡುತ್ತಾರೆ. ಆಗ ಎರಡೂ ಉಳಿಯುತ್ತವೆ ಎಂದು ಹೇಳಿದನು.**

ನಿಮ್ಮ ಅಭಿಷೇಕವು ದ್ರಾಕ್ಷಾರಸ: ನಿಮ್ಮ ಗುಣನಡತೆಯು ಬುದ್ದಲಿ ಬುದ್ದಲಿಯು ದುರ್ಬಲವಾಗಿದ್ದರೆ, ಮತ್ತು ಒಡೆದು ಹೋದರೆ (ಅಥವಾ ಸೋರಿಕೆ ಉಂಟಾದರೆ) ಅಭಿಷೇಕವು ವ್ಯರ್ಥವಾಗುತ್ತದೆ.

ನಿಮ್ಮ ಗುಣನಡತೆಯು ನಿಮ್ಮನ್ನು ಇರಿಸಲಾಗದ ಇರುವ ಸ್ಥಳಕ್ಕೆ ನಿಮ್ಮ ವರವು ನಿಮ್ಮನ್ನು ತೆಗೆದುಕೊಂಡು ಹೋಗಬಹುದು.

*(2) ನಿಮ್ಮ ನೈತಿಕ ಗುಣನಡತೆಯು ನಿಮ್ಮ ನೈಜ ಸಾಮರ್ಥ್ಯವಾಗಿದೆ.*

ಒಬ್ಬ ಮನುಷ್ಯನ ದೃಢ ಸಾಮರ್ಥ್ಯವು, ಅವನ ನೈತಿಕ ಗುಣನಡತೆಯೇ ಆಗಿದೆ.

ನಿಮ್ಮ ಆಂತರಿಕ ಬಲವು - ನಿಮ್ಮ ನೈತಿಕ ನಡತೆಯು ಶೋಧನೆಗಳೆಲ್ಲವನ್ನು ದೋಷಾರೋಪಣೆಗಳನ್ನು ಹಿಂಸೆಗಳನ್ನು ಭ್ರಷ್ಟತೆಗಳನ್ನು ಸುಳ್ಳು ಮತ್ತು ಇತರ ಒತ್ತಡಗಳನ್ನು ಎದುರಿಸಿ ನಿಲ್ಲುವ ನಿಮ್ಮ ಯೋಗ್ಯತೆಯನ್ನು ನಿರ್ಧರಿಸುತ್ತದೆ.

*(3) ನಿಮ್ಮ ಗುಣನಡತೆಯು ನೀವು ಎಂದಾದರೂ ಬೋಧಿಸಬಹುದಾದ ಅತ್ಯಂತ ಪ್ರಮುಖ ಸಂದೇಶವನ್ನು ರೂಪಿಸುವುದು*

1 ಥೆಸಲೋನಿಕದವರಿಗೆ 1:5,6

**5ನಾವು ಸಾರಿದ ಸುವಾರ್ತೆಯು ನಿಮ್ಮಲ್ಲಿ ಬರೀ ಮಾತಾಗಿ ಬಾರದೆ ಶಕ್ತಿಯೊಡನೆಯೂ ಪವಿತ್ರಾತ್ಮದೊಡನೆಯೂ ಬಹು ನಿಶ್ಚಯದೊಡನೆಯೂ ಬಂತೆಂಬದನ್ನೂ ಬಲ್ಲೆವು. ನಾವು ನಿಮ್ಮಲ್ಲಿದ್ದು ನಿಮಗೋಸ್ಕರ ಎಂಥವರಾಗಿ ವರ್ತಿಸಿದೆವೆಂಬದನ್ನು ನೀವೂ ಬಲ್ಲಿರಿ. 6ಇದಲ್ಲದೆ ನೀವು ಬಹಳ ಹಿಂಸೆಯನ್ನು ಅನುಭವಿಸಬೇಕಾಗಿದ್ದರೂ ಪವಿತ್ರಾತ್ಮನಿಂದುಂಟಾದ ಆನಂದದೊಡನೆ ದೇವರ ವಾಕ್ಯವನ್ನು ಅಂಗೀಕರಿಸಿ ನಮ್ಮನ್ನೂ ಕರ್ತನಾದ ಯೇಸುವನ್ನೂ ಅನುಸರಿಸುವವರಾದಿರಿ.**

### 1 ಥೆಸಲೋನಿಕದವರಿಗೆ 2:1-10

**1ಸಹೋದರರೇ, ನಾವು ಸುಮ್ಮಸುಮ್ಮಗೆ ನಿಮ್ಮಲ್ಲಿಗೆ ಬರಲಿಲ್ಲವೆಂಬುದನ್ನೂ ನಿಮಗೆ ತಿಳಿದಿರುವ
2ಪ್ರಕಾರ ನಿಮಗೆ ಫಿಲಿಪ್ಪಿ ಪಟ್ಟಣದಲ್ಲಿ ಹಿಂಸೆಯೂ ಅವಮಾನವೂ ಮೊದಲು ಸಂಭವಿಸಿದರೂ ನಾವು
ನಮ್ಮ ದೇವರ ಮೂಲಕ ಧೈರ್ಯಗೊಂಡು ಬಹು ವಿರೋಧವನ್ನು ಅನುಭವಿಸುವವರಾಗಿ ನಿಮಗೆ
ದೇವರ ಸುವಾರ್ತೆಯನ್ನು ತಿಳಿಸಿದೆವೆಂಬದನ್ನೂ ನೀವೇ ಬಲ್ಲಿರಿ 3ಯಾಕೆಂದರೆ ನಮ್ಮ ಬೋಧನೆಯು
ಅಬದ್ಧವಲ್ಲ, ಅಶುದ್ಧವಲ್ಲ, ಮೋಸವಲ್ಲ: ದೇವರು ನಮ್ಮನ್ನು 4ಯೋಗ್ಯರೆಂದೆಣಿಸಿ ಸುವಾರ್ತೆಯನ್ನು**

**ನಮ್ಮ ವಶಕ್ಕೆ ಒಪ್ಪಿಸಿದನಲ್ಲಾ ಎಂದು ಯೋಚಿಸುವವರಾಗಿ ಮನುಷ್ಯರನ್ನು ಮೆಚ್ಚಿಸಬೇಕೆನ್ನದೆ ಹೃದಯವನ್ನು ಪರಿಶೋಧಿಸುವ ದೇವರನ್ನೇ ಮೆಚ್ಚಿಸಬೇಕೆಂದು ಮಾತಾಡುತ್ತೇವೆ. [5]ನಿಮಗೆ ತಿಳಿದಿರುವ ಪ್ರಕಾರ ನಾವು ಎಂದಿಗೂ ಮುಖಸ್ತುತಿಯನ್ನು ಮಾಡುವವರಾಗಿ ಕಾಣಬಂದಿಲ್ಲ ಮತ್ತು ದ್ರವ್ಯಾಶೆಯನ್ನು [16]ಮರೆಮಾಡುವದಕ್ಕಾಗಿ ವೇಷವನ್ನು ಹಾಕಿಕೊಂಡವರಾಗಿಲ್ಲ; ಇದಕ್ಕೆ ದೇವರೇ ಸಾಕ್ಷಿ. ಇದಲ್ಲದೆ ನಾವು ಕ್ರಿಸ್ತನ ಅಪೊಸ್ತಲರಾಗಿರುವದರಿಂದ ನಮಗೆ ಗೌರವವನ್ನು ಕೊಡಬೇಕೆಂದು ಹೇಳಬಹುದಾಗಿದ್ದರೂ ಮನುಷ್ಯರಿಂದ ಬರುವ ಮಾನವನ್ನು ನಿಮ್ಮಿಂದಾಗಲಿ ಇತರರಿಂದಾಗಲಿ ಹೊಂದಲಪೇಕ್ಷಿಸುವವರಾಗಿಲ್ಲ [7]ತಾಯಿಯು ತನ್ನ ಮಕ್ಕಳನ್ನು ಪೋಷಿಸುತ್ತಾಳೋ ಎಂಬಂತೆ ನಾವು ನಿಮ್ಮ ಮಧ್ಯದಲ್ಲಿ ವಾತ್ಸಲ್ಯದಿಂದ ನಡೆದುಕೊಂಡಿದ್ದೆವು. [8]ನೀವು ನಮಗೆ ಅತಿ ಪ್ರಿಯರಾದ ಕಾರಣ ನಾವು ನಿಮ್ಮಲ್ಲಿ ಮಮತೆಯುಳ್ಳವರಾಗಿ ದೇವರ ಸುವಾರ್ತೆಯನ್ನು ಹೇಳುವುದಕ್ಕೆ ಮಾತ್ರವಲ್ಲದೆ ನಿಮಗೋಸ್ಕರ ಪ್ರಾಣವನ್ನೇ ಕೊಡುವುದಕ್ಕೆ ಸಂತೋಷಿಸುವವರಾದೆವು [9]ಸಹೋದರರೇ, ನಾವು ನಿಮ್ಮಲ್ಲಿ ಯಾರ ಮೇಲೆಯೂ ಭಾರ ಹಾಕಬಾರದೆಂದು ಹಗಲಿರುಳು ದುಡಿದು ಜೀವನ ಮಾಡಿಕೊಳ್ಳುತ್ತಾ ದೇವರ ಸುವಾರ್ತೆಯನ್ನು ನಿಮಗೆ ಸಾರಿದೆವು; ಆ ನಮ್ಮ ಕಷ್ಟವೂ ಪ್ರಯಾಸವೂ ನಿಮ್ಮ ನೆನಪಿನಲ್ಲಿರುವುದಷ್ಟೆ [10]ನಂಬುವವರಾದ ನಿಮ್ಮ ವಿಷಯದಲ್ಲಿ ನಾವು ಎಷ್ಟೋ ಶುದ್ಧರಾಗಿಯೂ ನೀತಿವಂತರಾಗಿಯೂ ನಿರ್ದೋಷಿಗಳಾಗಿಯೂ ನಡೆದುಕೊಂಡೆವೆಂಬದಕ್ಕೆ ನೀವು ಸಾಕ್ಷಿಗಳು, ದೇವರೂ ಸಾಕ್ಷಿ.**

ನಿಮ್ಮ ಜೀವನ ಮಾತಾಡುತ್ತದೆ

ನೀವು ಜೀವಿಸುವಂತಹ ಜೀವನ, ನೀವು ಯಾವಾಗಲೂ ಬೋಧಿಸುವ ಪ್ರಮುಖ ಸಂದೇಶವಾಗಿರುತ್ತದೆ.

‘‘ಸಂದೇಶಕ್ಕಿಂತ ಮನುಷ್ಯನು ಶ್ರೇಷ್ಠವಾಗಿದ್ದಾನೆ. ನೀನು ವಿಶ್ವಾಸಾರ್ಹನಾಗಿರುವುದರಿಂದ ನಿನ್ನ ಸಂದೇಶವು ವಿಶ್ವಾಸಾರ್ಹವಾಗಿದೆ. ಒಬ್ಬ ಮನುಷ್ಯನು ಯಾವಾಗ ಸುದೀರ್ಘವಾಗಿ ವಿಶ್ವಾಸಾರ್ಹನಾಗಿಲ್ಲವೋ ಆಗ ಅವನ ಸಂದೇಶವು ಸಂಶಯಾಸ್ಪದವಾಗುತ್ತದೆ. (ಡಾ।। ಎಡ್ ಕೋಲೆ)

*(4) ಗುಣನಡತೆಯು ನಿಮ್ಮ ಬಾಳಿಕೆಯನ್ನು ನಿಶ್ಚಯಿಸುತ್ತದೆ*

‘‘ಕೀರ್ತಿ ಅಥವಾ ಯಶಸ್ಸು ಕ್ಷಣದಲ್ಲಿ ಬರುತ್ತದೆ. ಆದರೆ ನಿಜ ಮಹತ್ತು ಶ್ರೇಷ್ಟತೆಯು ದೀರ್ಘಾಯಷ್ಯದೊಂದಿಗೆ ಬರುತ್ತದೆ’’ (ಡಾ।। ಎಡ್ ಕೋಲೆ)

‘‘ವರುಷಗಳು ಏನೇ ತರಲಿ ಸಾಧನೆಗಳನ್ನು ಜೀವನದಲ್ಲಿ ದೀರ್ಘಕಾಲ ಕಾಪಾಡಿಕೊಂಡು ಬರುವವರು ಶ್ರೇಷ್ಠ ಮನುಷ್ಯರು’’ (ಡಾ।। ಎಡ್ ಕೋಲೆ)

- ವಂಚಕ ದುರಿಚ್ಛೆಗಳಿಂದ ನಮ್ಮ ಜೀವಿತಗಳನ್ನು ಕಾಪಾಡಿಕೊಳ್ಳಬೇಕು. (ಹಣ, ಅನೀತಿ, ಮತ್ತು ಕೀರ್ತಿ)

## ಆತ್ಮೀಕ ಪ್ರೌಢಿಮೆ-ಆತ್ಮೀಕ ವರಗಳಷ್ಟೇ ಪ್ರಾಮುಖ್ಯವಾದದ್ದು

ಆತ್ಮಿಕ ಪ್ರಬುದ್ಧತೆ ಅಂದರೇನು? ಆತ್ಮಿಕವಾಗಿ ಪ್ರೌಢರಾಗಿರಬೇಕೆಂಬುದರ ಅರ್ಥವೇನು? ನಾವು ನಿಜವಾಗಿ ಆತ್ಮಿಕ ಪ್ರೌಢತೆ ಹೊಂದುತ್ತಿದ್ದೇವೋ ಎಂದು ಹೇಗೆ ಮೌಲ್ಯಮಾಪನ ಮಾಡಬಹುದು?

ಹೊಸ ಒಡಂಬಡಿಕೆಯಲ್ಲಿ ಆತ್ಮಿಕ ಪ್ರೌಢತೆಯು ಸನ್ನಿವೇಶಗಳಲ್ಲಿ ಮೂರು ಗ್ರೀಕಪದಗಳು ಹಲವು ಬಾರಿ ಉಪಯೋಗಿಸಲ್ಪಟ್ಟಿವೆ.

(ಗ್ರೀಕ್) teleios ಟೆಲಿಯೋಸ್ ಪೂರ್ಣ - ಸಂಪೂರ್ಣ ವಯಸ್ಸು, ಪ್ರೌಢತೆ, ಪರಿಪೂರ್ಣ ಮನುಷ್ಯ.

ಇದು ವಾಸ್ತವವಾಗಿ ಸಂಪೂರ್ಣ ವಯಸ್ಸು ಅಥವಾ ಬೆಳವಣಿಗೆ ಹೊಂದುವ ವಯಸ್ಕನಾಗಿರುವ ಎಂಬ ಅರ್ಥ ಹೊಂದಿದೆ. ಇದು ಆಗಾಗ್ಗೆ ಪ್ರೌಢ್ಯತೆ ಸಂದರ್ಭಗಳಲ್ಲಿ ಉಪಯೋಗಿಸಲ್ಪಟ್ಟ ಪೂರ್ಣ ವಯಸ್ಸಿನ ವ್ಯಕ್ತಿ ಅಥವಾ ಪರಿಪೂರ್ಣ ಅಥವಾ ಸಮಗ್ರ ಮನುಷ್ಯ. ಇದು ಮಾನಸಿಕ ಮತ್ತು ನೈತಿಕ ಗುಣಗಳೆರಡರಲ್ಲೂ ಪ್ರಗತಿಯನ್ನು ಪ್ರಸ್ತಾಪಿಸುತ್ತದೆ.

(ಗ್ರೀಕ್ ನಲ್ಲಿ) ‘Pleero’ ಪ್ಲೀರೋ ತುಂಬಿಸು, ಪೂರ್ಣವಾಗಿರು, ಹರಡು, ಪ್ರಭಾವಿತಗೊಂಡಿರುವುದು.

ಇದು ‘ಸಂಪೂರ್ಣ’ವಾದುದೆಂಬುದಾಗಿ ಭಾಷಾಂತರಿಸಲ್ಪಟ್ಟಿದೆ ಆದರೆ ವಾಸ್ತವವಾಗಿ ಇದು ತುಂಬಿಸು ಎಂಬ ಅರ್ಥ ಹೊಂದಿದೆ.

(ಗ್ರೀಕ್ ಭಾಷೆಯಲ್ಲಿ) ‘katartizo’ ‘ಕಟಾರ್‌ಟಿಜೋ’ ಸಮಗ್ರವಾಗಿ ಪೂರ್ಣಗೊಳಿಸು, ಸಂಪೂರ್ಣವಾಗಿ ಸಜ್ಜುಗೊಳಿಸುವದಾಗಿದೆ.

# ಆತ್ಮಿಕ ಪ್ರಬುದ್ಧ(ಪ್ರೌಢ)ತೆಯ ಏಳು ಗುಣಲಕ್ಷಣಗಳು

## 1. ಆತ್ಮೀಕ ಪ್ರೌಢಿಮೆಯು ಕ್ರಿಸ್ತನ ಸಾರೂಪ್ಯದಲ್ಲಿ ವೃದ್ಧಿಯಾಗುವುದಾಗಿದೆ

**ಮತ್ತಾಯ 5: 48**

**ಆದದರಿಂದ ಪರಲೋಕದಲ್ಲಿರುವ ನಿಮ್ಮ ತಂದೆಯು ಯಾವ ದೋಷವೂ ಇಲ್ಲದವನಾಗಿರುವಂತೆ ನೀವೂ ದೋಷವಿಲ್ಲದವರಾಗಿರಿ.**

ಯೇಸುವು, ನಾವು ಆತ್ಮೀಕ ಜೀವಿತದಲ್ಲಿ ಪೂರ್ಣ ಪ್ರಮಾಣಕ್ಕೆ ಬೆಳೆದು ನಿಲ್ಲಬೇಕು, ಪ್ರಬುದ್ಧತೆಗೆ ಬರಬೇಕು ಎಂದು ಅಪೇಕ್ಷಿಸುತ್ತಾನೆ ಯಾಕೆಂದರೆ ದೇವರೂ ಸಹ ಅದೇ ಸ್ವರೂಪದಲ್ಲಿದ್ದಾನೆ! ದೇವರು ಬಾಲಕವಾಗಿ ವರ್ತಿಸುವುದಿಲ್ಲ!

ಎಫೆಸದವರಿಗೆ 4:13

**[13]ಕ್ರಿಸ್ತನ ಪರಿಪೂರ್ಣತೆಯೆಂಬ ಪ್ರಮಾಣವನ್ನು ಮುಟ್ಟುವ ತನಕ ದೇವ ಜನರನ್ನು ಯೋಗ್ಯಸ್ಥಿತಿಗೆ ತರುವ ಕೆಲಸಕ್ಕೋಸ್ಕರವೂ ಸಭೆಯ ಸೇವೆಗೋಸ್ಕರವೂ, ಕ್ರಿಸ್ತನ ದೇಹವು ಅಭಿವೃದ್ಧಿಯಾಗುವುದ ಕ್ಕೋಸ್ಕರವೂ ಆತನು ಇವರನ್ನು ಅನುಗ್ರಹಿಸಿದನು.**

ಆತ್ಮೀಕವಾಗಿ ಪರಿಪಕ್ವವಾಗಿರುವುದೆಂದರೆ, ಪ್ರೌಢಿಮೆ ತೋರುವುದೆಂದರೆ ನಾವು ಕ್ರಿಸ್ತನ ಪರಿಪೂರ್ಣತೆಯ ಮಟ್ಟವನ್ನು ಮುಟ್ಟುವುದು ಎಂದರ್ಥ. ಆತ್ಮೀಕ ಪ್ರೌಢಿಮೆಯು ಕ್ರಿಸ್ತನ ಸಾರೂಪ್ಯಕ್ಕೆ ನಮ್ಮನ್ನು ನಡೆಸುತ್ತದೆ.

ನಾವೆಲ್ಲರೂ... 'ಬೆಳೆದು ಎಲ್ಲ ವಿಷಯಗಳಲ್ಲಿಯೂ ಕ್ರಿಸ್ತನ ಐಕ್ಯವನ್ನು ಹೊಂದುತ್ತಾ ಬರಬೇಕು' (ಎಫೆಸ 4:15) ಆತನು ಏನಾಗಿದ್ದಾನೋ ಆ ಮಟ್ಟಕ್ಕೆ ನಮ್ಮ ಜೀವಿತದ ಎಲ್ಲಾ ಕ್ಷೇತ್ರಗಳೂ ಹೊಂದಿಕೊಳ್ಳಬೇಕು. ನಮ್ಮ ಜೀವಿತದ ಎಲ್ಲಾ ಕ್ಷೇತ್ರಗಳಲ್ಲೂ ಕ್ರಿಸ್ತನು ಕಂಡು ಬರಬೇಕು.

ನಮ್ಮ ಜೀವನದಲ್ಲಿ ಇದನ್ನು ಸಾಧಿಸಬೇಕೆನ್ನುವುದು ದೇವರ ಆಶಯವಾಗಿದೆ. ದೇವರೊಂದಿಗೆ ನಾವು ಜೀವನಯಾತ್ರೆ ನಡೆಸುವಾಗ ಇದನ್ನು ನಮ್ಮ ದೃಷ್ಟಿಕೇಂದ್ರವಾಗಿಟ್ಟುಕೊಳ್ಳಬೇಕು. ವೈಯಕ್ತಿಕವಾಗಿ ನಮ್ಮ ಎಲ್ಲಾ ಕ್ಷೇತ್ರಗಳಲ್ಲಿ ಕ್ರಿಸ್ತನ ಸಾರೂಪ್ಯದೆಡೆಗೆ ನಡೆಯುವುದೇ ನಮ್ಮ ಗುರಿ.

**ಕೊಲೊಸ್ಸೆ 1:28,29**
**ನಾವು ಆತನನ್ನು ಪ್ರಸಿದ್ಧಿ ಪಡಿಸುವವರಾಗಿ ಸಕಲರಿಗೂ ಬುದ್ಧಿಹೇಳುತ್ತಾ ಸರ್ವರಿಗೂ ಪೂರ್ಣಜ್ಞಾನವನ್ನು ಉಪದೇಶಿಸುತ್ತ ದೇವರ ಮುಂದೆ ಎಲ್ಲರನ್ನು ಕ್ರಿಸ್ತನಲ್ಲಿ ಪ್ರವೀಣರನ್ನಾಗಿ (ಟೆಲಿಯೋಸ್) ನಿಲ್ಲಿಸುವುವಕ್ಕೆ ಪ್ರಯತ್ನಿಸುತ್ತಿದ್ದೇವೆ. ನನ್ನಲ್ಲಿ ಕಾರ್ಯಸಾಧಿಸುವ ದೇವರ ಬಲವನ್ನು ಪ್ರಯೋಗಮಾಡಿ ಇದಕ್ಕೋಸ್ಕರವೇ ಹೋರಾಡುತ್ತೇನೆ, ಪ್ರಯಾಸಪಡುತ್ತೇನೆ.**

ಕ್ರೈಸ್ತ ಸೇವೆಯ ಗುರಿ ಇದೇ ಅಗಿದೆ– ಎಲ್ಲರೂ ಕ್ರಿಸ್ತನಲ್ಲಿ ಪ್ರವೀಣರಾಗಿ (ಪ್ರೌಢರಾಗಿ, ವಯಸ್ಕರಾಗಿ) ನಿಲ್ಲಬೇಕೆಂಬುದು.

## 2. ಆತ್ಮೀಕ ಪ್ರೌಢಿಮೆ ದೇವರ ಎಲ್ಲಾ ಚಿತ್ತದಲ್ಲಿಯೂ ಪರಿಪೂರ್ಣ ಮತ್ತು ಸಮಗ್ರವಾಗಿ ಇರುವುದಾಗಿದೆ.

ಕೊಲೊಸ್ಸೆಯವರಿಗೆ 4;12

**12ಕ್ರಿಸ್ತಯೇಸುವಿನ ದಾಸನಾಗಿರುವ ನಿಮ್ಮ ಊರಿನ ಎಪಫ್ರನು ನಿಮಗೆ ವಂದನೆ ಹೇಳುತ್ತಾನೆ; ಇವನು ಪ್ರಾರ್ಥನೆ ಮಾಡುವಾಗೆಲ್ಲಾ ನಿಮಗೋಸ್ಕರ ಹೋರಾಡಿ ನೀವು ಪ್ರವೀಣರಾಗಿಯೂ ಎಲ್ಲಾ ವಿಷಯಗಳಲ್ಲಿ ದೇವರ ಚಿತ್ತವನ್ನು ಕುರಿತು ಪೂರ್ಣ ನಿಶ್ಚಯವುಳ್ಳವರಾಗಿಯೂ ನಿಂತಿರಬೇಕೆಂದು ವಿಜ್ಞಾಪನೆ ಮಾಡುತ್ತಾನೆ.**

ನಮ್ಮ ಎಲ್ಲಾ ಕ್ಷೇತ್ರಗಳಲ್ಲಿ ದೇವರ ಚಿತ್ತಕ್ಕೆ ಸಮರೇಖವಾಗಿರಬೇಕು.

ನಾವು ಜೀವಿತದಲ್ಲಿ ಪೂರ್ಣ ಪ್ರಮಾಣಕ್ಕೆ ಬೆಳೆದು, ಅಭಿವೃದ್ಧಿ ಹೊಂದಿ, ಯಾವುದರಲ್ಲೂ ಕೊರತೆ ಇಲ್ಲದಂತೆ, ಕಡಿಮೆಯಾಗದಂತೆ ಇರುವುದು ಅವಶ್ಯವಾಗಿದೆ. ಎನ್ನುವುದೇ ದೇವರ ಚಿತ್ತವಾಗಿದೆ.

## 3. ಆತ್ಮೀಕ ಪ್ರೌಢಿಮೆ ಎಂದರೆ ಎಲ್ಲಾ ಒಳ್ಳೆಯ ಕಾರ್ಯಗಳಿಗಾಗಿ ಅಣಿಯಾಗುವುದು.

ಅತ್ಮೀಕ ಪ್ರೌಢಿಮೆಯಲ್ಲಿ ಬೆಳೆಯುವುದು ಎಂದರೆ ದೇವರು ನಮಗೆ ನೇಮಿಸಿರುವ ಎಲ್ಲಾ ಒಳ್ಳೇ ಕಾರ್ಯಗಳನ್ನು ಮಾಡಲು ನಮ್ಮನ್ನು ಅಣಿಮಾಡಿಕೊಳ್ಳುವುದು.

**2 ಕೊರಿಂಥದವರಿಗೆ 13:9,11**

**9ನಾವು ಬಲಹೀನರಾಗಿದ್ದರೂ ನೀವು ಬಲಿಷ್ಟರಾಗಿದ್ದ ಪಕ್ಷಕ್ಕೆ ಸಂತೋಷವಾಗಿದ್ದೇವೆ. ಇದಲ್ಲದೆ ನೀವು ಪೂರ್ಣಕ್ರಮಕ್ಕೆ ಬರಬೇಕೆಂದು ಪ್ರಾರ್ಥಿಸುತ್ತೇವೆ. (ಕಟಾರ್‌ಟಿಜೋ) 11ಕಡೆ ಮಾತೇನೆಂದರೆ**

**ಸಹೋದರರೇ ಸಂತೋಷಪಡಿರಿ ಕ್ರಮಪಡಿಸಿಕೊಳ್ಳಿರಿ(ಕಟಾರ್‌ಟಿಜೋ) ಧೈರ್ಯವುಳ್ಳವರಾಗಿರಿ, ಒಂದೇ ಮನಸ್ಸುಳ್ಳವರಾಗಿರಿ, ಸಮಾಧಾನದಿಂದಿರಿ; ಆಗ ಪ್ರೀತಿಯನ್ನೂ, ಶಾಂತಿಯನ್ನೂ ಕೊಡುವ ದೇವರು ನಿಮ್ಮ ಸಂಗಡ ಇರುವನು.**

ಈ ಮೇಲಿನ ವಚನದಿಂದ, ವಿಶ್ವಾಸಿಗಳು ಪೂರ್ಣಕ್ರಮಕ್ಕೆ ಬರಬೇಕೆಂದು ನಾವು ಪ್ರಾರ್ಥನೆ ಮಾಡಬೇಕೆಂದು ಕಲಿತುಕೊಳ್ಳುತ್ತೇವೆ. ನಾವು ಪರಿಪೂರ್ಣರಾಗಬೇಕು ಅಥವಾ ಪೂರ್ತಿಯಾಗಿ ಅಣಿಯಾಗಬೇಕು ಎನ್ನುವುದು ಒಂದು ಅಪ್ಪಣೆಯಾಗಿದೆ ಎನ್ನುವುದನ್ನು ಗಮನಿಸಿರಿ. ಆತ್ಮೀಕ ಪರಿಪಕ್ವತೆಯೆಡೆಗೆ ಸಾಗುವಾಗ ನಮ್ಮನ್ನು ಸಿದ್ಧಪಡಿಸಿಕೊಳ್ಳುವುದು ಹೇಗೆಂದು ಅರಿಯುವುದು ನಮ್ಮ ಜವಾಬ್ದಾರಿಯಾಗಿದೆ.

**ಇಬ್ರಿಯರಿಗೆ 13:20,21**

**[20]ಶಾಶ್ವತವಾದ ಒಡಂಬಡಿಕೆಯನ್ನು ನಿಶ್ಚಯಪಡಿಸುವದಕ್ಕಾಗಿ ತನ್ನ ರಕ್ತವನ್ನು ಸುರಿಸಿಕೊಂಡು ಸಭೆಯೆಂಬ ಹಿಂಡಿಗೆ ಮಹಾಪಾಲಕನಾಗಿರುವ ನಮ್ಮ ಕರ್ತನಾದ ಯೇಸುವನ್ನು ಸತ್ತವರೊಳಗಿಂದ ಬರಮಾಡಿದ ಶಾಂತಿದಾಯಕನಾದ ದೇವರು, [21]ನೀವು ತನ್ನ ಚಿತ್ತವನ್ನು ನೆರವೇರಿಸುವ ಹಾಗೆ ಸಕಲ ಸತ್ಕಾರ್ಯಗಳಿಗೆ (ಕಟಾರ್‌ಟಿಜೋ). ಬೇಕಾದ ಅನುಕೂಲತೆಯನ್ನು ನಿಮಗೆ ಅನುಗ್ರಹಿಸಲಿ. ಆತನು ಯೇಸುಕ್ರಿಸ್ತನ ಮೂಲಕ ತನಗೆ ಸಮರ್ಪಕವಾದದ್ದನ್ನು ನಮ್ಮಲ್ಲಿ ನಡಿಸಲಿ. ಯುಗಯುಗಾಂತರಗಳಲ್ಲಿಯೂ ಆತನಿಗೆ ಸ್ತೋತ್ರ. ಆಮೇನ್.**

ಇಲ್ಲಿಯೂ ಸಹ, ಒಬ್ಬ ವಿಶ್ವಾಸಿಯು ದೇವರ ಚಿತ್ತಕ್ಕನುಸಾರವಾಗಿ ಎಲ್ಲಾ ಸತ್ಕಾರ್ಯಗಳನ್ನು ನಡೆಸಲು ಸಂಪೂರ್ಣವಾಗಿ ಸನ್ನದ್ಧನಾಗಲು ಸಾಧ್ಯವಾಗುವಂತೆ ದೇವರು ಅವನಲ್ಲಿ/ಳಲ್ಲಿ ಕೆಲಸಮಾಡಲಿ ಎಂದು ನಾವು ಪ್ರಾರ್ಥಿಸಬೇಕು. ದೇವರ ದೃಷ್ಟಿಯಲ್ಲಿ ಯಾವುದು ಮಾನ್ಯವೋ ಅದನ್ನು ನಮ್ಮ ಜೀವಿತದಲ್ಲಿ ಆತನು ಸಾಧಿಸಿದ ಹೊರತು ಇತರ ಸತ್ಕಾರ್ಯಗಳಿಗೆ ಆತನು ನಮ್ಮನ್ನು ಸಿದ್ಧಪಡಿಸಲಾಗುವುದಿಲ್ಲ.

ಲೂಕ 6:40

**[40]ಗುರುವಿಗಿಂತ ಶಿಷ್ಯನು ದೊಡ್ಡವನಲ್ಲ; ಆದರೆ ತೀರಾ ಕಲಿತವನಾದ (ಕಟಾರ್‌ಟಿಜೋ)ಪ್ರತಿಯೊಬ್ಬನು ತನ್ನ ಗುರುವಿನಂತಾಗಿರುವನು**

ಕರ್ತನಾದ ಯೇಸುಕ್ರಿಸ್ತನು, ತನ್ನ ಶಿಷ್ಯರಾದ ನಾವೆಲ್ಲರೂ ಆತನಂತೆ ಆಗಬೇಕೆಂದು ಬಯಸುತ್ತಾನೆ. ನಾವು ನಮ್ಮ ಗುರುವಿನಂತೆ ಆಗಬೇಕಾದಲ್ಲಿ, ನಮಗೆ ಒಂದು ಸಂಪೂರ್ಣ ತರಬೇತಿ ಮತ್ತು ಸಿದ್ಧತೆ ಅವಶ್ಯಕತೆಯಿದೆ.

ಎಫೆಸೆದವರಿಗೆ 4:11,12

[11]ಆತನು ಕೆಲವರನ್ನು ಅಪೊಸ್ತಲರನ್ನಾಗಿಯೂ ಕೆಲವರನ್ನು ಪ್ರವಾದಿಗಳನ್ನಾಗಿಯೂ ಕೆಲವರನ್ನು ಸೌವಾರ್ತಿಕರನ್ನಾಗಿಯೂ ಕೆಲವರನ್ನು ಸಭಾಪಾಲಕರನ್ನಾಗಿಯೂ ಉಪದೇಶಿಗಳನ್ನಾಗಿಯೂ ಅನುಗ್ರಹಿಸಿದನು [12]ನಾವೆಲ್ಲರೂ ನಂಬಿಕೆಯಿಂದಲೂ ದೇವಕುಮಾರನ ವಿಷಯವಾದ ಜ್ಞಾನದಿಂದಲೂ ಉಂಟಾಗುವ ಐಕ್ಯವನ್ನು ಹೊಂದಿ ಪ್ರವೀಣತೆಗೆ ಬಂದವರಾಗಿ ಕ್ರಿಸ್ತನ ಪರಿಪೂರ್ಣತೆಯೆಂಬ ಪ್ರಮಾಣವನ್ನು ಮುಟ್ಟುವ ತನಕ ದೇವ ಜನರನ್ನು ಯೋಗ್ಯಸ್ಥಿತಿಗೆ ತರುವ ಕೆಲಸಕ್ಕೋಸ್ಕರವೂ (ಕಟಾರ್ಟೀಸ್‌ಮೋಸ್) ಸಭೆಯ ಸೇವೆಗೋಸ್ಕರವೂ ಆ ಕ್ರಿಸ್ತನ ದೇಹವು ಅಭಿವೃದ್ಧಿಯಾಗುವದ ಕ್ಕೋಸ್ಕರವೂ.

ಸೇವೆಯ ಐದುಗುರಿಗಳಲ್ಲಿ ಒಂದು ಗುರಿಯೆಂದರೆ ಕ್ರಿಸ್ತನ ದೇಹವನ್ನು ಸಭೆಯನ್ನು ಅಭಿವೃದ್ಧಿಪಡಿಸುವ ಸೇವೆಗೆ ಭಕ್ತರನ್ನು ಸಿದ್ಧಗೊಳಿಸುವುದಾಗಿದೆ.

## 4. ಆತ್ಮಿಕ ಪ್ರಬುದ್ಧತೆಯು ಗಟ್ಟಿಯಾದ ಆಹಾರವನ್ನು ತಿನ್ನಲು ಶಕ್ತಗೊಳ್ಳುವುದಾಗಿದೆ

ಇಬ್ರಿಯರಿಗೆ 5:11-14

‘‘ಈ ವಿಷಯದಲ್ಲಿ ನಾವು ಹೇಳಬೇಕಾದ ಮಾತು ಬಹಳ ಉಂಟು, ಆದರೆ ನಿಮ್ಮ ಕಿವಿಗಳು ಮಂದವಾದದರಿಂದ ಅದನ್ನು ವಿವರಿಸುವದು ಕಷ್ಟವಾಗಿದೆ. [12]ಕಾಲವನ್ನು ನೋಡಿದರೆ ನೀವು ಇಷ್ಟರೊಳಗೆ ಬೋಧಕರಾಗಿರಬೇಕಾಗಿದ್ದರೂ ಒಬ್ಬನು ನಿಮಗೆ ದೈವೋಕ್ತಿಗಳ ಮೂಲ ಪಾಠಗಳನ್ನು ತಿರುಗಿ ಕಲಿಸಿಕೊಡಬೇಕಾಗಿದೆ. ನೀವು ಹಾಲು ಕುಡಿಯತಕ್ಕವರೇ ಹೊರತು ಗಟ್ಟಿಯಾದ ಆಹಾರವನ್ನು ತಿನ್ನತಕ್ಕವರಲ್ಲ. [13]ಹಾಲು ಬೇಕಾದವನು ಕೂಸಿನಂತಿದ್ದು ನೀತಿವಾಕ್ಯದಲ್ಲಿ ಅನುಭವವಿಲ್ಲದವನಾಗಿದ್ದಾನೆ. [14]ಗಟ್ಟಿಯಾದ ಆಹಾರವು ಪ್ರಾಯಸ್ಥರಿಗೋಸ್ಕರ ಅಂದರೆ ಜ್ಞಾನೇಂದ್ರಿಯಗಳನ್ನು ಸಾಧನೆಯಿಂದ ಶಿಕ್ಷಿಸಿಕೊಂಡು ಇದು ಒಳ್ಳೇದು. ಅದು ಕೆಟ್ಟದ್ದು ಎಂಬ ಭೇದವನ್ನು ತಿಳಿದವರಿಗೋಸ್ಕರವಾಗಿದೆ.

ಇಬ್ರಿಯರಿಗೆ 6:1-3

[1]ಆದುದರಿಂದ ನಿರ್ಜೀವಕರ್ಮಗಳ ಮೇಲಣ ನಂಬಿಕೆಯನ್ನು ಬಿಟ್ಟುಬಿಟ್ಟು ದೇವರಲ್ಲಿಯೇ ನಂಬಿಕೆಯಿಡಬೇಕಾದದ್ದು [2]ಸ್ನಾನ ಹಸ್ತಾರ್ಪಣಗಳ ವಿಷಯವಾದ ಉಪದೇಶ ಸತ್ತವರಿಗೆ ಪುನರುತ್ಥಾನವೂ ನಿತ್ಯವಾದ ನ್ಯಾಯತೀರ್ಪೂ ಉಂಟೆಂಬದು ಇವುಗಳನ್ನು ಪದೇಪದೇ ಅಸ್ತಿವಾರವಾಗಿ ಹಾಕದೆ ಕ್ರಿಸ್ತನ ವಿಷಯವಾದ ಪ್ರಥಮ ಬೋಧನೆಯನ್ನು ಕುರಿತು ಇನ್ನೂ ಮಾತಾಡದೆ ಪೂರ್ಣವಾದ ತಿಳುವಳಿಕೆಗೆ (ಟೆಲಿಯೋಟಿಸ್) ಸಾಗುತ್ತಾ ಹೋಗೋಣ [3]ಮತ್ತು ದೇವರ ಚಿತ್ತವಾದರೆ ಹೀಗೆ ಸಾಗುತ್ತಾ ಹೋಗುವೆವು.

1ಕೊರಿಂಥದವರಿಗೆ 2:6,7

**[6]ಆದರೂ ಪ್ರವೀಣರಲ್ಲಿ (ಟೆಲಿಯೋಸ್) ಜ್ಞಾನವನ್ನೇ ಹೇಳುತ್ತೇವೆ. ಅದು ಇಹಲೋಕದ ಜ್ಞಾನವಲ್ಲ, ಇಲ್ಲದೆ ಹೋಗುವ ಇಹಲೋಕಾಧಿಕಾರಿಗಳ ಜ್ಞಾನವೂ ಅಲ್ಲ. [7]ಇದುವರೆಗೆ ಗುಪ್ತವಾಗಿದ್ದ ಸತ್ಯಾರ್ಥವನ್ನು ತಿಳಿಸುವಲ್ಲಿ ದೇವರ ಜ್ಞಾನವನ್ನೇ ಹೇಳುತ್ತೇವೆ. ಅದು ಯಾವದೆಂದರೆ ದೇವರು ನಮ್ಮ ಮಹಿಮೆಗಾಗಿ ಲೋಕೋತ್ಪತ್ತಿಗಿಂತ ಮೊದಲೇ ನೇಮಿಸಿ ಇದುವರೆಗೆ ಮರೆಮಾಡಿದ ಜ್ಞಾನವೇ.**

ಯಾರಾರು ಪ್ರಬುದ್ಧರಾಗಿದ್ದಾರೋ, ಪೂರ್ಣವಯಸ್ಕರಾಗಿದ್ದರೋ, ಅವರು ಗಟ್ಟಿಯಾದ ಆಹಾರವನ್ನು ಸೇವಿಸಲು ಶಕ್ತರಾಗಿದ್ದಾರೆ. ಈ ಜನರು ಮೂಲ ಪಾಠಗಳನ್ನು ಪ್ರಾಥಮಿಕ ತತ್ವಗಳನ್ನು ದಾಟಿ ಪ್ರಬುದ್ಧತೆಯ ಕಡೆಗೆ ಪರಿಪಕ್ವತೆಯೆಡೆಗೆ ಹೆಜ್ಜೆಯಿಡುತ್ತಿದ್ದಾರೆ. ಈ ಜನರು ಜ್ಞಾನವನ್ನು ಹೊಂದಿ ದೇವರ ರಾಜ್ಯದ ಗುಟ್ಟುಗಳನ್ನು ಅರಿತುಕೊಳ್ಳಲು ಸಮರ್ಥರಾಗಿದ್ದಾರೆ.

## 5. ಆತ್ಮಿಕ ಪ್ರೌಢಿಮೆ ಒಳ್ಳೆಯದು ಮತ್ತು ಕೆಟ್ಟದ್ದನ್ನು ಗ್ರಹಿಸಲು ನಮ್ಮ ಜ್ಞಾನೇಂದ್ರಿಯಗಳನ್ನು ತರಬೇತಿಗೊಳಿಸುವುದಾಗಿದೆ

ಇಬ್ರಿಯರಿಗೆ 5:14

**[14]ಗಟ್ಟಿಯಾದ ಆಹಾರವು ಪ್ರಾಯಸ್ಥರಿಗೋಸ್ಕರ ಅಂದರೆ ಜ್ಞಾನೇಂದ್ರಿಯಗಳನ್ನು ಸಾಧನೆಯಿಂದ ಶಿಕ್ಷಿಸಿಕೊಂಡು ಇದು ಒಳ್ಳೇದು ಅದು ಕೆಟ್ಟದ್ದು ಎಂಬ ಭೇದವನ್ನು ತಿಳಿದವರಿಗೋಸ್ಕರವಾಗಿದೆ.**

ಪ್ರಬುದ್ಧರಾಗಿರುವ ಜನರು ಒಳ್ಳೆಯದು ಮತ್ತು ಕೆಟ್ಟದರ ನಡುವಿನ ವ್ಯತ್ಯಾಸವನ್ನು ಗುರುತಿಸಲು ಸಾಧ್ಯವಾಗುವಂತೆ (ಪ್ರಾಣವನ್ನು) ತಮ್ಮ ಇಂದ್ರೀಯಗಳನ್ನು ಹುರಿಗೊಳಿಸಿಕೊಳ್ಳುತ್ತಾರೆ. ಅವರ ಪ್ರಾಣವು (ಮನಸ್ಸು, ಚಿತ್ತ ಮತ್ತು ಭಾವನೆಗಳು), ಅವರು ಸತತವಾಗಿ ಅಭ್ಯಾಸಿಸುತ್ತಿರುವ ಸತ್ಯದಿಂದ, ಹದಗೊಂಡು ಸರಿ–ತಪ್ಪುಗಳನ್ನು ಅಂತರವನ್ನು ತಿಳಿಯುವ ಚಾಣಕ್ಷತೆಯನ್ನು ಹೊಂದಿರುತ್ತದೆ.

## 6. ಆತ್ಮಿಕ ಪ್ರೌಢಿಮೆ ಶಿಶುವಿನಂತಹ ನಡವಳಿಕೆಯನ್ನು ದೂರವಿರಿಸುವುದಾಗಿದೆ.

ನೀನು ಚಿಕ್ಕ ಮಕ್ಕಳಂತೆ ಅರ್ಥಮಾಡಿಕೊಳ್ಳುವ, ಆಲೋಚನೆಮಾಡುವ ಮತ್ತು ಮಾತುಗಳನ್ನಾಡುವ ಮಾರ್ಗಗಳನ್ನು ಬಿಟ್ಟುಬಿಡಬೇಕು.

1 ಕೊರಿಂಥದವರಿಗೆ 13:11

**[11]ನಾನು ಬಾಲಕನಾಗಿದ್ದಾಗ ಬಾಲಕನ ಮಾತುಗಳನ್ನಾಡಿದೆನು, ಬಾಲಕನ ಸುಖದುಃಖಗಳನ್ನು ಅನುಭವಿಸಿದೆನು. ಬಾಲಕನ ಆಲೋಚನೆಗಳನ್ನು ಮಾಡಿಕೊಂಡೆನು ಪ್ರಾಯಸ್ಥನಾದ ಮೇಲೆ ಬಾಲ್ಯದವುಗಳನ್ನು ಬಿಟ್ಟು ಬಿಟ್ಟೆನು.**

1 ಕೊರಿಂಥದವರಿಗೆ 3:1-4

**[1]ಸಹೋದರರೇ, ನಾನಂತೂ ದೇವರಾತ್ಮನಿಂದ ನಡಿಸಿಕೊಳ್ಳುವವರಿಗೆ ತಕ್ಕಂತೆ ನಿಮ್ಮ ಸಂಗಡ ಮಾತಾಡಲಾರದೆ ಪ್ರಾಪಂಚಿಕರೂ ಕ್ರಿಸ್ತನ ವಿಷಯದಲ್ಲಿ ಎಳೆಗೂಸುಗಳೂ ಆಗಿರುವಂಥವರಿಗೆ ತಕ್ಕಂತೆ ನಿಮ್ಮ ಸಂಗಡ ಮಾತಾಡಬೇಕಾಯಿತು. [2]ನಿಮಗೆ ಹಾಲು ಕುಡಿಸಿದೆನು, ಅನ್ನಾಕೊಡಲಿಲ್ಲ; ಅನ್ನಾ ತಿನ್ನುವುದಕ್ಕೆ ನಿಮಗೆ ಇನ್ನೂ ಶಕ್ತಿ ಇರಲಿಲ್ಲ, ಈಗಲಾದರೂ ಶಕ್ತಿಯಿಲ್ಲ; [3]ಯಾಕೆಂದರೆ ಇನ್ನೂ ಶರೀರಾಧೀನ ಸ್ವಭಾವವುಳ್ಳವರಾಗಿದ್ದೀರಿ. ನಿಮ್ಮೊಳಗೆ ಹೊಟ್ಟೆಕಿಚ್ಚು ಜಗಳಗಳು ಇರುವಲ್ಲಿ ನೀವೂ ಶರೀರಾಧೀನ ಸ್ವಭಾವವುಳ್ಳವರಾಗಿದ್ದು ಕೇವಲ ನರಪ್ರಾಣಿಗಳಂತೆ ನಡೆಯುತ್ತೀರಲ್ಲವೇ [4]ಒಬ್ಬನು ನಾನು ಪೌಲನವನು ಎಂದು ಮತ್ತೊಬ್ಬನು ನಾನು ಅಪೊಲ್ಲೋಸನವನು ಎಂದು ಹೇಳುತ್ತಿರುವಾಗ ನೀವು ಕೇವಲ ನರಪ್ರಾಣಿಗಳಾಗಿದ್ದೀರಲ್ಲವೇ.**

ನಾವು ಆಲೋಚನೆಗಳಲ್ಲಿ, ಅರ್ಥಮಾಡಿಕೊಳ್ಳುವುದರಲ್ಲಿ ಮತ್ತು ಮಾತುಗಳನ್ನಾಡುವುದರಲ್ಲಿ ಬಾಲಕರಾಗಿ ಉಳಿದುಕೊಳ್ಳಬಾರದು. ವಿಷಯಲಂಪಟನಾಗಿರುವುದು, ಶಿಶುವಿನಂತಿರುವುದು, ಅಸೂಯೆ, ಮಿಂಗಡನೆ, ಜಗಳ, ಸ್ಪರ್ಧೆಮತ್ತು ಸ್ವಾರ್ಥ ಹೆಬ್ಬಯಕೆಗಳು ನಾನಾ ಬಗೆಯ ಬಾಲಿಕ ನಡೆವಳಿಕೆಗಳಾಗಿವೆ.

## 7. ಆತ್ಮಿಕ ಪ್ರೌಢಿಮೆಯು ನಿಮ್ಮ ಸಂಪೂರ್ಣ ದೇಹ ಮತ್ತು ನಾಲಗೆಯು ನಿಮ್ಮ ಅಧೀನದಲ್ಲಿಟ್ಟುಕೊಳ್ಳುವುದಾಗಿದೆ.

ಯಾಕೋಬನು 3:2

**[2]ಅನೇಕ ವಿಷಯಗಳಲ್ಲಿ ನಾವೆಲ್ಲರೂ ತಪ್ಪುವುದುಂಟು ಒಬ್ಬನು ಮಾತಿನಲ್ಲಿ ತಪ್ಪದಿದ್ದರೆ ಅವನು ಶಿಕ್ಷಿತನೂ ತನ್ನ ದೇಹವನ್ನೆಲ್ಲಾ ಸ್ವಾಧೀನಪಡಿಸಿಕೊಳ್ಳುವುದಕ್ಕೆ ಸಮರ್ಥನೂ ಆಗಿದ್ದಾನೆ.**

ಆತ್ಮಿಕ ಪ್ರೌಢತೆಯು ಒಂದು ಪ್ರಕ್ರಿಯೆಯಾಗಿದೆ ಇದು ತತ್ ಕ್ಷಣದಲ್ಲಿ ಜರುಗುವುದಿಲ್ಲ.

ಇದಕ್ಕೆ ಸಮಯ ಬೇಕಾಗುತ್ತದೆ ಹೇಗಿದ್ದರೂ ನಮ್ಮ ಪಾತ್ರಗಳನ್ನು ನಾವು ಮಾಡಬೇಕು. ಇದು ಸ್ವಯಂಚಾಲಿತವಾಗಿ ಆಗುವುದಿಲ್ಲ.

ದೇವರ ಸುವಾರ್ತಾ ಸೇವಕರಾಗಿ ನೀವು ಆತ್ಮಿಕ ಪ್ರಬುದ್ಧತೆಯಲ್ಲಿ ಸ್ಥಿರವಾಗಿ ಪ್ರಗತಿಹೊಂದಬೇಕು.

## ನಾವು ಮನೆವಾರ್ತೆಯವರು

1 ಕೊರಿಂಥದವರಿಗೆ 4:1,2

**[1]ಜನರು ನಮ್ಮನ್ನು ಕ್ರಿಸ್ತನ ಕೈ ಕೆಳಗಿನವರೆಂತಲೂ ದೇವರು ತಿಳಿಸಿರುವ ಸತ್ಯಾರ್ಥಗಳ ವಿಷಯದಲ್ಲಿ ಮನೆವಾರ್ತೆಯವರೆಂತಲೂ ಎಣಿಸಬೇಕು. [2]ಹೀಗಿರಲು ಮನೆವಾರ್ತೆಯವನು ನಂಬಿಗಸ್ತನಾಗಿ ಕಂಡುಬರುವದು ಅವಶ್ಯವಲ್ಲವೇ.**

1 ಪೇತ್ರನು 4:10

**[10]ನೀವೆಲ್ಲರು ದೇವರ ವಿವಿಧ ಕೃಪೆಯ ವಿಷಯದಲ್ಲಿ ಒಳ್ಳೇ ಮನೆವಾರ್ತೆಯವರಾಗಿದ್ದು ಪ್ರತಿಯೊಬ್ಬನು ತಾನು ಹೊಂದಿದ ಕೃಪಾವರವನ್ನು ಎಲ್ಲರ ಸೇವೆಯಲ್ಲಿ ಉಪಯೋಗಿಸಲಿ**

ತೀತನು 1:7

**[7]ಯಾಕೆಂದರೆ ಸಭಾಧ್ಯಕ್ಷನು ದೇವರ ಮನೆವಾರ್ತೆಯವನಾಗಿರುವುದರಿಂದ ನಿಂದಾರಹಿತನಾಗಿರಬೇಕು; ಅವನು ಸ್ವೇಚ್ಛಾಪರನಾದರೂ, ಮುಂಗೋಪಿಯಾದರೂ ಕುಡಿದು ಜಗಳ ಮಾಡುವವನಾದರೂ, ಹೊಡೆದಾಡುವವನಾದರೂ, ನೀಚಲಾಭವನ್ನು ಅಪೇಕ್ಷಿಸುವವನಾದರೂ ಆಗಿರದೆ.**

ನಾವು ದೇವರ ಮನೆವಾರ್ತೆಯವರು

ನಾಯಕತ್ವವು ಒಳ್ಳೆಯ ಮನೆವಾರ್ತೆತನವನ್ನು ಬಯಸುತ್ತದೆ ಮತ್ತು ಅದು ನಮ್ಮ ನಡತೆ ಮತ್ತು ಜೀವನದ ಮೂಲಕ ಪ್ರಕಟಗೊಳ್ಳುತ್ತದೆ.

ನಾವು ದೇವರ ರಾಜ್ಯದ ನಾಯಕರು ಮತ್ತು ರಾಜ್ಯವನ್ನು ಕಟ್ಟುವವರಾಗಿರುವುದರಿಂದ ಮನೆವಾಳ್ತನವು ನಮ್ಮ ಜೀವನ ಶೈಲಿಯೇ ಆಗಿಬಿಡಬೇಕು.

ನಾವು ದೇವರ ಮರ್ಮಗಳ ಮನೆವಾರ್ತೆಯವರಾಗಿದ್ದಾರೆ. ನಾವು, ದೇವರು ನಮಗೆ ನೀಡಿರುವ ವರಗಳ ಮತ್ತು ಕೃಪೆಯ ಮನೆವಾರ್ತೆಯವರಾಗಿದ್ದೇವೆ.

## ದೇವರ ಮನೆವಾರ್ತೆಯವನಾಗಿರುವುದು ಎಂಬುದರ ಅರ್ಥವೇನು?

ಮನೆವಾರ್ತೆಯವ ಗ್ರೀಕ್ ಭಾಷೆಯಲ್ಲಿ oikonomos (ಓಯಿಕೊನೊಮೊಸ್) -ಮನೆಯವರ ಅಥವಾ ಸ್ವತ್ತುಗಳ ಪ್ರತಿನಿಧಿ, ಖಜಾಂಚಿ ಪ್ರಬಂಧಕ.

ಯಾರಾದರೂ ಒಬ್ಬರು, ಅವರ ಸ್ವಂತದವುಗಳಲ್ಲದವುಗಳ ಮೇಲೆ ಜವಬ್ದಾರಿಯನ್ನು ಹೊಂದಿರುವುದು.

ಯಾರಾದರೂ ಒಬ್ಬರಿಗೆ ಆಡಳಿತ ವ್ಯವಸ್ಥೆ ನಡೆಸಲು ಜವಬ್ದಾರಿಯನ್ನು ವಹಿಸಿಕೊಟ್ಟಿರುವುದು.

ಮನೆವಾರ್ತೆತನ (ಪಾರುಪತ್ಯಗಾರತನ) ಗ್ರೀಕ್ ಭಾಷೆಯಲ್ಲಿ (ಓಯಿಕೊನೋಮೀಯಾ) ‘oikonomia ಮನೆಯವರುಗಳ ನಿರ್ವಾಹಕ ‘oikoa ಓಯಿಕೊಸ್ ಮನೆ. ನೋಮೋಸ್ (nomos) ಕಾನೂನು.

ಲೂಕ 16:2,3,4; 1ಕೊರಿಂಥದವರಿಗೆ 9:17; ಕೊಲೊಸ್ಸೆಯವರಿಗೆ 1:25 ಎಫೆಸೆದವರಿಗೆ 3:2,9 ಎಫೆಸೆದವರಿಗೆ 1:10 ಮತ್ತು 1 ತಿಮೊಥೆಯನಿಗೆ 1:4 - ಈ ವಚನ ಭಾಗಗಳಲ್ಲಿ ಉಪಯೋಗಿಸಲ್ಪಟ್ಟಿದೆ.

ಮನೆವಾರ್ತೆಯವನು ಪ್ರಬಂಧಕ, ಮೇಲ್ವಿಚಾರಕ, ಅಥವಾ ಪರಿಪಾಲಕ, ಮತ್ತೊಬ್ಬ ವ್ಯಕ್ತಿಯ ವಸ್ತುಗಳ ಮೇಲೆ ಅಧಿಕಾರ ವಹಿಸಿಕೊಂಡವನು ಅಥವಾ ಅವುಗಳನ್ನು ನೋಡಿಕೊಳ್ಳಲು ಇರಿಸಲ್ಪಟ್ಟವನು.

ಅವನು ಸುರಕ್ಷಿತ ಪಡಿಸಬೇಕಾದವುಗಳು

- ವಿಷಯಗಳನ್ನು ಯುಕ್ತವಾಗಿ ನೆಡೆಸಬೇಕು
- ಕಾರ್ಯಗಳು ಲಾಭಕರವಾಗಿರಬೇಕು
- ಪ್ರತಿಯೊಂದು ವಿಷಯಕ್ಕೆ ಲೆಕ್ಕಚಾರ ನೀಡಬೇಕು (ರೋಮಾಪುರದವರಿಗೆ 16:23)
- ಅವನ ಆರೈಕೆಗೆ ಕೊಡಲಾದುವುಗಳ ಸಂರಕ್ಷಣೆ ಮಾಡಬೇಕು / ಅವನ ಕಾಳಜಿಯಲ್ಲಿರುವವುಗಳನ್ನು ಸುಭದ್ರವಾಗಿ ಕಾಪಾಡಬೇಕು.
- ಅವನು ಸತತವಾಗಿ ಸುರಕ್ಷಿತ ಮಾಡುತ್ತಿರಬೇಕು ಅಂದರೆ, ಒಬ್ಬ ವಾರಸುದಾರರನ್ನು ತರಭೇತಿಗೊಳಿಸಬೇಕು. (ಗಲಾತ್ಯದವರಿಗೆ 4:1,2).

**ದೇವರ ಸುವಾರ್ತಾ ಸೇವಕನಾಗಿ, ನಾನು ಯಾವುದಕ್ಕೆ ಮನೆವಾರ್ತೆಯವನು?**

- ನಿನಗೆ ಕೊಡಲ್ಪಟ್ಟ ಕೃಪೆಯ ವರಗಳಿಗೆ (1 ಪೇತ್ರನು 4:10,11)
- ಸುವಾರ್ತೆಗೆ (1 ಕೊರಿಂಥದವರಿಗೆ 9:16,17)
- ಒಂದು ನಿರ್ದಿಷ್ಟ ನಿಯೋಗಕ್ಕಾಗಿ (ಸೇವೆಗಾಗಿ) ದೇವರು ನಿಮಗೆ ಕೊಟ್ಟ ಕೃಪೆಗೆ (ಎಫೆಸದವರಿಗೆ 3:1,2)
- ದೇವರ ಸತ್ಯಾರ್ಥಗಳಿಗೆ (ಎಫೆಸದವರಿಗೆ 3:9, 1ಕೊರಿಂಥದವರಿಗೆ 4:1 ಕೊಲೊಸ್ಸೆಯವರಿಗೆ 1:26-29; 1 ಕೊರಿಂಥದವರಿಗೆ 2:7,2 ಕೊರಿಂಥದವರಿಗೆ 2:17; 4:1,2).

ಮನೆ ವಾರ್ತೆಯವನಾಗಿ ನಿನಗೆ ಕೊಡಲ್ಪಟ್ಟ ಸೇವೆಗೆ ನೀನೇ ಹೊಣೆಗಾರನಾಗಿದ್ದೀ

- ನಿನ್ನ ಸಭಾಸೇವೆಯನ್ನು ಕ್ರಮಬದ್ಧವಾಗಿ ನಡೆಸುವುದು - ಪ್ರತಿಯೊಂದು ಸಹ ಕ್ರಮವಾಗಿರಬೇಕು ಮತ್ತು ಖಂಡನೆಗೆ ದೂರವಾಗಿರಬೇಕು. (2 ಕೊರಿಂಥದವರಿಗೆ 6:3,4)
- ಪ್ರಯೋಜನಕರವಾಗಿರಬೇಕು - ನೀನು ಫಲದಾಯಕನಾಗಿರಬೇಕು. (ಯೋಹಾನ 15:8)
- ಹೊಣೆಗಾರಿಕೆ (2 ಕೊರಿಂಥದವರಿಗೆ 5:9,10)
- ಸಂರಕ್ಷಣೆ - ನಿನ್ನ ಸಭಾಸೇವೆಯನ್ನು ಕಾಪಾಡಿಕೋ
- ಸತತವಾದ ಮುಂದುವರಿಕೆ ದೇವರು ನಿನಗೆ ಕೊಡಲ್ಪದ್ದರಲ್ಲಿ ಎಡೆಬಿಡದೆ ಮುಂದುವರೆ.

**ದೇವರ ರಾಜ್ಯದಲ್ಲಿ ಮನೆವಾರ್ತೆಯವರಾಗಿರಲು ಬೇಕಾದ ಗುಣಲಕ್ಷಣಗಳು**

ದೇವರ ಕೃಪೆಯ ಮತ್ತು ದೇವರ ರಾಜ್ಯದ ಮನೆವಾರ್ತೆಯವರಾದ ನಮ್ಮಿಂದ ಆತನು ಅಪೇಕ್ಷಿಸುವುದೇನೆಂದರೆ:

### 1. ಒಳ್ಳೆಯ ಮನೆವಾರ್ತೆಯವನು ಕ್ರಮಬದ್ಧವಾಗಿ ಕೆಲಸಮಾಡುತ್ತಾನೆ

ನಮಗೆ ವಹಿಸಲ್ಪಟ್ಟಿರುವ ಕೆಲಸವನ್ನು ಕ್ರಮಬದ್ಧವಾಗಿ ಮಾಡುವ ಜವಾಬ್ದಾರಿ ನಮ್ಮ ಮೇಲಿದೆ. ಪ್ರತಿಯೊಂದೂ ವ್ಯವಸ್ಥಿತವಾಗಿಯೂ, ಖಂಡನೆಗೆ ಹೊರತಾಗಿಯೂ ಇರಬೇಕು. "ನಿಂದೆಗೆ ಅವಕಾಶಕೊಡದೆ ಎಲ್ಲಾ ಸಂಗತಿಗಳಲ್ಲಿ ದೇವರ ಸೇವಕರೆಂದು ನಮ್ಮನ್ನು ಸಮ್ಮತರಾಗಿ ಮಾಡಿಕೊಳ್ಳುತ್ತೇವೆ' (2 ಕೊರಿಂಥದವರಿಗೆ 6:3,4).

### 2. ಒಳ್ಳೆಯ ಮನೆವಾರ್ತೆಯವನು ಉಪಯುಕ್ತತೆಯನ್ನು ಖಚಿತ ಮಾಡಿಕೊಳ್ಳುತ್ತಾನೆ

ನಾವು ಮಾಡುತ್ತಿರುವ ಕೆಲಸವು ಉಪಯುಕ್ತವಾಗಿದೆಯೆಂದು ಖಚಿತಮಾಡಿಕೊಳ್ಳೂತ್ತಾನೆ. ನಾವು ಫಲಪ್ರದವಾಗಿರಬೇಕು. "ನೀವು ಬಹಳ ಫಲಕೊಡುವದರಿಂದಲೇ ನನ್ನ ತಂದೆಗೆ ಮಹಿಮೆ ಉಂಟಾಗುವುದು; ಮತ್ತು ನನ್ನ ಶಿಷ್ಯರಾಗುವಿರಿ" (ಯೋಹಾನ 15:8)

ನಮ್ಮ ಕೆಲಸವು ಫಲಪ್ರದವಾಗಿದೆಯೇ ಇಲ್ಲವೇ ಎಂಬುದನ್ನು ತಿಳಿಯಲು ಆಗಾಗ ಅದನ್ನು ಪರಿಶೀಲನೆ ಮಾಡಿನೋಡಬೇಕು.

### 3. ಒಳ್ಳೆಯ ಮನೆವಾರ್ತೆಯವನು ಹೊಣೆಹೊತ್ತುಕೊಳ್ಳುತ್ತಾನೆ

ದೇವರು ನಮಗೆ ಕೊಟ್ಟ ಕೆಲಸದಲ್ಲಿ ನಡೆಯುವ ಎಲ್ಲದಕ್ಕೂ ನಾವು ದೇವರಿಗೆ ಲೆಕ್ಕಕೊಡಬೇಕಾಗಿದೆ. ಆತನಿಗೆ ಉತ್ತರಿಸಬೇಕಾಗಿದೆ. ನಾವು ಕರ್ತನ ರಾಜ್ಯದ ಕೆಲಸವನ್ನು ಬಹಳ ಜವಾಬ್ದಾರಿಯಿಂದ ನಡೆಸುತ್ತಾ ಈಗ ಮತ್ತು ಇಲ್ಲಿಯೂ ಮತ್ತು ಮುಂದೆ ಆತನ ಸಿಂಹಾಸನ ಮುಂದೆ ನಿಂತುಕೊಳ್ಳುವಾಗಲೂ ಅದಕ್ಕೆ ಲೆಕ್ಕ ಕೊಡುವವರಾಗಿದ್ದೇವೆ. "ಆದುದರಿಂದ ನಾವು ದೇಹವೆಂಬ ಮನೆಯಲ್ಲಿದ್ದರೂ ಸರಿಯೇ, ಅದನ್ನು ಬಿಟ್ಟಿದ್ದರೂ ಸರಿಯೇ ಕರ್ತನಿಗೆ ಮೆಚ್ಚುವವರಾಗಿರಬೇಕೆಂಬದೇ ನಮ್ಮ ಗುರಿಯಾಗಿದೆ. ಯಾಕೆಂದರೆ ಪ್ರತಿಯೊಬ್ಬನು ತನ್ನ ದೇಹದ ಮೂಲಕ ನಡಿಸಿದ ಒಳ್ಳೇಯದಕ್ಕಾಗಲಿ ಕೆಟ್ಟದಕ್ಕಾಗಲಿ ಸರಿಯಾಗಿ ಪ್ರತಿಫಲವನ್ನು ಹೊಂದುವುದಕ್ಕೋಸ್ಕರ ನಾವೆಲ್ಲರೂ ಕ್ರಿಸ್ತನ ನ್ಯಾಯಾಸನದ ಮುಂದೆ ಯಥಾಸ್ಥಿತಿಯಲ್ಲಿ ಕಾಣಿಸಿಕೊಳ್ಳಬೇಕು. (2 ಕೊರಿಂಥವರಿಗೆ 5:9,10)

ಯಾವ ಮನೆವಾರ್ತೆಯವನು ತನಗೆ ಕೊಟ್ಟ ಕೆಲಸದಲ್ಲಿ ವ್ಯರ್ಥವಾಗಿ ಅಥವಾ ನಿಷ್ಫಲವಾಗಿ ಬಿಡುವನೋ ಅಂಥವನು ಆ ಕೆಲಸದಿಂದ ತೆಗೆದುಹಾಕಲ್ಪಡುವನು. ಯೇಸು ತನ್ನ ಶಿಷ್ಯರಿಗೂ ಹೇಳಿದ್ದೇನೆಂದರೆ ಐಶ್ವರ್ಯವಂತನಾದ ಒಬ್ಬ ಮನುಷ್ಯನಿಗೆ ಒಬ್ಬ ಮನೆವಾರ್ತೆಯುವನಿದ್ದನು. ಇವನ ವಿಷಯುವಾಗಿ ಯಜಮಾನನ ಬಳಿಯಲ್ಲಿ–ಇವನು ನಿನ್ನ ಆಸ್ತಿಯನ್ನು ಹಾಳುಮಾಡುತ್ತಾ ಇದ್ದಾನೆ ಎಂದು ಯಾರೋ ದೂರು ಹೇಳಿರಲಾಗಿ ಯಜಮಾನನು ಅವನನ್ನು ಕರೆದು–ಇದೇನು ನಾನು ನಿನ್ನ ವಿಷಯದಲ್ಲಿ ಇನ್ನು ಮನೆವಾರ್ತೆಯವನಾಗಿರುವದಕ್ಕಾಗ ುವುದಿಲ್ಲ ಎಂದು ಹೇಳಿದನು (ಲೂಕ 16:1,2)

## 4. ಒಳ್ಳೆಯ ಮನೆವಾರ್ತೆಯವನು ಭದ್ರತೆಯನ್ನು ನಿಶ್ಚಯಪಡಿಸಿಕೊಳ್ಳುತ್ತಾನೆ

ದೇವರು ನಮಗೆ ಕೊಟ್ಟಿರುವದನ್ನು ನಾವು ಭದ್ರಪಡಿಸಿ ಕಾಪಾಡಿಕೊಳ್ಳಬೇಕು.

ನಮ್ಮ ಕೈಗೆ ಕೊಡಲ್ಪಟ್ಟಿರುವುದು ದುರುಪಯೋಗವಾಗದಂತೆ, ಕಳುವಾಗದಂತೆ ಅಥವಾ ಹಣದ ದುರ್ಬಳಕೆಯಾಗದಂತೆ ನೋಡಿಕೊಂಡು ಆಡಳಿತ ನಡೆಸಬೇಕು.

## 5. ಒಳ್ಳೆಯ ಮನೆವಾರ್ತೆಯವನು ನಿರಂತರತೆಯನ್ನು ಕಾಪಾಡಿಕೊಳ್ಳುವನು

ಒಬ್ಬ ಮನೆವಾರ್ತೆಯವನು ಮನೆಯ ಉತ್ತರಾಧಿಕಾರಿಯನ್ನು ಕಾಪಾಡುವ ಜವಾಬ್ದಾರಿಯುನ್ನು ಹೊತ್ತಿರುತ್ತಾನೆ. 'ಆದರೆ ನಾನು ಹೇಳುವುದೇನೆಂದರೆ ಬಾಧ್ಯನು ತಾನು ಆಸ್ತಿಗೆಲ್ಲಾ ಧಣಿಯಾಗಿದ್ದರೂ ಬಾಲಕನಾಗಿರುವ ತನಕ ದಾಸನಂತೆ ಇರುವನೇ ಹೊರತು ಬೇರೆಯಿಲ್ಲ. ತಂದೆಯು ನೇಮಿಸಿದ ದಿನದವರೆಗೂ ಪಾಲಕರ ಮತ್ತು ಮನೆವಾರ್ತೆಯವರ ಕೈಕೆಳಗಿರುವನು (ಗಲಾತ್ಯ 4:1,2)

ದೇವರು ನಮಗೆ ನೀಡಿರುವುದನ್ನು ನಾವು ಪಡೆದದ್ದಕ್ಕಿಂತಲೂ ಉತ್ತಮವಾದ ಮತ್ತು ಬಲವುಳ್ಳ ಸ್ಥಿತಿಯಲ್ಲಿ ಇತರರಿಗೆ ದಾಟಿಸಬೇಕು.

## 6. ಒಳ್ಳೆಯ ಮನೆವಾರ್ತೆಯವನು ನಂಬಿಗಸ್ತನು ಮತ್ತು ಬುದ್ಧಿವಂತನು

ಲೂಕನು 12:41-48

**[41]ಆಗ ಪೇತ್ರನು ಸ್ವಾಮಿ, ನೀನು ಈ ಸಾಮ್ಯವನ್ನು ನಮಗೆ ಮಾತ್ರಹೇಳುತ್ತೀಯೋ? [42]ಎಲ್ಲರಿಗೂ ಹೇಳುತ್ತೀಯೋ ಎಂದು ಕೇಳಲು ಸ್ವಾಮಿ ಹೇಳಿದ್ದೇನೆಂದರೆ - ಹೊತ್ತು ಹೊತ್ತಿಗೆ ಅಶನಕ್ಕೆ ಬೇಕಾದದ್ದನ್ನು ಅಳೆದು ಕೊಡುವುದಕ್ಕಾಗಿ [43] ಯಜಮಾನನು ತನ್ನ ಮನೆಯವರ ಮೇಲೆ ನೇಮಿಸಿದ ನಂಬಿಗಸ್ತನೂ ವಿವೇಕಿಯೂ ಆಗಿರುವ ಮನೆವಾರ್ತೆಯವನು ಯಾರು? ಯಜಮಾನನು ಬಂದು ಯಾವ ಆಳು ಹೀಗೆ ಮಾಡುವುದನ್ನು ಕಾಣುವನೊ ಆ ಆಳು ಧನ್ಯನು [44]ಅಂಥವನನ್ನು ಅವನು ತನ್ನ ಎಲ್ಲಾ ಆಸ್ತಿಯ ಮೇಲೆ ನೇಮಿಸುವನು ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. [45]ಆದರೆ ಆ ಆಳು ನನ್ನ ಯಜಮಾನನು ಬರುವುದಕ್ಕೆ ತಡ ಮಾಡುತ್ತಾನೆ ಅಂತ ತನ್ನ ಮನಸ್ಸಿನಲ್ಲಿ ಅಂದುಕೊಂಡು ಗಂಡಾಳು ಹೆಣ್ಣಾಳುಗಳನ್ನು ಹೊಡೆಯುವದಕ್ಕೂ ತಿಂದು ಕುಡಿದು ಅಮಲೇರುವದಕ್ಕೂ ತೊಡಗಿದರೆ [46]ಅವನು ನೆನಸದ ದಿನದಲ್ಲಿಯೂ ತಿಳಿಯದ ಗಳಿಗೆಯಲ್ಲಿಯೂ ಆ ಆಳಿನ ಯಜಮಾನನು ಬಂದು ಅವನನ್ನು ಕಠಿಣವಾಗಿ ಹೊಡಿಸಿ ಅಪನಂಬಿಗಸ್ತರಿಗೆ ಆಗತಕ್ಕ ಗತಿಯನ್ನು ಅವನಿಗೆ ನೇಮಿಸುವನು. [47]ತನ್ನ ಯಜಮಾನನ ಚಿತ್ತವನ್ನು ತಿಳಿದು ಆಳು ಸಿದ್ಧ ಮಾಡದೆ ಹೋದರೆ ಅಥವಾ ಅವನ ಚಿತ್ತಕ್ಕನುಸಾರ ನಡೆಯದಿದ್ದರೆ ಅವನು ಬಹಳ ಪೆಟ್ಟು ತಿನ್ನುವನು. [48]ತಿಳಿಯದೆ ಪೆಟ್ಟುಗಳಿಗೆ ಯೋಗ್ಯವಾದದ್ದನ್ನು ನಡಿಸಿದವನು ಸ್ವಲ್ಪ ಪೆಟ್ಟು ತಿನ್ನುವನು ಯಾವನಿಗೆ ಬಹಳವಾಗಿ ಕೊಟ್ಟದೆಯೋ ಅವನ ಕಡೆಯಿಂದ ಬಹಳವಾಗಿ ನಿರೀಕ್ಷಿಸಲ್ಪಡುವುದು; ಇದಲ್ಲದೆ ಯಾವನ ವಶಕ್ಕೆ ಬಹಳವಾಗಿ ಒಪ್ಪಿಸಿದೆಯೋ ಅವನ ಕಡೆಯಿಂದ ಇನ್ನೂ ಹೆಚ್ಚಾಗಿ ಕೇಳುವರು.**

1 ತಿಮೊಥೆಯನಿಗೆ 1:12

**[12]ಈ ಸುವಾರ್ತೆಯ ಸೇವೆಯು ನನಗೆ ಕೊಡಲ್ಪಟ್ಟಿತು. ನನಗೆ ಬಲವನ್ನು ದಯಪಾಲಿಸಿದವನು ನಮ್ಮ ಕರ್ತನಾದ ಯೇಸುಕ್ರಿಸ್ತನೇ ಮೊದಲು ದೋಷಕನೂ ಹಿಂಸಕನೂ ಬಲತ್ಕಾರಿಯೂ ಆಗಿದ್ದ ನನ್ನನ್ನು ಆತನು ನಂಬಿಗಸ್ತನೆಂದು ಎಣಿಸಿ ತನ್ನ ಸೇವೆಗೆ ನೇಮಿಸಿಕೊಂಡದ್ದಕ್ಕಾಗಿ ನಾನು ಆತನಿಗೆ ಸ್ತೋತ್ರ ಸಲ್ಲಿಸುತ್ತೇನೆ.**

ನಾವು ಮನೆವಾರ್ತೆಯವರಂತೆ ನಂಬಿಗಸ್ತರಾಗಿಯೂ ಜ್ಞಾನಿಗಳಾಗಿಯೂ ಇರಬೇಕು. ನಂಬಿಗಸ್ತಿಕೆಯಲ್ಲಿ ಪ್ರಾಮಾಣಿಕತೆ, ಇತರರ ಮೇಲೆ ಆತುಕೊಳ್ಳುವುದು ಮತ್ತು ನಂಬಲರ್ಹರಾಗಿರುವುದು, ಇವುಗಳ ಹೂರಣ ಅಡಗಿರುತ್ತದೆ.

ಸರಿಯಾದ ಮನೆವಾರ್ತೆಯಿಂದ ಬಡ್ತಿ ಮತ್ತು ಹೆಚ್ಚಿನ ಮನೆವಾಳ್ತನವು ದೊರೆಯುತ್ತದಲ್ಲದೆ ನಮ್ಮ ಜವಾಬ್ದಾರಿಗಳು ಹೆಚ್ಚುತ್ತವೆ. "ಹೊತ್ತುಹೊತ್ತಿಗೆ ಆಶನಕ್ಕೆ ಬೇಕಾದದ್ದನ್ನು ಅಳೆದು ಕೊಡುವುದಕ್ಕಾಗಿ ಯಜಮಾನನು ತನ್ನ ಮನೆಯವರ

ಮೇಲೆ ನೇಮಿಸಿದ ನಂಬಿಗಸ್ತನೂ ವಿದೇಶಿಯೂ ಆಗಿರುವ ಮನೆವಾರ್ತೆಯವನು ಯಾರು? (ವಚನ 42)

ಮನೆವಾರ್ತೆಯೆಂದರೆ ನಮಗಿಷ್ಟ ಬಂದಂತೆ ಮಾಡುವುದಲ್ಲ, ಬದಲಾಗಿ ಯಜಮಾನನಿಗೆ ಇಷ್ಟವಾದದನ್ನು ತಿಳಿದು ಅದರಂತೆ ನಡೆಯುವುದಾಗಿದೆ. "ತನ್ನ ಯಜಮಾನನ ಚಿತ್ತವನ್ನು ತಿಳಿದ ಆಳು ಸಿದ್ಧಮಾಡದೆ ಹೋದರೆ ಅಥವಾ ಅವನ ಚಿತ್ತಕ್ಕನುಸಾರ ನಡೆಯದಿದ್ದರೆ ಅವನು ಬಹಳ ಪೆಟ್ಟು ತಿನ್ನುವನು"(ವಚನ 47).

*ಅಪನಂಬಿಗಸ್ತನಾದ ಮನೆವಾರ್ತೆಯವನು*

ಮನೆವಾಳ್ತನವನ್ನು ಕುರಿತು ಬೋಧಿಸಲು ಕರ್ತನಾದ ಯೇಸುವಿನ ಮತ್ತೊಂದು ದೃಷ್ಟಾಂತವು ಇಲ್ಲಿದೆ;

ಲೂಕನು 16:-1-12

1ಯೇಸು ತನ್ನ ಶಿಷ್ಯರಿಗೂ ಹೇಳಿದ್ದೇನೆಂದರೆ - ಐಶ್ವರ್ಯವಂತನಾದ ಒಬ್ಬ ಮನುಷ್ಯನಿಗೆ ಒಬ್ಬ
ಮನೆವಾರ್ತೆಯವನಿದ್ದನು. ಇವನ ವಿಷಯವಾಗಿ ಯಜಮಾನನ ಬಳಿಯಲ್ಲಿ ಇವನು ನಿನ್ನ
ಆಸ್ತಿಯನ್ನು ಹಾಳುಮಾಡುತ್ತಾ ಇದ್ದಾನೆ ಎಂದು ಯಾರೋ ದೂರುಹೇಳಿರಲಾಗಿ ಯಜಮಾನನು
2ಅವನನ್ನು ಕರೆದು ಇದೇನು ನಾನು ನಿನ್ನ ವಿಷಯದಲ್ಲಿ ಕೇಳುವ ಸಂಗತಿ? ನಿನ್ನ ಮನೆವಾರ್ತೆಯ
ಲೆಕ್ಕವನ್ನು ಒಪ್ಪಿಸು; ನೀನು ಇನ್ನು ಮನೆವಾರ್ತೆಯವನಾಗಿರುವುದಕ್ಕಾಗುವದಿಲ್ಲ ಎಂದು ಹೇಳಿದನು.
3ಹೀಗಿರಲಾಗಿ ಆ ಮನೆವಾರ್ತೆಯವನು ನಾನೇನು ಮಾಡಲಿ? ನನ್ನ ಯಜಮಾನನು ನನ್ನಿಂದ
ಈ ಮನೆವಾರ್ತೆ ಕೆಲಸವನ್ನು ತೆಗೆದುಬಿಡುತ್ತಾನಲ್ಲಾ. ಅಗೆಯುವುದಕ್ಕೆ ನನಗೆ ಬಲವಿಲ್ಲ; ಭಿಕ್ಷಾ
ಬೇಡುವುದಕ್ಕೆ ನನಗೆ ನಾಚಿಕೆಯಾಗುತ್ತದೆ. 4ಈ ಮನೆವಾರ್ತೆ ಕೆಲಸದಿಂದ ನನ್ನನ್ನು ತೆಗೆದ ಮೇಲೆ
ಜನರು ನನ್ನನ್ನು ತಮ್ಮ ಮನೆಯೊಳಗೆ ಸೇರಿಸಿಕೊಳ್ಳುವಂತೆ ನಾನು ಮಾಡಬೇಕಾದದ್ದು ಗೊತ್ತಾಯಿತು
ಎಂದು ತನ್ನೊಳಗೆ ಅಂದುಕೊಂಡು 5 ತನ್ನ ಯಜಮಾನನ ಸಾಲಗಾರರಲ್ಲಿ ಪ್ರತಿಯೊಬ್ಬನನ್ನೂ ಕರೆದು
ಮೊದಲನೆಯವನನ್ನು - ನೀನು ನನ್ನ ಯಜಮಾನನಿಗೆ ಏನು ಕೊಡಬೇಕು ಎಂದು ಕೇಳಲು 6ಅವನು
ನೂರು ಬುದ್ದಲಿ ಎಣ್ಣೆ ಅಂದಾಗ ಅವನಿಗೆ ಈ ನಿನ್ನ ಪತ್ರವನ್ನು ತೆಗೆದುಕೊಂಡು ಬೇಗ ಕೂತುಕೊಂಡು
ಐವತ್ತು ಬುದ್ದಲಿ ಅಂತ ಬರಿ ಎಂದು ಹೇಳಿದನು 7ಬಳಿಕ ಮತ್ತೊಬ್ಬನನ್ನು ನೀನು ಏನು ಕೊಡಬೇಕು
ಎಂದು ಕೇಳಲು ಅವನು ನೂರು ಖಂಡಗ ಗೋಧಿ ಅಂದಾಗ ಅವನಿಗೆ - ಈ ನಿನ್ನ ಪತ್ರವನ್ನು
ತೆಗೆದುಕೊಂಡು ಎಂಭತ್ತು ಖಂಡಗ ಅಂತ ಬರಿ ಎಂದು ಹೇಳಿದನು 8ಯಜಮಾನನು ಇದನ್ನು
ಕೇಳಿ ಅನ್ಯಾಯಗಾರನಾದ ಆ ಮನೆವಾರ್ತೆಯವನನ್ನು - ಇವನು ಜಾಣತನ ಮಾಡಿದನು ಎಂದು
ಹೊಗಳಿದನು. ಯಾಕೆಂದರೆ ಲೌಕಿಕರು ತಮ್ಮಂಥವರ ವಿಷಯದಲ್ಲಿ ಬೆಳಕಿನ ರಾಜ್ಯದವರಿಗಿಂತಲೂ
ಜಾಣರಾಗಿದ್ದಾರೆ. 9ಅನ್ಯಾಯದ ಧನದ ಮೂಲಕವಾಗಿ ನಿಮಗೆ ಸ್ನೇಹಿತರನ್ನು ಮಾಡಿಕೊಳ್ಳಿರಿ ಹೀಗೆ
ಮಾಡಿದರೆ ಅದು ನಿಮ್ಮ ಕೈಬಿಟ್ಟು ಹೋದಾಗ ಅವರು ನಿಮ್ಮನ್ನು ಶಾಶ್ವತವಾದ ವಾಸಸ್ಥಳಗಳಲ್ಲಿ

**ಸೇರಿಸಿಕೊಳ್ಳುವರು ಎಂದು ನಾನು ನಿಮಗೆ ಹೇಳುತ್ತೇನೆ. [10]ಸ್ವಲ್ಪವಾದದ್ದರಲ್ಲಿ ನಂಬಿಗಸ್ತನಾದವನು ಬಹಳವಾದದ್ದರಲ್ಲಿಯೂ ನಂಬಿಗಸ್ತನಾಗಿರುವನು. ಸ್ವಲ್ಪವಾದದ್ದರಲ್ಲಿ ಅನ್ಯಾಯಗಾರನಾದವನು ಬಹಳವಾದದ್ದರಲ್ಲಿಯೂ ಅನ್ಯಾಯಗಾರನಾಗುವನು. ಹೀಗಿರುವುದರಿಂದ ಅನ್ಯಾಯದ ಧನದ ವಿಷಯದಲ್ಲಿ ನೀವು ನಂಬಿಗಸ್ತರಲ್ಲದವರಾದರೆ ನಿಜವಾದ ಧನವನ್ನು ನಿಮ್ಮ ವಶಕ್ಕೆ ಯಾರು ಕೊಟ್ಟಾರು?**

ಕರ್ತನಾದ ಯೇಸುಕ್ರಿಸ್ತನು ಇಲ್ಲಿ ಮನೆವಾರ್ತೆಯವನ ಕುರಿತು ಮೆಚ್ಚುಗೆಯ ಮಾತುಗಳನ್ನಾಡುತ್ತಿಲ್ಲ. ಅವನನ್ನು 'ಅನ್ಯಾಯಗಾರನು' ಅಥವಾ 'ವಂಚಕನು' ಎಂದು ಕರೆಯುತ್ತಾನೆ. ಆದರೆ ಕರ್ತನು ಅವನಲ್ಲಿ ಜಾಣತನವನ್ನು, ತೀಕ್ಷ್ಣಬುದ್ಧಿಯನ್ನು, ಅವನು ತೋರಿಸಿದ ದೂರದೃಷ್ಟಿ ಮತ್ತು ದೂರಾಲೋಚನೆಯನ್ನು ಮೆಚ್ಚಿದನು. ಅವನು ತನ್ನ ಸ್ಥಾನಮಾನ ಮತ್ತು ಧನವನ್ನು ಸ್ನೇಹಸಂಪಾದನೆಗಾಗಿ ಬಳಸಿಕೊಂಡನು. ಇದರಿಂದಾಗಿ ತಾನು ಸಹಾಯಮಾಡಿದವರು ಮುಂದೆ ತನಗೆ ಸಹಾಯ ಮಾಡುವರೆಂಬ ಚಾಣಾಕ್ಷತನ ಅವನದು. ಯೇಸುವು ಇದನ್ನು ಹೇಳಿದ ನಂತರ ಮನೆವಾರ್ತೆಯ ಕುರಿತು ಕೆಲವು ಪ್ರಮುಖವಾದ ಅಂಶಗಳನ್ನು ಹೇಳಿದನು.

## 7. ಒಳ್ಳೆಯ ಮನೆವಾರ್ತೆಯುವನು ಚಿಕ್ಕ ವಿಷಯುಗಳಲ್ಲೂ ನಂಬಿಗಸ್ತನಾಗಿದ್ದಾನೆ.

ನಾವು ಚಿಕ್ಕ ವಿಷಯಗಳನ್ನು ಹೇಗೆ ನಿರ್ವಹಿಸುವೆವು ಎಂಬುದರ ಮೇಲೆ ನಮ್ಮ ಮನೆವಾಳ್ತನವು ಸಮರ್ಥನೆಗೊಳ್ಳುತ್ತದೆ. ನಮಗೆ ದೊರೆತಿರುವುದು ಬಹಳ ಚಿಕ್ಕ ವಿಷಯವಾಗಿರುವುದಾದರೆ ನಾವದನ್ನು ಎಚ್ಚರಿಕೆಯಿಂದ ಮತ್ತು ಶ್ರದ್ಧೆಯಿಂದ ಮಾಡುತೇವೋ ಅಥವಾ ಅದನ್ನು ಹಗುರ ಭಾವದಿಂದ ಕಾಣುತ್ತೇವೆಯೋ? "ಸ್ವಲ್ಪವಾದದ್ದರಲ್ಲಿ ನಂಬಿಗಸ್ತನಾದವನು ಬಹಳವಾದದ್ದರಲ್ಲಿ ನಂಬಿಗಸ್ತನಾಗುವನು, ಸ್ವಲ್ಪವಾದದ್ದರಲ್ಲಿ ಅನ್ಯಾಯಗಾರನಾದವನು ಬಹಳವಾದದ್ದರಲ್ಲಿಯೂ ಅನ್ಯಾಯಗಾರನಾಗುವನು" (ವಚನ 10)

ಸಣ್ಣ ವಿಷಯಗಳಲ್ಲಿ ತೋರುವ ನಂಬಿಕೆಯು, ದೊಡ್ಡ ವಿಷಯಗಳ ಮೇಲ್ವಿಚಾರಕರಾಗಲು ನಮ್ಮನ್ನು ತಕ್ಕವರನ್ನಾಗಿ ಮಾಡುತ್ತದೆ.

## 8. ಒಳ್ಳೆಯ ಮನೆವಾರ್ತೆಯವನು ಹಣದ ವ್ಯವಹಾರದಲ್ಲಿ ನಂಬಿಗಸ್ತನಾಗಿರುತ್ತಾನೆ.

ಅನೇಕಬಾರಿ ನಾವು ಹಣದ ವ್ಯವಹಾರವನ್ನು ಬಹಳ ಲಘುವಾಗಿ ತೆಗೆದುಕೊಳ್ಳುತ್ತೇವೆ ಅದಕ್ಕೆ ಕಾರಣ ಬಹುಶ: ಅದು 'ಅನೀತಿಯ ಧನಪಿಶಾಚಿ'ಯಾದ್ದರಿಂದ ದೇವರು ಅದನ್ನು ಗಂಭೀರವಾಗಿ ಪರಿಗಣಿಸುವುದಿಲ್ಲವೆಂದಿರಲೂಬಹುದು ಹೇಗೂ, ನಮಗೆ ವಹಿಸಿದ ಹಣದ ಜವಾಬ್ದಾರಿಯನ್ನು ನಾವು ಹೇಗೆ ನಿಭಾಯಿಸುತ್ತೇವೆ ಎನ್ನುವುದನ್ನು ದೇವರು ಪರೀಕ್ಷಿಸುತ್ತಾನೆ.

ನಿಜ ಹೇಳಬೇಕೆಂದರೆ, ಹಣಕಾಸನ್ನು ಕಟ್ಟುನಿಟ್ಟಾಗಿ ನಿರ್ವಹಿಸುವುದರಿಂದ ನಿಜ ಐಶ್ವರ್ಯವಾದ ಪರಲೋಕದ ವಿಷಯಗಳ ಜವಾಬ್ದಾರಿಯನ್ನು ಹೊತ್ತುಕೊಳ್ಳುವ ಯೋಗ್ಯತೆಯನ್ನು ನಮಗೆ ನೀಡುತ್ತದೆ. "ಹೀಗಿರುವುದರಿಂದ ಅನ್ಯಾಯದ ಧನದ ವಿಷಯದಲ್ಲಿ ನೀವು ನಂಬಿಗಸ್ತರಲ್ಲದವರಾದರೆ ನಿಜವಾದ ಧನವನ್ನು ನಿಮ್ಮ ವಶಕ್ಕೆ ಯಾರು ಕೊಟ್ಟಾರು? (ವಚನ 11)

## 9. ಒಳ್ಳೆಯ ಮನೆವಾರ್ತೆಯವರು ಮತ್ತೊಬ್ಬರ ಸೊತ್ತಿನ ವಿಷಯದಲ್ಲಿ ನಂಬಿಗಸ್ತನಾಗಿರುತ್ತಾನೆ.

ಇತರರ ಸೊತ್ತಿನ ವಿಷಯದಲ್ಲಿ ಒಳ್ಳೆಯ ಮನೆವಾಳ್ತನ ನಡೆಸುವುದು ನಮ್ಮ ಸೊತ್ತನ್ನು ಹೊಂದಿಕೊಳ್ಳಲು ನಮಗೆ ಅರ್ಹತೆ ನೀಡುತ್ತದೆ. "ಮತ್ತೊಬ್ಬನ ಸೊತ್ತಿನ ವಿಷಯದಲ್ಲಿ ನೀವು ನಂಬಿಗಸ್ತರಲ್ಲದವರಾದರೆ ನಿಮ್ಮದನ್ನು ನಿಮಗೆ ಯಾರು ಕೊಟ್ಟಾರು? (ವಚನ 12)

ಮನೆವಾಳ್ತನವು ತನ್ನಲ್ಲಿ ಜವಾಬ್ದಾರಿಯನ್ನೂ ಹೊತ್ತುತರುತ್ತದೆ. "ನಾನು ಸ್ವಂತ ಇಷ್ಟದಿಂದ ಈ ಕೆಲಸವನ್ನು ಮಾಡಿದರೆ ನನಗೆ ಬಹುಮಾನ ದೊರೆಯುವುದು; ಮತ್ತೊಬ್ಬನ ಇಷ್ಟದಿಂದ ಮಾಡಿದರೆ ಮನೆವಾರ್ತೆಯು ನನ್ನ ವಶಕ್ಕೆ ಕೊಡಲ್ಪಟ್ಟಿದೆ" (1 ಕೊರಿಂಥ 9:17)

ಮನೆವಾರ್ತೆಯು ತ್ಯಾಗವನ್ನು ಅಪೇಕ್ಷಿಸುತ್ತದೆ, "ಪೌಲನೆಂಬ ನಾನು ಈ ಸುವಾರ್ತೆಗೆ ಸೇವಕನಾದೆನು. ನಾನು ಈಗ ನಿಮಗೋಸ್ಕರ ಅನುಭವಿಸುತ್ತಿರುವ

ಬಾಧೆಗಳಲ್ಲಿ ಸಂತೋಷಪಟ್ಟು ಕ್ರಿಸ್ತನ ಸಂಕಟಗಳೊಳಗೆ ಇನ್ನೂ ಉಳಿದದ್ದನ್ನು ಸಭೆಯೆಂಬ ಆತನ ದೇಹಕ್ಕೋಸ್ಕರ ಶರೀರದಲ್ಲಿ ಅನುಭವಿಸಿ ತೀರಿಸುತ್ತೇನೆ" (ಕೊಲೊಸ್ಸೆ 1:24)

## ವೈಯಕ್ತಿಕ ಅನ್ವಯಿಸುವಿಕೆ

ಪ್ರಶ್ನೆ 1. ನಿನ್ನ ವೈಯಕ್ತಿಕ ನೈತಿಕ ಬದುಕಿನ ಯಾವ ಯಾವ ಕ್ಷೇತ್ರಗಳಲ್ಲಿ ಬಲಗೊಳ್ಳುವ ಅವಶ್ಯಕತೆಯಿದೆ? ಈ ಕ್ಷೇತ್ರಗಳಲ್ಲಿ ಬಲಗೊಳ್ಳಲು ನೀನು ಏನು ಮಾಡಲು ಸಾಧ್ಯವಿದೆ?

ಪ್ರಶ್ನೆ 2. ಆತ್ಮೀಕ ಪರಿಪಕ್ವತೆಯ ಏಳು ಗುಣಲಕ್ಷಣಗಳ ಬೆಳಕಿನಲ್ಲಿ, ನಿಮ್ಮ ಜೀವಿತದ ಯಾವ ಕ್ಷೇತ್ರಗಳ ಆತ್ಮೀಕ ಅಭಿವೃದ್ಧಿಯ ಕಡೆಗೆ ಹೆಚ್ಚಿನ ಗಮನಹರಿಸಬೇಕಾಗಿದೆ?

ಪ್ರಶ್ನೆ 3. ದೇವರ ರಾಜ್ಯದ ಕೆಲಸವು ನಿಮಗೆ ವಹಿಸಲ್ಪಟ್ಟಿರುವುದು ಸದ್ಯಕ್ಕೆ ನೀವು ತೊಡಗಿಕೊಂಡಿರುವ ದೇವರ ರಾಜ್ಯದ ಕೆಲಸದಲ್ಲಿ ನಿಮ್ಮ ಮನೆವಾಳ್ತನದಲ್ಲಿ ಯಾವ ರೀತಿಯಲ್ಲಿ ಉತ್ತಮಪಡಿಸಬಹುದು? ನೀವು ಉತ್ತಮ ಮನೆವಾರ್ತೆಯವನಾಗುವುದು ಹೇಗೆ?

ಒಬ್ಬ ದೇವರ ಸೇವಕನ ವೈಯಕ್ತಿಕ ಜೀವನದ ವಿವಿಧ ವಿಷಯಗಳು, ಮತ್ತು ಗುಣಗಳು ಇವುಗಳ ಕುರಿತು ಹೆಚ್ಚಿನ ಅಧ್ಯಯನಕ್ಕಾಗಿ ದಯವಿಟ್ಟು, ಎಐಸಿ ಪ್ರಕಾಶನ ಸಂಸ್ಥೆಯವರ "ಮರ್ಯಾದೆಯ ಸೂತ್ರಗಳು' ಪುಸ್ತಕವನ್ನು ಪುನರಾವಲೋಕಿಸಿರಿ.

# ಅಧ್ಯಾಯ 6

# ಆತ್ಮನಿಂದ ಜನರನ್ನು ಕಟ್ಟುವುದು

ಕ್ರಿಸ್ತನು ನಮ್ಮ ಕೈಯಿಂದ ಬರೆಸಿಕೊಟ್ಟ ಪತ್ರವಾಗಿದ್ದೀರೆಂಬುದು ಪ್ರತ್ಯಕ್ಷವಾಗಿಯೇ ಇದೆ; ಅದು ಮಸಿಯಿಂದ ಬರೆದಿದ್ದಲ್ಲ, ಜೀವವುಳ್ಳ ದೇವರ ಆತ್ಮನಿಂದಲೇ ಬರೆದದ್ದು; ಕಲ್ಲಿನ ಮೇಲೆಯಲ್ಲ ಮನುಷ್ಯನ ಹೃದಯಗಳೆಂಬ ಹಲಗೆಗಳ ಮೇಲೆ ಬರೆದಿದ್ದು. (2 ಕೊರಿಂಥದವರಿಗೆ 3:3)



# 6

# ಆತ್ಮನಿಂದ ಜನರನ್ನು ಕಟ್ಟುವುದು

ಈ ಅಧ್ಯಾಯದಲ್ಲಿ ನಾವು ರಾಜ್ಯದ ಕೆಲಸದ ನಿಜವಾದ ತಿರುಳನ್ನು ಅಂದರೆ ಜನರನ್ನು ಕಟ್ಟಿ ಬೆಳೆಸುವುದನ್ನು ಉದ್ದೇಶಿಸಿ ನೋಡೋಣ. ದೇವರ ರಾಜ್ಯದ ಕೆಲಸ ಮಾಡುತ್ತಾ ನಾವು ಬಲವಾದ ಸಂಸ್ಥೆಗಳನ್ನು ಬೆಳೆಸುವ ಸಾಧ್ಯತೆ ಇರುವುದಾದರೂ ಸಂಸ್ಥೆ ಕಟ್ಟುವುದೇ ರಾಜ್ಯ ಕಟ್ಟುವುದರ ಉದ್ದೇಶವಲ್ಲ. ರಾಜ್ಯ ಕಟ್ಟುವುದೆಂದರೆ ಬೃಹತ್ ಕಟ್ಟಡಗಳನ್ನು ಎಬ್ಬಿಸುವುದಲ್ಲ ಅಥವಾ ಅರೆಕೊರೆಗಳಿಲ್ಲದ ಪರಿಪೂರ್ಣ ಕಾರ್ಯಕ್ರಮಗಳು, ಕೂಟಗಳು, ಸಮ್ಮೇಳನಗಳು, ಮುಂತಾದವುಗಳನ್ನು ಮಾಡುತ್ತೇವಾದರೂ ಅದೇ ಪ್ರಾಮುಖ್ಯವಲ್ಲ. ರಾಜ್ಯವನ್ನು ಕಟ್ಟುವುದೆಂದರೆ ಜನರನ್ನು ಕಟ್ಟಿ ಬೆಳೆಸುವುದೇ ಆಗಿದೆ.

## ದೇವರ ರಾಜ್ಯ ಕಟ್ಟುವುದು ಜನರನ್ನು ಕಟ್ಟುವುದಾಗಿದೆ.

1 ಕೊರಿಂಥದವರಿಗೆ 3:9

**‘ನಾವು ದೇವರ ಜೊತೆ ಕೆಲಸದವರು; ನೀವು ದೇವರ ಹೊಲವೂ ದೇವರ ಕಟ್ಟಡವೂ ಆಗಿದ್ದೀರಿ.’**

ಅಪೊಸ್ತಲನಾದ ಪೌಲನು ತಾನು ದೇವರ ಜೊತೆ ಕೆಲಸದವನೆಂದು ರಾಜ್ಯ ಕಟ್ಟುವವರೆಂದು ಗುರುತಿಸಿಕೊಂಡನು. ಪೌಲನು ದೇವರೊಂದಿಗೆ ಕೆಲಸ ಮಾಡುತ್ತಿರುವ ‘ಹೊಲ’ ಮತ್ತು ‘ಕಟ್ಟಡವು’ ಆತನ ಜನರಾಗಿದ್ದಾರೆ.

1 ಕೊರಿಂಥದವರಿಗೆ 9:1

**‘ನಾನು ಸ್ವತಂತ್ರನಲ್ಲವೇ? ಅಪೊಸ್ತಲನಲ್ಲವೇ? ನಮ್ಮ ಕರ್ತನಾದ ಯೇಸುವನ್ನು ಕಂಡವನಲ್ಲವೇ? ನಾನು ಕರ್ತನ ಸೇವೆಯಲ್ಲಿ ಮಾಡಿದ ಕೆಲಸದ ಫಲವು ನೀವೇ ಅಲ್ಲವೇ?**

ಅಪೊಸ್ತಲನಾದ ಪೌಲನು ತಾನು ಕೈಗೊಂಡ ಅನೇಕ ಸುವಾರ್ತಾ ಪ್ರಯಾಣಗಳನ್ನು, ಸ್ಥಾಪಿಸಿದ ಸಭೆಗಳನ್ನು, ಮಾಡಿದ ಅನೇಕ ಪ್ರಸಂಗ ಅಥವಾ ಉಪದೇಶಗಳನ್ನು ಅಥವಾ ಬರೆದ ಅನೇಕ ಪತ್ರಿಕೆಗಳನ್ನು ತಾನು ಕರ್ತನಲ್ಲಿ ಮಾಡಿದ ಕಾರ್ಯಗಳೆಂದು ಹೆಮ್ಮೆ ಪಡಬಹುದಾಗಿತ್ತು. ಆದಾಗ್ಯೂ ಅವನು ಜನರ ಕಡೆಗೆ ಕೈತೋರಿ ಅವರು ಕರ್ತನಲ್ಲಿ ತನ್ನ ಕೆಲಸವೆಂದು ಗುರುತಿಸುತ್ತಾನೆ. ‘ನಾನು ಕರ್ತನ ಸೇವೆಯಲ್ಲಿ ಮಾಡಿದ ಕೆಲಸದ ಫಲವು ನೀವೇ ಅಲ್ಲವೇ’

ಎಫೆಸದವರಿಗೆ 2:22

**[22] ಆತ್ಮನಲ್ಲಿ ನೀವೂ ಸಹ ಪವಿತ್ರಾತ್ಮನ ಮೂಲಕವಾಗಿ ದೇವರಿಗೆ ನಿವಾಸ ಸ್ಥಾನವಾಗುವದಕ್ಕಾಗಿ ನಮ್ಮ ಸಂಗಡ ಕಟ್ಟಲ್ಪಡುತ್ತಾ ಇದ್ದೀರಿ.**

ದೇವರು ಒಂದು ಕಟ್ಟಡವನ್ನಾಗಲೀ ಅಥವಾ ಒಂದು ಸಂಸ್ಥೆಯನ್ನಾಗಲೀ ಕಟ್ಟುತ್ತಿಲ್ಲ. ಆತನು ಜನರನ್ನು ಕಟ್ಟುತ್ತಿದ್ದಾನೆ. ದೇವರ ಜನರು ಆತನ ನಿವಾಸ ಸ್ಥಾನವಾಗುವುದಕ್ಕಾಗಿ ಒಟ್ಟಾಗಿ ಕಟ್ಟಲ್ಪಡುತ್ತಿದ್ದಾರೆ.

1 ಪೇತ್ರನು 2:5

**[5]ಆತ್ಮ ಸಂಬಂಧವಾದ ಮಂದಿರವಾಗಲಿಕ್ಕೆ ಕಟ್ಟಲ್ಪಡುತ್ತಾ ಇದ್ದೀರಿ, ಮತ್ತು ಯೇಸು ಕ್ರಿಸ್ತನ ಮೂಲಕ ದೇವರಿಗೆ ಸಮರ್ಪಕವಾದ ಆತ್ಮೀಯ ಯಜ್ಞಗಳನ್ನು ಸಮರ್ಪಿಸುವದಕ್ಕೆ ಪವಿತ್ರ ಯಾಜಕವರ್ಗದವರಾಗಿದ್ದೀರಿ.**

ಈ ಆತ್ಮಿಕ ನಿವಾಸವು ಜೀವವುಳ್ಳ ಕಲ್ಲುಗಳಿಂದ – ದೇವರ ಜನರಿಂದ ಕಟ್ಟಲ್ಪಡುತ್ತಾ ಇದೆ.

ನಿರ್ಜೀವ ಕಲ್ಲುಗಳೊಂದಿಗೆ ಕೆಲಸ ಮಾಡುವುದು ಮತ್ತು ಜೀವವುಳ್ಳ ಕಲ್ಲುಗಳೊಂದಿಗೆ ಕೆಲಸ ಮಾಡುವುದರ ನಡುವೆ ವ್ಯತ್ಯಾಸವಿದೆ! ಕಲ್ಲುಗಳಿಗೆ ಭಾವನೆಗಳಿಲ್ಲ ಆದರೆ ಜೀವವುಳ್ಳ ಕಲ್ಲುಗಳಿಗಿವೆ. ಕಲ್ಲುಗಳು ಬೆಳೆಯುವುದಿಲ್ಲ ಜೀವವುಳ್ಳ ಕಲ್ಲುಗಳು ಬೆಳೆಯುತ್ತವೆ. ಕಲ್ಲುಗಳು ಚಲಿಸುತ್ತವೆ ಜೀವವುಳ್ಳ ಕಲ್ಲುಗಳು ಚಲಿಸುತ್ತವೆ.

## ದೇವರ ರಾಜ್ಯ ಕಟ್ಟುವವರು ಜನರನ್ನು ತಮ್ಮ ಹೃದಯಗಳಲ್ಲಿ ಇಟ್ಟುಕೊಂಡಿರಬೇಕು

2 ಕೊರಿಂಥದವರಿಗೆ 7:3

**[3]ನಿಮ್ಮ ಮೇಲೆ ತಪ್ಪುಹೊರಿಸಬೇಕೆಂದು ನಾನು ಇದನ್ನು ಹೇಳುವುದಿಲ್ಲ ಕೂಡಾ ಸಾಯುವದಕ್ಕೂ ಕೂಡಾ ಬದುಕುವುದಕ್ಕೂ ನೀವು ನಮ್ಮ ಹೃದಯದಲ್ಲಿದ್ದೀರೆಂದು ಮೊದಲೇ ಹೇಳಿದ್ದೇನಲ್ಲಾ.**

ಪೌಲನು ತಾನು ಯಾರಿಗೆ ಸೇವೆ ಮಾಡಿದನೋ ಅವರನ್ನು ತನ್ನ ಹೃದಯದಲ್ಲಿಟ್ಟುಕೊಂಡನು. ಅವರನ್ನು ಅತ್ಯಮೂಲ್ಯವೆಂದು ಭಾವಿಸಿ ಆದರಿಸಿದನು. ಅವರನ್ನು ಪ್ರಿಯರೆಂದು ತಿಳಿದು ಅವರಿಗಾಗಿ ಬದುಕಲೂ, ಸಾಯಲೂ ಸಿದ್ಧನಾದನು.

1 ಥೆಸಲೋನಿಕದವರಿಗೆ 2:19,20

**[19]ನಮ್ಮ ಕರ್ತನಾದ ಯೇಸು ಪ್ರತ್ಯಕ್ಷನಾಗುವಾಗ ಆತನ ಮುಂದೆ ನಮ್ಮ ಭರವಸವೂ ನಮ್ಮ ಸಂತೋಷವೂ ನಾವು ಹೊಗಳಿಕೊಳ್ಳುವ ಜಯಮಾಲೆಯೂ ಯಾರು? [20]ನೀವೇ ಅಲ್ಲವೇ? ನಿಜವಾಗಿ ನೀವೇ ನಮ್ಮ ಗೌರವವೂ ಸಂತೋಷವೂ ಆಗಿದ್ದೀರಿ.**

ಆ ಕಡೆ ದಿನಗಳಲ್ಲಿ ಪೌಲನು ಕರ್ತನ ಮುಂದೆ ನಿಂತಾಗ, ತಾನು ಮಾಡಿದ ಎಲ್ಲಾ ದೊಡ್ಡ ಕಾರ್ಯಗಳ ಕುರಿತು, ತನ್ನ ಪ್ರಯಾಣಗಳ ಕುರಿತು, ತಾನು ಬರೆದ ಪತ್ರಿಕೆಗಳ ಕುರಿತು ಹೊಗಳಕೊಳ್ಳುವುದಿಲ್ಲ. ಬದಲಾಗಿ, ತಾನು ಸೇವೆ ಮಾಡಿದ ಜನರ ಕುರಿತು ಹೆಮ್ಮೆ ಪಡುತ್ತಾನೆ. ಅವನು ಸೇವೆ ಮಾಡಿದ ಜನರೇ ಅವನ ಸಂತೋಷವೂ ಅವನ ಕಿರೀಟವೂ, ಅವನ ಮಹಿಮೆಯೂ, ಅವನು ಕೊಂಡಾಡುವ ಮತ್ತು ಹೊಗಳುವ ಜನರು ಆಗಿದ್ದಾರೆ.

ನಾವು ಯಾವುದರಲ್ಲಿ ಹೆಮ್ಮೆ ಪಡುತ್ತೇವೆ? ನಮ್ಮ ಸಾಧನೆಗಳಲ್ಲೋ ಅಥವಾ ಸೇವೆ ಮಾಡುವ ಜನರಲ್ಲೋ?

2 ಕೊರಿಂಥದವರಿಗೆ 3:1-3

**[1]ನಾವೇ ನಮ್ಮನ್ನು ತಿರಿಗಿ ಹೊಗಳಿಕೊಳ್ಳುವುದಕ್ಕೆ ಪ್ರಾರಂಭಿಸುತ್ತೇವೋ? ಇಲ್ಲವೆ ಕೆಲವರಿಗೆ ಬೇಕಾಗಿರುವ ಪ್ರಕಾರ ನಿಮಗೆ ತೋರಿಸತಕ್ಕ ಯೋಗ್ಯತಾ ಪತ್ರಗಳು ನಮಗೆ ಅಗತ್ಯವೋ? ಅಥವಾ ಅಂಥ ಪತ್ರಗಳನ್ನು ನಿಮ್ಮಿಂದ ಪಡೆಕೊಳ್ಳಬೇಕೋ? [2]ನೀವೇ ನಮ್ಮ ಯೋಗ್ಯತಾಪತ್ರ, ಅದು ನಮ್ಮ ಹೃದಯಗಳಲ್ಲೇ ಬರೆದದೆ; ಆ ಪತ್ರವನ್ನು ಎಲ್ಲರೂ ಬಲ್ಲರು, ಎಲ್ಲರೂ ಓದುತ್ತಾರೆ [3]ಕ್ರಿಸ್ತನು ನಮ್ಮ ಕೈಯಿಂದ ಬರೆಸಿಕೊಟ್ಟ ಪತ್ರವಾಗಿದ್ದೀರೆಂಬುದು ಪ್ರತ್ಯಕ್ಷವಾಗಿಯೇ ಇದೆ; ಅದು ಮಸಿಯಿಂದ ಬರೆದಿದ್ದಲ್ಲ, ಜೀವವುಳ್ಳ ದೇವರ ಆತ್ಮನಿಂದಲೇ ಬರೆದದ್ದು; ಕಲ್ಲಿನ ಮೇಲೆಯಲ್ಲ ಮನುಷ್ಯನ ಹೃದಯಗಳೆಂಬ ಹಲಿಗೆಗಳ ಮೇಲೆ ಬರೆದದ್ದು.**

ಪೌಲನು ಏನು ಹೇಳಿದನೆಂದು ಗಮನಿಸಿರಿ ಅವನು ಸೇವೆ ಮಾಡಿದ ಜನರು ಅವನ ಹೃದಯದಲ್ಲಿ ದಾಖಲಾಗಿದ್ದರು. ಅವನು ಅವರನ್ನು ಹೃದಯದಲ್ಲಿ ಹೊತ್ತು ನಡೆದನು. ಅದು ಎಲ್ಲರಿಗೂ ತಿಳಿದ ವಿಷಯವಾಗಿತ್ತು. ಅವನೀಗ ಅವರನ್ನು ತನ್ನ ಹೃದಯದಲ್ಲಿ ಹೊತ್ತು ನಡೆದ ಕಾರಣ ಅವರ ಹೃದಯಗಳಲ್ಲಿ ತಾನು ಪವಿತ್ರಾತ್ಮನ ನೆರವಿನಿಂದ ಬರೆಯಲು ಸಾಧ್ಯವಾಯಿತು.

ದೇವರು ನಮ್ಮ ಹೃದಯದಲ್ಲಿ ವ್ಯಕ್ತಿಗಳನ್ನು ಮುದ್ರಿಸಲು ಅನುವು ಮಾಡಿಕೊಡುವಾಗ ನಾವು ಅವರ ಹೃದಯಗಳಲ್ಲಿ ಬರೆಯಲು ಆತನು ಸಾಮರ್ಥ್ಯ

ನೀಡುತ್ತಾನೆ. ಇದನ್ನು ಹೊರತು ಪಡಿಸಿ ನಡೆಯುವ ಯಾವುದೇ ಸೇವೆಯು ಜೀವಿತಗಳನ್ನು ಮಾರ್ಪಡಿಸಲು ಶಕ್ತವಲ್ಲದ ಕೇವಲ ಹೊರತೋರಿಕೆಯಾಗಿರುತ್ತದೆ.

## ನಾವು ಆತ್ಮನಿಂದ ಜನರನ್ನು ಕಟ್ಟುತ್ತೇವೆ.

2 ಕೊರಿಂಥದವರಿಗೆ 3:1-3

**[1]ನಾವೇ ನಮ್ಮನ್ನು ತಿರಿಗಿ ಹೊಗಳಿಕೊಳ್ಳುವುದಕ್ಕೆ ಪ್ರಾರಂಭಿಸುತ್ತೇವೋ? ಇಲ್ಲವೆ ಕೆಲವರಿಗೆ ಬೇಕಾಗಿರುವ ಪ್ರಕಾರ ನಿಮಗೆ ತೋರಿಸತಕ್ಕ ಯೋಗ್ಯತಾ ಪತ್ರಗಳು ನಮಗೆ ಅಗತ್ಯವೋ? ಅಥವಾ ಅಂಥ ಪತ್ರಗಳನ್ನು ನಿಮ್ಮಿಂದ ಪಡಕೊಳ್ಳಬೇಕೋ? [2]ನೀವೇ ನಮ್ಮ ಯೋಗ್ಯತಾಪತ್ರ; ಅದು ನಮ್ಮ ಹೃದಯಗಳಲ್ಲೇ ಬರೆದಿದೆ; ಆ ಪತ್ರವನ್ನು ಎಲ್ಲರೂ ಬಲ್ಲರು, ಎಲ್ಲರೂ ಓದುತ್ತಾರೆ. [3] ಕ್ರಿಸ್ತನು ನಮ್ಮ ಕೈಯಿಂದ ಬರೆಸಿಕೊಟ್ಟ ಪತ್ರವಾಗಿದ್ದೀರೆಂಬುದು ಪ್ರತ್ಯಕ್ಷವಾಗಿಯೇ ಇದೆ. ಅದು ಮಸಿಯಿಂದ ಬರೆದದ್ದಲ್ಲ. ಜೀವವುಳ್ಳ ದೇವರ ಆತ್ಮನಿಂದಲೇ ಬರೆದದ್ದು. ಕಲ್ಲಿನ ಮೇಲೆಯಲ್ಲ, ಮನುಷ್ಯ ಹೃದಯಗಳೆಂಬ ಹಲಿಗೆಗಳ ಮೇಲೆ ಬರೆದದ್ದು.**

ನಾವು ಜನರ ಹೃದಯಗಳಲ್ಲಿ "ಮಸಿ/ಇಂಕನ್ನು ಬಳಸಿಯಲ್ಲ ಬದಲಾಗಿ ಜೀವಿಸುವ ಆತ್ಮನಿಂದ ಬರೆಯುತ್ತೇವೆ". ಮನುಷ್ಯರ ಹೃದಯಗಳನ್ನು ತಟ್ಟಲು ನಾವು ಸ್ವಾಭಾವಿಕ ಸಾಧನಗಳನ್ನು ಬಳಸುವುದಿಲ್ಲ. ನಿಜ ಸಂಗತಿಯೆಂದರೆ ನಾವು ಹಾಗೆ ಮಾಡಲಾಗುವುದೇ ಇಲ್ಲ. ದೇವರಾತ್ಮನ ಬಲದಿಂದ ಮಾತ್ರವೇ ಜನರ ಹೃದಯಗಳಲ್ಲಿ ದೇವರ ಕಾರ್ಯವು ಸ್ಥಾಪಿತಗೊಳ್ಳುತ್ತದೆ.

ಯೋಹಾನ 6:63

**[63]ಬದುಕಿಸುವಂಥದ್ದು ಆತ್ಮವೇ, ಮಾಂಸವು ಯಾವದಕ್ಕೂ ಬರುವುದಿಲ್ಲ. ನಾನು ನಿಮಗೆ ಹೇಳಿರುವ ಮಾತುಗಳೇ ಆತ್ಮವಾಗಿಯೂ ಜೀವವಾಗಿಯೂ ಅವೆ.**

ಜೀವವನ್ನು ಹುಟ್ಟಿಸುವುದು ಆತ್ಮನ ಕೆಲಸವೇ – ಜನರ ಜೀವಿತದಲ್ಲಿ ಖಾಯಂ ಬದಲಾವಣೆ ಮತ್ತು ಮನಸಾಂತರವಾಗುವುದು ಆತನಿಂದಲೇ ನಾವು ಆತ್ಮನ ಕೆಲಸವನ್ನು ಆಧಾರ ಮಾಡಿಕೊಳ್ಳಬೇಕೆ ಹೊರತು ಪ್ರಾಪಂಚಿಕ (ಶಾರೀರಿಕ) ಸಾಧನಗಳನ್ನಲ್ಲ.

## ದೇವರು ಅಪರಿಪೂರ್ಣ ಜನರನ್ನು ಪರಿಪೂರ್ಣಗೊಳಿಸಲು ಅಪರಿಪೂರ್ಣ ಜನರನ್ನು ಉಪಯೋಗಿಸುತ್ತಾನೆ.

ಜ್ಞಾನೋಕ್ತಿಗಳು 27:17

**[17] ಕಬ್ಬಿಣವು ಕಬ್ಬಿಣವನ್ನು ಹೇಗೋ ಮಿತ್ರನು ಮಿತ್ರನ ಬುದ್ಧಿಯನ್ನು ಹಾಗೆ ಹರಿತ ಮಾಡುವನು.**

ಯಾರನ್ನಾದರು ಪರಿಪೂರ್ಣಗೊಳಿಸಲು ದೇವರು ನನ್ನನ್ನು ಉಪಯೋಗಿಸಿದರೆ ಅದರಲ್ಲಿ ನಾನು ಪರಿಪೂರ್ಣನೆಂಬುದಾಗಿ ಅರ್ಥವಲ್ಲ! ಇತರರ ಜೀವಿತಗಳನ್ನು ತೀಕ್ಷ್ಣಗೊಳಿಸಲು ದೇವರು ನಮ್ಮ ಮೂಲಕವಾಗಿ ಕಾರ್ಯಮಾಡಲು ಬಯಸಿದರೆ ನಾವು ದೊರೆಯುವವರಾಗಿರಬೇಕು. ಅದೇ ರೀತಿಯಾಗಿ ಬೇರೆ ಯಾರನ್ನಾದರೂ ನಮ್ಮ ಜೀವಿತಗಳಲ್ಲಿ ಕಾರ್ಯ ಮಾಡಲು ಕರ್ತನು ಉಪಯೋಗಿಸಿದರೆ ನಾವು ತೆರೆದವರಾಗಿರಬೇಕು.

## ಆತ್ಮನಿಂದ ಜನರನ್ನು ಕಟ್ಟಲು ಇರುವ ಪ್ರಾಯೋಗಿಕ ಸೂಚಿಗಳು (ಕೀಲಿಕೈಗಳು)

ಜನರು ತಮ್ಮ ಜೀವಿತಕ್ಕಿರುವ ಆತನ ಉದ್ದೇಶ ಮತ್ತು ಯೋಜನೆಗಳನ್ನು ನೇರವೇರಿಸುವ ಹಂತಕ್ಕೆ ಹೆಜ್ಜೆ ಇಡುವಂತೆ ಮಾಡಲು ಅವರನ್ನು ಪೋಷಿಸುವ ದೃಷ್ಟಿಯಿಂದ, ಆತ್ಮನಿಂದ ಜನರನ್ನು ಕಟ್ಟಲು ಇರುವ ಪ್ರಾಯೋಗಿಕ ಸೂಚಿಗಳು ಇಲ್ಲಿವೆ.

### 1. ಒಬ್ಬ ವ್ಯಕ್ತಿಯ ವಿಷಯದಲ್ಲಿ ದೇವರ ಉದ್ದೇಶವನ್ನು ಗುರುತಿಸಬೇಕು.

- ದೇವರು ಒಬ್ಬನಿಗಾಗಿ ಒಬ್ಬಳಿಗಾಗಿ ಮಾಡದ ಯೋಜನೆ ಅಥವಾ ಉದ್ದೇಶಗಳ ವಿರುದ್ಧವಾಗಿ ಆ ವ್ಯಕ್ತಿಯನ್ನು ರೂಪಿಸಲು ಸೆಣಸಾಡಬೇಡಿರಿ.
- ಅವರ ದೈವ-ನೇಮಿತ ಸ್ಥಳವನ್ನು ಗ್ರಹಿಸಿಕೊಳ್ಳಿರಿ.

1 ಕೊರಿಂಥದವರಿಗೆ 12:18

**[18] ಆದರೆ ದೇವರು ಆ ಅಂಗಗಳಲ್ಲಿ ಪ್ರತಿಯೊಂದನ್ನು ತನಗೆ ಸರಿಯಾಗಿ ತೋಚಿದ ಪ್ರಕಾರ ದೇಹದೊಳಗೆ ಇಟ್ಟಿದ್ದಾನೆ.**

- ಅವರ ದೈವ-ನೇಮಿತ ಕೆಲಸಗಳನ್ನು ಗ್ರಹಿಸಬೇಕು.

ರೋಮಾಪುರದವರಿಗೆ 12:4-6

**[4] ನಮಗೆ ಒಂದೇ ದೇಹದಲ್ಲಿ ಬಹಳ ಅಂಗಗಳಿರಲಾಗಿ ಆ ಎಲ್ಲಾ ಅಂಗಗಳಿಗೆ ಹೇಗೆ ಒಂದೇ ಕೆಲಸ ಇರುವುದಿಲ್ಲವೋ [5]ಹಾಗೆಯೇ ನಾವೆಲ್ಲರೂ ಒಟ್ಟಾಗಿ ಕ್ರಿಸ್ತನಲ್ಲಿ ಒಂದೇ ದೇಹವಾಗಿದ್ದು ಒಬ್ಬೊಬ್ಬರಾಗಿ ಪರಸ್ಪರ ಅಂಗಗಳಾಗಿದ್ದೇವೆ. [6]ದೇವರು ನಮಗೆ ಕೃಪೆ ಮಾಡಿದ ಪ್ರಕಾರ ನಾವು ಬೇರೆ ಬೇರೆ ವರಗಳನ್ನು ಹೊಂದಿದ್ದೇವೆ. ಹೊಂದಿದ ವರವು ಪ್ರವಾದನೆಯ ರೂಪವಾಗಿದ್ದರೆ ನಮ್ಮ ವಿಶ್ವಾಸ ವರಕ್ಕೆ ತಕ್ಕ ಹಾಗೆ ಪ್ರವಾದನೆ ಹೇಳೋಣ.**

ಜನರಿಗೆ ಅವರಿಗೆ ದೇವರು ನೇಮಿಸಿದ ಉದ್ದೇಶಗಳನ್ನು ಕಂಡುಹಿಡಿಯಲು ಮತ್ತು ಅವುಗಳನ್ನು ನೆರವೇರಿಸಲು ಮುನ್ನಡೆಸಲು ಸಹಾಯ ಮಾಡುವುದು ಒಂದು ಗಂಭೀರ ಜವಾಬ್ಧಾರಿಯಾಗಿದೆ. ಇದರಲ್ಲಿ ದೇವರಾತ್ಮನ ನಡಿಸುವಿಕೆಯ ಬಗ್ಗೆ ತೀವ್ರವಾಗಿ ಸೂಕ್ಷ್ಮ ಗ್ರಾಹಿಗಳಾಗಿರಬೇಕು.

ಯೇಸುವು, ಜನರನ್ನು ಆತ್ಮನಿಂದ ಗ್ರಹಿಸುತ್ತಿದ್ದನು.

*(ಅ) ಪ್ರೇತನ ವಿಷಯದಲ್ಲಿ*

ಯೋಹಾನ 1:41,42

**41 ಇವನು ಮೊದಲು ತನ್ನ ಅಣ್ಣನಾದ ಸೀಮೋನನನ್ನು ಕಂಡುಕೊಂಡು ಅವನಿಗೆ ಮೆಸ್ಸೀಯನು ನಮಗೆ ಸಿಕ್ಕಿದನು ಎಂದು ಹೇಳಿ 42 ಅವನನ್ನು ಯೇಸುವಿನ ಬಳಿಗೆ ಕರೆದುಕೊಂಡು ಬಂದನು (ಮೆಸ್ಸೀಯನು ಅಂದರೆ ಕ್ರಿಸ್ತನು) ಯೇಸು ಅವನನ್ನು ನೋಡಿ ನೀನು ಯೋಹಾನನ ಮಗನಾದ ಸಿಮೋನನು ಇನ್ನು ಮೇಲೆ ಕೇಫನೆನಿಸಿಕೊಳ್ಳುವಿ ಅಂದನು (ಕೇಫನೆಂದರೆ ಪೇತ್ರ)**

*(ಬಿ) ನತಾನಯೇಲನ ವಿಷಯದಲ್ಲಿ*

ಯೋಹಾನ 1:47

**47ಯೇಸು ತನ್ನ ಕಡೆಗೆ ಬರುವ ನತಾನಯೇಲನನ್ನು ಕಂಡು ಅವನ ವಿಷಯವಾಗಿ - ಇಗೋ ಇವನು ನಿಜವಾದ ಇಸ್ರಾಯೇಲನು, ಇವನಲ್ಲಿ ಕಪಟವಿಲ್ಲ ಅಂದನು.**

ಆತ್ಮನಿಂದ, ವ್ಯಕ್ತಿಗಳ ಭವಿಷ್ಯತ್ತನು ನೋಡಿ ಅರ್ಥಮಾಡಿಕೊಂಡು ಅದಕ್ಕಾಗಿ ತರಭೇತಿಯನ್ನು ನೀಡಿ ಅವರನ್ನು ಅದರೊಳಗೆ ಸರಿಯಾದ ಸಮಯದೊಳಗೆ ಬಿಡುಗಡೆಗೊಳಿಸಬೇಕು.

## 2. ದೈವದತ್ತವಾದ ಸಾಮರ್ಥ್ಯಗಳನ್ನು ಬಿಡುಗಡೆಗೊಳಿಸುವಂತೆ ಜನರನ್ನು ಪ್ರವೃತ್ತಿಗೊಳಿಸಬೇಕು.

ಜನರು ಸರಿಯಾದ ಸ್ಥಾನದಲ್ಲಿ ಇರಿಸಲ್ಪಡಬೇಕು. ಋತುವಿನಿಂದ ಋತುವಿಗೆ ಅವರನ್ನು ದೇವರ ನೇಮಿತ ಸ್ಥಳದಲ್ಲಿ ಇಡಬೇಕು, ಆದುದರಿಂದ ಅವರು ಏನಾಗಬೇಕೆಂದು ದೇವರು ಬಯಸುತ್ತಾನೋ ಹಾಗೆ ಆಗಲು ಪ್ರಬುದ್ಧ ಗೊಳಿಸಬೇಕು.

*(ಅ) ಮೋಶೆ ಮತ್ತು ಯೆಹೋಶುವನ ವಿಷಯಗಳಲ್ಲಿ :*

ಧರ್ಮೋಪದೇಶಕಾಂಡ 1:38

**38ಆದರೆ ನಿನ್ನ ಶಿಷ್ಯನಾದ ನೂನೋನನ ಮಗ ಯೆಹೋಶುವನು ಅಲ್ಲಿಗೆ ಸೇರುವನು. ಅವನೇ. ಇಸ್ರಾಯೇಲ್ಯರಿಗೆ ಆ ದೇಶವನ್ನು ಸ್ವಾಧೀನಪಡಿಸುವನು, ಆದುದರಿಂದ ಅವನನ್ನು ಧೈರ್ಯಗೊಳಿಸು.**

ಧರ್ಮೋಪದೇಶಕಾಂಡ 3:28

**28 ಯೆಹೋಶುವನೇ ಈ ಜನರ ನಾಯಕನಾಗಿ ಹೋಗಿ ನೀನು ನೋಡುವ ದೇಶವನ್ನು ಅವರಿಗೆ ಸ್ವಾಧೀನ ಪಡಿಸುವನು. ಅವನಿಗೆ ಈ ಅಧಿಕಾರವನ್ನು ಕೊಡಬೇಕು; ಅವನು ದೃಢನಾಗುವಂತೆ ಅವನನ್ನು ಧೈರ್ಯಪಡಿಸಬೇಕೆಂದು ಉತ್ತರಕೊಟ್ಟನು.**

*(ಬ) ಬಾರ್ನಬನು ಮತ್ತು ಸೌಲನ ವಿಷಯದಲ್ಲಿ*

ಅಪೊಸ್ತಲರ ಕೃತ್ಯಗಳು 11:25,26

**25ಆಗ ಬಹುಮಂದಿ ಕರ್ತನಿಗೆ ಸೇರಿಕೊಂಡರು 26ತರುವಾಯ ಬಾರ್ನಬನು ಸೌಲನನ್ನು ಹುಡುಕುವದಕ್ಕಾಗಿ ತಾರ್ಸಕ್ಕೆ ಹೋಗಿ ಅವನನ್ನು ಕಂಡು ಅಂತಿಯೋಕ್ಯಕ್ಕೆ ಕರೆದುಕೊಂಡು ಬಂದನು. ಆ ಮೇಲೆ ಅವರು ಪೂರಾ ಒಂದು ವರುಷ ಸಭೆಯವರ ಸಂಗಡ ಕೂಡಿದ್ದು ಬಹು ಜನರಿಗೆ ಉಪದೇಶಮಾಡಿದರು ಅಂತಿಯೋಕ್ಯದಲ್ಲಿಯೇ ಶಿಷ್ಯರಿಗೆ ಕ್ರೈಸ್ತರೆಂಬ ಹೆಸರು ಮೊದಲು ಬಂತು.**

*(ಕ) ಪೌಲನು ಬಾರ್ನಬನು ಮತ್ತು ಯೋಹಾನನೆಂಬ ಮಾರ್ಕನು*

ಕೆಲವು ಬಾರಿ ಪೌಲನು ಪ್ರಾರಂಭದಲ್ಲಿ ಯೋಹಾನನೆಂಬ ಮಾರ್ಕನ ವಿಷಯದಲ್ಲಿ ತಪ್ಪು ಮಾಡಿ ಮತ್ತು ಅದನ್ನು ಬದಲಾಯಿಸಿದಂತೆ ನೀವು ಕೂಡ ಕೆಲವು ಬಾರಿ ಒಬ್ಬ ವ್ಯಕ್ತಿಯ ಕುರಿತು ದೇವರ ಸಾಮರ್ಥ್ಯವನ್ನು ಗ್ರಹಿಸಿಕೊಳ್ಳದ ತಪ್ಪುಗಳನ್ನು ಮಾಡಬಹುದು.

ಅಪೊಸ್ತಲರ ಕೃತ್ಯಗಳು 13:13

**13ತರುವಾಯ ಪೌಲನೂ ಅವನ ಜೊತೆಯಲ್ಲಿದ್ದವರೂ ಪಾಫೋಸೂರನ್ನು ಬಿಟ್ಟು ಸಮುದ್ರಪ್ರಯಾಣ ಮಾಡಿ ಪಂಫುಲ್ಯ ಸೀಮೆಗೆ ಸೇರಿದ ಪೆರ್ಗೆಗೆ ಬಂದರು. ಯೋಹಾನನು ಅವರನ್ನು ಬಿಟ್ಟು ಹಿಂತಿರುಗಿ ಯೆರೊಸಲೇಮಿಗೆ ಹೋದನು.**

ಅಪೊಸ್ತಲರ ಕೃತ್ಯಗಳು 15:36-41

**36 ಕೆಲವು ದಿವಸಗಳಾದ ಮೇಲೆ ಪೌಲನು ಬಾರ್ನಬನಿಗೆ ನಾವು ಕರ್ತನ ವಾಕ್ಯವನ್ನು ಸಾರಿದ ಎಲ್ಲಾ ಊರುಗಳಿಗೆ ತಿರಿಗಿ ಹೋಗಿ ಅಲ್ಲಿರುವ ಸಹೋದರರು ಹೇಗಿದ್ದಾರೆಂದು ನೋಡೋಣ ಬಾ ಎಂದು**

**ಹೇಳಿದನು. [37]ಬಾರ್ನಬನು ಮಾರ್ಕನೆನಿಸಿಕೊಳ್ಳುವ ಯೋಹಾನನನ್ನು [38]ತಮ್ಮ ಸಂಗಡ ಕರೆದುಕೊಂಡು ಹೋಗಬೇಕೆಂದಿದ್ದಾಗ ಪೌಲನು ನಮ್ಮೊಂದಿಗೆ ಕೆಲಸಕ್ಕೆ ಬಾರದೆ ಪೆಂಫುಲ್ಯದಲ್ಲಿ ನಮ್ಮನ್ನು ಬಿಟ್ಟುವನನ್ನು ಕರೆದುಕೊಂಡು ಹೋಗುವುದು ತಕ್ಕದ್ದಲ್ಲವೆಂದು ನೆನಸಿದನು [39]ಈ ವಿಷಯದಲ್ಲಿ ತೀಕ್ಷ್ಣ ವಾಗ್ವಾದವುಂಟಾಗಿ ಅವರು ಒಬ್ಬರನೊಬ್ಬರು ಅಗಲಿದರು. ಬಾರ್ನಬನು ಮಾರ್ಕನನ್ನು ಕರಕೊಂಡು ಸಮುದ್ರ ಮಾರ್ಗದಲ್ಲಿ ಕುಪ್ರ ದ್ವೀಪಕ್ಕೆ ಹೋದನು. [40]ಪೌಲನು ಸೀಲನನ್ನು ಆರಿಸಿಕೊಂಡು ಸಹೋದರರಿಂದ ಕರ್ತನ ಕೃಪಾಶ್ರಯಕ್ಕೆ [41]ಒಪ್ಪಿಸಲ್ಪಟ್ಟವನಾಗಿ ಹೊರಟು ಸಿರಿಯ ಕಿಲಿಕ್ಯ ಸೀಮೆಗಳಲ್ಲಿ ಸಂಚರಿಸುತ್ತಾ ಸಭೆಗಳನ್ನು ದೃಢಪಡಿಸಿದನು.**

ಕೊಲೊಸ್ಸೆಯವರಿಗೆ 4:10

**[10]ನನ್ನ ಜೊತೆ ಸೆರೆಯವನಾದ ಅರಿಸ್ತಾರ್ಕನೂ ಬಾರ್ನಬನಿಗೆ ದಾಯಾದನಾಗಿರುವ. ಮಾರ್ಕನೂ ನಿಮಗೆ ವಂದನೆ ಹೇಳುತ್ತಾನೆ. ಮಾರ್ಕನನ್ನು ಕುರಿತು ಅಪ್ಪಣೆಗಳನ್ನು ಹೊಂದಿದ್ದಿರಲ್ಲಾ ಅವನು ನಿಮ್ಮಬಳಿಗೆ ಬಂದರೆ ಅವನನ್ನು ಸೇರಿಸಿಕೊಳ್ಳಿರಿ.**

2 ತಿಮೊಥೆಯನಿಗೆ 4:11

**[11]ಲೂಕನು ಮಾತ್ರ ನನ್ನ ಜೊತೆಯಲ್ಲಿದ್ದಾನೆ. ಮಾರ್ಕನನ್ನು ಸಂಗಡ ಕರಕೊಂಡು ಬಾ, ಅವನು ನನಗೆ ಸೇವೆಗಾಗಿ ಉಪಯುಕ್ತನಾಗಿದ್ದಾನೆ.**

## ೩. ಅವರ ವರಗಳನ್ನು ಕಂಡುಹಿಡಿಯಿರಿ ಮತ್ತು ಪಕ್ವಗೊಳಿಸಿ

ನೀವು ಜನರನ್ನು ಅವರಿಗೆ ದೊರಕಿದ ಕೃಪೆ ಮತ್ತು ವರಗಳ ಕ್ಷೇತ್ರಗಳಲ್ಲಿ ಪ್ರೋತ್ಸಾಹ ಪಡಿಸಬೇಕು. ಅವರು ಕೃಪೆ ಮತ್ತು ವರಗಳ ಕ್ಷೇತ್ರ ಬಿಟ್ಟು ಮತ್ತೊಂದು ಕಡೆಗೆ ಹೋಗದಂತೆ ನೀವು ಜನರನ್ನು ಹತೋಟಿಯಲ್ಲಿಡುವುದು ಅವಶ್ಯಕ. ಮನುಷ್ಯರಾಗಿ, ನಾವು ಮತ್ತೊಬ್ಬನು ಹೊಂದಿಕೊಂಡಿರುವ ವಿಷಯ ಬೇಕೆಂಬ ಇಚ್ಛೆಹೊಂದಿರುವುದು ಸ್ವಾಭಾವಿಕ ಪ್ರವೃತ್ತಿಯಾಗಿದೆ

1 ತಿಮೊಥೆಯನಿಗೆ 4:14

**[14]ನಿನ್ನಲ್ಲಿರುವ ವರವನ್ನು ಅಲಕ್ಷ್ಯ ಮಾಡಬೇಡ, ಸಭೆಯ ಹಿರಿಯರು ಪ್ರವಾದನೆಯ ಸಹಿತವಾಗಿ ನಿನ್ನ ಮೇಲೆ ಹಸ್ತಗಳನ್ನಿಟ್ಟಾಗ ಅದು ನಿನಗೆ ಕೊಡಲ್ಪಟ್ಟಿತಲ್ಲಾ.**

2 ತಿಮೊಥೆಯನಿಗೆ 1:6,7

[6] ಆದಕಾರಣ ನಾನು ನಿನ್ನ ತಲೆಯ ಮೇಲೆ ಹಸ್ತವನ್ನಿಟ್ಟಿದ್ದರ ಮೂಲಕ ನಿನಗೆ ದೊರಕಿದ ದೇವರ ಕೃಪಾವರವು ಪ್ರಜ್ವಲಿಸುವಂತೆ ಮಾಡಬೇಕೆಂದು ನಿನಗೆ ಜ್ಞಾಪಕ ಕೊಡುತ್ತೇನೆ. [7] ದೇವರು ನಮಗೆ ಕೊಟ್ಟಿರುವ ಆತ್ಮವು ಬಲ ಪ್ರೀತಿ ಶಿಕ್ಷಣಗಳ ಆತ್ಮವೇ ಹೊರತು ಹೇಡಿತನದ ಆತ್ಮವಲ್ಲ.

## 4. ಜೀವಿತದಿಂದ ಜೀವಿತಕ್ಕೆ ಪೋಷಣೆ ಮಾಡಿರಿ

ಫಿಲಿಪ್ಪಿಯವರಿಗೆ 4:9

[9] ನೀವು ಯಾವದನ್ನು ನನ್ನಿಂದ ಕಲಿತು ಹೊಂದಿದಿರೋ ಮತ್ತು ಯಾವದನ್ನು ನನ್ನಲ್ಲಿ ಕೇಳಿ ಕಂಡಿರೋ ಅದನ್ನೇ ಮಾಡುತ್ತಾ ಬನ್ನಿರಿ ಹೀಗೆ ಮಾಡಿದರೆ ಶಾಂತಿದಾಯಕನಾದ ದೇವರು ನಿಮ್ಮೊಂದಿಗಿರುವನು.

1 ಕೊರಿಂಥದವರಿಗೆ 4:16

[16]ನನ್ನನ್ನು ಅನುಸರಿಸುವಂತೆ ನಿಮ್ಮನ್ನು ಬೇಡಿಕೊಳ್ಳುತ್ತೇನೆ.

1ಕೊರಿಂಥದವರಿಗೆ 11:1

ಕ್ರಿಸ್ತನನ್ನು ಅನುಸರಿಸುವಂತೆಯೇ ನೀವು ನನ್ನನ್ನು ಅನುಸರಿಸುವವರಾಗಿರಿ.

ಯಾವಾಗಲೂ ನೀವು ಬೋಧಿಸುವಂತಹ ಪ್ರಖ್ಯಾತ ಸಂದೇಶವೆಂದರೆ ನೀವು ಜೀವಿಸುವಂತಹ ಜೀವಿತವೇ ಆಗಿದೆ.

ಮತ್ತಾಯ 5:19

[19]ಆದ್ದರಿಂದ ಈ ಸಣ್ಣ ಸಣ್ಣ ಆಜ್ಞೆಗಳಲ್ಲಿಯಾದರೂ ಒಂದನ್ನು ಮೀರಿ ಜನರಿಗೂ ಹಾಗೆ ಮೀರುವುದಕ್ಕೆ ಬೋಧಿಸುವವನು ಪರಲೋಕ ರಾಜ್ಯದಲ್ಲಿ ಬಹಳ ಚಿಕ್ಕವನೆನಿಸಿಕೊಳ್ಳುವನು, ಆದರೆ ತಾನೇ ಆ ಆಜ್ಞೆಗಳಂತೆ ನಡೆದುಕೊಂಡು ಜನರಿಗೂ ಹಾಗೆ ನಡೆಯಬೇಕೆಂದು ಬೋಧಿಸುವವನು ಪರಲೋಕ ರಾಜ್ಯದಲ್ಲಿ ದೊಡ್ಡವನೆನಿಸಿಕೊಳ್ಳುವನು.

ಉಪದೇಶಿಸುವುದಕ್ಕೆ ಮೊದಲು ನೀವು ಅವುಗಳನ್ನು ಮಾಡುತ್ತಿರಬೇಕು.

ಮತ್ತಾಯ 15:14

[14]ತಾವೇ ಕುರುಡರು, ಮತ್ತೊಬ್ಬರಿಗೆ ದಾರಿ ತೋರಿಸುವದಕ್ಕೆ ಹೋಗುತ್ತಾರೆ, ಕುರುಡನು ಕುರುಡನಿಗೆ ದಾರಿ ತೋರಿಸಿದರೆ ಅವರಿಬ್ಬರೂ ಕುಣಿಯಲ್ಲಿ ಬೀಳುವರು ಅಂದನು.

ನೀವೇ ಪ್ರಕಟಣೆಗಳನ್ನು ಹೊಂದಿಕೊಳ್ಳದಿದ್ದರೆ, ನೀವು ಜನರನ್ನು ಪ್ರಕಟನೆಯ ಕಡೆಗೆ ನಡೆಸಲಾಗುವುದಿಲ್ಲ. ನೀವು ಅದನ್ನು ಮಾಡಲು ಪ್ರಯತ್ನಿಸಿದರೆ, ಕುರುಡನು ಕುರುಡನಿಗೆ ದಾರಿ ತೋರಿಸಿದಂತಾಗುತ್ತದೆ. ಮತ್ತು ಅವರಿಬ್ಬರು ಕುಣಿಯಲ್ಲಿ ಬೀಳುತ್ತಾರೆ.

ನಿಮ್ಮಲ್ಲಿ ಇಲ್ಲದಿರುವ ಯಾವುದನ್ನೂ ನೀವು ಕೊಡಲು ಸಾಧ್ಯವಿಲ್ಲ.

ನೀವೇ ಹೋಗದೇ ಇರುವ ಸ್ಥಳಗಳಿಗೆ, ನೀವು ಇತರರನ್ನು ಕರೆದೊಯ್ಯಲು ಸಾಧ್ಯವಿಲ್ಲ.

ನೀವೇ ಕ್ರಿಸ್ತನ - ಹೋಲಿಕೆಯಲ್ಲಿ ಪರಿಪಕ್ವತೆಯಿಲ್ಲದವರಾದರೆ ನೀವು ಜನರನ್ನು ಕ್ರಿಸ್ತನ ಸಾದೃಶ್ಯದಲ್ಲಿ ಪ್ರಬುದ್ಧಗೊಳಿಸಲು ಶಕ್ತರಾಗುವುದಿಲ್ಲ.

ನೀವೇ ಬಂಧನಗಳಲ್ಲಿ ಸಿಕ್ಕಿ ಹಾಕಿಕೊಂಡಿದ್ದರೆ, ನೀವು ಅಂತಹ ಕ್ಷೇತ್ರಗಳಲ್ಲಿ ಸ್ವಾತಂತ್ರ್ಯ ಕೊಡಲು ಆಗುವುದಿಲ್ಲ.

## 5. ಅಭದ್ರತೆಗಳನ್ನು ತಪ್ಪಿಸಿರಿ

ನಾಯಕರು ಎದುರಿಸುತ್ತಿರುವ ದೊಡ್ಡ ಸಮಸ್ಯೆಗಳೆಂದರೆ ಜನರೊಂದಿಗಿನ ಸಂಬಂಧದಲ್ಲಿ ಅಭದ್ರತೆಯಿಂದ ಹೊರಬರದಿರುವದು.

ಅಭದ್ರ ನಾಯಕರು, ಇತರ ಜನರ ಮೇಲೆ ಅಸೂಯೆಗೊಳ್ಳುತ್ತಾರೆ. ಇತರ ಜನರನ್ನು ನಿಯಂತ್ರಣದಲ್ಲಿಟ್ಟುಕೊಳ್ಳುತ್ತಾರೆ, ಜನರ ಜೀವಿತಗಳಲ್ಲಿ ಅಧಿಕವಾಗಿ ತೊಡಗಿಸಿಕೊಳ್ಳುತ್ತಾರೆ, ಅತ್ಯಾಧಿಕವಾಗಿ ಅಧಿಕಾರಯುಕ್ತರಾಗಿ/ನಿರಂಕುಶ ಮತ್ತು ಇನ್ನು ಮುಂತಾದವುಗಳಲ್ಲಿ ತೊಡಗುತ್ತಾರೆ. ನೀವೇ ಇಂತಹ ಅಪಾಯದ ಗುಂಡಿಗಳಿಂದ ನಿಮ್ಮನ್ನು ಕಾಪಾಡಿಕೊಳ್ಳಬೇಕು.

*(ಅ) ಅಸೂಯೆಯನ್ನು ತಪ್ಪಿಸಿರಿ.*

ಸೌಲನು ಮತ್ತು ದಾವೀದನ ಉದಾಹರಣೆ

### 1 ಸಮುವೇಲನು 18:6-11

[6]ದಾವೀದನು ಫಿಲಿಷ್ಟಿಯನನ್ನು ಸಂಹರಿಸಿ ಸರ್ವಜನರೊಡನೆ ಹಿಂದಿರುಗಿ ಬರುವಾಗ ಇಸ್ರಾಯೇಲ್ಯರ ಎಲ್ಲಾ ಪಟ್ಟಣಗಳಿಂದ ಸ್ತ್ರೀಯರು ಹೊರಗೆ ಬಂದು ದಮ್ಮಡಿ ತಾಳಗಳನ್ನು ಹಿಡಿದು ಸಂತೋಷದಿಂದ ಹಾಡುತ್ತಾ ಕುಣಿಯುತ್ತಾ ಅರಸನಾದ ಸೌಲನನ್ನು ಎದುರುಗೊಂಡರು. ಅವರು ಪರಸ್ಪರವಾಗಿ [7] ಸೌಲನು ಸಾವಿರಗಟ್ಟಲೆಯಾಗಿ ಕೊಂದನು, ದಾವೀದನು ಹತ್ತು ಸಾವಿರಗಟ್ಟಳೆಯಾಗಿ ಕೊಂದನು. ಎಂದು ಹಾಡಿದರು. [8]ಈ ಮಾತುಗಳ ದೆಸೆಯಿಂದ ಸೌಲನಿಗೆ ಬಹು ವ್ಯಸನವೂ ಕೋಪವೂ ಉಂಟಾಗಿ ಅವನು - ದಾವೀದನು ಹತ್ತು ಸಾವಿರಗಟ್ಟಳೆಯಾಗಿ ಕೊಂದನೆಂದೂ ನಾನು ಸಾವಿರಗಟ್ಟಲೆಯಾಗಿ ಕೊಂದನೆಂದೂ ಹಾಡುತ್ತಾರಲ್ಲಾ! ರಾಜತ್ವದ ಹೊರತು ಅವನಿಗೆ ಇನ್ನೇನು ಕಡಿಮೆಯಾದ ಹಾಗಾಯಿತು ಅಂದುಕೊಂಡು [9]ಅಂದಿನಿಂದ ಅವನ ಮೇಲೆ ಕಣ್ಣಿಟ್ಟನು. [10]ಮರುದಿನ ದೇವರಿಂದ ಕಳುಹಿಸಲ್ಪಟ್ಟ ದುರಾತ್ಮವು ಸೌಲನ ಮೇಲೆ ಬಂದದರಿಂದ ಅವನು ಬುದ್ದಿಗೆಟ್ಟು ಮನೆಯೊಳಗೆ ಕೂಗುತ್ತಿದ್ದನು. ಅವನ ಕೈಯಲ್ಲಿ ಒಂದು ಈಟಿ ಇತ್ತು. ದಾವೀದನು ಕ್ರಮದ ಪ್ರಕಾರ ಕಿನ್ನರಿಯನ್ನು ಬಾರಿಸುತ್ತಾ ಇದ್ದನು [11]ಆಗ ಸೌಲನು ದಾವೀದನನ್ನು ಗೋಡೆಗೆ  ಹತ್ತಿಕೊಳ್ಳುವ ಹಾಗೆ ತಿವಿಯುವೆನೆಂದುಕೊಂಡು ಈಟಿಯನ್ನು ಎಸೆದನು ದಾವೀದನು ಎರಡು ಸಾರಿ ತಪ್ಪಿಸಿಕೊಂಡನು.

### 1 ಯೋಹಾನ 4:20,21

[20]ಒಬ್ಬನು ತಾನು ದೇವರನ್ನು ಪ್ರೀತಿಸುತ್ತೇನೆಂದು ಹೇಳಿ ತನ್ನ ಸಹೋದರನನ್ನು ದ್ವೇಷಿಸಿದರೆ ಅವನು ಸುಳ್ಳುಗಾರನಾಗಿದ್ದಾನೆ. ತಾನು ಕಂಡಿರುವ ತನ್ನ ಸಹೋದರನನ್ನು ಪ್ರೀತಿಸದವನು ತಾನು ಕಾಣದಿರುವ ದೇವರನ್ನು ಪ್ರೀತಿಸಲಾರನು. [21]ದೇವರನ್ನು ಪ್ರೀತಿಸುವವನು ತನ್ನ ಸಹೋದರನನ್ನು ಪ್ರೀತಿಸಬೇಕೆಂಬ ಆಜ್ಞೆಯನ್ನು ನಾವು ಆತನಿಂದ ಹೊಂದಿದ್ದೇವೆ.

ಶುದ್ಧವಾದ ಹೃದಯವು, ದೇವರಕಡೆಗೆ ಸರಿಯಾದ ಹೃದಯ ಮಾತ್ರವಲ್ಲದೇ ಜನರ ಕಡೆಗೂ ಸರಿಯಾದುದಾಗಿರುತ್ತದೆ.

### *(ಅ) ಅತಿ ರಕ್ಷಣೆ/ಅತಿ ನಿಯಂತ್ರಣ ಮಾಡದಿರಿ*

### 2 ಕೊರಿಂಥದವರಿಗೆ 11:1-4

[1] ನಾನು ನನ್ನನ್ನು ಹೊಗಳಿಕೊಳ್ಳುವದರಲ್ಲಿ ಸ್ವಲ್ಪ ಬುದ್ಧಿಹೀನತೆಯಿಂದ ಮಾತಾಡುತ್ತೇನೆ, ನೀವು ಅದನ್ನು ಸಹಿಸಿಕೊಳ್ಳುತ್ತೀರೇನೋ. ನನ್ನನ್ನು ಸಹಿಸಿಕೊಳ್ಳಬೇಕೆಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ. [2]ಯಾಕೆಂದರೆ ದೇವರಲ್ಲಿರುವಂಥ ಚಿಂತೆಯಿಂದಲೇ ನಾನು ನಿಮ್ಮ ವಿಷಯದಲ್ಲಿ ಚಿಂತಿಸುತ್ತೇನೆ. ನಿಮ್ಮನ್ನು ಕ್ರಿಸ್ತನೆಂಬ ಒಬ್ಬನೇ ಪುರುಷನಿಗೆ ಶುದ್ಧ ಕನ್ಯೆಯಂತೆ ಒಪ್ಪಿಸಬೇಕೆಂದು ನಿಮ್ಮನ್ನು ಆತನಿಗೆ ನಿಶ್ಚಯ ಮಾಡಿದೆನಲ್ಲಾ [3]ಆದರೆ ಹೇಗೆ ಹವ್ವಳು ಸರ್ಪದ ಕುಯುಕ್ತಿಗೆ ಒಳಬಿದ್ದು ಮೋಸ ಹೋದಳೋ ಹಾಗೆಯೇ ನಿಮ್ಮ ಮನಸ್ಸು ಕ್ರಿಸ್ತನ ವಿಷಯದಲ್ಲಿರಬೇಕಾದ ಯಥಾರ್ಥತ್ವವನ್ನು

**ಪಾತಿವ್ರತ್ಯವನ್ನು ಬಿಟ್ಟು ಕೆಟ್ಟು ಹೋದಿತೆಂದು ನನಗೆ ಭಯವುಂಟು [4]ಯಾಕೆಂದರೆ ನಾವು ಪ್ರಸಿದ್ಧಿ ಪಡಿಸಿದ್ದ ಮತ್ತೊಬ್ಬ ಯೇಸುವನ್ನು ನಿಮ್ಮ ಬಳಿಗೆ ಬರುವವರು ಪ್ರಕಟಿಸುವಾಗಲೂ ನೀವು ಹೊಂದದೇ ಇದ್ದ ಬೇರೆ ವಿಧವಾದ ಆತ್ಮ ಪ್ರೇರಣೆಯನ್ನು ಹೊಂದುವಾಗಲೂ ಅವಲಂಬಿಸದೆಯಿದ್ದ ಬೇರೊಂದು ಸುವಾರ್ತೆಯನ್ನು ಕೇಳುವಾಗಲೂ ನೀವು ಸಹಿಸಿಕೊಳ್ಳುತ್ತಿರುವದು ಬಹು ಆಶ್ಚರ್ಯ.**

2 ಕೊರಿಂಥದವರಿಗೆ 1:24

**[24]ಆದರೆ ದೇವರಿಂದ ಕರಿಸಿಕೊಂಡವರು ಯೆಹೂದ್ಯರಾಗಲಿ ಗ್ರೀಕರಾಗಲಿ ಅವರಿಗೆ ಇಂಥವನು ದೇವರ ಶಕ್ತಿಯೂ ದೇವರ ಜ್ಞಾನವೂ ಆಗಿರುವ ಕ್ರಿಸ್ತನೇ**

''ದೇವರಲ್ಲಿರುವಂಥ ಚಿಂತೆಯಿಂದಲೇ ಜನರ ವಿಷಯದಲ್ಲಿ ಚಿಂತಿಸುವುದು'' ಇದರಲ್ಲಿ ಸಮತೋಲನದಲ್ಲಿರಬೇಕು. ಅವರ ನಂಬಿಕೆ ಮತ್ತು ದೇವರೊಟ್ಟಿಗಿನ ಅವರ ಸಂಬಂಧ/ನಡೆಯುವಿಕೆಯ ಮೇಲೆ ಪ್ರಭುತ್ವ ತೋರಿಸದಿರುವುದು ಬಹಳ ಉತ್ತಮವಾದ ವಿಷಯವಾಗಿದೆ.

*(ಕ) ಅಧಿಕ - ತೊಡಗುವಿಕೆ (ಒಳಗೊಳ್ಳುವಿಕೆ) ಯನ್ನು ನಿವಾರಿಸಿರಿ*

ಯಾವುದು ತಪ್ಪು, ಯಾವುದು ಸರಿ ಎಂಬುದಾಗಿ ಜನರಿಗೆ ಬೋಧಿಸಿರಿ ಮತ್ತು ಅವರೇ ತಮ್ಮ ತೀರ್ಮಾನಗಳನ್ನು ಮಾಡುವಂತೆ ಅವಕಾಶ ನೀಡಿರಿ ಜನರಿಗಾಗಿ ತೀರ್ಮಾನಗಳನ್ನು ಮಾಡದಿರಿ, ಇಲ್ಲವಾದರೆ ಅವರು ಬೆಳವಣಿಗೆ ಹೊಂದುವುದಿಲ್ಲ ಮತ್ತು ಅವರು ಸ್ವಂತವಾಗಿ ತೀರ್ಮಾನ ಮಾಡುವುದನ್ನು ಕಲಿಯುವುದಿಲ್ಲ.

ಜನರು ಒರಗಿಕೊಳ್ಳುವ ಊರುಗೋಲು ಅಥವಾ ಆಸರೆಯಾಗಬೇಡಿರಿ. ಜನರು ಸ್ವತಃ ನಿಂತುಕೊಳ್ಳುವುದನ್ನು ಕಲಿಸಿರಿ ನೀವು ಅವರ ಸುತ್ತ ಇರದೇ, ಅವರು ಜೀವನ ಜೀವಿಸುವಂತೆ, ತಮ್ಮನ್ನೇ ಶಿಸ್ತುಗೊಳಿಸುವಂತೆ ವಿಷಯಗಳನ್ನು ಅಥವಾ ಪರಿಸ್ಥಿತಿಗಳನ್ನು ನಿಭಾಯಿಸುವುದನ್ನು ಕಲಿಸಿರಿ!

*(ಡ) ಅತ್ಯಧಿಕ ಅಧಿಕಾರಯುಕ್ತವಾಗಿರುವುದನ್ನು ನಿವಾರಿಸಿರಿ*

1 ಪೇತ್ರನು 5:1-4

**[1] ಸಭೆಯ ಹಿರಿಯರೇ, ಜೊತೆಹಿರಿಯವನಾದ ನಾನು ಕ್ರಿಸ್ತನ ಬಾಧೆಗಳನ್ನು ಕಣ್ಣಾರೆ ಕಂಡವನೂ ಇನ್ನು ಮುಂದೆ ಪ್ರತ್ಯಕ್ಷವಾಗುವ ಪ್ರಭಾವದಲ್ಲಿ ಪಾಲುಗಾರನೂ ಆಗಿದ್ದು ನಿಮ್ಮನ್ನು ಎಚ್ಚರಿಸಿ ಹೇಳುವದೇನೆಂದರೆ ನಿಮ್ಮಲ್ಲಿರುವ ದೇವರ ಮಂದೆಯನ್ನು ಕಾಯಿರಿ. ಬಲಾತ್ಕಾರದಿಂದಲ್ಲ ದೇವರ**

**ಚಿತ್ತದ ಪ್ರಕಾರ ಇಷ್ಟಪೂರ್ವಕವಾಗಿಯೂ ನೀಚವಾದ ದ್ರವ್ಯಾಶೆಯಿಂದಲ್ಲ ಸಿದ್ಧಮನಸ್ಸಿನಿಂದಲೂ ಮೇಲ್ವಿಚಾರಣೆ ಮಾಡಿರಿ. ದೇವರು ನಿಮ್ಮ ವಶದಲ್ಲಿಟ್ಟಿರುವ ಸಭೆಗಳ ಮೇಲೆ ದೊರೆತನ ಮಾಡುವವರಂತೆ ನಡೆಯದೇ ಮಂದೆಗೆ ಮಾದರಿಯಾಗಿ ನೆಡೆದುಕೊಳ್ಳಿರಿ. ಹಿರೀ ಕುರುಬನು ಪ್ರತ್ಯಕ್ಷನಾಗುವಾಗ ನೀವು ದೇವಪ್ರಭಾವವೆಂಬ ಎಂದಿಗೂ ಬಾಡದ ಜಯಮಾಲೆಯನ್ನು ಹೊಂದುವಿರಿ.**

1ಕೊರಿಂಥದವರಿಗೆ 9:18

**18 ಹಾಗಾದರೆ ನನಗಾಗುವ ಬಹುಮಾನವೇನು? ಸುವಾರ್ತೆಯನ್ನು ಸಾರುವಾಗ ಅದರಿಂದ ಜೀವನ ಮಾಡುವ ಹಕ್ಕನ್ನು ನಡಿಸದೇ ಅದನ್ನು ಉಚಿತಾರ್ಥವಾಗಿ ದಾನಮಾಡುವದೇ ನನಗೆ ಬಹುಮಾನ.**

2 ಕೊರಿಂಥದವರಿಗೆ 10:8

**8 ನಮಗಿರುವ ಅಧಿಕಾರವನ್ನು ಕುರಿತು ನಾವು ಒಂದು ವೇಳೆ ಹೆಚ್ಚಾಗಿ ಹೊಗಳಿಕೊಂಡರೂ ಹಾಗೆ ಹೊಗಳಿಕೊಳ್ಳುವುದರಲ್ಲಿ ನಾಚಿಕೆ ಪಡುವದಕ್ಕೆ ಕಾರಣವಾಗುವುದಿಲ್ಲ. ಆದರೆ ನಿಮ್ಮನ್ನು ಕೆಡವಿಹಾಕುವದಕ್ಕಲ್ಲ ಕಟ್ಟುವದಕ್ಕಾಗಿಯೇ ಕರ್ತನು ಈ ಅಧಿಕಾರವನ್ನು ನಮಗೆ ಕೊಟ್ಟನು.**

2 ಕೊರಿಂಥದವರಿಗೆ 12:18,19

**18 ನಿಮ್ಮ ಬಳಿಗೆ ಹೋಗುವದಕ್ಕೆ ನಾನು ತೀತನನ್ನು ಬೇಡಿಕೊಂಡು ಅವನ ಜೊತೆಯಲ್ಲಿ ಆ ಸಹೋದರನನ್ನು ಕಳುಹಿಸಿಕೊಟ್ಟೆನಷ್ಟೆ. ತೀತನು ನಿಮ್ಮನ್ನು ವಂಚಿಸಿ ಏನಾದರೂ ತೆಗೆದುಕೊಂಡನೋ; ನಾವಿಬ್ಬರೂ ಒಬ್ಬ ಆತ್ಮನಿಂದಲೇ ಪ್ರೇರಿತರಾಗಿ ಒಂದೇ ಹೆಜ್ಜೆಜಾಡಿನಲ್ಲಿ ನಡೆಯಲಿಲ್ಲವೋ? 19 ನಾವು
ಇಷ್ಟು ಹೊತ್ತು ನಿಮ್ಮ ಮುಂದೆ ಪ್ರತಿವಾದ ಮಾಡುವವರೆಂದು ನೆನಸುತ್ತಿರೋ? ನಿಮ್ಮ ಮುಂದೆಯಲ್ಲ ದೇವರ ಸನ್ನಿಧಾನದಲ್ಲಿಯೇ ನಾವು ಕ್ರಿಸ್ತನಲ್ಲಿದ್ದು ಮಾತಾಡುವವರಾಗಿದ್ದೇವೆ. ಪ್ರಿಯರೇ, ನಾವು ಮಾತಾಡುವದೆಲ್ಲಾ ನಿಮ್ಮ ಭಕ್ತಿ ವೃದ್ಧಿಗೋಸ್ಕರವೇ ಆಗಿದೆ.**

*(ಇ) 'ಜೀವಾತ್ಮ' ಅಥವಾ ಪ್ರಾಣಕ್ಕೆ ಹೊಂದಿಕೆಯಾಗಿರುವುದನ್ನು ನಿವಾರಿಸಿರಿ*

ಕೆಲವು ಬಾರಿ ನಾವು ಕರ್ತನಲ್ಲಿ ಬೆಳೆಸುತ್ತಿರುವವರ ಮೇಲೆ ಭಾವಾನಾತ್ಮಕ ಹೊಂದಿಕೆಗಳನ್ನು ಹೊಂದಿರುತ್ತೇವೆ. ಅವರನ್ನು ಬಿಡುವ ಸಮಯ ಬಂದಾಗ, ಅವರನ್ನು ಬಿಟ್ಟುಕೊಡಲು ಬಯಸುವುದಿಲ್ಲ ಯಾಕೆಂದರೆ ಅವರೊಂದಿಗಿನ ಆತ್ಮಕ್ಕೆ ಹೊಂದಿಕೆಯಾಗಿರುತ್ತೇವೆ. ಇದು ಬಹಳ ಅಪಾಯಕಾರಿ ವಿಷಯವಾಗಿದೆ.

1 ಸಮುವೇಲ 18:1 ರಲ್ಲಿ ದಾವೀದನು ಮತ್ತು ಯೋನಾತಾನು ಒಂದು ವಿಶೇಷವಾದ ಸ್ನೇಹ ಹೊಂದಿದ್ದರು. ಆದಾಗ್ಯೂ ದಾವೀದನನ್ನು ಕಳುಹಿಸುವ ಸಂದರ್ಭ ಬಂದಾಗ ಯೋನಾತಾನನು ಅದನ್ನು ಮಾಡಿದನು. (1ಸಮುವೇಲನು 20;13)

## 6. ಅಗತ್ಯಬಿದ್ದಾಗ ತಿದ್ದುಪಡಿ ತನ್ನಿರಿ

1 ಕೊರಿಂಥದವರಿಗೆ 4:21

**[21]ನಿಮ್ಮ ಇಷ್ಟವೇನು? ಬೆತ್ತ ತೆಗೆದುಕೊಂಡು ನಿಮ್ಮ ಬಳಿಗೆ ಬರಲೋ? ಪ್ರೀತಿಯಿಂದಲೂ ಸೌಮ್ಯಭಾವದಿಂದಲೂ ಕೂಡಿದವನಾಗಿಬರಲೋ?**

2 ಕೊರಿಂಥದವರಿಗೆ 7:11,12

**''ನೀವು ದೇವರ ಚಿತ್ತಾನುಸಾರವಾಗಿ ಪಟ್ಟ ದುಃಖವು ನಿಮಗೆ ಎಂಥ ತಹತಹವನ್ನು ಉಂಟುಮಾಡಿತು ನೋಡಿರಿ. ನೀವು ನಿರ್ದೋಷಿಗಳೆಂದು ಸ್ಥಾಪಿಸುವದಕ್ಕೆ ಎಷ್ಟೋ ಪ್ರಯಾಸಪಟ್ಟಿರಿ, ಎಷ್ಟೋ ಮನೋವ್ಯಥೆಯನ್ನು ಅನುಭವಿಸಿದಿರಿ; ಎಂಥ ಭಯವನ್ನು ಎಂಥ ಹಂಬಲವನ್ನು ತೋರಿಸಿದಿರಿ. ಮಾನಹಾನಿಗಾಗಿ ಎಷ್ಟೋ ರೋಷಪಟ್ಟು ಶಿಕ್ಷೆಮಾಡಿದಿರಿ. ನೀವು ಆ ಕಾರ್ಯಕ್ಕೆ ಸೇರಿದವರಲ್ಲವೆಂಬುದನ್ನು ಎಲ್ಲಾ ವಿಧದಲ್ಲಿಯೂ ತೋರಿಸಿದಿರಿ. [12]ನಾನು ನಿಮಗೆ ಬರೆದಾಗ ಅನ್ಯಾಯಮಾಡಿದವನಿಗೆ ದಂಡನೆಯೂ ಅನ್ಯಾಯ ಹೊಂದಿದವನಿಗೆ ನ್ಯಾಯವೂ ಆಗಬೇಕೆಂಬುವ ಕಾರಣದಿಂದ ಬರೆಯಲಿಲ್ಲ; ನಮಗೋಸ್ಕರ ನಿಮಗಿರುವ ಆಸಕ್ತಿಯು ದೇವರ ಮುಂದೆ ನಿಮಗೆ ವ್ಯಕ್ತವಾಗಬೇಕೆಂಬುವ ಉದ್ದೇಶದಿಂದಲೇ ಬರೆದೆನು.**

2 ಕೊರಿಂಥದವರಿಗೆ 13:10

**[10]ಇದಕ್ಕಾಗಿಯೇ ನಾನು ನಿಮ್ಮಲ್ಲಿ ಇಲ್ಲದಿರುವಾಗ ಈ ಮಾತುಗಳನ್ನು ಬರೆದಿದ್ದೇನೆ. ನಿಮ್ಮನ್ನು ಕೆಡವಿಹಾಕುವದಕ್ಕಲ್ಲ ಕಟ್ಟುವದಕ್ಕಾಗಿ ಕರ್ತನು ನನಗೆ ಕೊಟ್ಟಿರುವ ಅಧಿಕಾರದ ಪ್ರಯೋಗದಲ್ಲಿ ನಿಮ್ಮ ಬಳಿಗೆ ಬಂದಾಗ ಕಾಠಿಣ್ಯವನ್ನು ತೋರಿಸುವದಕ್ಕೆ ಅವಕಾಶವಿರಬಾರದೆಂದು ಅಪೇಕ್ಷಿಸುತ್ತೇನೆ.**

ಹಲವು ಬಾರಿ ನಾವು ಮಿತಿಮೀರಿದ ಎದುರಿಸುವಿಕೆಯನ್ನು ತಪ್ಪಿಸುತ್ತೇವೆ ಯಾಕೆಂದರೆ ಸಂಬಂಧದಲ್ಲಿ ನೋವುಂಟಾಗುವ ಸಾಧ್ಯತೆಗಳ ಗಂಡಾಂತರ ನಮಗೆ ಬೇಡವಾಗಿರುತ್ತದೆ.

ಜ್ಞಾನೋಕ್ತಿಗಳು 27:6

**[6]ಮಿತ್ರನು ಮಾಡುವ ಗಾಯಗಳು ಮೇಲಿಗಾಗಿಯೇ; ಶತ್ರುವಿನ ಮುದ್ದುಗಳು ಹೇರಳವಾಗಿವೆ.**

ಪ್ರೀತಿಯಿಂದ ತಿದ್ದುಪಡಿಗಳನ್ನು ತರಲು ನೀವು ಆಂತರಿಕ ಬಲ ಹೊಂದಿರಬೇಕು. ನೀವು ಒಬ್ಬ ವ್ಯಕ್ತಿಯ ಜೀವಿತಕ್ಕೆ ಮಾರ್ಪಾಟು ತರುವುದು ಅವರಿಗೆ ನೋವುಂಟುಮಾಡುವುದಕ್ಕಿಂತ ಉತ್ತಮವಾದುದನ್ನು ಮಾಡುತ್ತಿದ್ದೀರೆಂದು

ಅರ್ಥಮಾಡಿಕೊಳ್ಳಬೇಕು. ನೀವು ಅಲಕ್ಷ್ಯಮಾಡಲು ತೀರ್ಮಾನಿಸಿದ ತೊಂದರೆಯು, ಆ ವ್ಯಕ್ತಿಯನ್ನು ನಾಶ ಮಾಡಲು ಮುಖ್ಯ ವಿಷಯವಾಗುತ್ತದೆ. ಅಥವಾ ಅದು ನಿನಗೆ ಸಮಸ್ಯೆಯಾಗಿಬಿಡುತ್ತದೆ. ನೀವೂ ತಿದ್ದುಪಡಿ ಬಗ್ಗೆ ಮಾತಾಡಿದಾಗ, ವ್ಯಕ್ತಿಯು ದೇವರಿಗೆ ಪ್ರತಿಕ್ರಿಯಿಸಲು ಸ್ವತಂತ್ರತೆಗೆ ಅವಕಾಶ ನೀಡಿರಿ. ನಿಮ್ಮ ಸಲಹೆಗಳನ್ನು ತಿರಸ್ಕರಿಸದವರ ನೋವಿಗೆ ನೀವು ಜವಬ್ಧಾರರಲ್ಲ.

ಜ್ಞಾನೋಕ್ತಿಗಳು 17:9

**9 ದೋಷವನ್ನು ಮುಚ್ಚಿಡುವವನು ಪ್ರೇಮವನ್ನು ಸೆಳೆಯುವನು ಎತ್ತಿ ಆಡುತ್ತಿರುವವನು ಸ್ನೇಹವನ್ನು ಕಳೆದುಕೊಳ್ಳುವನು.**

ನೀವು ತಿದ್ದುಪಡಿ ತಂದ ಮೇಲೆ, ಮತ್ತೊಬ್ಬ ವ್ಯಕ್ತಿಯ ತಪ್ಪುಗಳನ್ನು ಕುರಿತು ಮಾತಾಡದೇ ಇರುವುದನ್ನು ನೆನಪಿನಲ್ಲಿಡಿ.

ತಿದ್ದುಪಡಿಗಳನ್ನು ತರುವಾಗ, ವ್ಯಕ್ತಿಯ ಭಕ್ತಿ ವೃದ್ಧಿಗೋಸ್ಕರವಿರಬೇಕು ಮತ್ತು ಹಾನಿ ಮಾಡದಂತೆ ತರಬೇಕು.

*(ಅ) ದಯಾಶೀಲತೆಯಿಂದ (ಸಾಧುತ್ವದಿಂದ) ತಿದ್ದುಪಡಿ ತನ್ನಿರಿ*

ಪ್ರೀತಿಪೂರ್ವಕವಾಗಿ ಮಾರ್ಪಾಟುಗಳನ್ನು ತರುವುದು ಯಾವಾಗಲೂ ಸುಲಭವಾದುದಲ್ಲ ಯಾಕೆಂದರೆ ಎಲ್ಲಾ ಉದ್ವೇಗಗಳು (ಅಶಾಂತನಾಗಿರುವುದು, ಕೋಪಗೊಂಡಿರುವುದು, ಉದ್ರಿಕ್ತನಾಗಿರುವುದು ಮುಂತಾದವುಗಳು) ಪ್ರಾಯಶಃ ಸಂಪೂರ್ಣ ಪರಿಸ್ಥಿತಿಯ ಭಾಗಗಳಾಗಿರುತ್ತವೆ. ಹೇಗಿದ್ದರೂ, ಅಂತಹ ಕಠಿಣ ಪರಿಸ್ಥಿತಿಗಳಲ್ಲೂ, ಪವಿತ್ರಾತ್ಮನು ದಯಾಶೀಲತೆ, ಕರುಣೆ, ಒಳ್ಳೆಯತನದಲ್ಲಿ ನಮ್ಮನ್ನು ತುಂಬಿಸಲು ನಾವು ಪವಿತ್ರಾತ್ಮನಿಗೆ ಅವಕಾಶ ನೀಡಬೇಕು.

ಗಲಾತ್ಯದವರಿಗೆ 5:22

**22 ಆದರೆ ದೇವರಾತ್ಮನಿಂದ ಉಂಟಾಗುವ ಫಲವೇನೆಂದರೆ - ಪ್ರೀತಿ ಸಂತೋಷ, ಸಮಾಧಾನ, ದೀರ್ಘಶಾಂತಿ ದಯೆ ಉಪಕಾರ ನಂಬಿಕೆ ಸಾಧುತ್ವ - ಶಮೆದಮೆ ಇಂಥವುಗಳೇ.**

2 ಕೊರಿಂಥದವರಿಗೆ 6:6

**[6]ಶುದ್ಧ ಮನಸ್ಸು ಜ್ಞಾನ ದೀರ್ಘಶಾಂತಿ, ದಯೆ, ಪವಿತ್ರಾತ್ಮ, ಕಪಟವಿಲ್ಲದ ಪ್ರೀತಿ, ಸತ್ಯವಾಕ್ಯ, ದೇವರ ಮಹತ್ವ ಇವುಗಳಿಂದ ಕೂಡಿದವರಾಗಿದ್ದೇವೆ.**

1ಥೆಸಲೋನಿಕದವರಿಗೆ 2:7

**[7]ತಾಯಿಯು ತನ್ನ ಮಕ್ಕಳನ್ನು ಪೋಷಿಸುತ್ತಾಳೋ ಎಂಬಂತೆ ನಾವು ನಿಮ್ಮ ಮಧ್ಯದಲ್ಲಿ ವಾತ್ಸಲ್ಯದಿಂದ ನಡೆದುಕೊಂಡಿದ್ದೆವು**

2 ತಿಮೊಥೆಯನಿಗೆ 2:24

**[24]ಕರ್ತನ ದಾಸನು ಜಗಳವಾಡದೆ ಎಲ್ಲರ ವಿಷಯದಲ್ಲಿ ಸಾಧುವೂ ಬೋಧಿಸುವದರಲ್ಲಿ ಪ್ರವೀಣನೂ ಕೇಡನ್ನು ಸಹಿಸಿಕೊಳ್ಳುವವನೂ ಎದುರಿಸುವವರನ್ನು ನಿಧಾನವಾಗಿ ತಿದ್ದುವವನೂ ಆಗಿರಬೇಕು.**

ತೀತನು 3:2

**[2]ಯಾರನ್ನೂ ದೂಷಿಸದೆ ಕುತರ್ಕ ಮಾಡದೆ ಎಲ್ಲಾ ಮನುಷ್ಯರಿಗೆ ಪೂರ್ಣ ಸಾಧುಗುಣವನ್ನು ತೋರಿಸುತ್ತಾ ಸಾತ್ವಿಕರಾಗಿರಬೇಕೆಂತಲೂ ಅವರಿಗೆ ಜ್ಞಾಪಕಕೊಡು.**

ಯಾಕೋಬನು 3:17

**[17]ಆದರೆ ಮೇಲಣಿಂದ ಬರುವ ಜ್ಞಾನವು ಮೊದಲು ಪರಿಶುದ್ಧವಾದದ್ದು, ಆಮೇಲೆ ಸಮಾಧಾನಕರವಾದದ್ದು, ವಿನಯವುಳ್ಳದ್ದು, ಸಂತೋಷವಾಗಿ ಒಪ್ಪಿಕೊಳ್ಳುವಂಥದ್ದು, ಕರುಣೆ ಮುಂತಾದ ಒಳ್ಳೆ ಫಲಗಳಿಂದ ತುಂಬಿರುವಂಥದ್ದು ಆಗಿದೆ. ಅದರಲ್ಲಿ ಚಂಚಲವೂ ಕಪಟವೂ ಇಲ್ಲ.**

ಕೀರ್ತನೆಗಳು 18:35

**[35]ನೀನೇ ನನಗೋಸ್ಕರ ಗುರಾಣಿಯನ್ನು ಹಿಡಿದು ರಕ್ಷಿಸಿದ್ದೀ ನಿನ್ನ ಬಲಗೈ ನನಗೆ ಆಧಾರ, ನಿನ್ನ ಕೃಪಾಕಟಾಕ್ಷವು ನನಗೆ ದೊಡ್ಡಸ್ತಿಕೆಯನ್ನು ಉಂಟು ಮಾಡಿದೆ.**

*(ಬ) ಬೇಡಿಕೊಳ್ಳುವುದು ಪ್ರತಿಯಾಗಿ ಆಜ್ಞಾಪಿಸುವುದು*

ಬೇಡಿಕೋ ಇದರ ಬಗ್ಗೆ ಸುಮಾರು 24 ಉಲ್ಲೇಖಗಳನ್ನು ನೋಡುತ್ತೇವೆ ಪತ್ರಿಕೆಗಳಲ್ಲಿ ಪೌಲನು ಮತ್ತು ಇತರ ಸಭಾಸೇವಕರು, ಅವರ ಶ್ರೋತೃವೃಂದಕ್ಕೆ ಕೇಳುಗರಿಗೆ ಕೆಲವು ಸ್ಪಷ್ಟ ಉಪದೇಶಗಳನ್ನು ಅನುಸರಿಸುವಂತೆ ''ಬೇಡಿಕೊಳ್ಳು''ವುದನ್ನು ಕಾಣುತ್ತೇವೆ ರೋಮಾಪುರದವರಿಗೆ 12:1, ರೋಮಾಪುರದವರಿಗೆ 15:30, ರೋಮಾಪುರದವರಿಗೆ

16:17, 1 ಕೊರಿಂಥದವರಿಗೆ 1:10, 1 ಕೊರಿಂಥದವರಿಗೆ 4:16, 1 ಕೊರಿಂಥದವರಿಗೆ 16:15, 2 ಕೊರಿಂಥದವರಿಗೆ 2:8, 2 ಕೊರಿಂಥದವರಿಗೆ 6:12, 2 ಕೊರಿಂಥದವರಿಗೆ 10:1,2; ಗಲಾತ್ಯದವರಿಗೆ 4:12, ಎಫೆಸದವರಿಗೆ 4:1, ಫಿಲಿಪ್ಪಿಯವರಿಗೆ 4:2,1 ಥೆಸಲೋನಿಕದವರಿಗೆ 4:1,2 ಥೆಸಲೋನಿಕದವರಿಗೆ 4:10,1 ಥೆಸಲೋನಿಕದವರಿಗೆ 5:12,2 ಥೆಸಲೋನಿಕಾದವರಿಗೆ 2:1,1 ಫಿಲೆಮೋನನಿಗೆ 1:9,10; ಇಬ್ರಿಯರಿಗೆ 13:19,22; 1 ಪೇತ್ರನು 2:11,2 ಯೋಹಾನನು 1:5.

ಬೇಡಿಕೋ (ಗ್ರೀಕನಲ್ಲಿ) ಪರಾಕಲಿಯೋ (Parakaleo) ಹತ್ತಿರಕ್ಕೆ ಕರೆ, ಅಂದರೆ, ಆಹ್ವಾನಿಸು, ಮೊರೆಯಿಡು, ಬೋಧಿಸು, ಆದರಿಸು, ಪ್ರಾರ್ಥಿಸು.

(ಗ್ರೀಕ್ ಭಾಷೆಯಲ್ಲಿ) ಇರಟಾವೋ ಕೇಳಿ ಪರೀಕ್ಷಿಸು, ವಿಜ್ಞಾಪಿಸು, ಕೇಳು, ಬೇಡಿಕೋ, ಅಪೇಕ್ಷಿಸು, ಆದರಿಸು, ಪ್ರಾರ್ಥಿಸು.

*ಹಲವು ಉದಾಹರಣೆಗಳು :*

ರೋಮಾಪುರದವರಿಗೆ 16:17

**[17]ಸಹೋದರರೇ, ನೀವು ಹೊಂದಿದ ಉಪದೇಶಕ್ಕೆ ವಿರುದ್ಧವಾಗಿ ಭೇದಗಳನ್ನು ವಿಘ್ನಗಳನ್ನೂ ನಿಮ್ಮಲ್ಲಿ ಉಂಟು ಮಾಡುವವರನ್ನು ಗುರುತಿಟ್ಟು ಅವರನ್ನು ಬಿಟ್ಟು ತೊಲಗಿ ಹೋಗಿರಿ ಎಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ.**

ಫಿಲಿಪ್ಪಿಯವರಿಗೆ 4:2

**[2]ಕರ್ತನಲ್ಲಿ ಒಂದೇ ಮನಸ್ಸುಳ್ಳವರಾಗಿ ಎಂದು ಯುವೊದ್ಯಳನ್ನೂ ಸಂತುಕೆಯನ್ನೂ ಪ್ರಬೋಧಿಸುತ್ತೇನೆ.**

ಫಿಲೆಮೋನನಿಗೆ 1:9,10

**[9]ಮುದುಕನೂ ಈಗ ಕ್ರಿಸ್ತಯೇಸುವಿನ ನಿಮಿತ್ತ ಸೆರೆಯವನೂ ಆಗಿರುವ ಈ ಪೌಲನೆಂಬ ನಾನು ಪ್ರೀತಿಯ ನಿಮಿತ್ತ ನಿನ್ನನ್ನು ಬೇಡಿಕೊಳ್ಳುತ್ತೇನೆ. ನಾನು ಸೆರೆಯಲ್ಲಿ ಪಡೆದಿರುವ ನನ್ನ ಮಗನಾದ ಓನೇಸಿಮನ ವಿಷಯದಲ್ಲಿ ನಿನ್ನನ್ನು ಬೇಡಿಕೊಳ್ಳುತ್ತೇನೆ.**

## ಆದೇಶ (ಆಜ್ಞೆ)

ದೇವರ ಸೇವಕರಾಗಿ, ಜನರಿಗೆ ಆಜ್ಞಾಪಿಸುವ ಮತ್ತು ಉಪದೇಶಿಸುವ ಸಮಯವಿರುತ್ತದೆ.

1 ತಿಮೊಥೆಯನಿಗೆ 4:11

**[11]ಈ ಸಂಗತಿಗಳನ್ನು ಆಜ್ಞಾಪಿಸಬೇಕು ಮತ್ತು ಬೋಧಿಸಬೇಕು.**

ಆಜ್ಞೆ: ಗ್ರೀಕ್ ಭಾಷೆಯಲ್ಲಿ ಪರಾಗೆಲ್ಲೊ (Paraggello) ಸಂದೇಶವನ್ನು ರವಾನಿಸು, ಅಂದರೆ ವಿಧಿಸು, ಅಪ್ಪಣೆಕೊಡು, ಆಜ್ಞಾಪಿಸು.

ಹೀಗಿದ್ದಾಗ್ಯೂ, ಪತ್ರಿಕೆಗಳಲ್ಲಿ ಪೌಲನು ''ಆಜ್ಞಾ''ಪಿಸು ಎಂಬುದನ್ನು ಮಿತವಾಗಿ ಬಳಸಿದ್ದಾನೆ. (ನಾಲ್ಕುಸಾರಿ) ಜನರನ್ನು ''ಬೇಡಿಕೊಳ್ಳು''ತ್ತೇನೆ ಅನ್ನುವುದಕ್ಕೆ ಹೋಲಿಸಿದರೆ (ಇಪ್ಪತ್ತುಸಾರಿ ಇದು ಅಧಿಕವಾಗಿದೆ).

ಜನರನ್ನು ಸಾಮಾನ್ಯ ಮಾರ್ಗದಲ್ಲಿ ಉಪದೇಶಿಸಲು, ಮಾರ್ಗದರ್ಶಿಸಲು, ತಿದ್ದುಪಡಿ ಮಾಡಲು, ಸೌಮ್ಯದಿಂದ ಅವರನ್ನು ''ಬೇಡಿಕೊಳ್ಳುವ'' ಮೂಲಕ ಮಾಡಬೇಕೆಂದು ಇದು ಹೇಳುತ್ತದೆ. ಯಾವುದಾದರೂ ಅಪರೂಪ ಸಂದರ್ಭದಲ್ಲಿ ನೀವು ಅವರಿಗೆ ''ಆಜ್ಞೆ'' ಕೊಡಿರಿ.

1ಕೊರಿಂಥದವರಿಗೆ 7:10

**[10] ಮದುವೆ ಮಾಡಿಕೊಂಡಿರುವವರಿಗೆ ನನ್ನ ಅಪ್ಪಣೆ ಮಾತ್ರವಲ್ಲದೆ ಕರ್ತನ ಅಪ್ಪಣೆಯು ಏನೆಂದರೆ - ಹೆಂಡತಿಯು ಗಂಡನನ್ನು ಬಿಟ್ಟು ಅಗಲಬಾರದು**

2 ಥೆಸಲೋನಿಕದವರಿಗೆ 3:4,6,12

**[4]ನಾವು ಆಜ್ಞಾಪಿಸುವ ಪ್ರಕಾರ ನೀವು ಮಾಡುತ್ತೀರೆಂತಲೂ ಮುಂದೆಯೂ ಮಾಡುವಿರೆಂತಲೂ ನಿಮ್ಮ ವಿಷಯದಲ್ಲಿ ಕರ್ತನ ಮೂಲಕವಾಗಿ ನಮಗೆ ಭರವಸೆಯುಂಟು. [6]ಸಹೋದರರೇ, ನಮ್ಮಿಂದ ಹೊಂದಿದ ಬೋಧನೆಯನ್ನು ಅನುಸರಿಸದೆ ಅಕ್ರಮವಾಗಿ ನಡೆಯುವ ಪ್ರತಿ ಸಹೋದರನಿಗೆ ನೀವು ದೂರವಾಗಿರಬೇಕೆಂದು ನಮ್ಮ ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿ ನಿಮಗೆ ಆಜ್ಞಾಪಿಸುತ್ತೇವೆ. [12]ಇಂಥವರು ತಮ್ಮ ಕೆಲಸವನ್ನು ನೋಡುತ್ತಾ ತಾವೇ ಸಂಪಾದಿಸಿದ್ದನ್ನು ಊಟ ಮಾಡಬೇಕೆಂದು ಕರ್ತನಾದ ಯೇಸುಕ್ರಿಸ್ತನಲ್ಲಿ ನಾವು ಆಜ್ಞಾಪಿಸಿ ಪ್ರಬೋಧಿಸುತ್ತೇವೆ.**

### *(ಕ) ಅಪ್ರಬುದ್ಧ ಪ್ರತಿಕ್ರಿಯೆಯನ್ನು ನಿಭಾಯಿಸು*

ಸಾಂಕೇತಿಕವಾಗಿ, ತಿದ್ದುಪಡಿಗಳನ್ನು ಮಾಡುವಾಗ ಕೆಲವು ಜನರು ಅದನ್ನು ಒಳ್ಳೆಯ ರೀತಿಯಲ್ಲಿ ಸ್ವೀಕರಿಸುತ್ತಾರೆ, ಮತ್ತೆ ಕೆಲವರು ಅದನ್ನು ಯೋಗ್ಯರೀತಿಯಲ್ಲಿ

ಸ್ವೀಕರಿಸುವುದಿಲ್ಲ, ಬದಲಾಗಿ ನಕಾರಾತ್ಮಕವಾಗಿ ಸ್ಪಂದಿಸುತ್ತಾರೆ. ದೇವರ ಸೇವಕರಾಗಿ, ನೀವು ಪ್ರೀತಿಸುವವರು, ಆತ್ಮನಲ್ಲಿ ಕಟ್ಟುತ್ತಿರುವವರು, ಏನಾದರೂ ನಕಾರಾತ್ಮಕ ಪ್ರತಿಕ್ರಿಯೆಗಳನ್ನು ತೋರಿಸಿದರೆ, ನಿಮ್ಮ ಜೀವಿತದಲ್ಲಿ ಇದು ನೋವು ತರುವ ಕ್ಷಣಗಳಾಗುತ್ತವೆ. ನೀವು ಅವರ ಜೀವಿತದ ಭವಿಷ್ಯವನ್ನು ನಿಮ್ಮ ಹೃದಯದಲ್ಲಿ ಹೊಂದಿದವರಾಗಿ ಅವರಿಗೆ ಉತ್ತಮವಾದುದನ್ನು ಮಾಡಬೇಕೆಂದು ಹಂಬಲಿಸುತ್ತೀರಿ. ಆದಾಗ್ಯೂ ತಿದ್ದುಪಡಿಯಿಂದ ಹೊಂದಿದ ನೋವಿನ ನಿಮಿತ್ತ ಅವರು ನಕಾರಾತ್ಮಕವಾಗಿ ಪ್ರತಿಕ್ರಿಯಿಸುತ್ತಾರೆ.

ನೀವು ಪಡೆದುಕೊಳ್ಳುವಂತಹ ಅನೇಕ ಬಗೆಯ ನಕಾರಾತ್ಮಕ ಪ್ರತಿಕ್ರಿಯೆಗಳು ಕೆಳಕಂಡಂತಿವೆ.

*(1) ಗೊಣಗುವುದು (ದೂರುಹೇಳುವುದು) :* ತಿದ್ದುಪಡಿಯನ್ನು ಪಡೆದುಕೊಂಡ ವ್ಯಕ್ತಿಗೆ ಪ್ರಪಂಚವು ಥಟ್ಟನೆ ಸಂಪೂರ್ಣ ವಿಭಿನ್ನವಾಗಿ ಕಾಣಿಸುತ್ತದೆ. ಸುಂದರವಾಗಿದ್ದಂತಹವುಗಳು ಮತ್ತು ಅದ್ಭುತವಾದಂತಹವುಗಳು ತಕ್ಷಣವಾಗಿ ''ನಿರರ್ಥಕವಾದುದು'' ಅಥವಾ ಮರುಭೂಮಿ ಸ್ಥಳಗಳಂತೆ ಆಗುತ್ತವೆ. ವ್ಯಕ್ತಿಗತವಾಗಿ ಪ್ರತಿಯೊಂದು ಸಣ್ಣ ಸಣ್ಣ ವಿಷಯಗಳಿಗೂ ದೂರು ಹೇಳಲು ಅಥವಾ ಗೊಣಗಲು ಪ್ರಾರಂಭಿಸುತ್ತಾರೆ. ಹಿಂದಿನ ಚಿಕ್ಕ ಘಟನೆಯನ್ನು ''ಪುನರುಜ್ಜೀವನ''ಗೊಳಿಸಿ ದೊಡ್ಡ ವಿವಾದವಾಗಿ ಮಾಡುತ್ತಾರೆ. ನೀವು ಅವರಿಗೆ ಮಾಡುವಂತಹ ಪ್ರತಿಯೊಂದು ವಿಷಯವು, ಅವರನ್ನು ನಿರ್ಬಂಧಗೊಳಿಸುವ, ಅವರನ್ನು ಹತೋಟಿಯಲ್ಲಿಡುವ ಅಥವಾ ಅವರನ್ನು ನೋಯಿಸುವ ಮತ್ತು ಅವರನ್ನು ಕೆಳಮಟ್ಟಕ್ಕೆ ತುಳಿಯುವಂತೆ ಅವರ ದೃಷ್ಟಿಯಲ್ಲಿ ಕಾಣಿಸುತ್ತದೆ.

*(2)ಹಿಂಜರಿ (ಹಿಂಜಾರುವುದು) :* ತಿದ್ದುಪಾಡು ಹೊಂದಿದ ವ್ಯಕ್ತಿಯು ಹಿಂದೇಟು ಹಾಕುತ್ತಾರೆ. ಸಂಪರ್ಕ ಕಡಿದುಕೊಳ್ಳುತ್ತಾರೆ ಮತ್ತು ಸಂಕೋಚದಿಂದ ದೂರ ಅಡಗಿಕೊಳ್ಳುತ್ತಾರೆ ಸಂಭಾಷಣೆ ಮತ್ತು ಸಂಪರ್ಕದಲ್ಲಿ ಬಹಳ ದೀರ್ಘವಾದ ವೈರಾಗ್ಯವಿರುವುದಿಲ್ಲ. ನೀವು ಆ ವ್ಯಕ್ತಿಯ ಸುತ್ತಲೂ ತುದಿಗಾಲಲ್ಲಿ ನಿಂತಿರಬೇಕು, ನೀವು ಹೇಳುವುದರಲ್ಲಿ ಅಥವಾ ಮಾಡುವ ಕಾರ್ಯಗಳಲ್ಲಿ ವೈಯಕ್ತಿಕವಾಗಿ ನೋವುಂಟು ಮಾಡದಂತೆ ನೋಡಿಕೊಳ್ಳಬೇಕು. ಅವರು ನಿಮ್ಮಿಂದ ಆತ್ಮಿಕವಾಗಿ ಯಾವುದನ್ನೂ ಪಡೆದುಕೊಳ್ಳಲು ತಯಾರಿರುವುದಿಲ್ಲ.

*(3) ಸೇಡು ತೀರಿಸಿಕೊಳ್ಳುವುದು (ಪ್ರತೀಕಾರ) ಮಾಡುವುದು :* ವ್ಯಕ್ತಿಯು ಅವರ ತೊಂದರೆಗಳಿಂದ, ಅಸಂತೃಪ್ತಿ ಅಥವಾ ನಿರುತ್ಸಾಹಗಳಿಂದ ನಿಮ್ಮನ್ನು ದೂರುತ್ತಾರೆ. ನಿಮ್ಮ ಮೇಲೆ ಇದ್ದಂತಹ ಗೌರವ ಮತ್ತು ಘನತೆಗಳು ತಕ್ಷಣವಾಗಿ ಕಡಿಮೆಯಾಗುತ್ತವೆ.

ಮತ್ತಾಯ 13:57

**[57]ಆತನ ವಿಷಯವಾಗಿ ಬೇಸರಗೊಂಡರು. ಆದರೆ ಯೇಸು ಅವರಿಗೆ ಪ್ರವಾದಿಯು ಬೇರೆ ಎಲ್ಲಿದ್ದರೂ ಅವನಿಗೆ ಮರ್ಯಾದೆಯುಂಟು. ಆದರೆ ಸ್ವದೇಶದಲ್ಲಿಯೂ ಸ್ವಂತ ಮನೆಯಲ್ಲಿಯೂ ಮಾತ್ರ ಮರ್ಯಾದೆಯಿಲ್ಲ ಅಂದನು.**

ಕೀರ್ತನೆಗಳು 41:9

**[9]ನಾನು ಯಾವನನ್ನು ನಂಬಿದ್ದೆನೋ ಯಾವನು ನನ್ನ ಮನೆಯಲ್ಲಿ ಅನ್ನ ಪಾನಗಳನ್ನು ತೆಗೆದುಕೊಂಡನೋ ಅಂಥ ಆಪ್ತಸ್ನೇಹಿತನು ನನಗೆ ಕಾಲನ್ನು ಅಡ್ಡಗೊಟ್ಟಿದ್ದಾನೆ.**

*(4) ನಿರ್ಗಮನ :* ವ್ಯಕ್ತಿಯು ಥಟ್ಟನೆ ಪೂರ್ವಘೋಷಣೆ ಕೊಡದೇ ಕಾಣಿಸಿಕೊಳ್ಳದಾಗುತ್ತಾರೆ ಮತ್ತು ಹೋಗಿಬಿಡುತ್ತಾರೆ. ಅಂತಹವರು ತಮ್ಮ ತೊಂದರೆಗಳನ್ನು ಮತ್ತೊಂದು ಸೇವಾಕ್ಷೇತ್ರಕ್ಕೆ ಕೊಂಡೊಯ್ಯುತ್ತಾರೆ. ಅಲ್ಲಿ ಸ್ವಲ್ಪ ಸಮಯ ಚೆನ್ನಾಗಿದ್ದರೂ, ತದನಂತರ ಬಗೆಹರಿಯದ ಸಮಸ್ಯೆ ಮತ್ತೆ ತಿರುಗಿ ಉತ್ಪತ್ತಿಯಾಗುತ್ತದೆ.

ಅಂತಹ ಪರಿಸ್ಥಿತಿಗಳಲ್ಲಿ ನಾವು ಮಾಡಬೇಕಾದುದೇನು?

*(1) ನೀವು ಇದನ್ನು (ವೈಯಕ್ತಿಕ)ವಾಗಿ ತೆಗೆದುಕೊಳ್ಳಬಾರದು.*

ಯಾರಾದರೂ ಒಬ್ಬರು ತಿದ್ದುಪಡಿಯನ್ನು ಪಡೆಯಲು ಅಸಮರ್ಥರಾಗಿದ್ದರೆ, ಅವರು ತಿದ್ದುಪಡಿಯನ್ನು ಹೊಂದಲು ಅಶಕ್ತರಾಗುತ್ತಾರೆ ಮತ್ತು ಈ ಕಾರಣದಿಂದ ಪ್ರತಿಯಾಗಿ ವರ್ತಿಸುತ್ತಾರೆ. ಇದು ನೀವು ಯಾರು ಎಂಬುದನ್ನು ತೋರ್ಪಡಿಸುವ ವಿಷಯವಲ್ಲ ಅಥವಾ ದೇವರ ಸೇವಕರಾಗಿ ನಿಮ್ಮ ಸಮರ್ಥನೆಯನ್ನು ಪ್ರತಿಬಿಂಬಿಸುವಂತಹದ್ದಲ್ಲ.

(2) ಮನನೊಂದುಕೊಳ್ಳಬೇಡಿರಿ ನಿಮ್ಮ ಹೃದಯವನ್ನು ಕಾಪಾಡಿಕೊಳ್ಳಿರಿ

ಗಲಾತ್ಯದವರಿಗೆ 4:11,12

**[11]ನಾನು ನಿಮಗೋಸ್ಕರ ಪ್ರಯಾಸಪಟ್ಟದ್ದು ನಿಷ್ಫಲವಾಯಿತೋ ಏನೋ ಎಂದು ನಿಮ್ಮ ವಿಷಯದಲ್ಲಿ ಭಯಪಡುತ್ತೇನೆ. [12]ಸಹೋದರರೇ, ನಾನು ನಿಮ್ಮ ಹಾಗೆ ಆದದ್ದರಿಂದ ನೀವು ನನ್ನ ಹಾಗೆ ಆಗಬೇಕೆಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ. ನೀವು ನನಗೇನು ಅನ್ಯಾಯಮಾಡಲಿಲ್ಲ.**

ಪೌಲನು, ಗಲಾತ್ಯದಲ್ಲಿ ಬಹಳ ಪ್ರಯಾಸಪಟ್ಟು ಕೆಲಸ ಮಾಡಿದನು ಮತ್ತು ಮಾಡಿದಂತಹ ಕೆಲಸವು ನಿಷ್ಫಲವಾಗುತ್ತದೋ ಎಂಬಂತೆ ಕಾಣಿಸುವ ಪರಿಸ್ಥಿತಿಯನ್ನು ಎದುರಿಸಿದನು. ಪೌಲನು ಅವರಿಗೆ ಸುವಾರ್ತೆಸಾರಿದ್ದನು. ಅವನ ನಿರ್ಗಮನದ ಬಳಿಕ ಹಲವರು ಗಲಾತ್ಯಕ್ಕೆ ಬಂದು, ಅವರನ್ನು ಧರ್ಮಶಾಸ್ತ್ರಾಧೀನರಾಗಿ ತಿರಿಗಿ ಬಂಧನಗಳಿಗೆ ಹಿಂತಿರುಗಿಸಲು ಬಯಸಿದರು! ಪೌಲನು ಇಂತಹ ಪರಿಸ್ಥಿತಿಯನ್ನು ನಿಭಾಯಿಸಿದ್ದನು. ನಾವು ಉದಾಹರಣೆಯಾಗಿ ತೆಗೆದುಕೊಂಡು ಅನುಸರಿಸಬಹುದು.

(ಈ ಕೆಳಗಿನ ಟೀಕೆಗಳು ಬರ್ನೀಸ್(Barnes) ವ್ಯಾಖ್ಯಾನ ವಿವರಣೆಯಿಂದ ತೆಗೆದಿಯಲ್ಪಟ್ಟದ್ದು)

''ಇದು ಒಂದು ವೈಯುಕ್ತಿಕ ವಿಚಾರವಲ್ಲ. ನಾನು ದೂರು ಹೇಳಲು ಕಾರಣವಿಲ್ಲ. ನನಗೆ ವೈಯಕ್ತಿಕವಾಗಿ ನೀನು ಯಾವುದೇ ತಪ್ಪು ಮಾಡಿಲ್ಲ. ನಮ್ಮ ನಡುವೇ ಯಾವುದೇ ದ್ವೇಷವಿಲ್ಲ, ಕರುಣೆಯಿಲ್ಲದ ಭಾವನೆಗಳಿಲ್ಲ, ವ್ಯಕ್ತಿಗಳಾಗಿ ನಾವು ಯಾವುದೇ ಹಾನಿಯನ್ನುಂಟುಮಾಡಿಲ್ಲ; ಆದುದರಿಂದ ನಾನು ಅಧಿಕ ಸ್ವತಂತ್ರದಿಂದ, ನಾನು ವೈಯಕ್ತಿಕವಾಗಿ ನೋವುಂಟು ಮಾಡಿಕೊಳ್ಳಲಿಲ್ಲ ಎಂಬುದಾಗಿ ದೃಢಪಡಿಸುವ ದೃಷ್ಠಿಕೋನದಲ್ಲಿ ನೀನು ಶರಣಾಗತನಾಗಲು ಕೇಳುತ್ತೇನೆ. ನಾನು ದೂರು ಹೇಳಲು ತಪ್ಪಿಲ್ಲದವನಾಗಿದ್ದೇನೆ ಮತ್ತು ವೈಯಕ್ತಿಕ ಕೋರಿಕೆಗಿಂತ ಮಿಗಿಲಾಗಿ ನಾನು ಇದನ್ನು ಕೇಳುತ್ತೇನೆ. ಇದು ನಿಮ್ಮ ಒಳ್ಳೆಯದ್ದಕ್ಕಾಗಿಯೇ ಮತ್ತು ಮಹತ್ವದ ಕಾರಣದ ಹಿತಕ್ಕಾಗಿಯೇ ಕ್ರೈಸ್ತರು ಸತ್ಯದಿಂದ ದೂರ ಸರಿದಾಗ ಮತ್ತು ಸಭಾಪಾಲಕರ ಉಪದೇಶಗಳಿಗೆ ಮತ್ತು ಹಿತವಚನಗಳಿಗೆ ನಿರ್ಲಕ್ಷ್ಯ ತೋರಿಸಿದಾಗ, ಮತ್ತು ಲೋಕವನ್ನು ಅನುಸರಿಸುವಾಗ, ಇದು ಒಂದು ವೈಯಕ್ತಿಕ ವಿಚಾರವಲ್ಲ ಅಥವಾ ವ್ಯಕ್ತಿಗತವಾಗಿ ಅವರು ಅಪಚಾರ ಮಾಡುವುದಲ್ಲ, ಮತ್ತು ಅವರಿಗೆ ಅದು ನೋವು ತರುವ ವಿಷಯವೂ ಅಲ್ಲ. ವೈಯಕ್ತಿಕವಾಗಿ ಹಾನಿಯುಂಟಾಗಿದೆ ಎಂಬುದಾಗಿ ಹೇಳಲು ನಿರ್ದಿಷ್ಟ ಕಾರಣಗಳು ಇಲ್ಲ. ಇದು ಪ್ರೌಢವಿಚಾರ ಉದ್ದೇಶಕ್ಕೆ ಭಾದೆಯಿದೆ. ಧಾರ್ಮಿಕ ಆಸಕ್ತಿಗಳಿಗೆ ಹಾನಿಯುಂಟಾಗಿದೆ. ವಿಶಾಲವಾದ ಸಭೆ ಅವಮಾನಿತವಾಗಿದೆ, ಮತ್ತು ''ಅವರ ಸ್ನೇಹಿತರ ಮನೆಯಲ್ಲಿ ರಕ್ಷಕನು ಗಾಯಗೊಂಡಿದ್ದಾನೆ''. ಇಹಲೋಕವನ್ನು ಅನುಸರಣೆ ಮಾಡಿದ ಅಥವಾ ಕೆಲವು ಪಾಪಗಳಿಗೆ ಜಾರಿಹೋಗಿವೆ ಇದು ಸಾರ್ವಜನಿಕ ಅಸಭ್ಯತೆ ಮತ್ತು ವಿಮೋಚನಾ ಉದ್ದೇಶದ ಕಾರಣಕ್ಕಾಗಿ ಹಾನಿಮಾಡಿದ್ದನ್ನು

ಮನ್ನಣೆಗೆ ತರಬೇಕು. ಪೌಲನ ಸಿದ್ಧಾಂತಗಳನ್ನು ಜನರು ಪರಿತ್ಯಕ್ತಗೊಳಿಸಿದರು, ಅವನ ಪ್ರೀತಿಯನ್ನು ಮರೆತರು, ಅವರ ಸೌಖ್ಯಕ್ಕಾಗಿ ಅವನು ಶ್ರಮೆಪಟ್ಟನು, ಇವೆಲ್ಲವುಗಳಲ್ಲಿ ಅವನು ಇದು ವೈಯಕ್ತಿಕ ಅಸಭ್ಯತೆ ಎಂಬುದಾಗಿ ನೆನಸಲಿಲ್ಲ ಮತ್ತು ತಾನೇ ಸ್ವತಃ ಹಾನಿಗೊಳಗಾಗಿದ್ದೇನೆಂದು ಎಣಿಸಲಿಲ್ಲ. ಇದು ಪೌಲನ ಧಾರಾಳತನವನ್ನು ತೋರಿಸುತ್ತದೆ. ಮಹತ್ವಾಕಾಂಕ್ಷೆಯ ಮನುಷ್ಯ ಅಥವಾ ವಂಚಕನು ಮುಖ್ಯವಾಗಿ ಅದನ್ನು ಮಾಡಿದವನು. ಇಲ್ಲದಿದ್ದರೆ ಒಂದೇ ವಿಷಯವಾಗಿರುತ್ತದೆ.)

*(3) ಜನರು ಬದಲಾವಣೆಯಾಗಲು ಸಮಯ ಕೊಡಿರಿ*

ವ್ಯವಹರಿಸಬೇಕಾದ ವಿಷಯಗಳ ಜೊತೆ ಸ್ಪಂದಿಸಲು ಜನರಿಗೆ ಸಮಯಾವಧಿ ಅವಶ್ಯಕವಾಗಿರುತ್ತದೆ. ಅಥವಾ ವಿಷಯಗಳನ್ನು ವ್ಯವಹರಿಸಲು ಜನರಿಗೆ ಸಮಯಬೇಕು.

*(4) ಶಾಂತಿಯಲ್ಲಿ ಮುಂದುವರೆಯಲು ಅವರಿಗೆ ಅವಕಾಶ ನೀಡಿರಿ*

ದೇವರ ಕೈಗಳಿಗೆ ಒಪ್ಪಿಸಿಕೊಡಿರಿ. ಎಲ್ಲದಕಿಂತ ಮಿಗಿಲಾಗಿ ದೇವರೊಬ್ಬನೆ ಅವರಲ್ಲಿ ಕಾರ್ಯಮಾಡಲು, ಬೆಳವಣಿಗೆ ಮತ್ತು ಪ್ರಬುದ್ಧತೆಗಳನ್ನು ತರಲು ಸಾಧ್ಯ

## 7. ಎಲ್ಲಾ ಕ್ಷೇತ್ರಗಳಲ್ಲೂ ಪ್ರೌಢತೆ ತನ್ನಿರಿ

ಎಲ್ಲಾ ಕ್ರೀಸ್ತೀಯ ಜೀವಿತಗಳ ಕ್ಷೇತ್ರಗಳಲ್ಲಿ ಪ್ರಬುದ್ದತೆಯನ್ನು ವೃದ್ಧಿಸಲು ಸಹಾಯ ಮಾಡುವುದು ನಿಮ್ಮ ಗುರಿಯಾಗಿರಬೇಕು

ಎಫೆಸದವರಿಗೆ 4:13-15

**[15]ನಾವೆಲ್ಲರು ನಂಬಿಕೆಯಿಂದಲೂ ದೇವಕುಮಾರನ ವಿಷಯವಾದ ಜ್ಞಾನದಿಂದಲೂ ಉಂಟಾಗುವ ಐಕ್ಯವನ್ನು ಹೊಂದಿ ಪ್ರವೀಣತೆಗೆ ಬಂದವರಾಗಿ ಕ್ರಿಸ್ತನ ಪರಿಪೂರ್ಣತೆಯೆಂಬ ಪ್ರಮಾಣವನ್ನು ಮುಟ್ಟುವ ತನಕ ದೇವ ಜನರನ್ನು ಯೋಗ್ಯಸ್ಥಿತಿಗೆ ತರುವ ಕೆಲಸಕ್ಕೋಸ್ಕರವೂ ಸಭೆಯ ಸೇವೆಗೋಸ್ಕರವೂ ಕ್ರಿಸ್ತನ ದೇಹವು ಅಭಿವೃದ್ಧಿಯಾಗುವದಕ್ಕೋಸ್ಕರವೂ ಆತನು ಇವರನ್ನು ಅನುಗ್ರಹಿಸಿದನು. [14]ನಾವು ಇನ್ನು ಮೇಲೆ ಕೂಸುಗಳಾಗಿರಬಾರದು ದುರ್ಜನರ ವಂಚನೆಗೂ ದುರ್ಬೋಧಕರ ಕುಯುಕ್ತಿಗೂ ಒಳಬಿದ್ದು ನಾನಾ ಉಪದೇಶಗಳಿಂದ ಕಂಗೆಟ್ಟು ಗಾಳಿಯಿಂದ ಅತ್ತಿತ್ತ ನೂಕಿಸಿಕೊಂಡು ಹೋಗುವವರ ಹಾಗಿರಬಾರದು. [15]ಪ್ರೀತಿಯಿಂದ ಸತ್ಯವನ್ನನುಸರಿಸುತ್ತಾ ಬೆಳೆದು ಎಲ್ಲಾ ವಿಷಯಗಳಲ್ಲಿಯೂ ಕ್ರಿಸ್ತನ ಐಕ್ಯವನ್ನು ಹೊಂದುತ್ತಾ ಬರಬೇಕು.**

ದೇವರು ನಮಗೆ ಆತನ ವಾಕ್ಯವನ್ನು ಕೊಟ್ಟಿದ್ದಾನೆ. - ''ನಾನೀಗ ನಿಮ್ಮನ್ನು ಕರ್ತನಿಗೂ ಆತನ ಕೃಪಾವಾಕ್ಯಕ್ಕೂ ಒಪ್ಪಿಸಿಕೊಡುತ್ತೇನೆ. ಆತನು ನಿಮ್ಮಲ್ಲಿ ಭಕ್ತಿ ವೃದ್ಧಿಯನ್ನುಂಟುಮಾಡುವುದಕ್ಕೂ ಪವಿತ್ರರಾದವರೆಲ್ಲರಲ್ಲಿ ನಿಮಗೆ ಹಕ್ಕನ್ನು ಅನುಗ್ರಹಿಸುವುದಕ್ಕೂ ಶಕ್ತನಾಗಿದ್ದಾನೆ.'' (ಅಪೊಸ್ತಲರ ಕೃತ್ಯಗಳು 20:32) ಆತನ ಆತ್ಮನ ಸಹಾಯದಿಂದ ಇದನ್ನು ಸಾಧಿಸಬಹುದು.

ನಾವು ಹಲವು ಭಾರಿ ವರಗಳು ಮತ್ತು ಕರೆಯುವಿಕೆಯ ಪ್ರೌಢತೆಯ ಪ್ರಾಮುಖ್ಯತೆಯ ವಿಷಯದಲ್ಲಿ ತಪ್ಪುಗಳನ್ನು ಮಾಡುತ್ತೇವೆ. ಜನರೊಂದಿಗಿನ ಸಂಬಂಧ ಸಮಯವನ್ನು ನಿಭಾಯಿಸುವುದು ಮತ್ತು ಹಣದ ನಿರ್ವಹಣೆ, ಒಳ್ಳೆಯ ಗಂಡ/ಹೆಂಡತಿಯಾಗಿರುವದು, ಕೆಲಸ ಮತ್ತು ವಿಶ್ರಾಂತಿಯ ಸಮತೋಲನ ಮುಂತಾದ ಪ್ರಾಯೋಗಿಕ ವಿಷಯಾಂಶಗಳು ಮತ್ತು ಸ್ವಭಾವಗಳ ಪರಿಣಾಮಗಳನ್ನು ಮರೆತುಬಿಡುತ್ತೇವೆ.

ದೇವರ ಕರೆಯಲ್ಲಿನ ನಮ್ಮ ಬೆಳವಣಿಗೆಯ ಮೂರು ಹಂತಗಳು

**ಕರೆಯುವಿಕೆ:** ನಿಜವಾಗಿ ಅಲ್ಪ. ಈ ಸಮಯದಲ್ಲಿ ನೀವು ಪ್ರಕಟನೆಗಳನ್ನು ಹೊಂದುವಿರಿ/ ನಿಮ್ಮ ಜೀವಿತಗಳಿಗಿರುವ ದೇವರ ಕರೆಯನ್ನು ಮನವರಿಕೆ ಮಾಡಿಕೊಳ್ಳುವಿರಿ,

***ಸಿದ್ಧತೆ:*** ಇಲ್ಲಿ ನಾವು ಹೆಚ್ಚಿನ ನಮ್ಮ ಸಮಯವನ್ನು ವಿನಿಯೋಗಿಸುತ್ತೇವೆ. ಇದು ಸಿದ್ಧತೆಯ ಸಮಯವಾಗಿರುತ್ತದೆ. ದೇವರು ಸ್ವಭಾವಗಳ ವಿವಾದಾಂಶಗಳೊಡನೆ ವ್ಯವಹರಿಸುವ ಸಮಯವೂ ಇದಾಗಿದೆ. ಅನೇಕ ಜನರು ಈ ಹಂತವನ್ನು ದಾಟಿ ಹೋಗುವುದಿಲ್ಲ.

**ಆದೇಶಾಧಿಕಾರ:** ನಿಮ್ಮ ವಾಸ್ತವ ಸ್ಥಳಕ್ಕೆ ಹೆಜ್ಜೆಯಿಡುವ ಸಮಯ ಇದಾಗಿದೆ ದೇಹದಲ್ಲಿ ಕಾರ್ಯಮಾಡುವವರಾಗಿರುತ್ತೇವೆ.

ಗುಣ ನಡತೆಯ ವಿವಾದಾಂಶಗಳೊಡನೆ ವ್ಯವಹರಿಸುವುದು

- ಜನರ ವರಗಳ ಹೊರತಾಗಿ ಸಂಬಂಧ ಕಲ್ಪಿಸುವುದನ್ನು ಕಲಿಯಬೇಕು.
- ಒಬ್ಬ ವ್ಯಕ್ತಿಯ ಕರೆ ಮತ್ತು ವರಗಳ ಕುರಿತು ಯಾವಾಗಲೂ ಮಾತಾಡಬಾರದು. ಜನರು ಅವರ ವರಗಳು ಮತ್ತು ಕರೆಯುವಿಕೆಯನ್ನು ಅಡಗಿಸುವ

ಆಶಯಪಡುತ್ತಾರೆ ಮತ್ತು ನಡತೆಗಳ ಅಂಶಗಳ ಅಧಿಕ ಪ್ರಾಮುಖ್ಯತೆಯನ್ನು ತಾತ್ಸಾರ ಮಾಡುತ್ತಾರೆ.

- ಹೃದಯದ ವಿವಾದಾಂಶಗಳೊಡನೆ ವ್ಯವಹರಿಸಬೇಕು

  ಉದಾಹರಣೆಗೆ:- ತಿರಸ್ಕಾರ, ಅಭದ್ರತೆ, ಭಾವನಾತ್ಮಕ ಬಾಧೆಗಳು, ಆಂತರಿಕ ಬಂಡಾಯ (ಕೆಲವು ಸಮಯಗಳಲ್ಲಿ ಅನಗತ್ಯವಾಗಿ ಹೊರಗಿನಲ್ಲಿ ಬಂಡಾಯುಗಾರರಾಗಿರುವುದಿಲ್ಲ, ಆದರೆ ಅವರು ಆಂತರಿಕವಾಗಿ ಬಂಡಾಯಗಾರರಾಗಿದ್ದಾರೆ.) ಮುಂತಾದವುಗಳು

- ವ್ಯಕ್ತಿತ್ವ ವಿವಾದಾಂಶಗಳೊಡನೆ ವ್ಯವಹರಿಸಬೇಕು.

  ಉದಾಹರಣೆಗೆ :- ಮುಂಗೋಪ, ಜನರೊಂದಿಗೆ ಸಂಬಂಧ ಕಲ್ಪಿಸಿಕೊಳ್ಳದಿರುವುದು, ಸ್ವತಂತ್ರ್ಯವಾಗಿರುವುದು ಮುಂತಾದವುಗಳು.

- ಜೀವನ ಶೈಲಿ ಮತ್ತು ಹವ್ಯಾಸಗಳೊಂದಿಗೆ ವ್ಯವಹರಿಸಬೇಕು.

  ಉದಾಹರಣೆಗೆ:- ಒಳ್ಳೆಯ ಸಾಕ್ಷಿಯನ್ನು ಕಾಪಾಡಿಕೊಳ್ಳುವುದರಲ್ಲಿ ಪ್ರಾಮುಖ್ಯತೆ, ಸಮಯ ನಿರ್ವಹಣೆ, ಹಣದ ನಿರ್ವಹಣೆ ಮುಂತಾದವು.

- ತಾವೇ ಹಾಕಿಕೊಂಡ ನಿರ್ಬಂಧಗಳನ್ನು ಗುರ್ತಿಸಿ ಅವುಗಳನ್ನು ಮುರಿದುಹಾಕಿರಿ.
- ಸೋಲುಗಳ ಸರಮಾಲೆಗಳನ್ನು ಗುರ್ತಿಸಿರಿ ಮತ್ತು ಮುರಿದುಹಾಕಿರಿ. (ಆಗಾಗ್ಗೆ ಸಭೆಗಳನ್ನು ಮತ್ತು ಸಭಾಸೇವೆಗಳನ್ನು ಬಿಡುವುದು) ಇವುಗಳನ್ನು ಗುರುತಿಸಿರಿ

## 8. ಅವರ ಕರೆಗೆ ಅವರನ್ನು ಬಿಡುಗಡೆಗೊಳಿಸಿರಿ

ಜನರು ಬೆಳವಣಿಗೆ ಹೊಂದುವಾಗ ಮತ್ತು ಪ್ರೌಢತೆಗೆ ಬಂದಾಗ ನಾವು ಅವರನ್ನು ಅವರ ಕರೆಗೆ ಸ್ವಾಧೀನ ಮಾಡಬೇಕಾದ ಕೃಪೆ ಹೊಂದಿರಬೇಕು.

1 ತಿಮೊಥೆಯನಿಗೆ 1:3

**3ನಾನು ಮೆಕೆದೋನ್ಯಕ್ಕೆ ಹೋಗುತ್ತಿದ್ದಾಗ ನೀನು ಎಫೆಸದಲ್ಲೇ ಇದ್ದುಕೊಂಡು ಅಲ್ಲಿರುವ ಕೆಲವರಿಗೆ ನೀವು ಬೇರೆ ಉಪದೇಶವನ್ನು ಮಾಡಬಾರದೆಂತಲೂ ಕಲ್ಪನಾಕಥೆಗಳಿಗೂ ಕೊನೆಮೊದಲಿಲ್ಲದ ವಂಶಾವಳಿಗಳಿಗೂ ಲಕ್ಷ್ಯಕೊಡಬಾರದೆಂತಲೂ ಆಜ್ಞಾಪಿಸಬೇಕೆಂಬುದಾಗಿ ಖಂಡಿತವಾಗಿ ಹೇಳಿದ ಪ್ರಕಾರ ಈಗಲೂ ಹೇಳುತ್ತೇನೆ.**

ತೀತನು 1:4,5

**ನಿನಗೆ ನೇಮಿಸಿದ ಸೇವೆಯನ್ನು ಲೋಪವಿಲ್ಲದೆ ನಡೆಸು. [4]ನಂಬಿಕೆಯ ಸಂಬಂಧದಲ್ಲಿ ನನ್ನ ನಿಜಕುಮಾರನಾದ ತೀತನಿಗೆ ಬರೆಯುವುದೇನೆಂದರೆ ತಂದೆಯಾದ ದೇವರಿಂದಲೂ ನಮ್ಮ ರಕ್ಷಕನಾದ ಕ್ರಿಸ್ತ ಯೇಸುವಿನಿಂದರೂ ನಿನಗೆ ಕೃಪೆಯೂ, ಶಾಂತಿಯೂ ಆಗಲಿ. [5]ನೀನು ಕ್ರೇತ ದ್ವೀಪದಲ್ಲಿ ಇನ್ನೂ ಕ್ರಮಕ್ಕೆ ಬಾರದಿರುವ ಕಾರ್ಯಗಳನ್ನು ಕ್ರಮಪಡಿಸಿ ಪಟ್ಟಣ ಪಟ್ಟಣಗಳಲ್ಲೂ ಸಭೆಯ ಹಿರಿಯರನ್ನು ನೇಮಿಸಬೇಕೆಂದು ನಾನು ನಿನಗೆ ಅಪ್ಪಣೆ ಕೊಟ್ಟು, ನಿನ್ನನ್ನು ಅಲ್ಲೇ ಬಿಟ್ಟು ಬಂದೆನಲ್ಲಾ.**

ಅವರು ಸ್ವಂತವಾಗಿ ಹಾರುವುದಕ್ಕೆ ಅವರಿಗೆ ಸ್ವತಂತ್ರತೆ ಇರಬೇಕು.

## 9. ಅಗತ್ಯವಿದ್ದಾಗ ಅವರ ಆತ್ಮಿಕ ಸಹಾಯಕರಾಗಿ ಮುಂದುವರೆಯಿರಿ.

ನಾವು ಜನರನ್ನು ಬಿಡುಗಡೆ ಮಾಡುವಾಗ, ಅವರನ್ನು ತ್ಯಜಿಸಬಾರದು. ಬದಲಾಗಿ ಅವರ ಬೆಂಬಲ ಮತ್ತು ಪ್ರೋತ್ಸಾಹಗಳಿಗೆ ಯಾವಾಗಲೂ ದೊರೆಯುವವರಾಗಿ ನಡೆಯಬೇಕು.

2 ಕೊರಿಂಥದವರಿಗೆ 12:14,15

**[14] ಇಗೋ, ನಾನು ನಿಮ್ಮ ಬಳಿಗೆ ಬರುವದಕ್ಕೆ ಸಿದ್ಧವಾಗಿರುವದು ಇದು ಮೂರನೆಯ ಸಾರಿ; ಮತ್ತು ನಿಮಗೆ ಭಾರವಾಗಿರುವುದಿಲ್ಲ; ನಾನು ನಿಮ್ಮ ಸೊತ್ತನ್ನು ಆಶಿಸದೇ ನಿಮ್ಮನ್ನೆ ಆಶಿಸುತ್ತೇನೆ. ಮಕ್ಕಳು ತಂದೆತಾಯಿಗಳಿಗೋಸ್ಕರ ದ್ರವ್ಯವನ್ನು ಕೂಡಿಸಿಡುವುದು ಧರ್ಮವಲ್ಲ. ತಂದೆತಾಯಿಗಳು ಮಕ್ಕಳಿಗೋಸ್ಕರ ಕೂಡಿಸಿಡುವುದೇ ಧರ್ಮ. [15]ನಾನಂತೂ ನನಗಿರುವುದನ್ನು ನಿಮ್ಮ ಆತ್ಮ ಸಂರಕ್ಷಣೆಗೋಸ್ಕರ ಅತಿ ಸಂತೋಷದಿಂದ ವೆಚ್ಚ ಮಾಡುತ್ತೇನೆ, ನನ್ನನ್ನೇ ವೆಚ್ಚ ಮಾಡಿಕೊಳ್ಳುತ್ತೇನೆ. ನಾನು ನಿಮ್ಮನ್ನು ಹೆಚ್ಚಾಗಿ ಪ್ರೀತಿಸಿದರೆ ನೀವು ನನ್ನನ್ನು ಕಡಿಮೆಯಾಗಿ ಪ್ರೀತಿಸುತ್ತೀರೋ?**

## 10. ಬಿದ್ದು ಹೋದವರನ್ನು ಪುನಃಸ್ಥಾಪಿಸುವುದು

ಗಲಾತ್ಯ 6:1

**[1] ಸಹೋದರರೇ, ನಿಮ್ಮಲ್ಲಿ ಯಾರಾದರೂ ಯಾವುದೋ ಒಂದು ದೋಷದಲ್ಲಿ ಸಿಕ್ಕಿದರೆ ಅಂಥವನನ್ನು ಆತ್ಮನಿಂದ ನಡಿಸಿಕೊಳ್ಳುವ ನೀವು ಶಾಂತಭಾವದಿಂದ ತಿದ್ದಿ ಸರಿಮಾಡಿರಿ, ನೀನಾದರೂ ದುಷ್ಪ್ರೇರಣೆಗೆ ಒಳಗಾಗದಂತೆ ನಿನ್ನ ವಿಷಯದಲ್ಲಿ ಎಚ್ಚರಿಕೆಯಾಗಿರು.**

1ಯೋಹಾನನು 5:14-16

**[14]ನಾವು ದೇವರ ಚಿತ್ತಾನುಸಾರವಾಗಿ ಏನಾದರೂ ಬೇಡಿಕೊಂಡರೆ ಆತನು ನಮ್ಮ ವಿಜ್ಞಾಪನೆಯನ್ನು ಕೇಳುತ್ತಾನೆಂಬ ಧೈರ್ಯವು ಆತನ ವಿಷಯವಾಗಿ ನಮಗುಂಟು [15]ನಾವು ಬೇಡಿದವುಗಳು ಆತನಿಂದ ನಮಗೆ ದೊರೆತವೆಂಬದೂ ನಮಗೆ ಗೊತ್ತಾಗಿದೆ. [16]ಯಾವನಾದರೂ ತನ್ನ ಸಹೋದರನು**

**ಮರಣಕರವಲ್ಲದ ಪಾಪಮಾಡುವದನ್ನು ಕಂಡರೆ ಅವನು ದೇವರನ್ನು ಬೇಡಿಕೊಳ್ಳಲಿ. ಆಗ ದೇವರು ಮರಣಕರವಲ್ಲದ ಪಾಪಮಾಡುವವರಿಗೆ ಜೀವವನ್ನು ದಯಪಾಲಿಸುವನು. ಮರಣಕರವಾದ ಪಾಪವುಂಟು ಈ ಪಾಪದ ವಿಷಯವಾಗಿ ಬೇಡಿಕೊಳ್ಳಬೇಕೆಂದು ನಾನು ಹೇಳುವುದಿಲ್ಲ.**

ಅನೇಕ ಬಾರಿ ನಮಗೆ ಗಾಯ ಮಾಡಿದವರಿಗೆ ನೋವುಂಟುಮಾಡಲು ನಾವು ಪ್ರಯತ್ನಿಸುತ್ತೇವೆ. ಅದಕ್ಕೆ ಬದಲಾಗಿ ತಪ್ಪು ಮಾಡಿದವರನ್ನು ಮತ್ತು ಬಿದ್ದವರನ್ನು ಪ್ರೀತಿಯಿಂದ ತಿರುಗಿ ಕಟ್ಟುವುದನ್ನು ನಾವು ಕಲಿಯಬೇಕು.

## 11. ಬಿದ್ದು ಹೋದವರನ್ನು ನಿಭಾಯಿಸುವುದು

ಫಿಲೆಮೋನ 1:24

**[24]ನನ್ನ ಸಹಕಾರಿಗಳಾದ ಮಾರ್ಕ ಅರಿಸ್ತಾರ್ಕ ದೇಮ ಲೂಕರೂ ನಿನ್ನನ್ನು ವಂದಿಸುತ್ತಾರೆ.**

2 ತಿಮೊಥೆಯನಿಗೆ 4:10

**[10]ದೇಮನು ಇಹಲೋಕವನ್ನು ಪ್ರೀತಿಸಿ ನನ್ನನ್ನು ಬಿಟ್ಟು ಥೆಸಲೋನಿಕಕ್ಕೆ ಹೋದನು; ಕ್ರೆಸ್ಕನು ಗಲಾತ್ಯಕ್ಕೂ ತೀತನು ದಲ್ಮಾತ್ಯಕ್ಕೂ ಹೋದರು;**

ಕೆಲವರು ಅವರ ನಂಬಿಕೆಯನ್ನು ಸಂಪೂರ್ಣ ನಾಶಪಡಿಸಿಕೊಳ್ಳುತ್ತಾರೆ ಮತ್ತು ನಿಮ್ಮ ಪ್ರಮುಖ ಎದುರಾಳಿಗಳಾಗಿಬಿಡುತ್ತಾರೆ.

1 ತಿಮೊಥೆಯನಿಗೆ 1:19,20

**[19]ನಂಬಿಕೆಯನ್ನೂ, ಒಳ್ಳೇ ಮನಸಾಕ್ಷಿಯನ್ನೂ ಬಿಡದೆ ಹಿಡುಕೋ ಕೆಲವರು ಮನಸ್ಸಿನ ಒಳ್ಳೇ ಸಾಕ್ಷಿಯನ್ನು ತಳ್ಳಿಬಿಟ್ಟು ಕ್ರಿಸ್ತನಂಬಿಕೆಯ ವಿಷಯದಲ್ಲಿ ಹಡಗು ಒಡೆದು ನಷ್ಟ ಪಟ್ಟವರಂತೆ ಇದ್ದಾರೆ; ಸಹುಮೆನಾಯನೂ ಅಲೆಕ್ಸಾಂದರನೂ ಇಂಥವರೇ: ಇವರು ದೇವದೂಷಣೆ ಮಾಡಬಾರದೆಂಬುದನ್ನು ಕಲಿತುಕೊಳ್ಳುವಂತೆ ಇವರನ್ನು ಸೈತಾನನಿಗೆ ಒಪ್ಪಿಸಿಕೊಟ್ಟೆನು.**

2 ತಿಮೊಥೆಯನಿಗೆ 4:14,15

**[14]ಕಂಚುಗಾರನಾದ ಅಲೆಕ್ಸಾಂದ್ರನು ನನಗೆ ಬಹಳ ಕೇಡು ಮಾಡಿದನು; ಕರ್ತನು ಅವನ ಕೃತ್ಯಗಳಿಗೆ ಸರಿಯಾಗಿ ಅವನಿಗೆ ಪ್ರತಿಫಲವನ್ನು ಕೊಡುವನು. [15]ನೀನು ಸಹ ಅವನ ವಿಷಯದಲ್ಲಿ ಎಚ್ಚರಿಕೆಯಾಗಿರು ಅವನು ನಮ್ಮ ಮಾತುಗಳನ್ನು ಬಹಳವಾಗಿ ಎದುರಿಸಿದನು.**

## ವೈಯಕ್ತಿಕ ಅನ್ವಯಿಸುವಿಕೆ

ಪ್ರಶ್ನೆ. 1. ಇಲ್ಲಿಯವರೆಗಿನ ನಿನ್ನ ಪಯಣದಲ್ಲಿ, ಆತ್ಮನಲ್ಲಿ ಜನರನ್ನು ಕಟ್ಟಿ ಬೆಳೆಸುವ ನಿನ್ನ ಅನುಭವವನ್ನು ತುಲನೆ ಮಾಡಿನೋಡು. ಇದರ ಸಕಾರಾತ್ಮಕ/ಉತ್ತಮ ಫಲಿತಾಂಶ ಮತ್ತು ನಕಾರತ್ಮಕ/ಕೆಟ್ಟ ಫಲಿತಾಂಶಗಳೇನು? ಈ ಅನುಭವಗಳಿಂದ ನೀನು ಕಲಿತ ಮುಖ್ಯ ಅಂಶಗಳನ್ನು ಹೊರ ತೆಗೆದು ಪಟ್ಟಿ ಮಾಡು.

ರಾಜ್ಯವನ್ನು ಕಟ್ಟುವ ಜನರ ಜೊತೆಗೆ ಕೆಲಸ ಮಾಡುವುದರ ಕುರಿತು ಹೆಚ್ಚಿನ ಅಧ್ಯಾಯನಕ್ಕಾಗಿ ದಯವಿಟ್ಟು ಎ.ಪಿ.ಸಿ. ಪ್ರಕಾಶನ ಸಂಸ್ಥೆಯವರ "ಮರ್ಯಾದೆ ಸೂತ್ರಗಳು" ಎಂಬ ಪುಸ್ತಕವನ್ನು ಉಚಿತವಾಗಿ ಪಡೆದುಕೊಂಡು ಓದಿರಿ.

# ಅಧ್ಯಾಯ 7

## ಪಾಲುಗಾರಿಕೆ - ದೇವರ ರಾಜ್ಯದಲ್ಲಿ ಜೊತೆ ಕೆಲಸದವರಾಗಿರುವುದನ್ನು ಕಲಿಯುವುದು

ನಾನು ಸಸಿಯನ್ನು ನೆಟ್ಟೆನು, ಅಪೊಲ್ಲೋಸನು ನೀರು ಹೊಯಿದನು, ಆದರೆ ಬೆಳೆಸುತ್ತಾ ಬಂದವನು ದೇವರು. ಹೀಗಿರಲಾಗಿ ನೆಡುವವನಾಗಲಿ ನೀರು ಹೊಯ್ಯುವವನಾಗಲಿ ವಿಶೇಷವಾದವನಲ್ಲ ಬೆಳೆಸುವ ದೇವರೆ ವಿಶೇಷವಾದವನು. ನೆಡುವವನು ನೀರು ಹೊಯ್ಯುವವನು ಒಂದೇ ಆಗಿದ್ದಾರೆ ಆದರೂ ಪ್ರತಿಯೊಬ್ಬನಿಗೆ ಅವನವನ ಕಷ್ಟಕ್ಕೆ ತಕ್ಕ ಹಾಗೆ ಕೂಲಿಯು ದೊರೆಯುತ್ತದೆ. (1 ಕೊರಿಂಥದವರಿಗೆ 3:5–8)



# 7

# ಪಾಲುಗಾರಿಕೆ - ದೇವರ ರಾಜ್ಯದಲ್ಲಿ ಜೊತೆ ಕೆಲಸದವರಾಗಿರುವುದನ್ನು ಕಲಿಯುವುದು

**1 ಕೊರಿಂಥದವರಿಗೆ 3:9ಎ**
**ನಾವು ದೇವರ ಜೊತೆ ಕೆಲಸದವರು**

ನಾವು ದೇವರೊಂದಿಗೆ ಕೆಲಸದವರಾದ ಕಾರಣ, ನಾವು ದೇವರ ರಾಜ್ಯದಲ್ಲಿ ಪರಸ್ಪರ ಜೊತೆ ಕೆಲಸದವರು.

ಪಾಲುಗಾರಿಕೆ ಮಾಡಿಕೊಳ್ಳುವುದರ ಮೂಲಕ ನಾವು ಪ್ರಪಂಚದಾದ್ಯಂತ ದೇವರ ರಾಜ್ಯದ ಅಭಿವೃದ್ಧಿಗಾಗಿ ಬೇಕಾದಷ್ಟು ಸಾಧನೆ ಮಾಡಬಹುದು.

ಕ್ರಿಸ್ತನ ದೇಹಕ್ಕೆ ನೀಡಲಾಗುವ ಕನಸುಗಳು ಮತ್ತು ದರ್ಶನಗಳು ಪರಸ್ಪರ ಜೋಡಿಸಲ್ಪಟ್ಟು ಹೊಂದಿಕೆ ಮಾಡಲ್ಪಟ್ಟಿವೆ. ನಮ್ಮ ದೈವದತ್ತ ದರ್ಶನವು ಯಶಸ್ವಿಯಾಗಬೇಕಾದರೆ ನಾವು ದೇವರ ರಾಜ್ಯದಲ್ಲಿ ಇತರರನ್ನು ಪಾಲುಗಾರನ್ನಾಗಿ ಮಾಡಿಕೊಂಡು ಕೆಲಸ ಮಾಡಬೇಕು. ದೇವರ ಸೈನ್ಯದಲ್ಲಿ, ದುರಾದೃಷಕರವಾಗಿ, ಆತನ ಸೈನಿಕರ ನಡುವೆ ಕಲಹಗಳು ಬರುತ್ತವೆ. ಕೆಲವೊಮ್ಮೆ ಅವು ಸೈನ್ಯಾಧಿಕಾರಿಗಳ ನಡುವೆಯೂ ನಡೆಯಬಹುದು, ಅದರಲ್ಲಿ ನಿಜವಾದ ವೈರಿಗೆ ಕೆಲಸ ಕಡಿಮೆಯೇ, ನಾವು ಪರಸ್ಪರರನ್ನು ನಾಶ ಮಾಡಲು ಹೊರಟಾಗ ಅವನು ಪ್ರೇಕ್ಷಕನಾಗಿ ನಿಂತು ನೋಡುತ್ತಾನೆ. ಕ್ರಿಸ್ತನ ದೇಹವು ಏಕ ವ್ಯಕ್ತಿಯ ಸೈನ್ಯವಲ್ಲ ಎಂಬುದನ್ನು ನಾವು ಮರೆತು ಕೆಲವೊಮ್ಮೆ ಏಕಾಂಗಿಯಾಗಿ ಹೋರಾಡಲು ಪ್ರಯತ್ನಿಸುತ್ತೇವೆ.

## ವಿಭಾಗವಾದ ಒಂದು ರಾಜ್ಯವು ದುರ್ಬಲ ಮತ್ತು ಅಧಿಕಾರ ವಿಲ್ಲದ್ದಾಗಿದೆ.

ಮಾರ್ಕ 3:24

**[24]ಒಂದು ರಾಜ್ಯದಲ್ಲಿ ಭೇದಹುಟ್ಟಿದರೆ ಆ ರಾಜ್ಯವು ಉಳಿಯಲಾರದು.**

ಒಬ್ಬರೊಂದಿಗೊಬ್ಬರು ಪಾಲುಗಾರರಾಗಲು ಇಚ್ಛೆ ಇಲ್ಲದಿರುವುದರಿಂದ ಮಾಡಬೇಕಾದ ಅನೇಕ ಕಾರ್ಯಗಳು ಹಾಗೆಯೇ ಉಳಿದಿವೆ.

ಪಾಲುಗಾರಿಕೆಗೆ ನಮಗೆ ಇಷ್ಟವಿಲ್ಲದಿರುವುದು ದೇವರ ರಾಜ್ಯದ ಅಡಚಣೆಯಾಗುತ್ತದೆ.

## ಆತ್ಮನಲ್ಲಿ ಐಕ್ಯತೆ ಕಾಪಾಡಲು ನಾವು ಕರೆಯಲ್ಪಟ್ಟಿದ್ದೇವೆ

ಎಫೆಸದವರಿಗೆ 4:3

**[3]ಸಮಾಧಾನವೆಂಬ ಬಂಧನದಿಂದ ಕಟ್ಟಲ್ಪಟ್ಟವರಾಗಿದ್ದು ಪವಿತ್ರಾತ್ಮನಿಂದುಂಟಾಗುವ ಐಕ್ಯವನ್ನು ಕಾಪಾಡಿಕೊಳ್ಳುವುದಕ್ಕೆ ಆಸಕ್ತರಾಗಿರಿ.**

ಫಿಲಿಪ್ಪಿಯವರಿಗೆ 2:1

**[1]ಕ್ರಿಸ್ತನಿಂದ ಉತ್ತೇಜನ, ಪ್ರೀತಿಯ ಪ್ರೇರಣೆ, ಪವಿತ್ರಾತ್ಮನ ಅನ್ಯೋನ್ಯತೆ, ಕಾರುಣ್ಯ ದಯಾರಸಗಳು ಉಂಟಾಗುವವಾದರೆ ಐಕಮತ್ಯವುಳ್ಳವರಾಗಿದ್ದು ನನ್ನ ಸಂತೋಷವನ್ನು ಪರಿಪೂರ್ಣ ಮಾಡಿರಿ.**

ಲೂಕ 9:49,50

**[49]ಅದಕ್ಕೆ ಯೋಹಾನನು ಗುರುವೇ ಯಾವನೋ ಒಬ್ಬನು ನಿನ್ನ ಹೆಸರನ್ನು ಹೇಳಿ ದೆವ್ವ ಬಿಡಿಸುವದನ್ನು ನಾವು ಕಂಡು ಅವನು ನಮಗೆ ಸೇರಿದವಲನಲ್ಲವಾದ್ದರಿಂದ ಅವನಿಗೆ ಅಡ್ಡಿ ಮಾಡಿದೆವು ಅನ್ನಲು ಯೇಸು ಅವನಿಗೆ ಅಡ್ಡಿ ಮಾಡಬೇಡಿರಿ; ನಿಮ್ಮನ್ನು ಎದುರಿಸದವನು ನಿಮ್ಮ ಪಕ್ಷದವನೇ ಎಂದು ಹೇಳಿದನು.**

ಯಾವನೋ ಒಬ್ಬನು ''ನಮ್ಮ ಗುಂಪು'' ಗಳ ಭಾಗವಾಗಿಲ್ಲದಿದ್ದರೆ ಅವನು ದೇವರ ರಾಜ್ಯದ ಕೆಲಸ ಮಾಡುತ್ತಿಲ್ಲ ಎಂಬುದಾಗಿ ಅರ್ಥವಲ್ಲ!

## ದೇವರ ರಾಜ್ಯದ ಮನಸ್ಸು ಉಳ್ಳವರಾಗಿರುವುದು

ಧರ್ಮೋಪದೇಶಕಾಂಡ 22:10

**[10]ಎತ್ತನ್ನೂ ಕತ್ತೆಯನ್ನೂ ಜೊತೆಮಾಡಿ ನೇಗಿಲಿಗೆ ಕಟ್ಟಬಾರದು**

ನಾವೆಲ್ಲರೂ ಸೇರಿ ಕೆಲಸ ಮಾಡಬೇಕಾದಲ್ಲಿ ನಮ್ಮೆಲ್ಲರಲ್ಲಿಯೂ ಐಕ್ಯ ಭಾವ ಇರಬೇಕು ನಾವೆಲ್ಲರು ರಾಜ್ಯದ ಮನೋಭಾವದವರಾಗಿದ್ದರೆ ನಾವು ಏಕೀಭವಿಸಿದವರಾಗಿ ರಾಜ್ಯವನ್ನು ಅಭಿವೃದ್ಧಿ ಪಡಿಸುತ್ತಾ ಆತ್ಮದಲ್ಲಿ ಐಕ್ಯತೆ ಮತ್ತು

ಅನ್ಯೋನ್ಯತೆಯನ್ನು ಬಲಪಡಿಸುತ್ತೇವೆ. ಅದನ್ನು ಬಿಟ್ಟು, ನಮ್ಮಲ್ಲಿ ಕೆಲವರು ಮಾತ್ರವೇ ಪರಲೋಕಭಾವದವರಾಗಿದ್ದು, ಉಳಿದವರು ವೈಯಕ್ತಿಕ ಮತ್ತು ಪಂಗಡಗಳ ಆಧ್ಯತೆಯಲ್ಲಿ ಆಸಕ್ತರಾಗಿದ್ದರೆ ಅದು ಎತ್ತು ಮತ್ತು ಕತ್ತೆಯನ್ನು ನೇಗಿಲಿಗೆ ಕಟ್ಟಿ ಉತ್ತಂತೆ!

ಆಮೋಸ 3:3

**3ಗೊತ್ತುಮಾಡಿಕೊಳ್ಳದೇ ಇಬ್ಬರು ಜೊತೆಯಾಗಿ ನಡೆಯುವರೋ?**

**1 ಕೊರಿಂಥದವರಿಗೆ 1:10**

**10ಸಹೋದರರೇ, ನಿಮ್ಮೆಲ್ಲರ ಮಾತು ಒಂದೇ ಆಗಿರಬೇಕು; ನಿಮ್ಮಲ್ಲಿ ಭೇದಗಳಿರಬಾರದು: ನೀವು ಒಂದೇ ಮನಸ್ಸೂ ಒಂದೇ ಅಭಿಪ್ರಾಯವುಳ್ಳವರಾಗಿದ್ದು ಹೊಂದಿಕೆಯಿಂದಿರಬೇಕು ಎಂಬುದಾಗಿ ನಾನು ನಮ್ಮ ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿ ನಿಮ್ಮನ್ನು ಬೇಡಿಕೊಳ್ಳುತ್ತೇನೆ.**

ನಾವೆಲ್ಲರೂ ಯಾವುದನ್ನು ಒಪ್ಪಿಕೊಳ್ಳಬಹುದು? ಕ್ರಿಸ್ತನ ರಾಜ್ಯದ ಏಳಿಗೆಗಾಗಿ ನಾವು ಏನು ಮಾಡಿದರೂ, ಹುಡುಕಿದರೂ ಇವೆಲ್ಲವುಗಳಲ್ಲಿ ನಾವೆಲ್ಲರೂ ಒಂದೇ ಮನಸ್ಸುಳ್ಳವರಾಗಿರಬೇಕು.

ನಾವೆಲ್ಲರೂ ದೇವರ ರಾಜ್ಯದ ಮನಸ್ಸುಳ್ಳವರಾಗಿ ಕಂಡು ಬರಬಹುದು.

## ವೈಯಕ್ತಿಕವಾಗಿ ಮಾಡುವ ಸೇವೆಗಿಂತಲೂ ದೇವರ ರಾಜ್ಯದ ಅಭಿವೃದ್ಧಿಗೆ ಹೆಚ್ಚಿನ ಆಧ್ಯತೆ ನೀಡಿರಿ.

**ಮತ್ತಾಯ 6:10**
**ಪರಲೋಕದಲ್ಲಿ ನಿನ್ನ ಚಿತ್ತವು ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ.**

ನಮ್ಮ ಮನೋಭಾವವನ್ನು ಬದಲಾಯಿಸಿಕೊಳ್ಳಬೇಕೆಂಬ ದೊಡ್ಡ ಅವಶ್ಯಕತೆ ಇದೆ, ನಮ್ಮ ದೃಷ್ಟಿ ಕೋನವನ್ನು ಬದಲಾಯಿಸಿಕೊಳ್ಳುವ ಅಗತ್ಯವಿದೆ. ನಮ್ಮಲ್ಲಿ ಪ್ರತಿಯೊಬ್ಬರೂ ವೈಯಕ್ತಿಕವಾಗಿ ದೇವರು ನಮಗೆ ಕೊಟ್ಟ ದರ್ಶನದ ಕರೆ ಮತ್ತು ಕೆಲಸದ ಜವಾಬ್ದಾರಿ ಹೊತ್ತು ಒಳ್ಳೆಯ ಮನೆವಾಳ್ತನ ಮಾಡಬೇಕಾಗಿದ್ದರೂ, ಅಂತಿಮವಾಗಿ, ಅದು ನಮ್ಮ ಸೇವೆ ಅಥವಾ ಸ್ಥಳೀಯ ಸಭೆ ಅಥವಾ ಕರೆಯಲ್ಲ. ಬದಲಾಗಿ ದೇವರ ರಾಜ್ಯದ ಕೆಲಸ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು.

ನಾವು ರಾಜ್ಯದ ಮನೋಭಾವ ಹೊಂದಿದವರಾಗಿ ಕಾರ್ಯ ಮಾಡಬೇಕು. ಇಲ್ಲಿ ದೇವರ ರಾಜ್ಯವು ನಮ್ಮ ವೈಯಕ್ತಿಕ ದರ್ಶನ, ಕರೆ, ಸೇವೆ ಮತ್ತು ಸ್ಥಳಿಯ ಸಭೆ ಇದೆಲ್ಲವುಗಳನ್ನು ಮೀರಿ ಆಧ್ಯತೆ ಹೊಂದುತ್ತದೆ. ಇದು ಮೂರ್ಖತನದಂತೆ ಕಾಣುವುದು. ಅದರಲ್ಲೂ ವಿಶೇಷವಾಗಿ, ಇತರ ಸೇವಾ ಸಂಸ್ಥೆಗಳು ರಾಜ್ಯದ ಅಭಿವೃದ್ಧಿ ಕಡೆಗೆ ಹೆಚ್ಚಿನ ಗಮನ ಹರಿಸದೆ ತಮ್ಮದೇ ಬೆಳವಣಿಗೆ ಮತ್ತು ಸ್ವಂತ ಅಜೆಂಡಾಗಳನ್ನು/ಪ್ರಾಮುಖ್ಯತೆಯನ್ನು ಮುಂದಿಟ್ಟುಕೊಂಡು ಹೋಗುತ್ತಿರುವ ಕಾರಣವಾಗಿ. ಹೇಗೋ, ಇದು ಬೇರೆಯದೇ ವಿಷಯ, ಇಲ್ಲಿ ಮತ್ತಾಯ 6:33ರನ್ನು ಅಳವಡಿಸಿಕೊಳ್ಳಬೇಕು. "ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕ ಪಡಿರಿ; ಅವುಗಳ ಕೂಡ ಇವೆಲ್ಲವೂ ನಿಮಗೆ ದೊರೆಯುತ್ತದೆ".

ದೇವರ ರಾಜ್ಯದ ಬೆಳವಣಿಗೆ ಮತ್ತು ಮುಂದುವರಿಕೆಯನ್ನು ನಮ್ಮ ವೈಯಕ್ತಿಕ ಅಭಿವೃದ್ಧಿಗಿಂತಲೂ ಹೆಚ್ಚಾಗಿ ಗಮನಿಸುವುದು ನಮಗಾಗಿ ಸಾಯುವುದನ್ನು ಕಲಿತುಕೊಳ್ಳುವ ಮಾರ್ಗವಾಗಿದೆ. ಇದು ಸುಲಭವಲ್ಲ, ಆದರೂ ಇದೇ ಸರಿಯಾದ ಮಾರ್ಗ ಇಂತಹ ತ್ಯಾಗಗಳನ್ನು ದೇವರು ಮೆಚ್ಚುತ್ತಾನೆ.

## ಒಬ್ಬರೊಂದಿಗೊಬ್ಬರು ಸಂಪರ್ಕಮಾಡಿ ಕೆಲಸ ಮಾಡುವುದನ್ನು ನಾವು ಕಲಿಯಬೇಕು

**ಪಾಲುಗಾರಿಕೆಗಾಗಿ ರೂಪಿಸಲ್ಪಟ್ಟಿದೆ.**

1 ಕೊರಿಂಥದವರಿಗೆ 12:18

**18ಆದರೆ ದೇವರು ಆ ಅಂಗಗಳಲ್ಲಿ ಪ್ರತಿಯೊಂದನ್ನು ತನಗೆ ಸರಿಯಾಗಿ ತೋಚಿದ ಪ್ರಕಾರ ದೇಹದೊಳಗೆ ಇಟ್ಟಿದ್ದಾನೆ.**

ಜನರು ಪಾಲುಗಾರಿಕೆಯಲ್ಲಿ ಕೆಲಸಮಾಡುವುದಕ್ಕಾಗಿ ಕ್ರಿಸ್ತನ ದೇಹವು ರಚಿಸಲ್ಪಟ್ಟಿದೆ.

ಎಫೆಸದವರಿಗೆ 4:16

**16ಆತನೇ ಶಿರಸ್ಸು ದೇಹವೆಲ್ಲಾ ಆತನ ದೊರೆತನದಲ್ಲಿದ್ದು ತನ್ನಲ್ಲಿರುವ ಎಲ್ಲಾ ನರಗಳಿಂದ ಬಿಗಿಯಾಗಿ ಜೋಡಿಸಲ್ಪಟ್ಟು ಪ್ರತಿಅಂಗದಿಂದ ಅದರದರ ಶಕ್ತಿಯ ಪ್ರಕಾರ ಸಹಾಯ ಹೊಂದಿ ಪ್ರೀತಿಯಿಂದ ಐಕ್ಯವಾಗಿದ್ದು ಕ್ಷೇಮಾಭಿವೃದ್ಧಿಯನ್ನು ಹೊಂದುತ್ತದೆ.**

ಪ್ರತಿಯೊಂದು ಕೀಲು ಅದರದರ ಪಾಲನ್ನು ಒದಗಿಸಬೇಕು.

ಪಾಲುಗಾರಿಕೆಯು, ಒಬ್ಬರಿಗೊಬ್ಬರು ಪೂರಕವಾಗಿರುವುದಾಗಿದೆ ಇದು ಒಬ್ಬರಿಗೊಬ್ಬರು ಸೆಣೆಸುವುದಲ್ಲ ನಾವು ಒಬ್ಬರಿಗೊಬ್ಬರು ಪೂರಕವಾಗಿರಲು ರಚಿಸಲ್ಪಟ್ಟಿದ್ದೇವೆ.

ನಾವೆಲ್ಲರೂ ಬರಲಿರುವ ದೇವರ ಚಲನೆಗಳಿಗೆ ಅಗತ್ಯವಾಗಿದ್ದು ವರಗಳನ್ನು ಹೊಂದಿದ್ದೇವೆ ದೇವರ ಕುಟುಂಬದಲ್ಲಿ ನಾವೆಲ್ಲರೂ ನಮ್ಮ ಸರಿಯಾದ ಸ್ಥಳಕ್ಕೆ ಬರಬೇಕು, ದೇವರು ಸಭೆಗಳನ್ನು ಬಲಿಷ್ಟಗೊಳಿಸಲು ಐದು ಪಟ್ಟು ಸೇವೆಯನ್ನು ಎಬ್ಬಿಸುತ್ತಿದ್ದಾನೆ. ಮತ್ತು ಸಾರ್ವತ್ರಿಕ ಸ್ಥಳೀಯ ಸಭೆಯಾಗಿರಬಹುದು ಅಥವಾ ವಿಸ್ತಾರಗೊಂಡ ಕ್ರಿಸ್ತನ ದೇಹವಾಗಿರಬಹುದು, ಇದರಲ್ಲಿ ಪರಿಶುದ್ಧರನ್ನು (ದಾಸರನ್ನು) ಅವರವರ ವರಗಳು ಮತ್ತು ಕರೆಗೆ ಅನುಗುಣವಾಗಿ ಪದವಿಯನ್ನು ನೀಡಿದ್ದಾನೆ. ಪ್ರತಿಯೊಬ್ಬನು ಸ್ವಸ್ಥಾನದಲ್ಲಿರಿಸಲ್ಪಟ್ಟು ಪರಿಪೂರ್ಣ ಮತ್ತು ಪ್ರಯೋಜನಕರವಾದ ಕೆಲಸ ನಿರ್ವಹಿಸುವ ದೇಹವನ್ನು ನಾವು ಹೊಂದಿದ್ದೇವೆ.

ಯೋಹಾನ 4:36-38

**36ಕೊಯ್ಯುವವನಿಗೆ ಈಗಲೇ ಕೂಲಿ ದೊರೆಯುತ್ತದೆ. ಅವನು ನಿತ್ಯ ಜೀವಕ್ಕೆ ಫಲವನ್ನು ಕೂಡಿಸಿಡುತ್ತಾನೆ. ಹೀಗೆ ಬಿತ್ತುವವನಿಗು ಕೊಯ್ಯುವವನಿಗೂ ಕೂಡ ಸಂತೋಷವಾಗುತ್ತದೆ.**
**37ಬಿತ್ತುವವನೊಬ್ಬ, ಕೊಯ್ಯುವವನೊಬ್ಬ, ಎಂಬ ಗಾದೆಯಂತೆ ಆಯಿತು. 38ನೀವು ಕಷ್ಟಮಾಡದಂಥ**
**ಬೆಳೆಯನ್ನು ಕೊಯ್ಯುವದಕ್ಕೆ ನಾನು ನಿಮ್ಮನ್ನು ಕಳುಹಿಸಿದೆನು, ಬೇರೊಬ್ಬರು ಕಷ್ಟ ಮಾಡಿದ್ದಾರೆ; ನೀವು ನಡುವೆ ಅವರ ಕಷ್ಟದಲ್ಲಿ ಸೇರಿದ್ದೀರಿ ಎಂದು ಹೇಳಿದನು.**

1 ಕೊರಿಂಥದವರಿಗೆ 3:5-8

**ಹಾಗಾದರೆ ಅಪೊಲ್ಲೋಸನು ಏನು? ಪೌಲನು ಏನು? ಅವರು ಸೇವಕರು; ಅವರ ಮುಖಾಂತರ ನೀವು ಕ್ರಿಸ್ತನನ್ನು ನಂಬುವವರಾದಿರಿ; ಕರ್ತನು ಒಬ್ಬೊಬ್ಬನಿಗೆ ದಯಪಾಲಿಸಿದ ಪ್ರಕಾರ ಅವರು ಸೇವೆ ಮಾಡುವವರಾಗಿದ್ದಾರೆ.** ನಾನು ಸಸಿಯನ್ನು ನೆಟ್ಟೆನು, ಅಪೊಲ್ಲೋಸನು ನೀರು ಹೊಯಿದನು, ಆದರೆ ಬೆಳೆಸುತ್ತಾ ಬಂದವನು ದೇವರು. **ಹೀಗಿರಲಾಗಿ ನೆಡುವವನಾಗಲಿ ನೀರು ಹೊಯ್ಯುವವನಾಗಲಿ ವಿಶೇಷವಾದವನಲ್ಲ ಬೆಳೆಸುವ ದೇವರೆ ವಿಶೇಷವಾದವನು. ನೆಡುವವನು ನೀರು ಹೊಯ್ಯುವವನು ಒಂದೇ ಆಗಿದ್ದಾರೆ ಆದರೂ ಪ್ರತಿಯೊಬ್ಬನಿಗೆ ಅವನವನ ಕಷ್ಟಕ್ಕೆ ತಕ್ಕ ಹಾಗೆ ಕೂಲಿಯು ದೊರೆಯುತ್ತದೆ.**

ದೇವರು ಇದೇ ರೀತಿಯಾಗಿ ಕೆಲಸ ಮಾಡುತ್ತಾನೆ. ಒಬ್ಬನನ್ನು ಬಿತ್ತುವುದಕ್ಕೋ ಮತ್ತೊಬ್ಬನನ್ನು ನೀರುಣಿಸುವುದಕ್ಕೂ ಮತ್ತು ಇನ್ನೊಬ್ಬನನ್ನು ಕೊಯ್ಯುವುದಕ್ಕೆ ನೇಮಿಸುತ್ತಾನೆ.

ಅನೇಕ ಭಾರಿ ಇದನ್ನು ಅರ್ಥಮಾಡಿಕೊಳ್ಳದೆ ತಪ್ಪುದಾರಿಯಲ್ಲಿ ರಾಜ್ಯವನ್ನು ಕಟ್ಟುವ ಶೋಧನೆಗೆ ಬೀಳುತ್ತೇವೆ. "ನಾನು ನೆಟ್ಟಿದ್ದೇನೆ, ನಾನು ನೀರುಣಿಸುತ್ತೇನೆ, ಮತ್ತು ಸುಗ್ಗಿಯಲ್ಲಿ ಕೊಯ್ಯುತ್ತೇನೆ" ಎನ್ನುವ ಮನೋಭಾವನೆ ಬೆಳೆಸಿಕೊಂಡು ಬಿಡುತ್ತೇವೆ. ಆದ್ದರಿಂದ ಬೇರೆ ಯಾರು ನಮ್ಮ ಪ್ರದೇಶದ ಒಳಹೊಕ್ಕು ನಮ್ಮ ಹೊಲದೊಳಗೆ ಕಾಲಿಡದಂತೆ ಜಾಗೃತೆ ಮಾಡುತ್ತೇವೆ.

ನಮ್ಮ ಕೆಲಸದಲ್ಲಿ ಇತರರು ಜೊತೆಗೂಡುವಂತೆ ಕರ್ತನೇ ಅವರನ್ನು ಕಳುಹಿಸಿಕೊಡುತ್ತಾನೆ (ಯೊಹಾನ 4:38) ಆದಾಗ್ಯೂ, ರಾಜ್ಯದ ಮನೋಭಾವ ಹೊಂದಿಲ್ಲವಾದಲ್ಲಿ, ನೀರು ಹೊಯ್ಯಲು ಅಥವಾ ಸುಗ್ಗಿ ಕೊಯ್ಲು ಮಾಡಲು ಕರ್ತನು ಕಳುಹಿಸಿದವರನ್ನು ನಾವು ಓಡಿಸಿಬಿಡಲು ಪ್ರಯತ್ನಿಸುತ್ತೇವೆ. ಆಮೇಲೆ ನಾವು ನಾವು ಬಿತ್ತಿದ ಬೀಜವು ಏಕೆ ಚಿಗುರೊಡೆಯುತ್ತಿಲ್ಲ ಎಂದು ಆಶ್ಚರ್ಯಗೊಳ್ಳುತ್ತೇವೆ. ಅದರ ಹೊಂದು ಕಾರಣವು ಕರ್ತನು, ನಾವು ಬಿತ್ತಿದ ಬೀಜಕ್ಕೆ ನೀರು ಹೊಯ್ಯಲು ಕಳುಹಿಸಿದವರನ್ನು ಅಥವಾ ಕೊಯ್ಲಿನ ವೇಳೆಗೆ ಸಹಾಯ ಮಾಡಲೆಂದು ಕಳುಹಿಸಿದವರನ್ನು ನಾವು ಅಟ್ಟಿ ಬಿಡುತ್ತಿರುವುದೇ ಆಗಿರಬಹುದು.

ಕರ್ತನು ಕಳುಹಿಸಿದವರನ್ನು ನಾವು ಸೇರಿಸಿಕೊಳ್ಳುವುದೆಂದರೆ ಕರ್ತನನ್ನೇ ಸೇರಿಸಿಕೊಂಡಂತೆ, "ನಿಮಗೆ ನಿಜನಿಜವಾಗಿ ಹೇಳುತ್ತೇನೆ, ನಾನು ಕಳುಹಿಸಿಕೊಟ್ಟವನನ್ನು ಅಂಗೀಕರಿಸುವವನು ನನ್ನನ್ನು ಅಂಗೀಕರಿಸುವವನಾಗಿದ್ದಾನೆ; ನನ್ನನ್ನು ಅಂಗೀಕರಿಸುವವನು ನನ್ನನ್ನು ಕಳುಹಿಸಿಕೊಟ್ಟಾತನನ್ನು ಅಂಗೀಕರಿಸುವವನಾಗಿದ್ದಾನೆ" (ಯೊಹಾನ 13:20). ನಮ್ಮ ಜೊತೆಯಲ್ಲಿ ಕೆಲಸ ಮಾಡಲು ಆಶಿಸಿ ಬಂದ ಸಹೋದರ ಸಹೋದರಿಯರ ರೂಪದಲ್ಲಿ ಕರ್ತನು ಬಂದಿದ್ದ ವೇಳೆಯಲ್ಲಿ ಆತನನ್ನು ಕಳುಹಿಸಿ ಬಿಟ್ಟ ದೋಷ ನಮ್ಮ ಮೇಲಿದೆ. ಆದಾಗ್ಯೂ ನಮಗೆ ವಹಿಸಿರುವ ಕೆಲಸವನ್ನು ನಡೆಸಲು ನಾವು ಯಾರು ಯಾರನ್ನಾದರೂ ಸೇರಿಸಿಕೊಂಡು ಬಿಡುವಷ್ಟು ಮುಗ್ಧ ಮತ್ತು ನಿಷ್ಕಪಟ ಸ್ವಭಾವದವರಾಗಿರಬಾರದು. ನಮ್ಮನಮ್ಮೊಳಗೆ ತಿಕ್ಕಾಟವನ್ನು ತಂದಿಡುವವರು ಮತ್ತು ತಮ್ಮದೇ ವೈಯಕ್ತಿಕ ಆಶೋತ್ತರಗಳನಿಟ್ಟುಕೊಂಡು ನಮ್ಮೊಳಗೆ ಸೇರಿಕೊಳ್ಳುವವರ ವಿರುದ್ಧ ಎಚ್ಚರಿಕೆ ವಹಿಸಬೇಕು. ನಾವು ಸುಳ್ಳು ಅಪೊಸ್ತಲರು ಮತ್ತು ಕ್ರಿಸ್ತನ ಸೇವಕರೆಂದು ಹೇಳಿಕೊಳ್ಳುವ ಸೈತಾನನ ದೂತರ ವಿರುದ್ಧ ಎಚ್ಚರಿಕೆಯಿಂದ ಜೀವಿಸಬೇಕು.

ದೇವರು ನಮಗೆ ಅಭಿವೃದ್ಧಿಯನ್ನು ಕೊಡಲು ಆಶಿಸುತ್ತಾನೆ ಆದರೆ ಅದನ್ನು ನಮ್ಮ ರೀತಿಯಲ್ಲಲ್ಲದೆ ತನ್ನ ಶೈಲಿಯಲ್ಲಿ ಮಾಡಲು ಇಚ್ಚಿಸುತ್ತಾನೆ. ದೇವರ ರಾಜ್ಯದಲ್ಲಿ ವೃದ್ಧಿಯು ಪಾಲುಗಾರಿಕೆಯೊಂದಿಗೆ ಬರುತ್ತದೆ ಯಾಕೆಂದರೆ ದೇವರು ಅದನ್ನು ಯೋಜಿಸಿದ ರೀತಿಯೇ ಹಾಗಿದೆ.

ಅದೇ ರೀತಿಯಲ್ಲಿ ದೇವರು ನಮ್ಮನ್ನು ಇತರರ ಸೇವಾ ಕ್ಷೇತ್ರಗಳಿಗೂ ಕಳುಹಿಸುವ ಸಾಧ್ಯತೆ ಇರುತ್ತದೆ. ನಾವು ಅವರ ಕ್ಷೇತ್ರಗಳಲ್ಲಿ ಯಾವ ರೀತಿಯಲ್ಲಿ ಪ್ರವೇಶಿಸುತ್ತೇವೆ ಎನ್ನುವುದರ ಕುರಿತು ಎಚ್ಚರಿಕೆಯಿಂದಿರಬೇಕು. ನಮ್ಮ ಮುಂದಾಗಿ ಹೋದವರನ್ನು ನಾವು ಆದರಿಸಿ ಸನ್ಮಾಸಿಸಬೇಕು. ಇತರರು ಕಣ್ಣೀರಿನಿಂದ ಬಿತ್ತಿರದಿರುತ್ತಿದ್ದಾರೆ ನಾವಿಂದು ನೀರು ಹೊಯ್ಯಲು ಸಾಧ್ಯವಾಗು ತ್ತಿರಲಿಲ್ಲವೆನ್ನುವುದನ್ನು ಗುರುತಿಸಬೇಕು. ಯಾರೋ ನೇಗಿಲು ಹೊಡೆದು ಉತ್ತಿದರು, ಇನ್ನ್ಯಾರೋ ಅಲ್ಲಿ ಬಿತ್ತಿ, ನೀರುಣಿಸಿದವರು. ಅದಿಲ್ಲದಿದ್ದರೆ ನಾವಿಂದು ಅಲ್ಲಿ ಕೊಯ್ಲು ಮಾಡಲು ಸಾಧ್ಯವಿಲ್ಲವೆಂದು ನಾವು ನೆನಪು ಮಾಡಿಕೊಳ್ಳಬೇಕು. ಬಿತ್ತಿದವರು ಮತ್ತು ಕೊಯ್ಲು ಮಾಡಿದವರಿಬ್ಬರೂ ಜೊತೆಯಾಗಿ ಸಂತೋಷ ಪಡಬೇಕೆಂದು ದೇವರು ಬಯಸುತ್ತಾನೆ (ಯೋಹಾನ 4:36). ಆದ್ದರಿಂದ ಬಿತ್ತಿದವರು ಮತ್ತು ನೀರುಣಿಸಿದವರ ಜೊತೆ ಸೇರಿ ಸುಗ್ಗಿಯ ಕೊಯ್ಲಿನಲ್ಲಿ ಸಂಭ್ರಮಿಸಿರಿ.

ದೇವರ ರಾಜ್ಯದಲ್ಲಿ, ನೆಡುವವರು, ನೀರು ಹೊಯ್ಯುವವರು ಮತ್ತು ಕೊಯ್ಲು ಮಾಡುವವರೆಲ್ಲರೂ ಒಂದೇ ಆಗಿದ್ದಾರೆ (1ಕೊರಿಂಥ 3:8), ದೇವರ ರಾಜ್ಯದಲ್ಲಿ ಯಾರೂ ಹೆಚ್ಚಿನವರಲ್ಲ, ಉತ್ತಮರಲ್ಲ ಅಥವಾ ಇತರರಿಗಿಂತ ಪ್ರತಿಷ್ಠಿತರೂ ಅಲ್ಲ. ದೇವರು ನಮ್ಮೆಲ್ಲರನ್ನು ಸಮಾನವಾಗಿ, ಒಂದೇ ರೀತಿಯಾಗಿ ನೋಡುತ್ತಾನೆ.

ರಾಜ್ಯದ ಪಾಲುದಾರಿಕೆಯ ಒಂದು ಮುಖ್ಯ ಅಂಶವೆಂದರೆ, ಯಾವುದೇ ಕಾಲಕ್ಕೆ ನಾವು ಯಾವ ಸ್ಥಾನದಲ್ಲಿರಬೇಕೆಂದು ದೇವರು ಬಯಸುತ್ತಾನೆ, ನಾವು ಯಾವ ಪಾತ್ರವನ್ನು ವಹಿಸಬೇಕೆನ್ನುತ್ತಾನೆ ಮತ್ತು ಆ ಕಾಲದಲ್ಲಿ ನಾವು ಏನು ಮಾಡಬೇಕೆಂದು ಇಚ್ಚಿಸುತ್ತಾನೆ ಎನ್ನುವುದು ನಮಗೆ ತಿಳಿದಿರಬೇಕು (1 ಕೊರಿಂಥ 3:5)

2 ಕೊರಿಂಥದವರಿಗೆ 10:13

**13ನಾವಾದರೋ ಮೇರೆದಪ್ಪಿ ಹೊಗಳಿಕೊಳ್ಳದೇ ದೇವರು ನಮಗೆ ನೇಮಿಸಿದಂಥ ಮೇರೆಯೊಳಗಿದ್ದು ಹೊಗಳಿಕೊಳ್ಳುತ್ತೇವೆ. ಈ ಮೇರೆಯೊಳಗಿದ್ದು ನಿಮ್ಮ ಪರ್ಯಂತರಕ್ಕೂ ಬಂದಿದ್ದೇವೆ.**

ದೇವರು ಪ್ರತಿಯೊಬ್ಬನ 'ಪ್ರಭಾವದ ವಲಯ' ವನ್ನು ನಿಶ್ಚಯಿಸುತ್ತಾನೆ. ದೇವರು ನಮಗೋಸ್ಕರ ನೇಮಿಸಿದ ಪ್ರಭಾವದ ಕ್ಷೇತ್ರಗಳನ್ನು ನಾವು ಗ್ರಹಿಸಬೇಕು ಮತ್ತು ಅದರೊಳಗೆ ಉಳಿದುಕೊಳ್ಳಬೇಕು. ಆತನು ತಕ್ಕದೆಂದು ದಿಟ್ಟಿಸಿದಂತೆ ನಮ್ಮ ಪ್ರಭಾವದ ವಲಯವನ್ನು ವಿಸ್ತರಿಸುತ್ತಾನೆ. ದೇವರು ಕಾರ್ಯಗಳನ್ನು ಮಾಡುವಾಗ ನಾವು ಆತನೊಡನೆ ಮುಂದುವರಿಯಬೇಕು, ನಾವು ಸೇವೆ ಮಾಡಬೇಕೆಂದು ಆತನು ಇಚ್ಛಿಸುವ ಜನರ ಜೀವಿತಗಳನ್ನು ಆತನೊಂದಿಗೆ ಮುಟ್ಟಬೇಕು.

### ಪೌಲನ ಜೊತೆಕೆಲಸದವರು

ರೋಮಾಪುರದವರಿಗೆ 16:7

**[7]ನನ್ನ ಸ್ವಜನರೂ ಜೊತೆ ಸೆರೆಯವರೂ ಆಗಿರುವ ಅಂದ್ರೋನಿಕನಿಗೂ ಯೂನ್ಯನಿಗೂ ವಂದನೆ. ಅವರು ಅಪೊಸ್ತಲರಲ್ಲಿ ಪ್ರಸಿದ್ಧರಾಗಿದ್ದಾರೆ. ಮತ್ತು ನನಗಿಂತ ಮುಂಚೆ ಕ್ರಿಸ್ತನನ್ನು ನಂಬುವವರಾದರು.**

ರೋಮಾಪುರದವರಿಗೆ 16:21

**[21]ನನ್ನ ಜೊತೆಕೆಲಸದವನಾದ ತಿಮೊಥೆಯನೂ ನನ್ನ ಸ್ವಜನರಾದ ಲೂಕ್ಯನೂ ಯಾಸೋನನೂ ಸೋಸಿಪತ್ರನೂ ನಿಮಗೆ ವಂದನೆಗಳನ್ನು ಹೇಳುತ್ತಾರೆ**

2ಕೊರಿಂಥದವರಿಗೆ 8:23

**[23]ತೀತನನ್ನು ಕುರಿತು ಕೇಳುತ್ತೀರೋ, ಅವನು ನನ್ನ ಪಾಲುಗಾರನೂ ನಿಮ್ಮ ಪ್ರಯೋಜನಕ್ಕಾಗಿ ನನಗೆ ಸಹಕಾರಿಯೂ ಆಗಿದ್ದಾನೆ; ಆ ಸಹೋದರರನ್ನು ಕುರಿತು ಕೇಳುತ್ತೀರೋ ಅವರು ಸಭೆಗಳಿಂದ ಕಳುಹಿಸಲ್ಪಟ್ಟವರೂ ಕ್ರಿಸ್ತನ ಮಹಿಮೆಯನ್ನು ಪ್ರಕಾಶಪಡಿಸುವವರೂ ಆಗಿದ್ದಾರೆ.**

ಫಿಲಿಪ್ಪಿಯವರಿಗೆ 4:3

**[3]ಸತ್ಯ ಸಯುಜನೇ, ಅವರಿಗೆ ಸಹಾಯಕನಾಗಿರಬೇಕೆಂದು ನಿನ್ನನ್ನೂ ಕೇಳಿ ಕೊಳ್ಳುತ್ತೇನೆ. ಅವರು ಕ್ಲೇಮೆನ್ಸ್ ಮುಂತಾದ ನನ್ನ ಜೊತೆ ಕೆಲಸದವರ ಸಹಿತವಾಗಿ ನನ್ನ ಕೂಡ ಸುವಾರ್ತೆಗೋಸ್ಕರ ಪ್ರಯಾಸಪಟ್ಟವರು ಅವರವರ ಹೆಸರುಗಳು ಜೀವಬಾಧ್ಯರ ಪಟ್ಟಿಯಲ್ಲಿ ಬರೆದವೆ.**

ಕೊಲೊಸ್ಸೆಯವರಿಗೆ 1:7

**[7] ನಮ್ಮ ಪ್ರಿಯ ಜೊತೆಯ ದಾಸನಾದ ಎಪಫ್ರನಿಂದ ಆ ಸತ್ಯೋಪದೇಶವನ್ನು ಕಲಿತುಕೊಂಡಿರಿ. ಅವನು ನಿಮಗೋಸ್ಕರ ಕ್ರಿಸ್ತನ ನಂಬಿಗಸ್ತನಾದ ಸೇವಕನು.**

### ಕೊಲೊಸ್ಸೆಯವರಿಗೆ 4:7,10,11

**[7]ಪ್ರಿಯ ಸಹೋದರನೂ, ನಂಬಿಗಸ್ತನಾದ ಸೇವಕನೂ, ಕರ್ತನಲ್ಲಿ ಜೊತೆಯ ದಾಸನೂ ಆಗಿರುವ ತುಖಿಕನು ನನ್ನ ಸಂಗತಿಗಳನ್ನೆಲ್ಲಾ ನಿಮಗೆ ತಿಳಿಸುವನು. [10]ನನ್ನ ಜೊತೆ ಸೆರೆಯವನಾದ ಅರಿಸ್ತಾರ್ಕನೂ ಬಾರ್ನಬನಿಗೆ ದಾಯಾದನಾಗಿರುವ ಮಾರ್ಕನೂ ನಿಮಗೆ ವಂದನೆ ಹೇಳುತ್ತಾರೆ. ಮಾರ್ಕನನ್ನು ಕುರಿತು ಅಪ್ಪಣೆಗಳನ್ನು ಹೊಂದಿದ್ದಿರಲ್ಲಾ; ಅವನು ನಿಮ್ಮ ಬಳಿಗೆ ಬಂದರೆ ಅವನನ್ನು ಸೇರಿಸಿಕೊಳ್ಳಿರಿ [11]ಯೂಸ್ತನೆನಿಸಿಕೊಳ್ಳುವ ಯೇಸು ಸಹ ನಿಮಗೆ ವಂದನೆ ಹೇಳುತ್ತಾನೆ. ಸುನ್ನತಿಯವರೊಳಗೆ ಇವರು ಮಾತ್ರವೇ ದೇವರ ರಾಜ್ಯಭಿವೃದ್ಧಿಗಾಗಿ ನನ್ನ ಜೊತೆಗೆಲಸದವರಾಗಿದ್ದಾರೆ; ಇವರಿಂದ ನನಗೆ ಉಪಶಮನ ಉಂಟಾಯಿತು.**

### 1ಥೆಸಲೋನಿಕದವರಿಗೆ 3:2

**[2]ನಿಮ್ಮನ್ನು ದೃಢಪಡಿಸುವುದಕ್ಕೂ ನಿಮ್ಮ ನಂಬಿಕೆಯು ವೃದ್ಧಿಗಾಗಿ ಪ್ರಬೋಧಿಸುವದಕ್ಕೂ ನಮ್ಮ ಸಹೋದರನೂ ಕ್ರಿಸ್ತನ ಸುವಾರ್ತೆಯ ಉದ್ಯೋಗದಲ್ಲಿ ದೇವರ ಸೇವಕನೂ ಆಗಿರುವ ತಿಮೊಥೆಯನನ್ನು ನಿಮ್ಮ ಬಳಿಗೆ ಕಳುಹಿಸಿದೆವು**

### ಫಿಲೆಮೋನನಿಗೆ 1:1,2,23,24

**[1]ಕ್ರಿಸ್ತಯೇಸುವಿನ ಸೆರೆಯವನಾಗಿರುವ ಪೌಲನೂ ಸಹೋದರನಾದ ತಿಮೊಥೆಯನೂ ನಮಗೆ ಪ್ರಿಯನೂ ಜೊತೆ ಗೆಲಸದವನೂ ಆಗಿರುವ ಫಿಲೆಮೋನನೆಂಬ ನಿನಗೂ [2]ಸಹೋದರಿಯಾದ ಅಪ್ಫಿಯಳಿಗೂ ನಮ್ಮ ಸಹಭಟನಾದ ಅರ್ಖಿಪ್ಪನಿಗೂ ನಿನ್ನ ಮನೆಯಲ್ಲಿ ಕೂಡುವ ಸಭೆಯವರಿಗೂ [23]ಕ್ರಿಸ್ತಯೇಸುವಿನ ನಿಮಿತ್ತವಾಗಿ ನನ್ನ ಜೊತೆ ಸೆರೆಯವನಾದ ಎಪಫ್ರನೂ ಸಹ ಸಹಕಾರಿಗಳಾದ ಮಾರ್ಕ ಅರಿಸ್ತಾರ್ಕ ದೇಮಲೂಕರೂ ನಿನ್ನನ್ನು ವಂದಿಸುತ್ತಾರೆ.**

ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿ ಮತ್ತು ಪೌಲನು ಬರೆದ ಪತ್ರಿಕೆಗಳಲ್ಲಿ ಹಲವು ಸ್ಥಳಗಳಲ್ಲಿ ಪೌಲನೇ ಸ್ವಂತಃ ಜೊತೆ ಕೆಲಸದವರಾದ ಅನೇಕ ಜನರು ಹೆಸರುಗಳನ್ನು ಪಟ್ಟಿಮಾಡಿದ್ದಾನೆ. ಅವನು ''ಜೊತೆ ಸೆರೆಯವರು'' ''ಜೊತೆಗೆಲಸದವ'' ''ಜೊತೆಗಾರ ಮತ್ತು ಜೊತೆ ಸಹಾಯಕ'' ''ಸಂಕಟ ಪಾಲುಗಾರ'' ''ಜೊತೆ ಕೆಲಸದವರು'' ಮತ್ತು ''ಜೊತೆ ಸೇವಕ'' ಎಂಬ ಶಬ್ಧಗಳನ್ನು ಉಪಯೋಗಿಸಿದ್ದಾನೆ.ಮತ್ತು ಬಾರ್ನಬನು, ಸೀಲನು, ಲೂಕನು, ಅಂದ್ರೋನಿಕನು, ಯೂನ್ಯನು, ತಿಮೊಥೆಯನು, ಲೂಕ್ಯನೂ ಯಾಸೋನನು, ಸೋಸಿಪತ್ರನು, ತೀತನು, ಕ್ಲೇಮೆನ್ಸನು, ಎಪಫ್ರನು, ತುಖಿಕನು ಅರಿಸ್ತಾರ್ಕನು, ಮಾರ್ಕನು, ಯೂಸ್ತನು, ಫಿಲೆಮೋನನು, ಅಂಪ್ಲಿಯಾತನು, ಅರ್ಖಿಪ್ಪನು, ದೇಮನು ಮತ್ತು ನಿಶ್ಚಯವಾದ ''ಇತರ ಸಹೋದರರು'' ಸುವಾರ್ತೆ

ಸೇವೆಯಲ್ಲಿ ಪ್ರಯಾಸಪಟ್ಟ ಸ್ತ್ರೀಯರು'' ಮತ್ತು ''ಜೀವಬಾಧ್ಯರ ಪಟ್ಟಿಯಲ್ಲಿ ಬರೆದಿರುವವರ ಹೆಸರುಗಳು'' ಎಂಬುದಾಗಿ ಅನೇಕ ಜನರ ಹೆಸರುಗಳು ಸತ್ಯವೇದದಲ್ಲಿ ಉಲ್ಲೇಖಿಸಲಾಗಿದೆ.

ಈ ರೀತಿಯ ಉದಾಹರಣೆಯನ್ನು ನಾವು ಅನುಸರಿಸಬೇಕು. ನಮ್ಮೊಂದಿಗೆ ನಮಗಿಂತ ಮುಂದೆ ಸೇವೆ ಸಲ್ಲಿಸಿದವರನ್ನು ಗುರುತಿಸಬೇಕು ಮತ್ತು ಗೌರವಿಸಬೇಕು. ಗೌರವ ಹೊಂದುವ ವ್ಯಕ್ತಿಗೆ ನಾವು ಗೌರವಕೊಡಬೇಕು.

## ದೈವಿಕ ಸಂಪರ್ಕಗಳನ್ನು ತರಲು ದೇವರಿಗೆ ಅವಕಾಶ ನೀಡಿರಿ

**1 ಪೂರ್ವಕಾಲ ವೃತ್ತಾಂತ 12:16-18, 22, 38**
**ಒಂದಾನೊಂದು ದಿವಸ ಬೆನ್ಯಾಮೀನ್ ಯೂದ ಕುಲದವರಲ್ಲಿ ಕೆಲವರು ದಾವೀದನಿದ್ದ ದುರ್ಗದ ಬಳಿಗೆ ಬರಲು ದಾವೀದನು ಹೊರಗೆ ಹೋಗಿ ಅವರೆದುರಿಗೆ ನಿಂತು ಅವರಿಗೆ ನೀವು ಸ್ನೇಹಭಾವದಿಂದ ಸಹಾಯ ಮಾಡುವುದಕ್ಕಾಗಿ ನನ್ನ ಬಳಿಗೆ ಬಂದಿರುವುದಾದರೆ ನಿಮ್ಮೊಡನೆ ನನಗೆ ಐಕ್ಯಭಾವವಿರುವುದು; ನಿರಪರಾಧಿಯಾದ ನನ್ನನ್ನು ನನ್ನ ವಿರೋಧಿಗಳಿಗೆ ಒಪ್ಪಿಸುವ ಕುಯುಕ್ತಿಯಿಂದ ಬಂದಿರುವುದಾದರೆ ನಮ್ಮ ಪಿತೃಗಳ ದೇವರು ನಿಮ್ಮನ್ನು ನೋಡಿ ದಂಡಿಸಲಿ ಅಂದನು. ಆಗ ಮೂವತ್ತು ಮಂದಿಯಲ್ಲಿ ಮುಖ್ಯಸ್ಥನಾದ ಅಮಾಸೈಯು ಆತ್ಮಾದೇಶವುಳ್ಳವನಾಗಿ ದಾವೀದನೇ ನಾವು ನಿನ್ನವರು; ಶುಭವಾಗಲಿ! ನಿನಗೂ ನಿನ್ನ ಸಹಾಯಕರಿಗೂ ಶುಭವಾಗಲಿ! ನಿನ್ನ ದೇವರು ನಿನಗೆ ಜಯಪ್ರದನಾಗಿದ್ದಾನೆ ಎಂದು ನುಡಿದನು. ಆಗ ದಾವೀದನು ಅವರನ್ನು ತನ್ನ ಜೊತೆಯಲ್ಲಿ ಸೇರಿಸಿಕೊಂಡು ಸೈನ್ಯಾಧಿಪತಿಗಳನ್ನಾಗಿ ನೇಮಿಸಿದನು.**

**22 ದಾವೀದನ ಸಹಾಯಕ್ಕೆ ಪ್ರತಿದಿನವೂ ಹೊಸ ಗುಂಪುಗಳು ಬರುತ್ತಿದ್ದವು; ಅವನ ಸೈನ್ಯವು ದೇವಸೈನ್ಯದಷ್ಟು ದೊಡ್ಡದಾಯಿತು.**

**38 ದಾವೀದನನ್ನು ಇಸ್ರಾಯೇಲ್ಯರ ಅರಸನನ್ನಾಗಿ ಮಾಡುವದಕ್ಕೋಸ್ಕರ ಯುದ್ಧ ನಿಪುಣರಾದ ಈ ಎಲ್ಲಾ ಇಸ್ರಾಯೇಲ್ಯರು ದಾವೀದನಿಗೆ ರಾಜ್ಯಾಭಿಷೇಕ ಮಾಡುವುದರಲ್ಲಿ ಏಕ ಮನಸ್ಸುಳ್ಳವರಾಗಿದ್ದರು.**

ಇದೊಂದು ಹಳೇ ಒಡಂಬಡಿಕೆಯ ಭಾಗವಾಗಿದ್ದರೂ ದೇವರಾತ್ಮನ ಕಾರ್ಯದ ಕುರಿತು ಬಹಳ ಆಸಕ್ತಿಕರವಾದ ವಿಷಯವೊಂದು ಇಲ್ಲಿದೆ.

ದಾವೀದನು, ದೇವರಿಂದ ತನಗೆ ಇಸ್ರಾಯೇಲ್ಯರ ಅರಸನಾಗಿರಲು ಬಂದ ಕರೆಯೊಳಗೆ ಅಡಿಯಿಡುವಾಗಲೇ ದೇವರಾತ್ಮನು ಅನೇಕ ಜನರಲ್ಲಿ

ಕಾರ್ಯಮಾಡುತ್ತಾ ಅವರು ಹೊರಟು ಬಂದು ದಾವೀದನ ನಾಯಕತ್ವದಡಿಯಲ್ಲಿ ಸೇವೆ ಮಾಡಲು ಪ್ರೇರೇಪಿಸಿದನು. ಪ್ರಾರಂಭದಲ್ಲಿ ಈ ಜನರು ದಾವೀದನ ಬಳಿಗೆ ಬರಲು ಪ್ರಾರಂಭಿಸಿದಾಗ ಅವನು ಅನುಮಾನಿಸಿದನು. ಅಂತಿಮವಾಗಿ ಅವನು ಅವರನ್ನು ಇತರರನ್ನೂ ಸ್ವೀಕರಿಸಿದನು. ಅನೇಕ ಬಲವಾದ ನಾಯಕರೂ, ರಣವೀರರೂ ದಾವೀದನ ಬಳಿ ಬಂದುದರಿಂದ ಅದೊಂದು ದೊಡ್ಡ ಸೈನ್ಯವೇ ಆಯಿತು.

ಕರ್ತನು ನಮ್ಮ ಜೀವಿತಕ್ಕೆ ಯಾರ್ಯಾರನ್ನು ಪರಿಚಯಿಸುತ್ತಾನೋ ಅವರನ್ನು ಗುರುತಿಸಿ ಅವರೊಂದಿಗೆ ಆತ್ಮೀಕ ಸಂಪರ್ಕ ಬೆಳೆಸಿಕೊಳ್ಳಬೇಕು. ಅಂಥ ಸಂಬಂಧಗಳನ್ನು ಗೌರವಿಸಿ, ಬಹಳ ಎಚ್ಚರಿಕೆಯಿಂದ ಪೋಷಿಸಿ, ವಿವೇಕದಿಂದ ನಡೆಯುತ್ತಾ ದೇವರ ರಾಜ್ಯಕ್ಕಾಗಿ ಪವಿತ್ರಾತ್ಮನ ಅಧೀನದಲ್ಲಿ ಕೆಲಸ ಮಾಡಬೇಕು.

ನಾವು ತಪ್ಪಾದ ಸಂಬಂಧಗಳಿಂದ ದೂರವಿರಬೇಕು. ಶರೀರ ಭಾವದ ಆಶೆಗಳ ಫಲವಾಗಿ ಬರುವ ಸಂಬಂಧಗಳನ್ನು ಬಲವಂತವಾಗಿ ಮೈಮೇಲೆ ಎಳೆದುಕೊಳ್ಳುವುದನ್ನೂ ಬಿಟ್ಟು ಬಿಡಬೇಕು.

## ನಾವು ಇತರರಿಗೆ ತೀರ್ಪು ಮಾಡಬಾರದು

### ಮತ್ತಾಯ 20:1-16

**[1]ಪರಲೋಕರಾಜ್ಯವು ಒಬ್ಬ ಮನೆಯ ಯಜಮಾನನಿಗೆ ಹೋಲಿಕೆಯಾಗಿದೆ ಅವನು ತನ್ನ ದ್ರಾಕ್ಷೇತೋಟಕ್ಕೆ
ಕೂಲೀ ಆಳುಗಳನ್ನು ಕರೆಯುವುದಕ್ಕೆ ಬೆಳಿಗ್ಗೆ ಹೊರಟನು [2]ಆಳಿಗೆ ದಿನಕ್ಕೆ ಒಂದು ಪಾವಲಿಯಂತೆ ಕೂಲಿ
ಗೊತ್ತು ಮಾಡಿ ಅವರನ್ನು ದ್ರಾಕ್ಷೇ ತೋಟಕ್ಕೆ ಕಳುಹಿಸಿದನು [3]ತರುವಾಯ ಹೆಚ್ಚುಕಡಿಮೆ ಒಂಭತ್ತು
ಗಂಟೆಗೆ ಹೋಗಿ ಪೇಟೆಯಲ್ಲಿ ಸುಮ್ಮನೆ ನಿಂತಿದ್ದ ಇನ್ನೂ ಕೆಲವರನ್ನು ಕಂಡು [4]ನೀವು ಸಹ ನನ್ನ
ದ್ರಾಕ್ಷೇ ತೋಟಕ್ಕೆ ಹೋಗಿರಿ; ನಿಮಗೆ ಸರಿಯಾದ ಕೂಲಿಯನ್ನು ಕೊಡುತ್ತೇನೆಂದು ಅನ್ನಲು ಅವರು
ತೋಟಕ್ಕೆ ಹೋದರು. [5]ಅವನು ತಿರಿಗಿ ಹೆಚ್ಚುಕಡಿಮೆ ಹನ್ನೆರಡು ಗಂಟೆಗೆ ಮತ್ತು ಮೂರು ಗಂಟೆಗೆ
ಹೋಗಿ ಅದೇ ಪ್ರಕಾರ ಮಾಡಿದನು [6]ತಿರುಗಿ ಹೆಚ್ಚು ಕಡಿಮೆ ಸಾಯಂಕಾಲ ಐದು ಗಂಟೆಗೆ ಹೋಗಿ
ಬೇರೆ ಕೆಲವರು ನಿಂತಿರುವುದನ್ನು ಕಂಡು ಅವರನ್ನು ದಿನವೆಲ್ಲಾ ಇಲ್ಲಿ ಯಾಕೆ ಸುಮ್ಮನೆ ನಿಂತಿದ್ದೀರಿ
ಎಂದು ಕೇಳಲು [7]ಅವರು ಯಾರೂ ನಮ್ಮನ್ನು ಕೂಲಿಗೆ ಕರೆಯಲಿಲ್ಲ ಅಂದಾಗ ಅವನು ನೀವು ಸಹ
ನನ್ನ ದ್ರಾಕ್ಷೇ ತೋಟಕ್ಕೆ ಹೋಗಿರಿ ಅಂದನು [8]ಸಂಜೇ ಹೊತ್ತಿಗೆ ದ್ರಾಕ್ಷೇ ತೋಟದ ಯಜಮಾನನು
ತನ್ನ ಪಾರುಪತ್ಯಗಾರನಿಗೆ ಆ ಆಳುಗಳನ್ನು ಕರೆದು ಕಡೆಗೆ ಬಂದವರನ್ನು ಮೊದಲು ಮಾಡಿಕೊಂಡು
ಮೊದಲು ಬಂದವರ ತನಕ ಅವರಿಗೆ ಕೂಲಿಕೊಡು ಎಂದು ಹೇಳಿದನು [9]ಆಗ ಸಾಯಂಕಾಲ ಐದು
ಗಂಟೆಗೆ ಬಂದವರಿಗೆ ಒಂದೊಂದು ಪಾವಲಿ ಸಿಕ್ಕಿತು [10]ತರುವಾಯ ಮೊದಲಿನವರು ಬಂದು ತಮಗೆ**

ಹೆಚ್ಚು ದೊರೆಯುವದೆಂದು ನೆನಸಿದರು; ಆದರೆ ಇವರಿಗೆ ಸಹ ಒಂದೊಂದು ಪಾವಲಿಯೇ ಸಿಕ್ಕಿತು.
[11]ಅದನ್ನು ತೆಗೆದುಕೊಂಡು ಮನೆಯ ಯಜಮಾನನ ಮೇಲೆ ಗುಣಗುಟ್ಟಿ [12]ಕಡೆಗೆ ಬಂದ ಇವರು
ಒಂದು ತಾಸು ಹೊತ್ತು ಮಾತ್ರ ಕೆಲಸ ಮಾಡಿದ್ದಾರೆ. ನಾವು ದಿನವೆಲ್ಲಾ ಬಿಸಲಿನಲ್ಲಿ ಕೆಲಸ ಮಾಡಿ
ಕಷ್ಟಪಟ್ಟಿದ್ದೇವೆ; ಇವರನ್ನು ನಮಗೆ ಸಮಮಾಡಿದ್ದೀಯೆ ಅಂದರು [13]ಅದಕ್ಕೆ ಅವನು ಅವರಲ್ಲಿ
ಒಬ್ಬನಿಗೆ - ಏನಪ್ಪ, ನಾನು ನಿನಗೆ ಅನ್ಯಾಯ ಮಾಡಲಿಲ್ಲ; ನೀನು ನನ್ನ ಸಂಗಡ ಒಂದು ಪಾವಲಿಗೆ
ಒಡಂಬಟ್ಟಿಯಲ್ಲಾ, [14]ನಿನ್ನ ಕೂಲಿ ತಕ್ಕೊಂಡು ಹೋಗು ನಿನಗೆ ಕೊಟ್ಟಂತೆ ಕಡೆಗೆ ಬಂದ ಇವನಿಗೂ
ಕೊಡುವುದಕ್ಕೆ ನನಗೆ ಮನಸ್ಸುಂಟು [15]ನನ್ನ ಬದುಕನ್ನು ನಾನು ಬೇಕಾದ ಹಾಗೆ ಮಾಡಬಹುದಲ್ಲವೋ?
ನಾನು ಒಳ್ಳೆಯವನಾಗಿರುವದು ನಿನ್ನ ಕಣ್ಣನ್ನು ಒತ್ತುತ್ತದೋ ಎಂದು ಹೇಳಿದನು [16]ಈ ಪ್ರಕಾರ
ಕಡೆಯವರು ಮೊದಲಿನವರಾಗುವರು, ಮೊದಲಿನವರು ಕಡೆಯವರಾಗುವರು ಎಂದು ಹೇಳಿದನು.

ದೇವರ ರಾಜ್ಯದ ಕೆಲಸದಲ್ಲಿ, ತಾನು ಯಾರನ್ನು ಎಬ್ಬಿಸುವನೋ, ಅವರನ್ನು ಹೇಗೆ ಅಭಿಷೇಕಿಸುವನು ಮತ್ತು ಅವರು ಯಾವ ಮಟ್ಟದ ಕೆಲಸಮಾಡಬೇಕು ಎಂಬುದನ್ನೇಲ್ಲಾ ದೇವರೇ ತೀರ್ಮಾನಿಸುವನು.

ದೇವರ ರಾಜ್ಯದಲ್ಲಿ, ಅನಂತರದಲ್ಲಿ ಬರುವವರಿಗೆ, ಹಿಂದಿನ ತಲೆಮಾರಿನವರ ಕೃಪೆ, ಪ್ರಕಟಣೆ ಮತ್ತು ಅಭಿಷೇಕವನ್ನು ವೃದ್ಧಿಸಿಕೊಳ್ಳುವ ಭಾಗ್ಯ ದೊರೆಯುವುದರಿಂದ ಶೀಘ್ರವಾಗಿ ದೊಡ್ಡ ಸುಗ್ಗಿಯನ್ನು ಅನುಭವಿಸುವ ಅವಕಾಶ ದೊರೆಯುತ್ತದೆ. ಇದರಲ್ಲಿ ನಾವು ಸಂಭ್ರಮಿಸಬೇಕು ಮತ್ತು ಕರ್ತನು ಅವರ ಜೀವಿತದಲ್ಲಿ ಮಾಡುತ್ತಿರುವ ಕಾರ್ಯಗಳನ್ನು ನೋಡಿ ಸಂತೋಷಿಸಬೇಕು.

ರೋಮಾಪುರದವರಿಗೆ 14:4

[4]ಮತ್ತೊಬ್ಬನ ಸೇವಕನ ವಿಷಯವಾಗಿ ತೀರ್ಪು ಮಾಡುವುದಕ್ಕೆ ನೀನು ಯಾರು? ಅವನು ನಿರ್ದೋಷಿಯಾಗಿ ನಿಂತರೂ ದೋಷಿಯಾಗಿ ಬಿದ್ದರೂ ಅದು ಅವನ ಯಜಮಾನನಿಗೇ ಸೇರಿದ್ದು. ಅವನು ನಿರ್ದೋಷಿಯಾಗಿ ಬಿದ್ದರೂ ಅದು ಅವನ ಯಜಮಾನನಿಗೇ ಸೇರಿದ್ದು ಅವನು ನಿರ್ದೋಷಿಯಾಗಿ ನಿಲ್ಲಿಸಲ್ಪಡುವನು ಅವನನ್ನು ನಿಲ್ಲಿಸುವುದಕ್ಕೆ ಕರ್ತನು ಶಕ್ತನಾಗಿದ್ದಾನೆ.

1ಕೊರಿಂಥದವರಿಗೆ 4:5

[5]ಆದದರಿಂದ ಕಾಲಕ್ಕೆ ಮೊದಲು ಯಾವದನ್ನು ಕುರಿತೂ ತೀರ್ಪು ಮಾಡಬೇಡಿರಿ; ಕರ್ತನು ಬರುವ ತನಕ ತಡೆಯಿರಿ ಆತನು ಕತ್ತಲೆಯಲ್ಲಿರುವ ಗುಪ್ತಕಾರ್ಯಗಳನ್ನು ಬೆಳಕಿಗೆ ತರುವನು. ಹೃದಯದ ಯೋಚನೆಗಳನ್ನು ಪ್ರವತ್ಯಕ್ಷಪಡಿಸುವನು; ಆ ಕಾಲದಲ್ಲಿ ಪ್ರತಿಯೊಬ್ಬನಿಗೆ ಬರತಕ್ಕ ಹೊಗಳಿಕೆಯು ದೇವರಿಂದ ಬರುವದು.

## ಪ್ರತಿಯೊಬ್ಬರು ಬೇರೆ ಬೇರೆ ವರಗಳನ್ನು ಹೊಂದಿದ್ದಾರೆ

ಪ್ರತಿಯೊಬ್ಬರು ಬೇರೆ ಬೇರೆ ವರಗಳನ್ನು ಹೊಂದಿದ್ದಾರೆ ಎಂದು ಅರ್ಥ ಮಾಡಿಕೊಳ್ಳಬೇಕು. ಪ್ರತಿಯೊಬ್ಬನ ಮೂಲಕ ದೇವರು ಮಾಡುವ ಕಾರ್ಯಗಳನ್ನು ಗೌರವಿಸಿರಿ.

### 1 ಕೊರಿಂಥದವರಿಗೆ 12:5-7

**[5]ಸೇವೆಗಳಲ್ಲಿ ಬೇರೆಬೇರೆ ವಿಧಗಳುಂಟು, [6]ಕರ್ತನು ಒಬ್ಬನೇ ಕಾರ್ಯಗಳಲ್ಲಿ ಬೇರೆ ಬೇರೆ ವಿಧಗಳುಂಟು ಸರ್ವರಲ್ಲಿಯೂ ಸರ್ವಕಾರ್ಯಗಳನ್ನು ಸಾಧಿಸುವ ದೇವರು ಒಬ್ಬನೇ [7]ಆದರೆ ಪ್ರತಿಯೊಬ್ಬನಲ್ಲಿ ತೋರಿ ಬರುವ ದೇವರಾತ್ಮನ ವರಗಳು ಸರ್ವರ ಪ್ರಯೋಜನಾರ್ಥವಾಗಿ ಕೊಡಲ್ಪಟ್ಟಿವೆ.**

ಇಂತಹ ಬೇರೆ ಬೇರೆ ವಿಧಗಳ ನಿಮಿತ್ತವಾಗಿ ವಿಭಾಗಗಳ ಗೋಡೆಗಳನ್ನು ಎಬ್ಬಿಸಬೇಡಿರಿ.

## ಅಪ್ರಧಾನರ ಮೇಲೆ ಪ್ರಾಧಾನ್ಯತೆ ಮಾಡಬೇಡಿರಿ (ಕಿರಿಯರ ಮೇಲೆ ಹಿರಿತನ ತೋರಬೇಡಿರಿ)

### ರೋಮಾಪುರದವರಿಗೆ 14:1-5

**[1]ನಂಬಿಕೆಯಲ್ಲಿ ದೃಢವಿಲ್ಲದವರನ್ನೂ ಸೇರಿಸಿಕೊಳ್ಳಿರಿ, ಆದರೆ ಸಂದೇಹಾಸ್ಪದವಾದ ಕಾರ್ಯಗಳನ್ನು ಅವರ ಮುಂದೆ ಚರ್ಚಿಸಬೇಡಿರಿ. [2]ಒಬ್ಬನು ಯಾವದನ್ನಾದರೂ ತಿನ್ನಬಹುದೆಂದು ನಂಬುತ್ತಾನೆ. ನಂಬಿಕೆಯಲ್ಲಿ ದೃಡವಿಲ್ಲದವನು ಕಾಯಿಪಲ್ಯಗಳನ್ನು ಮಾತ್ರ ತಿನ್ನುತ್ತಾನೆ. [3]ತಿನ್ನುವವನು ತಿನ್ನದವನನ್ನು ಹೀನೈಸಬಾರದು. ತಿನ್ನದವನು ತಿನ್ನುವವನನ್ನು ದೋಷಿಯೆಂದು ಎಣಿಸಬಾರದು. ದೇವರು ಇಬ್ಬರನ್ನೂ ಸೇರಿಸಿಕೊಂಡಿದ್ದಾನಲ್ಲಾ ಮತ್ತೊಬ್ಬನ ಸೇವಕನ ವಿಷಯವಾಗಿ ದೋಷಿಯೆಂದು ಎಣಿಸಬಾರದು. ದೇವರು ಇಬ್ಬರನ್ನೂ ಸೇರಿಸಿಕೊಂಡಿದ್ದಾನಲ್ಲಾ ಮತ್ತೊಬ್ಬನ ಸೇವಕನ ವಿಷಯವಾಗಿ ತೀರ್ಪುಮಾಡುವದಕ್ಕೆ ನೀನು ಯಾರು? ಅವನು ನಿರ್ದೋಷಿಯಾಗಿ ನಿಂತರೂ ದೋಷಿಯಾಗಿ ಬಿದ್ದರೂ ಅದು ಅವನ ಯಜಮಾನನಿಗೆ ಸಾರಿದ್ದು. ಅವನು ನಿರ್ದೋಷಿಯಾಗಿ ನಿಲ್ಲಿಸಲ್ಪಡುವನು; ಅವನನ್ನು ನಿಲ್ಲಿಸುವುದಕ್ಕೆ ಕರ್ತನು ಶಕ್ತನಾಗಿದ್ದಾನೆ.**
**[5]ಒಬ್ಬನು ಒಂದು ದಿನಕ್ಕಿಂತ ಮತ್ತೊಂದು ದಿನವನ್ನು ವಿಶೇಷವೆಂದೆಣಿಸುತ್ತಾನೆ. ಮತ್ತೊಬ್ಬನು ಎಲ್ಲಾ ದಿವಸಗಳನ್ನು ವಿಶೇಷವೆಂದೆಣಿಸಿಸುತ್ತಾನೆ. ಪ್ರತಿಯೊಬ್ಬನು ತನ್ನ ತನ್ನ ಮನಸ್ಸಿನಲ್ಲಿ ನಿಶ್ಚಯಿಸಿಕೊಂಡಿರಬೇಕು.**

ಚರ್ಚೆಮಾಡಲು ನಿರುಪಯೋಗಿಯಾದ ಹಲವು ವಿಷಯಗಳಿವೆ. ನಾವು ಅಂತಹ ಅಂದರೆ ನಮ್ಮಲ್ಲಿ ವಿಭಾಗಗಳನ್ನುಂಟು ಮಾಡುವ ಕ್ಷುಲ್ಲಕ ವಿವಾದಗಳಿಗೆ ಎಡೆಮಾಡಿಕೊಡಬಾರದು.

## ದೇವರ ರಾಜ್ಯದಲ್ಲಿ ಪಾಲುಗಾರಿಕೆಯ ಮೌಲ್ಯ

### ಪಾಲುಗಾರಿಕೆಯು ಅಭ್ಯಾಸದಲ್ಲಿ ಐಕ್ಯತೆಯಾಗಿದೆ.

ಕೀರ್ತನೆ 133:1-3

**[1]ಆಹಾ ಸಹೋದರರು ಒಂದಾಗಿರುವದು ಎಷ್ಟೋ ಒಳ್ಳೇದು, ಎಷ್ಟೋ ರಮ್ಯವಾದದ್ದು! [2]ಅದು ಆರೋನನ ತಲೆಯ ಮೇಲೆ ಹಾಕಲ್ಪಟ್ಟು ಅವನ ಗಡ್ಡದ ಮೇಲೆಯೂ ಅಲ್ಲಿಂದ ಅವನ ಅಂಗಿಗಳ ಕೊರಳ ಪಟ್ಟಿಯ ವರೆಗೂ ಹರಿದು ಬರುವ ಶ್ರೇಷ್ಟ ತೈಲದಂತೆಯೂ ಹೆರ್ಮೋನ್ ಪರ್ವತದಲ್ಲಿ ಹುಟ್ಟಿ ಚೀಯೋನ್ ಪರ್ವತದ ಮೇಲೆ ಬೀಳುವ ಮಂಜಿನಂತೆಯೂ ಇದೆ. ಅಲ್ಲಿ ಆಶೀರ್ವಾದವೂ ಜೀವವೂ ಸದಾಕಾಲ ಇರಬೇಕೆಂದು ಯೆಹೋವನು ಆಜ್ಞಾಪಿಸಿದ್ದಾನೆ.**

ಐಕ್ಯತೆಯ ಕುರಿತು ದೈವಶಾಸ್ತ್ರಕ್ಕೆ ಸಂಬಂಧಿಸಿದಂತೆಯೂ ಒಂದು ಕಲ್ಪನೆಯಾಗಿಯೂ ಮಾತನಾಡಲು ಅದ್ಭುತವಾಗಿರುತ್ತದೆ. ಆದಾಗ್ಯೂ, ನಾವು ನಿಜವಾಗಿಯೂ ಪಾಲಗಾರಿಕೆ ಮಾಡಿಕೊಂಡು ಜೊತೆಯಲ್ಲಿ ಕೆಲಸ ಮಾಡುವಾಗ ನಾವು ಏಕತೆಯನ್ನು ಅಭ್ಯಾಸ ಮಾಡಿಕೊಳ್ಳುತ್ತೇವೆ.

### ಪಾಲುಗಾರಿಕೆಯು ಬಲ ತರುತ್ತದೆ.

ಪ್ರಸಂಗಿ 4:12

**[12]ಒಬ್ಬೊಂಟಿಗನನ್ನು ಜಯಿಸಬಲ್ಲವನಿಗೆ ಇಬ್ಬರು ಎದುರಾಗಿ ನಿಲ್ಲಬಹುದು. ಮೂರು ಹುರಿಯ ಹಗ್ಗ ಬೇಗ ಕಿತ್ತು ಹೋಗುವುದಿಲ್ಲವಷ್ಟೆ.**

ವಿಭಜನೆಗೊಂಡ ರಾಜ್ಯವು ನಿಲ್ಲುವುದಿಲ್ಲ. ಬದಲಾಗಿ ಐಕ್ಯತೆಯಿರುವ ರಾಜ್ಯವು ಎಷ್ಟೋ ಪಟ್ಟು ಬಲವರ್ಧನೆಗೊಳ್ಳುವುದು. ಒಬ್ಬರಿಗಿಂತ ಇಬ್ಬರು ಲೇಸು. ಮೂವರಾದರೆ ಇನ್ನೂ ಹೆಚ್ಚಿನ ಬಲ. ನಾವೆಲ್ಲರೂ ಐಕ್ಯಗೊಂಡಾಗ ವೈರಿಯ ಮುಂದೆ ಅಜೇಯರಾಗುತ್ತೇವೆ.

*ಪಾಲುಗಾರಿಕೆಯು ರಾಜ್ಯದ ಏಳಿಗೆಯನ್ನು ಫಲಿಸುತ್ತದೆ*

ನಮ್ಮಲ್ಲೇ ಭೇದಗಳಿರುವುದಾದರೆ ಪರಿಣಾಮಕಾರಿಯಲ್ಲದ ದೇವರ ರಾಜ್ಯವು ಅನೇಕ ಕ್ಷೇತ್ರಗಳಲ್ಲಿ ಸ್ಥಗಿತಗೊಂಡು, ಬಲಹೀನನಾಗಿ, ನಿಷ್ಪ್ರಿಣಾಮಗೊಂಡು,

ಪ್ರಾಭಾವಹೀನವಾಗಿ ಬಿಡುತ್ತದೆ. ಆದರೆ ನಾವೆಲ್ಲರೂ ರಾಜ್ಯದ ಭಾವವನ್ನು ಹೊಂದಿ ಅದರ ಅಭಿವೃದ್ಧಿಗಾಗಿ ಒಗ್ಗಟ್ಟಾದ ಕೂಡಲೇ ಎಲ್ಲವೂ ಬದಲಾಗಿ ಬಿಡುತ್ತದೆ. ಈವರೆಗೆ ಮಾಡಿದ ಸಾಧನೆಗಿಂತಲೂ ಹೆಚ್ಚಿನದನ್ನು ರಾಜ್ಯದ ಸೇವೆಯಲ್ಲಿ ಪಾಲುಗಾರಿಕೆಯನ್ನು ಅಳವಡಿಸಿಕೊಳ್ಳುವ ಮೂಲಕ ಸಾಧಿಸಬಹುದಾಗಿದೆ.

**ದೇವರ ರಾಜ್ಯದಲ್ಲಿ ಪಾಲುಗಾರಿಕೆಗೆ ತಡೆ ಮಾಡುವ ವಿಷಯಗಳು**

ರಾಜ್ಯದ ಪಾಲುಗಾರಿಕೆಗೆ ಅಡಚಣೆಯನ್ನುಂಟು ಮಾಡುವ ಸಂಗತಿಗಳಲ್ಲಿ ಕೆಲವನ್ನು ಇಲ್ಲಿ ನೀಡಲಾಗಿದೆ.

*ನಾನು ಮತ್ತು ನನ್ನದೆನ್ನುವ ಮನಃಸ್ಥಿತಿ*

ನಾವು ದೇವರ ರಾಜ್ಯದ ದೊಡ್ಡ ಚಿತ್ರಣವನ್ನು ನೋಡದೆ ನಮ್ಮದೇ ಸ್ವಾರ್ಥಗಳ ಮೇಲೆ ಮನಸ್ಸಿಟ್ಟಿದ್ದಾದಲ್ಲಿ ನಾವು ರಾಜ್ಯದ ಪಾಲುಗಾರಿಕೆಯಿಂದ ದೂರಸರಿದು ಬಿಡುತ್ತೇವೆ.

*ಇದರಲ್ಲಿ ನನಗೇನು ಲಾಭವಿದೆ? ಎನ್ನುವ ಮನಃಸ್ಥಿತಿ*

ದೇವರು ನಮಗೆ ದಯಪಾಲಿಸಿದ ಸೇವೆಯ ಮನೆವಾಳ್ತತನವನ್ನು ನಾವು ಸರಿಯಾಗಿ ನಡೆಸಬೇಕೆನ್ನುವುದು ಒಳ್ಳೆಯದೇ ಆದರೂ ನಾವು ಪ್ರತಿಯೊಂದು ಪಾಲುಗಾರಿಕೆಯ ಒಪ್ಪಂದವನ್ನು 'ಇದರಲ್ಲಿ ನನಗೆನು ಲಾಭವಿದೆ?' ಎಂಬ ಮನಃಸ್ಥಿತಿಯಿಂದ ಸಂಧಿಸಬಾರದು. ಕೆಲವೊಮ್ಮೆ, ಅಲ್ಲಿ ನಮಗೇನೂ ಲಾಭವಾಗದೇ ಇರಬಹುದು ಆದರೆ ರಾಜ್ಯಕ್ಕೆ ಲಾಭವಾಗುವಂತಿದ್ದರೆ ಅದು ಬಹಳ ಮುಖ್ಯವಾಗಿದೆ.

*ಹೋಲಿಸುವುದು ಮತ್ತು ಪೈಪೋಟಿ ಮಾಡುವುದು*

ಇತರ ಸೇವಕರುಗಳಿಗಿಂತ ಹೆಚ್ಚಿನದನು ಮಾಡಬೇಕೆನ್ನುವ ಪೈಪೋಟಿಯೇ ನಮ್ಮ ಸೇವೆಯ ಹಿಂದಿನ ಪ್ರೇರಕ ಶಕ್ತಿಯಾದಲ್ಲಿ, ಪ್ರಾಮಾಣಿಕವಾಗಿ ರಾಜ್ಯದ ಸೇವೆಯನ್ನು ಮಾಡಲು ಅಡಚಣೆಯಾಗುತ್ತದೆ.

*ಒಡಕನ್ನು ಹುಟ್ಟಿಸುವುದು*

ಉದ್ದೇಶಪೂರ್ವಕವಾಗಿ ಅಥವಾ ಉದ್ದೇಶರಹಿತವಾಗಿ ಕೆಲವೊಮ್ಮೆ ಸೇವಕರಾದ ನಾವು ಎಚ್ಚರತಪ್ಪಿದವರಾಗಿ ನಮ್ಮ ಮಾತು ಇಲ್ಲವೇ ಕ್ರಿಯೆಗಳ ಮೂಲಕವಾಗಿ ಕ್ರಿಸ್ತನ ದೇಹದಲ್ಲಿ ಅಪಸ್ವರ ಹುಟ್ಟಿಸಿಬಿಡುತ್ತೇವೆ. ನಾವು ಒಬ್ಬರ ಮೇಲೆ ಸುಳ್ಳು ಅಪವಾದ ಮಾಡುವುದು, ಚಾಡಿ ಹೇಳುವುದು. ಇತರರ ಕುರಿತು ಕೀಳಾಗಿ ಮಾತನಾಡುವುದು ಮುಂತಾದ ತಪ್ಪು ಮಾಡುತ್ತೇವೆ. ಇದು ಭೇದಗಳನ್ನು ಉಂಟುಮಾಡುವುದಲ್ಲದೆ.

ಪಾಲುಗಾರಿಕೆಗೆ ವಿಘ್ನವಾಗಿಬಿಡುತ್ತವೆ. ಸಹೋದರರಲ್ಲಿ ಭೇದವನ್ನು ಹುಟ್ಟಿಸುವವನನ್ನು ದೇವರು ಅಸಹಿಸಿಕೊಳ್ಳುತ್ತಾನೆ.

**ಜ್ಞಾನೋಕ್ತಿ 6:16–19**

**ಯೆಹೋವನು ಹಗೆಮಾಡುವ ಆರು ಇವೆ, ಹೌದು, ಏಳು ಆತನಿಗೆ ಅಸಹ್ಯಗಳಾಗಿ ತೋರುತ್ತವೆ. ಯಾವವೆಂದರೆ, ಹೆಮ್ಮೆಯ ಕಣ್ಣು, ಸುಳ್ಳಿನ ನಾಲಿಗೆ, ನಿರ್ದೋಷ ರಕ್ತವನ್ನು ಸುರಿಸುವ ಕೈ, ದುರಾಲೋಚನೆಗಳನ್ನು ಕಲ್ಪಿಸುವ ಹೃದಯ, ಕೇಡುಮಾಡಲು ತ್ವರೆಪಡುವ ಕಾಲು, ಅಸತ್ಯವಾಡುವ ಸುಳ್ಳು ಸಾಕ್ಷಿ, ಒಡಹುಟ್ಟಿದವರಲ್ಲಿ ಜಗಳಗಳನ್ನು ಬಿತ್ತುವವನು, ಈ ಏಳೇ.**

*ತೋರಿಕೆಯ ಪಾಲುದಾರಿಕೆ*

ಕೆಲವೊಮ್ಮೆ ಪಾಲುದಾರಿಕೆಯ ಕುರಿತು ಸಮರ್ಪಕವಾದ ಮಾತುಕತೆಗಳು ಮತ್ತು ಒಟ್ಟಿಗೆ ಕೆಲಸಮಾಡುವುದೆಂದು ಭರವಸೆ ನೀಡಿದ ಮೇಲೆಯೂ ನಿಜವಾದ ಕೆಲಸಕ್ಕೆ ಕೈಹಚ್ಚುವಾಗ ನಾವು ಏನೂ ಮಾಡದೆ ಹೋಗಬಹುದು. ಇದು ಕೃತ್ಯದಲ್ಲಿ ಕಾಣದೆ ಹೋಗುವ ಬಾಯಿಪ್ರಚಾರವೇ ಹೊರತು ಬೇರೇನಿಲ್ಲ. ನಾವು ಕೇವಲ ಮಾತನಾಡುತ್ತಲೇ ಇದ್ದು ಅದು ಕೃತ್ಯದಲ್ಲಿ ಕಾಣದೆ ಹೋದಾಗ ನಾವು ರಾಜ್ಯದ ಪಾಲುದಾರಿಕೆಗೆ ಅಡಚಣೆ ಉಂಟುಮಾಡುತ್ತೇವೆಯೇ ಹೊರತು ಪ್ರಗತಿಯನ್ನು ನಿರೀಕ್ಷಿಸುವುದು ಅಸಾಧ್ಯ.

## ವೈಯಕ್ತಿಕ ಅನ್ವಯಿಸುವಿಕೆ


ಪ್ರಶ್ನೆ 1 ನಿಮಗೆ ನಿಜವಾಗಿಯೂ ರಾಜ್ಯದ ಮನಃಸ್ಥಿತಿಯಿದೆಯೇ? ವೈಯಕ್ತಿಕ ಸೇವೆಯನ್ನು ಬೆಳೆಸಿಕೊಳ್ಳುವುದಕ್ಕಿಂತ ಹೆಚ್ಚಾಗಿ ರಾಜ್ಯದ ಅಭಿವೃದ್ಧಿಯನ್ನು ಗಮನಿಸಲು ನಿಮಗೆ ಸಾಧ್ಯವಿದೆಯೇ?

ಪ್ರಶ್ನೆ 2. ಇತರ ಸೇವಕರ ಇಲ್ಲವೇ ಸೇವಾಸಂಸ್ಥೆಗಳ ಜೊತೆ ಸೇವೆಮಾಡುವಾಗ ನೀವು ಹಿಂದೆಗೆಯುವ ಕೆಲವು ವಿಷಯಗಳು ಯಾವುವು? ಇವುಗಳನ್ನು ಹೇಗೆ ಜಯಿಸುವಿರಿ?

# ಅಧ್ಯಾಯ 8

# ನಗರವ್ಯಾಪ್ತಿ ಸಭೆಯು ದೇವರ ರಾಜ್ಯವನ್ನು ಸ್ಥಾಪಿಸುವುದು

ಆದುದರಿಂದ ನೀವು ಹೀಗೆ ಪ್ರಾರ್ಥನೆ ಮಾಡತಕ್ಕದ್ದು ಪರಲೋಕದಲ್ಲಿರುವ ನಮ್ಮ ತಂದೆಯೇ, ನಿನ್ನ ನಾಮವು ಪರಿಶುದ್ಧವೆಂದು ಎಣಿಸಲ್ಪಡಲಿ ನಿನ್ನ ರಾಜ್ಯವು ಬರಲಿ. ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ (ಮತ್ತಾಯ 6:9,10)



# ೮
# ನಗರವ್ಯಾಪ್ತಿ ಸಭೆಯು ದೇವರ ರಾಜ್ಯವನ್ನು ಸ್ಥಾಪಿಸುವುದು

ನಗರವ್ಯಾಪ್ತಿ ಸಭೆ ದೇವರ ರಾಜ್ಯವನ್ನು ಸ್ಥಾಪಿಸುವುದು ನಗರಗಳು ಹೆಚ್ಚಿನ ಜನಸಂಖ್ಯೆಯನ್ನು ಹೊಂದಿದ ಪ್ರದೇಶಗಳಿಂದ ಕೂಡಿದೆ. ನಗರಗಳಲ್ಲಿರುವ ಜನರನ್ನು ಸುವಾರ್ತೆಯೊಂದಿಗೆ ಸಂಧಿಸಿ, ಆ ನಗರವನ್ನು ದೇವರ ರಾಜ್ಯಕ್ಕಾಗಿ ಮಾನಸಾಂತರಕ್ಕೆ ನಡಿಸುವುದು ನಗರಪ್ರದೇಶ ಸಭೆಯ ಜವಾಬ್ದಾರಿಯಾಗಿದೆ. ನಾವು ನಗರ ಪ್ರದೇಶದ ಸಭೆ ಎನ್ನುವಾಗ ಅದು ನಗರದಲ್ಲಿರುವ ಕ್ರಿಸ್ತನ ದೇಹವಾಗಿರುವ ಸಭೆಯ ಕುರಿತು ಅಂದರೆ ನಗರದಾದ್ಯಂತ ಇರುವ ಎಲ್ಲಾ ಸಭೆಗಳಲ್ಲಿರುವ ವಿಶ್ವಾಸಿಗಳನ್ನು ಕುರಿತು ಹೇಳುತ್ತೇವೆ.

ನಗರದಲ್ಲಿರುವ ಕ್ರೈಸ್ತ ಸೇವಕರು ನಾಯಕರು ಮತ್ತು ವಿಶ್ವಾಸಿಗಳು ತಮ್ಮ ಸ್ಥಳೀಯ ಸಭೆ ಮತ್ತು ಸಂಸ್ಥೆಯನ್ನು ಮೀರಿ ನಗರದಲ್ಲಿ ದೇವರ ರಾಜ್ಯವನ್ನು ಕಟ್ಟುವುದರ ಕುರಿತು ದರ್ಶನ ಮತ್ತು ತಿಳುವಳಿಕೆಯನ್ನು ಹೊಂದಬೇಕು.

## ಐಕತೆಗೆ ಕರೆ: ಒಂದು ದೇಹ–ಅನೇಕ ಸಭೆಗಳು

ನಮ್ಮ ಕರ್ತನಾದ ಯೇಸುವು ಹೀಗೆ ಪ್ರಾರ್ಥಿಸಿದನು: “ನೀನು ನನ್ನನ್ನು ಕಳುಹಿಸಿಕೊಟ್ಟಿದ್ದೀ ಎಂದು ಲೋಕವು ನಂಬುವುಕಕ್ಕಾಗಿ ಅವರೆಲ್ಲರೂ ಒಂದಾಗಿರಬೇಕೆಂತಲೂ ತಂದೆಯೇ, ನೀನು ನನ್ನಲ್ಲಿಯೂ ನಾನು ನಿನ್ನಲ್ಲಿಯೂ ಇರುವ ಪ್ರಕಾರ ಅವರೂ ನಮ್ಮಲ್ಲಿ ಇರಬೇಕೆಂತಲೂ ಕೇಳಿಕೊಳ್ಳುತ್ತೇನೆ” (ಯೋಹಾನ 17:21)

ನಗರದಲ್ಲಿರುವ ಯೇಸು ಕ್ರಿಸ್ತನ ಸಭೆಯು, ಕರ್ತನಾದ ಯೇಸುಕ್ರಿಸ್ತನಲ್ಲಿ ನಂಬಿಕೆಯಿಟ್ಟ ಮತ್ತು ಆತನನ್ನು ತಮ್ಮ ಒಬ್ಬನೇ ರಕ್ಷಕನು ಹಾಗೂ ಕರ್ತನೆಂದು ಒಪ್ಪಿಕೊಳ್ಳುವುದರಿಂದ ಮಾಡಲ್ಪಟ್ಟು ಒಂದೇ ದೇಹವಾಗಿದೆ. ನಾವು ಒಂದೇ ದೇಹವಾಗಿದ್ದೇವೆ ನಗರ ಪ್ರದೇಶದ ಸಭೆಯಾಗಿದ್ದೇವೆ ಬೇರೆ ಅನೇಕ ಸ್ಥಳೀಯ ಗುಂಪುಗಳಾಗಿ, ನಮ್ಮದೇ ರೀತಿ ನೀತಿ ನಿಯಮಗಳನ್ನು ಅನುಸರಿಸಿ ಅರಾಧನೆ

ಮಾಡಿದಾಗ್ಯೂ ನಾವು ಒಂದೇ. ನಾವು ಐಕ್ಯತೆ ಮತ್ತು ಆತ್ಮನ ಅನ್ಯೋನ್ಯತೆಯಲ್ಲಿ, ನಗರದಲ್ಲಿ ರಾಜ್ಯದ ವಿಸ್ತರಣೆಗಾಗಿ ಕೆಲಸಮಾಡುವಾಗ ನಾವು ಒಂದಾಗಿರುವುದು ಬಹಳ ಪಾಮುಖ್ಯವಾಗಿದೆ, ನಾವು ಪರಸ್ಪರ ತೋರುವ ಪ್ರೀತಿ, ಐಕ್ಯತೆ ಮತ್ತು ಬೆಂಬಲಗಳನ್ನು ನೀಡುವಾಗ ಒಂದಾಗಿರುವುದು ಅವಶ್ಯವಾಗಿದೆ. ಆಗ ನಮ್ಮ ನಗರದ ಜನರು ಯೇಸು ನಿಜವಾಗಿಯೂ ಯಾರಾಗಿದ್ದಾನೆ ಎಂದು ತಿಳಿದು ನಾವು ಆತನನ್ನು ನಂಬಿದಂತೆ ತಾವು ಕೂಡ ನಂಬುತ್ತಾರೆ. ಪ್ರಾಮಾಣಿಕವಾದ ಐಕ್ಯತೆ, ಪ್ರೀತಿ, ಅನ್ಯೋನ್ಯತೆ ಮತ್ತು ಪಾಲುಗಾರಿಕೆ ಇವುಗಳ ಮೂಲಕ ಕ್ರಿಸ್ತನಲ್ಲಿರುವ ನಮ್ಮ ಐಕ್ಯತೆಯನ್ನು ಪ್ರಾಯೋಗಿಕವಾಗಿ ತೋರ್ಪಡಿಸಿ ಅ ಮೂಲಕ ಲೋಕವು ನಂಬುವಂತಾಗುವಂತೆ ನಗರ ಪ್ರದೇಶದ ಸಭೆಯು ವಿಶ್ವಾಸಿಗಳ ಸಮುದಾಯದ ವಿಸ್ತೃತ ಭಾಗವಾಗಿ ಅಭಿವೃದ್ಧಿಗೊಳ್ಳಬೇಕು.

ಇಡೀ ನಗರವನ್ನು ಯೇಸು ಕ್ರಿಸ್ತನ ಸುವಾರ್ತೆಯ ಮುಲಕ ಆತನ ಶಿಷ್ಯತ್ವಕ್ಕೆ ನಡೆಸುವುದು ಮತ್ತು ಅ ಮೂಲಕ ಎಲ್ಲಾ ಕ್ಷೇತ್ರಗಳಲ್ಲಿ (ಆತ್ಮಿಕ, ಸಾಮಾಜಿಕ, ವಾಣಿಜ್ಯ, ದೈಹಿಕ ಮುಂತಾದ) ಮಹತ್ತರ ಸುಧಾರಣೆಗಳನ್ನು ತರುವುದರಲ್ಲಿ ನಗರಪ್ರದೇಶ ಸಭೆಯು ತೊಡಗಿಕೊಳ್ಳಬೇಕು.

*ನಮ್ಮ ಸಾಮಾನ್ಯ ಅಸ್ತಿವಾರಗಳು:*

- ವಿವಿಧ ಸ್ಥಳೀಯ ಗುಂಪುಗಳಿಗೆ ಸೇರಿದ್ದಾಗ್ಯೂ ನಾವು ಒಂದೇ ದೇಹ, ಒಂದೇ ನಗರ ಪ್ರದೇಶಸಭೆಗೆ ಸೇರಿದ್ದೇವೆ.
- ನಾವು ಯೇಸುಕ್ರಿಸ್ತನ ನಾಯಕತ್ವಕ್ಕೆ ಒಳಪಟ್ಟಿದ್ದೇವೆ ಮತ್ತು ಮೊದಲು ಆತನ ರಾಜ್ಯಕ್ಕಾಗಿಯೂ ಮತ್ತು ನಮ್ಮ ನಗರದಲ್ಲಿ ಆತನ ಚಿತ್ತ ನೆರವೇರಬೇಕೆಂದು ತವಕಿಸುತ್ತೇವೆ.
- ನಮ್ಮ ನಗರದಲ್ಲಿ ಆತನ ರಾಜ್ಯವು ಕಟ್ಟಲ್ಪಡುವಂತೆ ನಾವು ಪರಸ್ಪರರಿಗೆ ಬೆಲೆ ಕೊಡುತ್ತೇವೆ, ಗೌರವಿಸುತ್ತೇವೆ, ಬೆಂಬಲಿಸುತ್ತೇವೆ ಮತ್ತು ಪಾಲುದಾರಿಕೆ ಮಾಡುತ್ತೇವೆ.

## ನಾಯಕರ ಕಡೆಯಿಂದ ಪ್ರಾರಂಭಗೊಳ್ಳಬೇಕು

ನಗರಪ್ರದೇಶದ ಸಭೆಯು ಒಗ್ಗಟ್ಟಾಗಿ, ಅನ್ಯೋನ್ಯತೆಯಲ್ಲಿ ಸೇರಿ ಬರಬೇಕೆಂದರೆ ನಾವು ನಗರದ ನಾಯಕರುಗಳನ್ನು ಒಂದೆಡೆ ಸೇರಿಸಬೇಕು,

ಸಾಧಾರಣವಾಗಿ ಒಂದು ನಗರದ ಕ್ರೈಸ್ತ ನಾಯಕರು ಪರಸ್ಪರ ಸಂಪರ್ಕದಲ್ಲಿ ಇರದಿರುವ ಕಾರಣ ಅವರ ಸಭೆಯು ಅಂಗಗಳೆನಿಸಿಕೊಳ್ಳುವ ಇತರರು ಸಂಪರ್ಕಕ್ಕೆ ಬರುವುದಿಲ್ಲ. ಒಂದು ನಗರದಲ್ಲಿನ ಸ್ಥಳೀಯ ಕ್ರೈಸ್ತ ಸಭೆಗಳಲ್ಲಿ ಮತ್ತು ಸಂಸ್ಥೆಗಳಲ್ಲಿ (ಸಭೆಗೆ ಪೂರಕವಾಗಿ ಕೆಲಸ ಮಾಡುವ ಸಂಸ್ಥೆಗಳು, ಸರ್ಕಾರೇತರ ಕ್ರೈಸ್ತ ಸಂಸ್ಥೆಗಳು/NGOs), ಅನೇಕ ಒಳ್ಳೆಯ ನಾಯಕರುಗಳಿರಬಹುದು. ಆದರೆ ಅವರು ದೀರ್ಘಕಾಲ ಒಬ್ಬರನ್ನೊಬ್ಬರು ಭೇಟಿ ಮಾಡಲು ಅಥವಾ ಪರಸ್ಪರರೊಂದಿಗೆ ಅನ್ಯೋನ್ಯತೆಯಲ್ಲಿರಲು ಅವಕಾಶವಿಲ್ಲದೆ ಹೋಗಬಹುದು. ಇತರರ ಹೆಸರುಗಳಾಗಲೀ ಅವರ ಸಂಸ್ಥೆಯ ಹೆಸರನ್ನು ತಿಳಿದಿರುವುದನ್ನು ಬಿಟ್ಟರೆ ಇವರಲ್ಲಿ ಇನ್ಯಾವುದೇ ರೀತಿಯ ಸಂಬಂಧಗಳು ಏರ್ಪಡದಿರಬಹುದು.

ಆದುದರಿಂದ, ಮೊಟ್ಟ ಮೊದಲನೆಯದಾಗಿ ನಗರ ಪ್ರದೇಶಗಳ ಸಭೆಗಳು ಒಟ್ಟಾಗಿ ಸೇರಿಬರಲು ನಾವು ನಾಯಕರುಗಳ ಮಧ್ಯೆ ವಿಶ್ವಾಸವನ್ನು, ಅನ್ಯೋನ್ಯತೆಯನ್ನು, ಮತ್ತು ಹಂಚಿಕೊಳ್ಳುವ ಭಾವವನ್ನು ಬೆಳೆಸಲು ಸಹಾಯ ಮಾಡಬೇಕು.

### *ಪ್ರತಿ ತಿಂಗಳು ದುಂಡು ಮೇಜಿನ ಚರ್ಚೆಗಳು*

ಇದನ್ನು ಮಾಡುವ ಒಂದು ವಿಧವೆಂದರೆ ಪ್ರತಿ ತಿಂಗಳೂ ಸಭಾಪಾಲಕರು, ಕ್ರೈಸ್ತ ನಾಯಕರು ಮತ್ತು ಕ್ರೈಸ್ತ ಉದ್ಯೋಗಸ್ಥರು ಸೇರಿಬಂದು, ಅನ್ಯೋನ್ಯತೆಯಲ್ಲಿದ್ದು, ಚರ್ಚಿಸಿ, ಪ್ರಾರ್ಥಿಸಿ, ಕಲಿಯುತ್ತಾ ಒಬ್ಬರನ್ನೊಬ್ಬರು ಅಭಿವೃದ್ಧಿಗೊಳಿಸಬೇಕು. ಇವು ಸಮ್ಮೇಳನಗಳಂತೆ ಅಂದರೆ ಜನರು ಕೂಡಿ ಬರುವುದು, ಒಂದು ದೈವವಾಕ್ಯದ ಸಂದೇಶ ಕೇಳುವುದು, ಸ್ವಲ್ಪಕಾಲ ಮಾತುಕತೆಗಳನ್ನಾಡಿ ಹೊರಟು ಬಿಡುವುದು ಎಂಬಂತಾಗಬಾರದು.

ಇಲ್ಲಿ ಎಲ್ಲರಿಗೂ ಮಾತನಾಡುವ, ಚರ್ಚಿಸುವ ಮತ್ತು ಹೇಳಿಕೆ ಕೇಳಿಕೆಗಳನ್ನು ಮಾಡಲು ಅವಕಾಶವಿರುವ ವಾತಾವರಣವನ್ನು ಕಲ್ಪಿಸಿಕೊಡುವಂತಾದರೆ ಒಳ್ಳೆಯದು. ದುಂಡುಮೇಜಿನ ಚರ್ಚೆಗಳಲ್ಲಿ, ನಾಯಕರುಗಳು ಸಣ್ಣ ಗುಂಪುಗಳನ್ನು ಮಾಡಿಕೊಂಡು ಒಂದು ವಿಷಯವನ್ನು ಚರ್ಚಿಸಿ, ಅದರ ಸಾರಾಂಶವನ್ನು ಎಲ್ಲರಿಗೂ ಹೇಳುವಂತಾದಾಗ ಅದರಿಂದ ಎಲ್ಲರೂ ಕಲಿಯುವಂತಾಗುತ್ತದೆ ಮತ್ತು ಎಲ್ಲರಿಗೂ ಲಾಭವುಂಟಾಗುತ್ತದೆ. ಕೂಡಿ ಆರಾಧಿಸಲು ಮತ್ತು ಒಟ್ಟಾಗಿಯೂ, ಪರಸ್ಪರವಾಗಿಯೂ ಪ್ರಾರ್ಥನೆ ಮಾಡಲು ಸಾಕಷ್ಟು ಸಮಯವನ್ನು

ಮೀಸಲಿಡಬೇಕು. ಅಂಥಹ ವಾತಾವರಣದಲ್ಲಿ ದೇವರು ಕಾರ್ಯಮಾಡುತ್ತಾ ಜನರ ಹೃದಯಗಳನ್ನು ಮನಸ್ಸುಗಳನ್ನೂ ಮಾರ್ಪಡಿಸುತ್ತಾನೆ.

## ನಗರವನ್ನು ಮಾರ್ಪಡಿಸಲು ಪಾಲುಗಾರಿಕೆ

ಒಂದು ನಗರವು ಎಲ್ಲಾ ಕ್ಷೇತ್ರಗಳಲ್ಲಿ; ಆತ್ಮಿಕ, ಸಾಮಾಜಿಕ, ವ್ಯಾಪಾರ ಕ್ಷೇತ್ರ ಮತ್ತು ದೈಹಿಕ ಕ್ಷೇತ್ರಗಳಲೆಲ್ಲಾ ಮಾರ್ಪಾಟು ಹೊಂದಬೇಕಾದ ನಿಟ್ಟಿನಲ್ಲಿ ಸಭೆಗಳು ಮತ್ತು ಕ್ರೈಸ್ತ ಸೇವಾ ಸಂಸ್ಥೆಗಳು ಪಾಲುಗಾರರಾಗಿ ಜೊತೆಗೂಡಿಕೊಂಡು ಪರಸ್ಪರ ಸಹಕರಿಸುವಂತೆ ನಾವು ಪ್ರೋತ್ಸಾಹ ನೀಡಬೇಕು.

ನಮ್ಮ ಸಹಭಾಗಿತ್ವವು ಆಗೀಗ ನಡೆಯುವ ಕಾರ್ಯ ಕ್ರಮಗಳು ಮತ್ತು ಕೂಟಗಳನ್ನು ಮೀರಿ ಸಭೆಗಳು ಮತ್ತು ಕ್ರೈಸ್ತ ಸಂಸ್ಥೆಗಳ ನಡುವೆ ನಿರಂತರವಾದ ಒಡನಾಟ ಮತ್ತು ಸಹಕಾರಗಳಾಗಿ ಮಾರ್ಪಡಬೇಕು.

ರಾಜ್ಯದ ಕೆಲಸವನ್ನು ಮಾಡುವ ಮನೋಭಾವದವರಾದ ಕ್ರೈಸ್ತ ನಾಯಕರಾಗಿರುವವರಿಗೆ, ಪರಸ್ಪರ ಸಹಕರಿಸಿ ಮಾಡತಕ್ಕಂತ ಅನೇಕ ವಿಷಯಗಳಿವೆ.

1. ಈಗಾಗಲೇ ನಗರದಲ್ಲಿ ನಡೆಯುತ್ತಿರುವ ಕಾರ್ಯಗಳಲ್ಲಿ ಸಹಭಾಗಿತ್ವವನ್ನು ಪ್ರೋತ್ಸಾಹಿಸುವುದು.
2. ಇತರ ಸಭೆಗಳು ಮತ್ತು ಕ್ರೈಸ್ತ ಸಂಸ್ಥೆಗಳ ಸಹಭಾಗಿತ್ವದಲ್ಲಿ ಹೊಸ ಕಾರ್ಯಕ್ರಮಗಳನ್ನು ಪ್ರಾರಂಭಿಸಿ ಮುಂದಾಳತ್ವವಹಿಸುವುದು.

*ಅ. ಈಗಾಗಲೇ ನಗರದಲ್ಲಿ ನಡೆದಿರುವ ಕೆಲಸಗಳಲ್ಲಿ ಸಹಭಾಗಿತ್ವವನ್ನು ಪ್ರೋತ್ಸಾಹಿಸುವುದು.*

1. ಈಗಾಗಲೇ ಸಭೆಗಳಲ್ಲಿ ನಡೆಯುತ್ತಾ ಬಂದಿರುವ ಕಾರ್ಯಕ್ರಮಗಳು, ಉದಾ: ಬಡವರಿಗೆ ಊಟ ನೀಡುವುದು, ಕೊಳಚೆ ಪ್ರದೇಶಗಳಲ್ಲಿ ಸೇವೆ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳು, ಉದ್ಯೋಗಸ್ಥರು ಮುಂತಾದವರನ್ನು ಪ್ರೋತ್ಸಾಹಿಸಿ ಸಿದ್ಧಪಡಿಸುವುದು ಮುಂತಾದ ಕಾರ್ಯಕ್ರಮಗಳಲ್ಲಿ ಸಹಕರಿಸಿ ಅವು ಬಲವಾದ ರೀತಿಯಲ್ಲಿ ಪರಿಣಾಮಕಾರಿಯಾಗುವಂತೆ ಮಾಡಬೇಕು. ಇದನ್ನು ಯೋಗ್ಯವಾದ ರೀತಿಯಲ್ಲಿ ಸಭಾಪಾಲಕರುಗಳ ಜೊತೆ ಚರ್ಚಿಸಿ,

ಅವರ ಸಭೆಯ ವಿಶ್ವಾಸಿಗಳು ತಮ್ಮ ಸಭೆಯನ್ನು ಬಿಟ್ಟು ಇತರ ಸಭೆಗಳಿಗೆ ವರ್ಗಾವಣೆಗೊಳ್ಳರು ಎನ್ನುವ ತಿಳುವಳಿಕೆಯೊಂದಿಗೆ ಮಾಡತಕ್ಕದ್ದು.

2. ಹಾಗೆಯೇ, ಕ್ರೈಸ್ತ ಸಂಸ್ಥೆಗಳು (ಕ್ರೈಸ್ತ ಸಹಾಯಕ ಸಂಸ್ಥೆಗಳು, NGO ಗಳು) ನಡೆಸುವಂತದ್ದೇ ಕಾರ್ಯಕ್ರಮಗಳಲ್ಲಿ ಸಭೆಗಳೂ ತೊಡಗಿಕೊಂಡಿದ್ದಾರೆ ಇಬ್ಬರೂ ಕೂಡಿಯೇ ಅದನ್ನು ನಡೆಸಬಹುದಾಗಿದೆ. ಉದಾ: ಐದು ಸಭೆಗಳು ಮದುವೆಗೆ ಸಂಬಂಧಿಸಿದಂತ ಸೇವೆಗೆ ಮತ್ತು ಪೂರಕ ಕೆಲಸಗಳಲ್ಲಿ ತೊಡಗಿದ್ದಲ್ಲಿ ಮತ್ತು ಮೂರು ಸಂಸ್ಥೆಗಳು ಅದನ್ನೇ ಮಾಡುತ್ತಿದ್ದಲ್ಲಿ ಎಲ್ಲರೂ ಸೇರಿಕೊಂಡು ತಮ್ಮದೇ ಸಭೆಗಳಲ್ಲಿಯೂ ಮತ್ತು ನಗರದಲ್ಲಿರುವ ಕ್ರಿಸ್ತನ ಸಭೆಗೂ ಸಹಾಯಕವಾಗುವಂತೆ ಆ ಸೇವೆಯನ್ನು ರೂಪಿಸಲು ಸಾಧ್ಯವಿದೆ.

3. ಆರ್ಥಿಕವಾಗಿ ಸುಸ್ಥಿತಿಯಲ್ಲಿರುವ ಸಭೆಗಳು ದುರ್ಬಲವಾಗಿರುವ ಸಭೆಗಳಿಗೆ ಅವಶ್ಯವಾದ ಉಪಕರಣ ಮತ್ತು ಸಾಧನಗಳನ್ನು ಕೊಳ್ಳಲು ಸಹಾಯ ಮಾಡಬೇಕು.

4. ಪರಿಪಕ್ವಗೊಂಡ ಸಭೆಗಳು ಎಳೆಯ ಸಭೆಗಳಿಗೆ ಆತ್ಮಿಕವಾಗಿಯೂ, ವ್ಯವಸ್ಥೆಯನ್ನು ಸುಧಾರಿಸುವುದರಲ್ಲಿಯೂ ಸಹಾಯ ಮಾಡಬೇಕು.

## ಸವಾಲುಗಳು

1. ಸಭಾಪಾಲಕರು ಮತ್ತು ವಿಶ್ವಾಸಿಗಳಲ್ಲಿ ರಾಜ್ಯದ ಮನೋಭಾವನೆಯನ್ನು ಬೆಳೆಸುವುದು, ಅಂದರೆ ತಮ್ಮ ಸಭಿಕರು ತಮ್ಮನ್ನು ಬಿಟ್ಟು ಹೋಗಬಹುದು, ಇಲ್ಲವೇ ಇತರ ಸಭಾಪಾಲಕರು ತಮ್ಮ ಸಭಿಕರನ್ನು ಸೆಳೆದುಕೊಂಡು ಬಿಡಬಹುದು ಎನ್ನುವ ಭಯವನ್ನು ಸಭಾಪಾಲಕರಿಂದ ತೆಗೆದುಹಾಕಿ, ಎಲ್ಲರೂ ಒಟ್ಟಾಗಿ ಕೆಲಸ ಮಾಡಲು ಸಾಧ್ಯವಾಗುವ ವಾತಾವರಣವನ್ನು ನಿರ್ಮಿಸುವುದು. ನಾವು ನಾಯಕರಲ್ಲಿ ಮತ್ತು ವಿಶ್ವಾಸಿಗಳಲ್ಲಿ ರಾಜ್ಯದ ಮನೋಭಾವನೆ ಮತ್ತು ನಿಯತ್ತನ್ನು ಬೆಳೆಸಬೇಕು.

2. ಸ್ಥಳೀಯ ಸಭೆಗಳ ಮತ್ತು ಸಭೆಯ ಹೊರಗಿನ ಕ್ರಿಸ್ತೀಯ ಸಂಸ್ಥೆಗಳ ದರ್ಶನ ಮತ್ತು ನಿರ್ದಿಷ್ಟ ಗುರಿಯ ಕಾರ್ಯವನ್ನು ಪೂರ್ಣಗೊಳಿಸುವುದನ್ನು ಖಚಿತ ಪಡಿಸಿಕೊಳ್ಳಬೇಕು. ಸ್ಥಳೀಯ ಸಭೆಗಳು, ಕ್ರಿಸ್ತೀಯ ಸೇವಾ ಸಂಸ್ಥೆಗಳು ಮತ್ತು ವಿಸ್ತೃತ ನಗರ ಪ್ರದೇಶದ ಸಭೆಗಳಿಗೆ ಕೂಡಿ ಕೆಲಸ ಮಾಡುವಾಗ ಅವೆಲ್ಲವುಗಳಿಗೂ ಏಕರೀತಿಯಾಗಿ ಪ್ರಯೋಜನವಾಗುವಂತೆ ಒಂದುಗೂಡಿಸುವ ತಂತ್ರಗಾರಿಕೆಯನ್ನು ರೂಪಿಸಿಗೊಳ್ಳಬೇಕು.

*ಆ. ಇತರ ಸಭೆಗಳು ಮತ್ತು ಕ್ರೈಸ್ತ ಸಂಸ್ಥೆಗಳ ಸಹಭಾಗಿತ್ವದಲ್ಲಿ ಹೊಸ ಕಾರ್ಯಕ್ರಮಗಳನ್ನು ಪ್ರಾರಂಭಿಸಿ ಮುಂದಾಳತ್ವವಹಿಸುವುದು.*

1. ಸಭೆಗಳ ಮತ್ತು ಕ್ರೈಸ್ತ ಸಂಸ್ಥೆಗಳ, ಅಂದರೆ ತಮ್ಮ ನಗರದ ಮೇಲೆ ಅಧಿಕವಾಗಿ ಪ್ರಭಾವ ಬೀರಲು ಸಾಧ್ಯವಾಗುವಂತೆ ಒಂದುಗೂಡಿ ಕೆಲಸಮಾಡುವ ಕುರಿತು ಸ್ಪಷ್ಟವಾಗಿ ತಿಳುವಳಿಕೆಯುಳ್ಳ ಸಹಭಾಗಿತ್ವದಲ್ಲಿ ನಡೆಸಲು ಸಾಧ್ಯವಾಗುವಂತಹ ಹೊಸ ಕಾರ್ಯ ಕ್ರಮಗಳನ್ನು ಹಮ್ಮಿಕೊಳ್ಳಿರಿ. ಉದಾಹರಣೆಗೆ: ಬೀದಿಮಕ್ಕಳನ್ನು ರಕ್ಷಿಸಿ ಸಂರಕ್ಷಿಸುವುದು, ಅವರಿಗೆ ವಿದ್ಯಾಭ್ಯಾಸ ನೀಡುವುದು, ಅವರಿಗೊಂದು ಭವಿಷ್ಯ ರೂಪಿಸುವುದು ಇಂತಹ ಕಾರ್ಯಕ್ರಮವನ್ನು ರೂಪಿಸಿರಿ. ಇಲ್ಲಿ ಅನೇಕ ಸಭೆಗಳು ಮತ್ತು ಕ್ರೈಸ್ತ ಸಂಸ್ಥೆಗಳು ಒಗ್ಗೂಡಿ ಈ ದೊಡ್ಡ ಕಾರ್ಯದಲ್ಲಿ ತೊಡಗಿದಾಗ ನಗರದಲ್ಲಿ ದೊಡ್ಡ ರೀತಿಯ ಪರಿಣಾಮ ಉಂಟಾಗುತ್ತದೆ.

ಸವಾಲುಗಳು

1. ಇಂಥಹ ಸಹಭಾಗಿತ್ವವು ನೆರವೇರಲು ಸಾಂಸ್ಥಿಕವಾಗಿ ಬಲವಾದ ಬುನಾದಿ ಬೇಕಾಗುತ್ತದೆ. ಇದನ್ನು ಆಡಳಿತಾತ್ಮಕವಾಗಿ ನಿರ್ವಹಿಸಲು ಆರ್ಥಿಕ ಬಂಡವಾಳದ ಅವಶ್ಯಕತೆಯಿದೆ.

## ನಗರ ಪ್ರದೇಶದ ಐಕ್ಯತಾ ಕೂಟಗಳು

**ಕೀರ್ತನೆ 50:5**

**'ನನ್ನೊಡನೆ ಯಜ್ಞದ ಮೂಲಕ ಒಡಂಬಡಿಕೆಯನ್ನು ಮಾಡಿಕೊಂಡ ನನ್ನ ಭಕ್ತರನ್ನು ನನ್ನ ಬಳಿಗೆ ಕರಕೊಂಡು ಬನ್ನಿರಿ ಎಂದು ಆಜ್ಞಾಪಿಸುತ್ತಾನೆ'**

ಈ ಐಕ್ಯತಾ ಕೂಟಗಳು ಸಣ್ಣರೀತಿಯಲ್ಲಿ ಕ್ರಮಬದ್ಧವಾಗಿ ನಡೆಯುವ ಪ್ರಾರ್ಥನಾ ಕೂಟಗಳು, ಆರಾಧನಾ ಕೂಟಗಳು, ಸುವಾರ್ತಾಕೂಟಗಳಾಗಿದ್ದು ನಗರದ ಸಭೆಗಳು ಮತ್ತು ಕ್ರೈಸ್ತ ಸಂಸ್ಥೆಗಳು ಭಾಗವಹಿಸುವುದು ಮುಖ್ಯವಾಗಿದೆ. ಇದಕ್ಕೆ ಅವಶ್ಯವಾದ ಆರ್ಥಿಕ ಮತ್ತು ಸಾಂಸ್ಥಿಕ ನಿರ್ವಹಣೆಯನ್ನು ಎಲ್ಲಾ ಸಭೆಗಳು ಮತ್ತು ಕ್ರೈಸ್ತ ಸಂಸ್ಥೆಗಳು ಹೊತ್ತುಕೊಳ್ಳಬೇಕು.

## ಸವಾಲುಗಳು

ಅ. ತಮ್ಮ ಸಭಿಕರನ್ನು ಇತರ ಸಭೆಗಳವರು ಸೆಳೆದುಕೊಳ್ಳುವರೆಂಬ ಭಯವನ್ನು ಸಭಾಪಾಲಕರುಗಳ ಮನಸ್ಸಿನಿಂದ ತೆಗೆಯುವುದು ಅವಶ್ಯ. ಈ ಐಕ್ಯತಾ ಕೂಟಗಳಲ್ಲಿ ಯಾವುದೇ ಒಬ್ಬ ವ್ಯಕ್ತಿಗಾಗಲೀ ಸಭೆಗಾಗಲೀ ಆದ್ಯತೆ ದೊರೆಯುವುದಿಲ್ಲವೆಂದು ಖಚಿತ ಪಡಿಸಬೇಕು. ನಾವು ಯೇಸುಕ್ರಿಸ್ತನನ್ನು ಮಾತ್ರವೇ ಎತ್ತಿಹಿಡಿಯುವವರಾಗಿದ್ದೇವೆ.

ಆ. ತಮ್ಮ ಸಭೆಯ 'ಭೋದನಾ ತತ್ವಗಳು' ಕಲಬೆರಿಕೆಯಾಗಿ ಬಿಡುತ್ತದೆ ಎನ್ನುವ ಭಯವನ್ನು ಸಭಾಪಾಲಕರುಗಳ ಮನಸ್ಸಿನಿಂದ ತೆಗೆಯುವುದು ಅವಶ್ಯವಾಗಿದೆ. ನಾವು ಪ್ರತೀ ಸಭೆಯ ಹಿನ್ನಲೆಯ ಕುರಿತು ಸೂಕ್ಷ್ಮತೆಯಿಂದ ನಡೆದುಕೊಳ್ಳಬೇಕು. ನಾವು ನಂಬಿಕೆಯಲ್ಲಿ ಐಕ್ಯತೆ ತೋರಿಸುತ್ತೇವೆಯೇ ಹೊರತು ತತ್ವಗಳ ವಿಷಯದಲ್ಲಿ ನಾವು ಸ್ವತಂತ್ರರೇ, ನಾವೆಲ್ಲರೂ ಆರಾಧಿಸುವ 'ದೇವ ಕುಮಾರನ ಮೇಲಣ ಜ್ಞಾನ'ವೇ ನಮ್ಮನ್ನು ಒಗ್ಗೂಡಿಸುವ ಬಂಧವಾಗಿದೆ.

## **ಶಿಫಾರಸುಗಳು**

ಅ. ನಾವೆಲ್ಲರೂ ಕ್ರಿಸ್ತನ ದೇಹಕ್ಕೆ ಸೇರಿದವರೇ ಆಗಿದ್ದೇವೆ ಎಂದು ತೋರಿಸುವಂತೆ ಐಕ್ಯತಾ ಕೂಟಗಳಲ್ಲಿ ಕರ್ತನ ಮೇಜನ್ನು ಆಚರಿಸಬಹುದು.

ಆ. ಇಲ್ಲಿ ಸಮಕಾಲೀನವಾದ ಮತ್ತು ಹಿಂದಿನ ಪರಂಪರೆಯ ಹಾಡುಗಳನ್ನು ಹಾಡುವುದರ ಮೂಲಕ ಆರಾಧನೆಯಲ್ಲಿ ಎಲ್ಲರಿಗೂ ಹೊಂದುವ ರೀತಿಯ ಕಾರ್ಯಕ್ರಮವನ್ನು ಸಿದ್ಧಪಡಿಸಬೇಕು.

ಇ. ಇಲ್ಲಿ ಯಾವುದೇ ವಿಶೇಷ ಆಹ್ವಾನಿತರನ್ನು, ಮುಖ್ಯ ಅತಿಥಿಗಳನ್ನೂ ಆಹ್ವಾನಿಸುವ ಅಥವಾ ಯಾವುದೇ ಸಭಾಪಾಲಕರನ್ನು ಯಾವ ಬಿಷಪರನ್ನು ಹೆಸರಿಸುವ ಅವಶ್ಯವಿರುವುದಿಲ್ಲ. ಎಲ್ಲಾ ಸಭಾಪಾಲಕರು, ಕ್ರೈಸ್ತ ನಾಯಕರುಗಳು ವಿಶ್ವಾಸಿಗಳ ಮಟ್ಟದಲ್ಲಿಯೇ ನಡೆದುಕೊಳ್ಳಬೇಕು. ಪ್ರತಿ ಐಕ್ಯತಾ ಕೂಟದಲ್ಲಿ ಕರ್ತನಾದ ಯೇಸುಕ್ರಿಸ್ತನನ್ನು ಮಾತ್ರವೇ ಪ್ರಧಾನ ಸ್ಥಾನದಲ್ಲಿಟ್ಟುಕೊಳ್ಳಬೇಕು.

## ನಗರದಲ್ಲಿ ನಗರ ಪ್ರದೇಶದ ಸಭೆಯ ಕಾರ್ಯವು

ಸಭೆಗಳಲ್ಲಿ ಮತ್ತು ಸಂಸ್ಥೆಗಳ ನಡುವೆ ಐಕ್ಯತೆ, ಸಹಕಾರ ಮತ್ತು ಅನ್ಯೋನ್ಯತೆ ಇವುಗಳು ಬಲಗೊಳ್ಳಬೇಕು ಎನ್ನುವ ದರ್ಶನವನ್ನು ವಿಶ್ವಾಸಿಗಳಲ್ಲಿ ಪ್ರೋತ್ಸಾಹಿಸಬೇಕು ಮತ್ತು ಪ್ರಾಯೋಗಿಕವಾದ ರೀತಿಯಲ್ಲಿ ಎಲ್ಲರೊಡನೆ ಸೇರಿ ಯೇಸುವಿಗಾಗಿ ನಗರವನ್ನು ಸ್ಪರ್ಶಿಸೋಣ. ನಗರದಾದ್ಯಂತ ಯುದ್ಧವನ್ನು ಗೆಲ್ಲಲು ನಗರ ಪ್ರದೇಶದ ಸಭೆಯೇ ಬೇಕಾಗಿದೆ. ನಮ್ಮ ನಗರವು ಯೇಸುಕ್ರಿಸ್ತನ ಸುವಾರ್ತೆಯ ಮೂಲಕ ಈ ನಗರವು ಮಾರ್ಪಾಡುವಂತೆ ಸಭೆಗಳು ಮತ್ತು ಸಂಘಸಂಸ್ಥೆಗಳು ಮನಸ್ಸುಗಳನ್ನು ಮತ್ತು ಕೈಗಳನ್ನು ಒಗ್ಗೂಡಿಸಿ (ಅ) ಆತ್ಮಿಕ ಮಾರ್ಪಾಟು (ಆ) ಸಾಮಾಜಿಕ ಮಾರ್ಪಾಟು (ಇ) ಉದ್ಯೋಗದ ಸ್ಥಳಗಳಲ್ಲಿ ಮಾರ್ಪಾಟು ಮತ್ತು (ಈ) ದೈಹಿಕ ಕ್ಷೇತ್ರದಲ್ಲಿ ಮಾರ್ಪಾಟುಗಳಿಗೆ ಕಾರಣಕರ್ತರಾಗಬೇಕು.

ಅ. ಅತ್ಮಿಕ ಮಾರ್ಪಾಟು

* ಎಲ್ಲಾ ಸಭೆಯ ವಿಶ್ವಾಸಿಗಳು ನಗರದಾದ್ಯಂತ ಸಣ್ಣ ಸಣ್ಣ ಗುಂಪುಗಳಾಗಿ ನಗರ ಪ್ರದೇಶದ ಸಭೆಗಾಗಿ ಪ್ರಾರ್ಥಿಸುವುದು

* ಸ್ಥಳೀಯ ಸಭೆಗಳು ಮತ್ತು ಸಂಘ ಸಂಸ್ಥೆಗಳು ಒಂದಕ್ಕೊಂದು ಪೂರಕವಾಗಿ ಸುವಾರ್ತಾ ಸೇವೆಯನ್ನೂ ಮತ್ತು ಶಿಷ್ಯತ್ವವನ್ನೂ ನಡೆಸಿ ನಗರ ಪ್ರದೇಶದ ಸಭೆ ಕಟ್ಟುವುದು.

* ಸಭಾಪಾಲಕರು ಪ್ರಾರ್ಥನೆಯಲ್ಲಿ ಸೇರಿ, ಎಚ್ಚರಿಕೆ ಮತ್ತು ನಗರ ಪ್ರದೇಶದ ಸಭೆಯ ಕುರುಬನಾಗಿರುವುದು.

ಆ. ಸಾಮಾಜಿಕ ಮಾರ್ಪಾಟು

* ದೇವರ ರಾಜ್ಯದ ಪ್ರತಿಕ್ರಿಯೆಯನ್ನು ಸಾಮಾಜಿಕ ಪಿಡುಗುಗಳಿಗೆ ಉದಾ: ಆತ್ಮಹತ್ಯೆ, ಮಾದಕ ವಸ್ತು ಸೇವನೆ, ಬಡತನ, ಶೋಷಣೆ ಮತ್ತು ಭ್ರಷ್ಟತೆ ಮುಂತಾದ ಕ್ಷೇತ್ರಕ್ಕೆ ಅನ್ವಯಿಸಬೇಕು.

* ಏಕಾಂಗಿಯಾಗಿ ಸೇವೆ ಮಾಡುವುದಕ್ಕಿಂತಲು, ಸಭೆ ಮತ್ತು ಸಂಸ್ಥೆಗಳು ಜೊತೆಗೂಡಿ, ತಮ್ಮ ಕುಶಲತೆ, ಹಣ, ಅನುಭವಗಳನ್ನು ಒಟ್ಟುಗೂಡಿಸಿ, ಹಸಿದವರಿಗೆ ಅನ್ನವಿಟ್ಟು, ಸೂರಿಲ್ಲದವರಿಗೆ ನೆಲೆ ಒದಗಿಸಿ, ಶೊಷಿತರನ್ನು

ರಕ್ಷಿಸಿ, ವಿಧವೆಯರಿಗೆ, ಅನಾಥರಿಗೆ ಮತ್ತು ಕೆಳವರ್ಗದವರಿಗೆ ಆಶ್ರಯ ನೀಡಬೇಕು.

(ಇ) ಉದ್ಯೋಗ ಸ್ಥಳದಲ್ಲಿ ಮಾರ್ಪಾಟು

* ಎಲ್ಲಾ ಸಭೆಯ ವಿಶ್ವಾಸಿಗಳು ಉದ್ಯೋಗ ಸ್ಥಳಗಳಲ್ಲಿ ಭೇಟಿಯಾಗುವಾಗ, ಒಟ್ಟಿಗೆ ಕೆಲಸ ಮಾಡುವಾಗ ಅಲ್ಲಿಯ ಎಲ್ಲಾ ಕ್ಷೇತ್ರಗಳಲ್ಲಿ (ಕಲೆ ಮತ್ತು ಮನರಂಜನೆ, ಮಾಧ್ಯಮ, ವ್ಯಾಪಾರ, ವಿದ್ಯಾಭ್ಯಾಸ, ಸರ್ಕಾರ, ಕುಟುಂಬ, ಧರ್ಮ) ಪ್ರಾಮಾಣಿಕತೆಯಿಂದ ಶುದ್ಧವಾಗಿ, ಭಕ್ತಿಯಿಂದ ನಡೆದುಕೊಳ್ಳಬೇಕು.
* ಎಲ್ಲಾ ಸಭೆಯ ವಿಶ್ವಾಸಿಗಳು ತಮ್ಮ ಉದ್ಯೋಗ ಸ್ಥಳಗಳಲ್ಲಿ ರಾಜ್ಯವನ್ನು ಪ್ರತಿನಿಧಿಸುವವರಾಗಿ ಉತ್ತಮ ಕೆಲಸ, ಪ್ರಾಮಾಣಿಕತೆ ಮತ್ತು ಅದ್ವಿತೀಯ ಗುಣಗಳನ್ನು ಮರೆಯಬೇಕು.

(ಈ) ದೈಹಿಕ ಮಾರ್ಪಾಟು

* ನಗರದ ಎಲ್ಲೆಡೆಯೂ ಸಭೆಯ ವಿಶ್ವಾಸಿಗಳು ನಗರಾಭಿವೃದ್ಧಿ ಅಧಿಕಾರಿಗಳ ಜೊತೆ ಸೇರಿ ಅನೇಕ ಕ್ಷೇತ್ರಗಳಲ್ಲಿ ಸಾಧನೆಗೈಯಬಹುದು.
* ಕೊಳಚೆ ನಿವಾಸಿಗಳಿಗೆ ವಸತಿ ಸೌಕರ್ಯ ಕಲ್ಪಿಸಿ ಕೊಳಚೆ ನಿರ್ಮೂಲನಕ್ಕೆ ಸಹಕರಿಸಬೇಕು.
* ನಮ್ಮ ನಗರದ ಆರೋಗ್ಯ ಮತ್ತು ಮಾಲಿನ್ಯದ ಕಡೆಗೆ ಗಮನ ಹರಿಸಿ ನೆರವು ನೀಡಬೇಕು.
* ನೀರು, ಸಾರಿಗೆ ಮತ್ತು ಸಂಪರ್ಕ ವ್ಯವಸ್ಥೆಯ ಅಭಿವೃದ್ಧಿಗೆ ಸಹಕರಿಸತಕ್ಕದ್ದು.
* ಹೆಚ್ಚು ಉದ್ಯೋಗ ಸೃಷ್ಟಿ ಮತ್ತು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಬೆಂಬಲ ನೀಡಬೇಕು.

## ಹಿಂಸೆಗೆ ಐಕ್ಯತೆಯಿಂದ ಪ್ರತಿಕ್ರಿಯೆ ನೀಡುವುದು

ಕ್ರಿಸ್ತನ ಸಭೆಯೆಂಬ ದೇಹಕ್ಕೆ ಹಿಂಸೆಗಳು ಎದುರಾದಾಗ ನಗರ ಪ್ರದೇಶ ಸಭೆಯೆಂಬ ದೇಹಕ್ಕೆ ಹಿಂಸೆಯು ಪ್ರಚೋದಿಸಲ್ಪಡುವ ಪ್ರದೇಶಗಳಲ್ಲಿ ಕ್ರೈಸ್ತ ನಾಯಕರು ಮತ್ತು ಕ್ರೈಸ್ತ ಸಂಸ್ಥೆಗಳು ಐಕ್ಯತೆಯಿಂದ ಸೇರಿಬಂದು ಸಹಾಯ ಮಾಡಬೇಕೆನ್ನುವುದು ಆಜ್ಞೆಯಾಗಿದೆ.

## ಐಕ್ಯತೆ ಮತ್ತು ನಿಷ್ಠಾವಂತಿಕೆಯ ಒಡಂಬಡಿಕೆ.

ಈ ನಗರದಲ್ಲಿ ಕ್ರಿಸ್ತನ ದೇಹಕ್ಕೆ ಅಂದರೆ ಸಭೆಗೆ ಸೇವೆ ಸಲ್ಲಿಸುತ್ತಿರುವ ನಾವು ದೇವರ ರಾಜದ ಜೊತೆ ಕೆಲಸದವರಾಗಿ ಪರಸ್ಪರರೊಂದಿಗೆ ಈ ಐಕ್ಯತೆ ಮತ್ತು ನಿಷ್ಠಾವಂತಿಕೆಯ ಒಡಂಬಡಿಕೆಯನ್ನು ಮಾಡಿಕೊಳ್ಳುತ್ತೇವೆ. ನಮ್ಮ ಸಂಬಂಧಗಳಲ್ಲಿ ನೀತಿ, ಶಾಂತಿ ಮತ್ತು ಸಂತೋಷಗಳನ್ನು ಮಾತ್ರವೇ ಬಯಸುತ್ತಾ ಪವಿತ್ರಾತ್ಮನಲ್ಲಿ ಐಕ್ಯದಿಂದ ಮುಂದುವರಿಯುತ್ತೇವೆಂದು ಒಡಂಬಡಿಕೆ ಮಾಡಿಕೊಳ್ಳುತ್ತೇವೆ. ಪರಸ್ಪರರ ಕುಟುಂಬ ಮತ್ತು ಸೇವೆಗಳನ್ನು ಸಂದರ್ಶಿಸುತ್ತಾ, ಒಬ್ಬರ ಜೊತೆಗೊಬ್ಬರು ನಿಜ ಕ್ರಿಸ್ತೀಯ ಅನ್ಯೋನ್ಯತೆಯಲ್ಲಿ ಸಮಯ ಕಳೆಯುತ್ತಾ ಇರುವೆವೆಂದು ಒಡಂಬಡಿಕೆ ಮಾಡಿಕೊಳ್ಳುತ್ತೇವೆ. ನಮ್ಮ ಸ್ನೇಹವು, ನಮ್ಮ ಸೇವಾ ಕ್ಷೇತ್ರಗಳಂದಾಚೆಗೆ ವೈಯಕ್ತಿಕ, ಕುಟುಂಬ ಮತ್ತು ಮಕ್ಕಳವರೆಗೂ ಚಾಚಿಕೊಳ್ಳುತ್ತದೆ.

ನಾವು ಪರಸ್ಪರರಿಗಾಗಿ ಮತ್ತು ಒಬ್ಬರೊಡನೊಬ್ಬರು ಕೂಡಿ ಪ್ರಾರ್ಥಿಸುತ್ತೇವೆಂದು ಒಡಂಬಡಿಕೆ ಮಾಡಿಕೊಳ್ಳುತ್ತೇವೆ. ಸಂಕಷ್ಟದಲ್ಲಿ ಒಬ್ಬರೊಡನೊಬ್ಬರು ನಿಲ್ಲುತ್ತೇವೆ ಮತ್ತು ಜಯದಲ್ಲಿ ಜೊತೆಯಾಗಿ ಸಂತೋಷಿಸುತ್ತೇವೆ. ನಾವು ಪರಸ್ಪರರಿಂದ ಸಮಾಲೋಚನೆ ತೆಗೆದುಕೊಳ್ಳುತ್ತೇವೆ, ಪರಸ್ಪರರಿಂದ ಬಲಹೊಂದುತ್ತೇವೆ ಮತ್ತು ಪರಸ್ಪರರ ಅನುಭವದಿಂದ ಕಲಿತುಕೊಳ್ಳುತ್ತೇವೆ. ನಾವು ಪರಸ್ಪರರ ಅನ್ಯೋನ್ಯತೆಯ ಮತ್ತು ವಿಭಿನ್ನತೆಯ ಕರೆ ಹಾಗೂ ವರಗಳನ್ನು ಗೌರವಿಸುತ್ತೇವೆ. ನಾವು ಪರಸ್ಪರರನ್ನು, ದೇವರು ನಮಗೆ ಕೊಟ್ಟಿರುವ ವರಗಳು, ಅಭಿಷೇಕ ಮತ್ತು ಸೇವೆ, ಇವುಗಳಿಂದ ಸೇವಿಸುತ್ತೇವೆ. ನಾವು ಪರಸ್ಪರರ ಸೇವೆಯಲ್ಲಿ ಹಣವನ್ನು ತೊಡಗಿಸುತ್ತೇವೆ ಮತ್ತು ನಮ್ಮ ಪ್ರೋತ್ಸಾಹ ಮತ್ತು ಸಹಾಯವನ್ನು ನೀಡುತ್ತೇವೆ. ನಾವು ಸಹಭಾಗಿತ್ವದಲ್ಲಿ ಪರಸ್ಪರರ ಒಳಿತಿಗಾಗಿ ತ್ಯಾಗ ಮಾಡುತ್ತೇವೆ. ಜನರು ಹಗೆ ಮಾಡಿದಾಗ, ಸಹ ಸೇವಕರನ್ನು ದೂಷಿಸಿ, ಹಿಂಸಿಸಿದಾಗ ನಾವು ಅವರ ಪರವಾಗಿ ನಿಂತು ಅವರಿಗುಂಟಾದ ಬಾಧೆಗಳಲ್ಲಿ ಪಾಲುಗಾರರಾಗುತ್ತೇವೆ.

ನಾವು ಒಟ್ಟಾಗಿ ನಮ್ಮ ನಗರಕ್ಕಾಗಿ ದೇವರನ್ನು ಆರಾಧಿಸಿ, ಬಯಸುತ್ತೇವೆ. ನಮ್ಮ ನಗರವು ಯೇಸು ಕ್ರಿಸ್ತನೇ ನಿಜವಾದ ಒಡೆಯನೆಂದು ತಿಳಿದು ನಂಬುವಂತೆ, ಆತನ ರಾಜ್ಯವು ನೆಲೆಸಿ ಆತನ ಚಿತ್ತವು ನೆರವೇರುವಂತೆ ನಾವು ಜೊತೆಯಾಗಿ ಕೆಲಸ ಮಾಡುತ್ತೇವೆ.

## ವೈಯಕ್ತಿಕ ಅನ್ವಯಿಸುವಿಕೆ

ಪ್ರಶ್ನೆ 1. ನಿಮ್ಮ ಕ್ಷೇತ್ರದ ಅಥವಾ ವಲಯದಲ್ಲಿರುವ ನಗರ ಪ್ರದೇಶದ ಸಭೆಯನ್ನು ಪ್ರೋತ್ಸಾಹಿಸುವಲ್ಲಿ ನೀವು ಹೇಗೆ ಭಾಗವಹಿಸುತ್ತಿರುವಿರಿ ಅಥವಾ ಎಂತಹ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೀರಿ?

ಪ್ರಶ್ನೆ 2. ಈ ಅಧ್ಯಾಯದಲ್ಲಿ ಹೇಳಿರುವುದಕ್ಕಿಂತ ಭಿನ್ನವಾಗಿ ನಗರ ಪ್ರದೇಶ ಸಭೆಯು ಕೈಗೊಳ್ಳಬಹುದಾದ ಬೇರೆ ಯಾವುದೇ ಉತ್ತಮ ಯೋಜನೆಗಳು ನಿಮಗಿದೆಯೇ (ಅ) ಐಕ್ಯತೆ ಮತ್ತು ಅನ್ಯೋನ್ಯತೆಯನ್ನು ಬೆಳೆಸಲು (ಆ) ನಗರದ ನಿಮ್ಮ ಪ್ರದೇಶದಲ್ಲಿ ದೇವರ ರಾಜ್ಯವು ಸ್ಥಾಪಿಸಲ್ಪಡುವಂತೆ ಒಟ್ಟಾಗಿ ಕೆಲಸ ಮಾಡುವುದು.

ನಗರ ಪ್ರದೇಶ ಸಭೆಗಾಗಿ ಒಟ್ಟಾಗಿ ಕೆಲಸ ಮಾಡುವುದರ ಕುರಿತು ಹೆಚ್ಚಿನ ಅಧ್ಯಯನಕ್ಕಾಗಿ ಎಪಿಸಿ ಪ್ರಕಾಶನ ಸಂಸ್ಥೆಯವರ "ನಗರ ವ್ಯಾಪ್ತಿ ಸಭೆಯಲ್ಲಿ ದೈವಿಕ ಕ್ರಮಗಳು" ಪುಸ್ತಕವನ್ನು ಓದಿರಿ.

# ಅಧ್ಯಾಯ ೯

# ಸಹೋದರರು ಮತ್ತು ತಂದೆಯರು

ಬೆಳಕಿನಲ್ಲಿದ್ದೇನೆಂದು ಹೇಳಿಕೊಂಡು ತನ್ನ ಸಹೋದರನನ್ನು ದ್ವೇಷಿಸುವವನು ಈವರೆಗೂ ಕತ್ತಲೆಯಲ್ಲಿದ್ದಾನೆ. ತನ್ನ ಸಹೋದರನನ್ನು ಪ್ರೀತಿಸುವವನು ಬೆಳಕಿನಲ್ಲಿ ನೆಲೆಗೊಂಡಿದ್ದಾನೆ ಮತ್ತು ಅವನಲ್ಲಿ ವಿಘ್ನಕರವಾದದ್ದು ಏನು ಇಲ್ಲ. ತನ್ನ ಸಹೋದರನನ್ನು ದ್ವೇಷಿಸುವವನು ಕತ್ತಲೆಯಲ್ಲಿದ್ದಾನೆ ಕತ್ತಲೆಯಲ್ಲಿ ನಡೆದುಕೊಳ್ಳುತ್ತಾನೆ. ಕತ್ತಲೆಯು ಅವನ ಕಣ್ಣುಗಳನ್ನು ಕಾಣದ ಹಾಗೆ ಮಾಡಿದ್ದರಿಂದ ತಾನು ಎಲ್ಲಿಗೆ ಹೋಗುತ್ತಾನೋ ಅವನಿಗೆ ತಿಳಿಯದು. (1 ಯೋಹಾನನು 2:9–11)



# 9

# ಸಹೋದರರು ಮತ್ತು ತಂದೆಯರು (ಸಹೋದರಿಯರು ಮತ್ತು ತಾಯಂದಿರು)

ನಮ್ಮ ಜೀವನದ ಪ್ರಯಾಣದಲ್ಲಿ, ಒಂಟಿಯಾಗಿ ಪ್ರಯಾಣ ಮಾಡಬೇಕೆಂಬುದಾಗಿ ದೇವರು ಉದ್ದೇಶಿಸಲಿಲ್ಲ, ಆತನು ಪರಸ್ಪರ ಒಬ್ಬರನೊಬ್ಬರನ್ನು ಕೊಟ್ಟಿದ್ದಾನೆ. ನಾವೆಲ್ಲರೂ ಆತನ ಅಂಗದ ಭಾಗಗಳಾಗಿದ್ದೇವೆ. ಹಾಗೆಯೇ ಜೀವಿತವು ಸಹ ಒಂಟಿತನದ ಸಮಯಗಳನ್ನು ಹೊಂದಿರಬಹುದು ಅಥವಾ ಉದ್ದೇಶಪೂರ್ವಕವಾಗಿ ಒಂಟಿಯಾಗಿರಬಹುದು, ಆದರೂ ನಮ್ಮ ಪಕ್ಕದಲ್ಲಿ ಸಹೋದರರು ಇನ್ನೂ ಇರುವುದು ಅಗತ್ಯವಿದೆ. ದೇವರ ಸೇವಕರುಗಳಾಗಿ, ಸಹೋದರ ರಾಗಿರುವುದರ ಅರ್ಥವೇನು ಎಂಬುದು ನಮಗೆ ನಿಜವಾಗಿ ತಿಳಿದಿದೆಯಾ? ತಂದೆಯರು ಎಲ್ಲಿ ಯಥಾರ್ಥವಾದ ತಂದೆಯ ಹೃದಯ ಹೊಂದಿರುವ, ಕಿರಿಯರನ್ನು ಗಮನಿಸುವ ದೈವಿಕ ಮನುಷ್ಯರು ಎಲ್ಲಿದ್ದಾರೆ?

ದೇವರ ರಾಜ್ಯದಲ್ಲಿ ಒಬ್ಬರಿಗೊಬ್ಬರು ನಿಜವಾದ ಕ್ರಿಸ್ತೀಯ ಸಹೋದರ ಮತ್ತು ತಂದೆಯಂದಿರಾಗಿರುವುದನ್ನು ಮರೆತು, ನಮ್ಮಲ್ಲಿ ಅನೇಕರು, ಸಂದೇಶಕರು ಮತ್ತು ದೇವ ಸೇವಕರುಗಳಾಗಿರುವುದರಲ್ಲಿ ಬಿಡುವಿಲ್ಲದವರಾಗಿದ್ದೇವೆ. ಸಹೋದರರು ಮತ್ತು ತಂದೆಯರು ಎಂಬ ಪದವನ್ನು ಒಟ್ಟಿಗೆ ಸೇರಿದ ರೀತಿಯಲ್ಲಿ ನಾವು ಬಳಸುತ್ತೇವೆ ಮತ್ತು ದೇವರ ರಾಜ್ಯದಲ್ಲಿ ಸಹೋದರಿಯರು/ತಾಯಂದಿರನ್ನು ಸೂಚಿಸುತ್ತೇವೆ.

## ಸಹೋದರ, ಜೊತೆ ಕೆಲಸದವ ಮತ್ತು ದೇವರ ಸೇವಕ

**1 ಥೆಸಲೋನಿಕದವರಿಗೆ 3:2**

**ನಿಮ್ಮ ಮೇಲೆ ಬಂದಿರುವ ಸಂಕಟಗಳಲ್ಲಿ ಒಬ್ಬರೂ ಚಂಚಲರಾಗದಂತೆ ನಿಮ್ಮನ್ನು ದೃಢಪಡಿಸುವದಕ್ಕೂ ನಮ್ಮ ಸಹೋದರನು ಕ್ರಿಸ್ತನ ಸುವಾರ್ತೆಯ ಉದ್ಯೋಗದಲ್ಲಿ ದೇವರ ಸೇವಕನೂ ಆಗಿರುವ ತಿಮೊಥೆಯನನ್ನು ನಿಮ್ಮ ಬಳಿಗೆ ಕಳುಹಿಸಿದೆವು.**

ಅಪೊಸ್ತಲನಾದ ಪೌಲನು, ತಿಮೊಥೆಯನಿಗೆ ನಂಬಿಕೆಯಲ್ಲಿ "ತಂದೆಯ ಸ್ಥಾನದಲ್ಲಿದ್ದನು." ತಿಮೊಥೆಯನು ಬೆಳೆದನು ಮತ್ತು ದೇವರ ಮನುಷ್ಯನಾಗಿ

ಪಕ್ಷಗೊಂಡನು ಅಪೊಸ್ತಲನಾದ ಪೌಲನು ಅವನನ್ನು ಸಹೋದರ, ದೇವರ ಸೇವಕ ಮತ್ತು ಜೊತೆ ಕೆಲಸದವ ಎಂಬುದಾಗಿ ಸೂಚಿಸಿದ್ದಾನೆ. ಪೌಲನು ತನ್ನ ಪತ್ರಿಕೆಗಳಲ್ಲಿ, ಇತರ ಅನೇಕ ದೇವ ಸೇವಕರುಗಳನ್ನು ಸಹೋದರರೆಂಬುದಾಗಿ ಸೂಚಿಸಿದ್ದಾನೆ.

ಇಂದಿನ ಕ್ರೈಸ್ತ ಸೇವೆಯಲ್ಲಿ, ಸಾಮಾನ್ಯವಾಗಿ ನಾಯಕರುಗಳ ಮಧ್ಯದಲ್ಲಿ, ಮತ್ತೊಬ್ಬ ದೇವರ ಸೇವಕರಿಗೆ ಜೊತೆಕೆಲಸದ ಸಹೋದರರಾಗಿರುವಂತಹ ಪ್ರಜ್ಞೆ ಕಳೆದುಹೋದಂತಿದೆ. ಅನೇಕವೇಳೆ, ನಮ್ಮ ಪರಸ್ಪರ ಸಂಭಾಷಣೆಯಲ್ಲಿ, ಸಂಬಂಧಗಳಲ್ಲಿ ಒಳಪಡುವುದರ ಬದಲು ವ್ಯಾಪಾರ ಮತ್ತು ವ್ಯವಹಾರಗಳಲ್ಲಿ ಒಳಪಡುತ್ತೇವೆ. ನಾವು ವಿಚಾರಗಳು ಮತ್ತು ಮಾಹಿತಿಗಳನ್ನು ಹಂಚಿಕೊಳ್ಳುತ್ತೇವೆ ಆದರೆ ನಮ್ಮ ಹೃದಯದಲ್ಲಿಯಲ್ಲ. ನಮ್ಮ ಸ್ನೇಹ ಬರೀ ಅನೇಕ ವೇಳೆ ಬಾಹ್ಯರೂಪಕ್ಕೆ ಹುರುಳಿಲ್ಲದ ಹಂತದಲ್ಲಿರುತ್ತದೆ. ನಾವು ನಮ್ಮ ಬಲಹೀನತೆಗಳನ್ನು ಹಂಚಿಕೊಳ್ಳುವುದಿಲ್ಲ ಮತ್ತು ಜೊತೆ ಸೇವಕನು ಅದರ ಕುರಿತು ಎಲ್ಲಾ ಕಡೆಯಲ್ಲಿ ಹಬ್ಬಿಸುತ್ತಾನೆಂಬುದಾಗಿ ನೆನೆಸುತ್ತೇವೆ. ನಾವು ನಿಜವಾಗಿಯೂ ನಮ್ಮನ್ನು ತೋರಿಸಬಯಸುವುದಿಲ್ಲ. ಇದರ ನಿಮಿತ್ತ ಒಬ್ಬರಿಗೊಬ್ಬರು ಸಹಾಯಿಸಲು ಮತ್ತು ಬಲಪಡಿಸಲು ಅಸಾಧ್ಯಕರ.

ದೇವರ ಕಟ್ಟಡದಲ್ಲಿ ದೇವರ ಸೇವಕನಾಗಿರುವುದರಿಂದ, ಜೊತೆ ಸೇವಕನಾಗಿರುವುದರಿಂದ, ದೇವರ ರಾಜ್ಯದಲ್ಲಿ ಸಹೋದರನಾಗಿರುವ ಹಂತಕ್ಕೆ ಬರಬೇಕು.

## ಪ್ರತಿಕೂಲಕ್ಕಾಗಿ ಜನಿಸಿರುವುದಿಲ್ಲ

**ಜ್ಞಾನೋಕ್ತಿಗಳು** 17:17

**ಮಿತ್ರನ ಪ್ರೀತಿಯು ನಿರಂತರ ಸಹೋದರನ ಜನ್ಮವು ಆಪತ್ತಿನಲ್ಲಿ ಸ್ವಾರ್ಥಕ**.

ನಾಯಕರುಗಳಾಗಿ ನಾವು ಒಂಟಿಯಾಗಿ ಎಷ್ಟೋ ಸಮಯಗಳಲ್ಲಿ ಹೋರಾಟ ಮಾಡುತ್ತೇವೆ. ನಾವು ನೂರಾರು ಅಥವಾ ಸಾವಿರಾರು ಜನರಿಗೆ ಸೇವೆ ಸಲ್ಲಿಸುತ್ತೇವೆ. ಆದರೆ ನಮ್ಮ ನೋವಿನ ಸಮಯದಲ್ಲಿ ನಾವು ಒಂಟಿಯಾಗಿ ಇರುತ್ತೇವೆ. ಇದು ಯಾಕೆಂದರೆ ನಮಗೆ ಆಪ್ತ ಸ್ನೇಹಿತರು ಇಲ್ಲ ಮತ್ತು ನಮ್ಮ ಆಪತ್ತಿನ ಸಮಯದಲ್ಲಿ ನಮ್ಮ ಜೊತೆ ನಿಂತುಕೊಳ್ಳುವಂತಹ ಆಪ್ತ ಸ್ನೇಹಿತರು ನಮಗಿಲ್ಲ. ನಮ್ಮ ಬಿಡುವಿಲ್ಲದ ಸೇವೆಯಲ್ಲಿ, ಮತ್ತೊಬ್ಬ ದೇವರ ಸೇವಕರೊಂದಿಗೆ ಸ್ನೇಹ ಬೆಳೆಸಿಕೊಳ್ಳುವುದರಲ್ಲಿ ನಾವು ಸೋಲುತ್ತೇವೆ. ಅದೇ

ರೀತಿಯಾಗಿ ಇನ್ನೊಬ್ಬ ದೇವರ ಸೇವಕರಿಗೆ ನಾವು ಸಹೋದರನಾಗಿರುವುದನ್ನು ಕಲಿಯಬೇಕು. ಸರಿಯಿಲ್ಲದ್ದನ್ನು ತಿದ್ದುವ, ಸತ್ಯವನ್ನು ಪ್ರೀತಿಯಿಂದ ಮಾತಾಡುವ, ಭಯಪಡದ, ಇತರರಿಗೆ ಉತ್ತಮವಾದುವನ್ನು ಹುಡುಕುವಂತಹ ನಮ್ಮ ಸ್ನೇಹದಲ್ಲಿ ಯಥಾರ್ಥವಾಗಿರುವಂತಹ ಇತರ ದೇವರ ಸೇವಕರುಗಳಿಗೆ ನಾವು ಸಹೋದರನಾಗಿರುವುದನ್ನು ಕಲಿಯಬೇಕು. ಖಾಸಗೀ ಗೌಪ್ಯವಾಗಿ ಹಂಚಿಕೊಂಡ ವಿಷಯಗಳನ್ನು ಇತರರ ಜೊತೆ ಹಂಚಿಕೊಳ್ಳದೆ, ಹೃದಯದ ಸಂಗತಿಗಳನ್ನು ಅರಿತ ನಂಬಿಗಸ್ತ ಸಹೋದರರಾಗಿರಬೇಕು.

## ವೈಯಕ್ತಿಕ ಸವಾಲುಗಳು

ಮತ್ತೊಬ್ಬ ದೇವರ ಸೇವಕರ ನಿಜವಾದ ಸಹೋದರ ನಾನಾಗಬೇಕಾದರೆ ಅವರು ಸತ್ಯವಾಗಿ ಏನಾಗಿದ್ದಾರೆಂಬುದನ್ನು ಅರಿಯಲು ಅವರ ಜೊತೆ ನಾನು ಹೆಚ್ಚಾದ ಸಮಯ ಕಳೆಯಬೇಕು. ತನ್ನ ಹೆಂಡತಿ ಮತ್ತು ಮಕ್ಕಳನ್ನು ಯಾವ ರೀತಿ ಸತ್ಕರಿಸುತ್ತಾನೆ, ಎಂಬುದನ್ನು ಗಮನಿಸಲು, ಅವನ ಕುಟುಂಬದೊಡನೆ ಸಮಯ ಕಳೆಯಬೇಕು. ಅವನ ಸಹೋದ್ಯೋಗಿಗಳೊಂದಿಗೆ ಯಾವ ರೀತಿ ವರ್ತಿಸುತ್ತಾನೆಂಬುದನ್ನು ತಿಳಿಯಲು, ಅವನ ಸಭೆ, ಸೇವಾ ಕಛೇರಿ ಅವನ ಉದ್ಯೋಗಿಗಳೊಂದಿಗೆ ಸಮಯ ಕಳೆಯಬೇಕು. ನಾನು ಸಹ ಅವನನ್ನು ನನ್ನ ಮನೆ, ಸಭೆ ಮತ್ತು ಸೇವಾ ಕಛೇರಿಗೆ ಆಹ್ವಾನಿಸಬೇಕು. ನಾವು ದೇವರನ್ನು ಒಟ್ಟಾಗಿ ಹುಡುಕುವಂತಹ, ಪ್ರಾರ್ಥಿಸುವಂತಹ, ಆರಾಧಿಸುವಂತಹ ಸ್ಥಳದಲ್ಲಿ ನಾವು ಸಮಯ ಕಳೆಯಬೇಕು. ನಾನು, ಅವನ ತಲೆಯ ಮೇಲೆ ಕೈಯಿಟ್ಟು ಅವನಿಗಾಗಿ ಪ್ರಾರ್ಥಿಸಬೇಕು. ಅವನು ಸಹ ನನ್ನ ತಲೆಯ ಮೇಲೆ ಕೈಯಿಟ್ಟು ಪ್ರಾರ್ಥಿಸಲು ಅವಕಾಶ ನಾನು ಕೊಡಬೇಕು. ಅವನ ತೊಂದರೆಯ ಸಮಯದಲ್ಲಿ ಅವನೊಂದಿಗೆ ನಿಂತುಕೊಳ್ಳಬೇಕು ಮತ್ತು ಅವನ ಜೊತೆಗಿರಬೇಕು. ಅವನಿಗೆ ಸಲಹೆಗಳು ಬೇಕಾದಾಗ ನಾನು ಅವನಿಗೆ ದೊರೆಯುವವನಾಗಿರಬೇಕು. ಅದೇ ರೀತಿಯಾಗಿ, ನಾನು ಸಹ ಅವನ ಬಳಿಗೆ ಸಲಹೆಗಳನ್ನು ಹೊಂದಲು ಹೋಗಬೇಕು. ಅವನ ವರಗಳು, ಅಭಿಷೇಕ ಮತ್ತು ಸೇವೆಯನ್ನು ನಾನು ಪಡೆಯಬೇಕು. ಅದೇ ರೀತಿಯಲ್ಲಿ ದೇವರು ನನ್ನಲ್ಲಿ ಇಟ್ಟಂತಹ ವರ, ಸೇವೆ, ಮತ್ತು ಅಭಿಷೇಕವನ್ನು ಅವನು ಪಡೆಯಬೇಕು. ದೇವರಲ್ಲಿ ಅವನು ಎನಾಗಿದ್ದಾನೆಂಬುದನ್ನು, ನಾನು ಗೌರವಿಸಬೇಕು ಅದೇ ರೀತಿ ಅವನು ಸಹ ನಾನು ದೇವರಲ್ಲಿ ಏನಾಗಿದ್ದೇನೆಂಬುದನ್ನು ಗೌರವಿಸಬೇಕು. ಸ್ನೇಹಿತರಂತೆ ಒಬ್ಬರಿಗೊಬ್ಬರು ಪಾಲುಗಾರರಾಗಿರಬೇಕು. ಅವನ ವೈಯಕ್ತಿಕ ಏಳಿಗೆ ಮತ್ತು ಅವನ ಕುಟುಂಬಕ್ಕೆ. ನಾನು ತ್ಯಾಗ ಮಾಡಿ ಕೊಡಬೇಕು. ಅವನನ್ನು ಜನರು

ದ್ವೇಷಿಸುವಾಗ, ನಿಂದಿಸುವಾಗ, ಅವುಗಳನ್ನು ಎದುರಿಸಿ, ಅವನ ಸ್ನೇಹಿತನಾಗಿ ನಾನು ನಿಲ್ಲಬೇಕು. ನಾವು ಈ ರೀತಿಯ ಸ್ನೇಹಿತರು ಮತ್ತು ಇಂತಹ ದೇವರ ರಾಜ್ಯದಲ್ಲಿನ ಸಹೋದರರು ಆಗಿರಬೇಕು.

## ಸಹೋದರನೊಬ್ಬನು ಎಡವಿದಾಗ

**ಗಲಾತ್ಯದವರಿಗೆ 6:1**

**ಸಹೋದರರೇ, ನಿಮ್ಮಲ್ಲಿ ಯಾರಾದರೂ ಯಾವುದೋ ಒಂದು ದೋಷದಲ್ಲಿ ಸಿಕ್ಕಿದರೆ ಅಂಥವನನ್ನು ಆತ್ಮನಿಂದ ನಡಿಸಿಕೊಳ್ಳುವ ನೀವು ಶಾಂತಭಾವದಿಂದ ತಿದ್ದಿ ಸರಿಮಾಡಿರಿ ನೀನಾದರೂ ದುಷ್ಪ್ರೇರಣೆಗೆ ಒಳಗಾಗದಂತೆ ನಿನ್ನ ವಿಷಯದಲ್ಲಿ ಎಚ್ಚರಿಕೆಯಾಗಿರು.**

**ಮತ್ತಾಯ 7:3–5**

**ನೀನು ನಿನ್ನ ಕಣ್ಣಿನಲ್ಲಿರುವ ತೊಲೆಯನ್ನು ಯೋಚಿಸದೆ ನಿನ್ನ ಸಹೋದರನ ಕಣ್ಣಿನಲ್ಲಿರುವ ರವೆಯನ್ನು ಯೋಚಿಸುವುದೇಕೆ? ನೀನು ನಿನ್ನ ಸಹೋದರನಿಗೆ ನಿನ್ನ ಕಣ್ಣಿನೊಳಗಿಂದ ರವೆಯನ್ನು ತೆಗೆಯುತ್ತೇನೆ ಬಾ ಎಂದು ಹೇಳುವದು ಹೇಗೆ? ನಿನ್ನ ಕಣ್ಣಿನಲ್ಲಿ ತೊಲೆಯದೆಯಲ್ಲಾ ಕಪಟಿಯೇ, ಮೊದಲು ನಿನ್ನ ಕಣ್ಣಿನೊಳಗಿಂದ ತೊಲೆಯನ್ನು ತೆಗೆದು ಹಾಕಿಕೋ, ಆಮೇಲೆ ನಿನ್ನ ಸಹೋದರನ ಕಣ್ಣಿನೊಳಗಿಂದ ರವೆಯನ್ನು ತೆಗೆಯುವುದಕ್ಕೆ ಚೆನ್ನಾಗಿ ಕಾಣಿಸುವುದು.**

ಜೊತೆ ಸೇವಕರು ತಪ್ಪು ಮಾಡಿದಾಗ, ಪಾಪಮಾಡಿದಾಗ, ಅಡ್ಡಿಯಾದಾಗ, ಮತ್ತೊಬ್ಬ ನಾಯಕನು, ಮೊದಲು, ಹಿಯಾಳುಸುತ್ತಾನೆ. ದೋಷಾರೋಪಣೆ ಮಾಡುತ್ತಾನೆ ಮತ್ತು ಅದನ್ನು ಸಾರ್ವಜನಿಕರಿಗೆ ಹಬ್ಬಿಸುತ್ತಾನೆ. ನಮ್ಮ ಕಣ್ಣಿನಲ್ಲಿರುವ ತೊಲೆಯನ್ನು ಗುರ್ತಿಸದೆ ಸಹೋದರನ ಕಣ್ಣಿನಲ್ಲಿರುವ ರವೆಯನ್ನು ನಾವು ಬೇಗನೆ ಗುರ್ತಿಸುತ್ತೇವೆ.

ನಾವು ಸಹ ಅಂತಹ ಕ್ಷೇತ್ರಗಳಲ್ಲಿ ಬಿದ್ದುಹೋಗುತ್ತೆವೆ ಎಂಬುದನ್ನು ಅರಿತವರಾಗಿ ಮತ್ತು ನಾವೂ ಸಹ ಅಡ್ಡಿಯಾಗುತ್ತೇವೆ ಎಂಬುದನ್ನು ಅರಿತು, ವೃದುವಾಗಿ ಒಳ್ಳೆಯತನದೊಡನೆ ಪುನಃ ಸ್ಥಾಪನೆ ತರುವ ಯಥಾರ್ಥವಾಗಿ ಮೊದಲು ಪ್ರಯತ್ನಿಸುವುದು ಉತ್ತಮಕರವಾದುದಲ್ಲವೆ. ಇದು ಸತ್ಯವಾದ ಸಹೋದರನು ಮಾಡುವುದಾಗಿದೆ.

## ಬೆಳಕು ಮತ್ತು ಹಗೆತನ ಬೆರಸಬೇಡಿರಿ

**1 ಯೋಹಾನನು 2:9–11**

**ಬೆಳಕಿನಲ್ಲಿದ್ದೇನೆಂದು ಹೇಳಿಕೊಂಡು ತನ್ನ ಸಹೋದರನನ್ನು ದ್ವೇಷಿಸುವವನು ಈವರೆಗೂ ಕತ್ತಲೆಯಲ್ಲಿದ್ದಾನೆ. ತನ್ನ ಸಹೋದರನನ್ನು ಪ್ರೀತಿಸುವವನು ಬೆಳಕಿನಲ್ಲಿ ನೆಲೆಗೊಂಡಿದ್ದಾನೆ**

**ಮತ್ತು ಅವನಲ್ಲಿ ವಿಘ್ನಕರವಾದದ್ದು ಏನು ಇಲ್ಲ. ತನ್ನ ಸಹೋದರನನ್ನು ದ್ವೇಷಿಸುವವನು ಕತ್ತಲೆಯಲ್ಲಿದ್ದಾನೆ ಕತ್ತಲೆಯಲ್ಲಿ ನಡೆದುಕೊಳ್ಳುತ್ತಾನೆ. ಕತ್ತಲೆಯು ಅವನ ಕಣ್ಣುಗಳನ್ನು ಕಾಣದ ಹಾಗೆ ಮಾಡಿದ್ದರಿಂದ ತಾನು ಎಲ್ಲಿಗೆ ಹೋಗುತ್ತಾನೋ ಅವನಿಗೆ ತಿಳಿಯದು.**

ದೇವರ ಸೇವಕರಾಗಿ ನಾವು ಬಹಳ ಆತ್ಮಿಕ ಜನರಾಗಿದ್ದೆವೆ. ದೇವರವಾಕ್ಯ ಧ್ಯಾನಿಸುವುದು, ಉಪವಾಸ, ಆರಾಧನೆ ಮತ್ತು ಪ್ರಾರ್ಥನೆಗಳಲ್ಲಿ ಅಧಿಕ ಸಮಯ ಕಳೆಯುತ್ತೇವೆ. ಹಾಗಿದ್ದರೂ, ಇಂತಹ ಮಹತ್ತಾದ ಆತ್ಮಿಕ ಶಿಸ್ತುಕ್ರಮಗಳನ್ನು ಮಾಡಿದ ನಂತರ, ದ್ವೇಷ, ಪ್ರತೀಕಾರ, ಅಹಿತ ಅನುಭವ, ಇನ್ನೊಬ್ಬ ಸೇವಕನ ಬಗ್ಗೆ ಕೆಟ್ಟದಾಗಿ ಮಾತನಾಡುವುದನ್ನು ಇನ್ನೂ ಮಾಡುತ್ತೇವೆ.

ಯಾವನಾದರೂ ಬೆಳಕಿನಲ್ಲಿ ನಡೆಯುತ್ತೇನೆಂದು ಹೇಳಿ, ತನ್ನ ಸಹೋದರನನ್ನು ದ್ವೇಷಿಸಿದರೆ ಅವನು ಇನ್ನು ಕತ್ತಲೆಯಲ್ಲಿ ನಡೆಯುವವನಾಗಿದ್ದಾನೆಂದು ಸತ್ಯವೇದ ಹೇಳುತ್ತದೆ. ಸಾಮಾನ್ಯವಾಗಿ, ನಾವು ಕುರುಡರಾಗಿದ್ದೇವೆ ಮತ್ತು ನಾವು ಕತ್ತಲೆಯಲ್ಲಿ ಇದ್ದೇವೆ ಎಂಬುದು ನಮಗೆ ಗೊತ್ತಿಲ್ಲ. ಇದು ಬಹಳ ಅಪಾಯಕಾರಿ ಸ್ಥಳ, ಯಾಕೆಂದರೆ, ನಾವು ಎಲ್ಲಿಗೆ ಹೋಗುತ್ತೇವೆಂಬುದೇ ಗೊತ್ತಿರುವುದಿಲ್ಲ.

ನನ್ನ ಹೃದಯದಲ್ಲಿ ದ್ವೇಷ ಹೊಂದಿರುವುದು ಒಂದು ಅಂಶ ಎಂಬುದಾಗಿ ಅರ್ಥವಲ್ಲ. ಯಾವುದೇ ನೋವು, ಯಾವುದೇ ಬಗೆಯ ಕಹಿಭಾವನೆ, ಹೊಟ್ಟೆಕಿಚ್ಚು ಮತ್ತೊಬ್ಬ ಸೇವಕನ ಬಗ್ಗೆ ಕ್ಷಮಾಪಣೆ ಇಲ್ಲದಿರುವುದನ್ನು ದೇವರು ಬೇಗನೆ ತೆಗೆದು ಹಾಕಲು ಅವಕಾಶ ನೀಡಬೇಕು. ನಮ್ಮ ಹೃದಯದಲ್ಲಿ ದ್ವೇಷ ಹೊಂದಿರಬಾರದು ಮತ್ತು ಬೆಳಕಿನಲ್ಲಿ ನಡೆಯುತ್ತೇನೆ ಅಂದುಕೊಳ್ಳಬಾರದು.

## ಹಳೆಯದನ್ನು ಹಿಂದಕ್ಕೆ ಬಿಟ್ಟು ಬಿಡುವುದು

**ಮತ್ತಾಯ 18:15**

**ಇದಲ್ಲದೆ ನಿನ್ನ ಸಹೋದರನು ತಪ್ಪು ಮಾಡಿದರೆ ನೀನು ಹೋಗಿ ನೀನು ಅವನೂ ಇಬ್ಬರೇ ಇರುವಾಗ ಅವನ ತಪ್ಪನ್ನು ಅವನಿಗೆ ತಿಳಿಸು. ಅವನು ನಿನ್ನ ಮಾತನ್ನು ಕೇಳಿದರೆ ನಿನ್ನ ಸಹೋದರನನ್ನು ಸಂಪಾದಿಸಿಕೊಂಡಿರುವಿ.**

**ಮತ್ತಾಯ 18:35**

**ನಿಮ್ಮಲ್ಲಿ ಪ್ರತಿಯೊಬ್ಬನು ತನ್ನ ಸಹೋದರನಿಗೆ ಮನಃ ಪೂರ್ವಕವಾಗಿ ಕ್ಷಮಿಸದೆ ಹೋದರೆ ಪರಲೋಕದಲ್ಲಿರುವ ನನ್ನ ತಂದೆಯೂ ನಿಮಗೆ ಹಾಗೆಯೇ ಮಾಡುವನು ಅಂದನು.**

ದೇವರ ಸೇವಕರ ಮಧ್ಯದಲ್ಲಿ ಭಿನ್ನಾಭಿಪ್ರಾಯಗಳು ಉಂಟಾಗಿ ಸಂಬಂಧಗಳು ಮುರಿದು ಹೋಗಿರುವ ಸಾಧ್ಯತೆಗಳಿರಬಹುದು. ಆದರೆ ನಮ್ಮ ಸಹೋದರನನ್ನು ತಿರುಗಿ ಪಡೆಯಲು ಮತ್ತು ಪುನಃ ಸ್ಥಾಪಿಸಿಕೊಳ್ಳಲು ಕಾರ್ಯ ಮಾಡಬೇಕು. ಹಳೆಯದನ್ನು ಬಿಡಬೇಕು, ಕ್ಷಮಾಪಣೆ ಪಡೆಯಬೇಕು ಮತ್ತು ಕೊಡಬೇಕು. ಗಾಯಗಳನ್ನು ಗುಣಪಡಿಸಬೇಕು ಮತ್ತು ದೇವರ ರಾಜ್ಯದಲ್ಲಿ ಸಹೋದರನಾಗಿ ಮುಂದುವರೆಯಬೇಕು. ನಮ್ಮ ತಪ್ಪುಗಳಿಗಾಗಿ ಆತನ ಕ್ಷಮಾಪಣೆಯನ್ನು ನಾವು ದೇವರಲ್ಲಿ ಕೇಳುತ್ತೇವೆ. ಆದರೆ ನಮ್ಮನ್ನು ನಾವೇ ದೇವರ ಬಲವಾದ ಶಿಸ್ತಿನ ವ್ಯವಹಾರದಲ್ಲಿ ನಮ್ಮನ್ನು ಗುರ್ತಿಸಿಕೊಂಡು, ನಮಗೆ ತಪ್ಪು ಮಾಡಿದ ಸಹೋದರನನ್ನು ಕ್ಷಮಿಸಿ ಬಿಡಲು ಅಪೇಕ್ಷಿಸುವುದಿಲ್ಲ.

## **ದೇವರ ರಾಜ್ಯದಲ್ಲಿ ತಂದೆಯರು ಮತ್ತು ತಾಯಂದಿರು ಏಳಬಹುದು**.

ಮತ್ತೊಬ್ಬ ದೇವರ ಸೇವಕರಿಗೆ, ಸಹೋದರರಾಗಿರುವುದರ ಜೊತೆಗೆ ಮುಂದಿನ ಪೀಳಿಗೆಗೆ, ತಂದೆಯರು ಮತ್ತು ತಾಯಂದಿರರಾಗಿರುವ ಪುರುಷ ಮತ್ತು ಸ್ತ್ರೀಯರನ್ನು ಹೊಂದಿಕೊಳ್ಳುವಂತದ್ದು ದೇವರ ರಾಜ್ಯವು ಅತ್ಯಾಶೆಯಿಂದ ಬಯಸುವುದು ಇದಕ್ಕೆ ಸೇರಲ್ಪಟ್ಟಿದೆ. ಶ್ರೇಷ್ಠ ಸಂದೇಶಕರು, ದೇವರ ಸೇವಕರು ಆಗಿರುವುದಕ್ಕಿಂತಲೂ ಇನ್ನೂ ಉನ್ನತಕ್ಕೆ ನಾವು ಹೋಗಬೇಕು ಮತ್ತು ಸತ್ಯವಾದ ದೇವರ ರಾಜ್ಯ ಕಟ್ಟುವವರಾಗಬೇಕು. ದೇವರ ರಾಜ್ಯ ಕಟ್ಟುವವರು, ದೇವರ ರಾಜ್ಯದ ಕಟ್ಟುವಿಕೆಯಲ್ಲಿ ಮುಂದುವರೆದು ಸ್ಥಾಪಿಸುವುದನ್ನು ಹುಡುಕಬೇಕು. ಅವನು ಪಡೆದಂತಹ ಎಲ್ಲವನ್ನು ಮುಂದಿನ ಪೀಳಿಗೆಯವರಿಗೆ ಉದಾರವಾಗಿ ಪಾಲುಕೊಡುವ, ಮುಂದುವರೆಸಲು ಕೊಡುವ ತಂದೆಯಾಗಿರುವುದನ್ನು ದೇವರ ರಾಜ್ಯ ಕಟ್ಟುವವರು ಹುಡುಕುವುದಾಗಿದೆ.


ಇದನ್ನು ನಾವು ಮುಂದಿನ ಮತ್ತು ಕೊನೆಯ ಅಧ್ಯಾಯದಲ್ಲಿ ಚರ್ಚಿಸುತ್ತೇವೆ.

## ವೈಯಕ್ತಿಕ ಅನ್ವಯ

ಪ್ರ. 1: ನನಗೆ ತಿಳಿದಿರುವ ಇತರ ದೇವ ಸೇವಕರಿಗೆ ನಾನು ಯಥಾರ್ಥವಾದ ಸಹೋದರನಾ? ದೇವರರಾಜ್ಯದಲ್ಲಿ ಯಥಾರ್ಥವಾಗಿ ಸಹೋದರ–ನಾಗಿರಲೂ, ಯಥಾರ್ಥ ಸ್ನೇಹ ಕಟ್ಟಿಕೊಳ್ಳುವಂತಹ ಒಂದು, ಎರಡು ಅಥವಾ ಹೆಚ್ಚಾದ ಜೊತೆ ಕೆಲಸಗಾರರನ್ನು ನಾನು ಗುರ್ತಿಸುತ್ತೇನೆ. ದೇವರ ರಾಜ್ಯದ ಕಟ್ಟಡದಲ್ಲಿ ದೇವರ ಸೇವಕರಾಗಿರುವಂತಹದು ಮತ್ತು ಜೊತೆ ಕೆಲಸದವರಾಗಿರುವುದರಿಂದ, ದೇವರ ರಾಜ್ಯದಲ್ಲಿ ಸಹೋದರರಾಗಿರುವುದು ಅವಶ್ಯಕವಾಗಿದೆ.

# ಅಧ್ಯಾಯ 10

# ದೇವರ ರಾಜ್ಯದ ಸೇವೆಗಾಗಿ ಮುಂದಿನ ಪೀಳಿಗೆಯವರನ್ನು ಎಬ್ಬಿಸುವುದು



ಆದರೆ ಕರ್ತನಾದ ಯೇಸುವಿನ ಚಿತ್ತವಾದರೆ ನಾನು ತಿಮೊಥೆಯನನ್ನು ಬೇಗನೆ ನಿಮ್ಮ ಬಳಿಗೆ ಕಳುಹಿಸಬೇಕೆಂದು ನಿರೀಕ್ಷಿಸುತ್ತೇನೆ. ಅವನ ಮುಖಾಂತರ ನಿಮ್ಮ ಸಂಗತಿಗಳನ್ನು ತಿಳಿದು ನಾನೂ ಧೈರ್ಯತಂದುಕೊಡೆನು. ಅವನ ಹಾಗೆ ನಿಮ್ಮ ಕಾರ್ಯಗಳನ್ನು ಕುರಿತು ಯಥಾರ್ಥವಾಗಿ ಚಿಂತಿಸುವವರು ನನ್ನ ಬಳಿಯಲ್ಲಿ ಬೇರೆ ಯಾರೂ ಇಲ್ಲ. ಎಲ್ಲರೂ ಸ್ವಕಾರ್ಯಗಳ ಮೇಲೆ ಮನಸ್ಸಿಡುತ್ತಾರೆಯೇ ಹೊರತು ಯೇಸುಕ್ರಿಸ್ತನ ಕಾರ್ಯಗಳ ಮೇಲೆ ಮನಸ್ಸಿಡುವುದಿಲ್ಲ. ತಿಮೊಥೆಯನ ಗುಣವನ್ನು ನೀವು ನೋಡಿ ತಿಳಿದುಕೊಂಡಿದ್ದೀರಿ: ಮಗನು ತಂದೆಗೆ ಹೇಗೋ ಹಾಗೆಯೇ ಅವನು ನನ್ನ ಜೊತೆಯಲ್ಲಿ ಸುವಾರ್ತಾ ಪ್ರಚಾರಕ್ಕಾಗಿ ಕಷ್ಟಪಟ್ಟು ಕೆಲಸನೆಡೆಸಿದನೆಂಬುದು ನಿಮಗೆ ಗೊತ್ತುಂಟು. (ಫಿಲಿಪ್ಪಿಯವರಿಗೆ 2:19–22)

# 10

# ದೇವರ ರಾಜ್ಯದ ಸೇವೆಗಾಗಿ ಮುಂದಿನ ಪೀಳಿಗೆಯವರನ್ನು ಎಬ್ಬಿಸುವುದು

ಸ್ವಾಭಾವಿಕವಾಗಿ ಮತ್ತು ಆತ್ಮಿಕವಾಗಿ ಹುಟ್ಟಿಸುವ ಸಾಮರ್ಥ್ಯವನ್ನು ದೇವರು ನಮಗೆ ಕೊಟ್ಟಿದ್ದಾನೆ.

1 ಕೊರಿಂಥದವರಿಗೆ 4:14,15

**[14]ನಿಮ್ಮನ್ನು ನಾಚಿಕೆಪಡಿಸುವದಕ್ಕಾಗಿ ಬರೆಯದೆ ನನ್ನ ಪ್ರಿಯ ಮಕ್ಕಳೆಂದು ಭಾವಿಸಿ ನಿಮಗೆ ಬುದ್ಧಿ ಹೇಳುವದಕ್ಕಾಗಿಯೇ ಈ ಮಾತುಗಳನ್ನು ಬರೆದಿದ್ದೇನೆ. [15]ನಿಮಗೆ ಕ್ರಿಸ್ತನಲ್ಲಿ ಉಪಾಧ್ಯಾಯರು ಸಾವಿರಾರು ಮಂದಿ ಇದ್ದರೂ ತಂದೆಗಳು ಬಹುಮಂದಿ ಇಲ್ಲ, ನಾನೇ ನಿಮ್ಮನ್ನು ಸುವಾರ್ತೆಯ ಮೂಲಕ ಕ್ರಿಸ್ತಯೇಸುವಿನಲ್ಲಿ ಪಡೆದೆನು.**

ಹಾಗಿದ್ದಾಗ್ಯೂ, ನಾವು ಪುನರುತ್ಪತ್ತಿಸುವಾಗ, ನಾವು ನಕಲಿ ಪ್ರತಿಗಳು (ಜೆರಾಕ್ಸ್ ಪ್ರತಿ) ಅಥವಾ ನಿಖರ ತದ್ರೂಪವನ್ನು ಉತ್ಪತ್ತಿಸುವುದಿಲ್ಲ. ನಾವು ಜನ್ಮ ಕೊಡುವಂತಹವುಗಳಿಗೆ ತಮ್ಮದೇ ಆದ ಸ್ವಂತ ವೈಯಕ್ತಿಕತೆ (ವ್ಯಕ್ತಿತ್ವ) ಮತ್ತು ಗುರುತು ಇರುತ್ತವೆ.

ನೀವು ನಿಮ್ಮ ಸೇವೆಗೆ ವಾರಸುದಾರರನ್ನೂ, ಉತ್ತರಾಧಿಕಾರಿಗಳನ್ನೂ ಎಬ್ಬಿಸದಿದ್ದರೆ, ನಿಮ್ಮ ಸೇವೆಯಲ್ಲಿನ ನಿಮ್ಮ ಯಶಸ್ಸು ಅಪರಿಪೂರ್ಣವಾಗುತ್ತದೆ.

ನೀವು ಯಾವುದೇ ಸೇವೆಯನ್ನು ಪ್ರಾರಂಭಿಸಿದ ದಿನವೇ, ನಿಮ್ಮ ನಿರ್ಗಮನದ ಬಗ್ಗೆ ಯೋಜನೆಗಳನ್ನು ಮಾಡುವುದನ್ನು ಪ್ರಾರಂಭಿಸಬೇಕು.

ಯೆಶಾಯ 59:21

**[21]ನಾನಂತೂ ಅವರೊಂದಿಗೆ ಈ ಒಡಂಬಡಿಕೆಯನ್ನು ಮಾಡಿಕೊಳ್ಳುವೆನು, ನೋಡಿರಿ, ನಿಮ್ಮಲ್ಲಿ ಆವೇಶಿಸಿರುವ ಆತ್ಮವೂ ನಿಮ್ಮ ಬಾಯಿಗೆ ನಾನು ಕೊಟ್ಟಿರುವ ಮಾತುಗಳೂ ನಿಮ್ಮ ಬಾಯಿಂದಾಗಲಿ**

**ನಿಮ್ಮ ಸಂತತಿಯ ಸಂತಾನದ ಬಾಯಿಂದಾಗಲಿ ಇಂದಿನಿಂದ ಎಂದಿಗೂ ತೊಲಗುವುದಿಲ್ಲ ಎಂದು ಯೆಹೋವನು ಅನ್ನುತ್ತಾನೆ.**

ಒಂದು ಸಂತತಿಗೆ ಕೊಡಲ್ಪಟ್ಟ ಅಭಿಷೇಕವು ಮತ್ತು ಪ್ರಕಟನೆಗಳು ಮುಂದಿನ ಪೀಳಿಗೆಗೂ ಮುಂದುವರೆಯಬೇಕೆಂದು ದೇವರು ಇಚ್ಛಿಸುತ್ತಾನೆ. ಮುಂದಿನ ಪೀಳಿಗೆಯವರು ತಮ್ಮ ಸಮಯದಲ್ಲಿ ಮಾಡಬೇಕಾದವುಗಳಿಗೆ ಆತನು ಅಧಿಕಾರ ಮತ್ತು ನೂತನ ಅಭಿಷೇಕವನ್ನು ಮತ್ತು ನವೀನ ಪ್ರಕಟನೆಗಳನ್ನು ಸೇರ್ಪಡೆ ಮಾಡುತ್ತಾನೆ.

1 ಕೊರಿಂಥದವರಿಗೆ 4:17

**17 ಈ ನಿಮಿತ್ತದಿಂದ ಕರ್ತನಲ್ಲಿ ನನ್ನ ಮಗನಾದ ತಿಮೊಥೆಯನನ್ನು ನಿಮ್ಮ ಬಳಿಗೆ ಕಳುಹಿಸಿಕೊಟ್ಟಿದ್ದೇನೆ. ಅವನು ನನಗೆ ಪ್ರಿಯನೂ ನಂಬಿಗಸ್ತನೂ ಆಗಿದ್ದಾನೆ. ಅವನು ಕ್ರಿಸ್ತನ ಸೇವೆಯಲ್ಲಿರುವ ನನ್ನ ನಡಾವಳಿಯನ್ನು ಅಂದರೆ ನಾನು ಎಲ್ಲೆಲ್ಲಿಯೂ ಪ್ರತಿಯೊಂದು ಸಭೆಯಲ್ಲಿಯೂ ಬೋಧಿಸುವ ಕ್ರಮವನ್ನು ನಿಮ್ಮ ನೆನಪಿಗೆ ತರುವನು.**

- ಕೆಲಸವನ್ನು ಮುಂದುವರೆಸಲು ''ತಿಮೊಥೆಯರು''ಗಳು ಇಲ್ಲದಿದ್ದರೆ ಪ್ರಸ್ತುತದಲ್ಲಿ ಹಾಕಿದ ಆಸ್ತಿವಾರವು ಅವನತಿಗೆ ಬರುತ್ತದೆ,
- ಇಂದಿನ ''ತಿಮೊಥೆಯರು''ಗಳೇ, ನಾಳಿನ ''ಪೌಲರು'' ಗಳಾಗುತ್ತಾರೆ.
- ನಾವು ಮುಂದಿನ ಪೀಳಿಗೆಯವರನ್ನು ಎಬ್ಬಿಸುವುದು ಅಗತ್ಯ ಇಲ್ಲವಾದರೆ ಪ್ರಸಕ್ತ ಸಂತತಿಯು ಅಳಿದು ಹೋದ ಬಳಿಕ ಆ ಕೆಲಸವನ್ನು ಮುಂದುವರೆಸಲು ಒಬ್ಬರೂ ಇರುವುದಿಲ್ಲ.
- ಹಲವು ಬಾರಿ ಸಭೆಗಳಲ್ಲಿ ಪ್ರಸ್ತುತ ಸಂತತಿಯವರಿಗೆ ಯಾವ ರೀತಿಯಲ್ಲೂ ಗಮನ ಸಿಗದಂತೆ ಜಾಗ್ರತೆ ವಹಿಸುತ್ತಾರೆ. ಮತ್ತು ಮುಂದಿನ ಪೀಳಿಗೆಯವರನ್ನು ಅಸಡ್ಡೆ ಮಾಡುತ್ತಾರೆ.
- ಪ್ರತಿಯೊಂದು ಸಂತತಿಯೂ ತಾನು ಪಡೆದುಕೊಂಡಂತಹ ಎಲ್ಲಾ ವಿಷಯಗಳನ್ನು ಮುಂದಿನ ಪೀಳಿಗೆಯು ಮುಂದುವರೆಸುವಂತೆ ಆಸ್ಪದ ಕೊಡಬೇಕು.
- ಪ್ರಸ್ತುತ ಸಂತತಿಗೆ ಕೊಡಲ್ಪಟ್ಟ ಪ್ರತಿಯೊಂದು ವಿಷಯವನ್ನು ಸಹ ಮುಂದಿನ ಸಂತತಿಯವರು ಪಡೆದುಕೊಳ್ಳಬೇಕು.

## ತಿಮೊಥೆಯರನ್ನು ಎಬ್ಬಿಸುವುದು ಹೇಗೆ?
## ಪೌಲ ತಿಮೊಥೆಯರ ಸಂಬಂಧದಿಂದ ಪಾಠಗಳು

ಅಪೊಸ್ತಲನಾದ ಪೌಲನು ತಿಮೊಥೆಯನನ್ನು ನಂಬಿಕೆಯಲ್ಲಿ ಪ್ರೀತಿಯ ಮಗನೆಂದು ಪರಿಗಣಿಸಿದ್ದನು (2 ತಿಮೊಥೆಯನಿಗೆ 1:2) ದೇವರ ರಾಜ್ಯದಲ್ಲಿ ಜೊತೆ ಕೆಲಸದವನಾಗಿ ಮತ್ತು ದೇವಸೇವಕನಾಗಿರುವುದಕ್ಕಾಗಿ, ತಿಮೊಥೆಯನನ್ನು ಪೋಷಿಸಿದನು. ಆದ್ದರಿಂದ ತಿಮೊಥೆಯನು ದೇವರ ರಾಜ್ಯದ ಕೆಲಸ ಮಾಡುವುದಕ್ಕಾಗಿ ಪೋಷಿಸಿದನು. ದೇವರ ರಾಜ್ಯ ಕಟ್ಟುವ ಹಂತಕ್ಕೆ ಪೌಲನು ಎಬ್ಬಿಸಲ್ಪಟ್ಟಂತಹ ಮಾದರಿಯ ವಿಷಯಗಳನ್ನು ನಾವು ಗಮನಿಸಬಹುದು.

### 1. ದೈವಿಕ ಸಂಪರ್ಕವನ್ನು ಗುರುತಿಸಿರಿ.

ಅಪೊಸ್ತಲರ ಕೃತ್ಯಗಳು 16:1-3

**[1]ಆ ಮೇಲೆ ಅವನು ದೆರ್ಬೆಗೂ ಲುಸ್ತ್ರಕ್ಕೂ ಬಂದನು ಲುಸ್ತ್ರದಲ್ಲಿ ತಿಮೊಥೆಯನೆಂಬ ಒಬ್ಬ ಶಿಷ್ಯನಿದ್ದನು. ಅವನು ಕ್ರಿಸ್ತನನ್ನು ನಂಬಿದ್ದ ಒಬ್ಬ ಯೆಹೂದ್ಯ ಸ್ತ್ರೀಯ ಮಗನು. ಅವನ ತಂದೆ ಗ್ರೀಕನು. [2]ಅವನ ವಿಷಯವಾಗಿ ಲುಸ್ತ್ರದಲ್ಲಿಯೂ ಇಕೋನ್ಯದಲ್ಲಿಯೂ ಇದ್ದ ಸಹೋದರರು ಒಳ್ಳೇ ಸಾಕ್ಷಿಹೇಳುತ್ತಿದ್ದರು. [3] ಅವನು ತನ್ನ ಸಂಗಡ ಬರಬೇಕೆಂದು ಪೌಲನು ಅಪೇಕ್ಷಿಸಿ ಆಯಾ ಸ್ಥಳಗಳಲ್ಲಿದ್ದ ಯೆಹೂದ್ಯರ ನಿಮಿತ್ತವಾಗಿ ಅವನಿಗೆ ಸುನ್ನತಿ ಮಾಡಿಸಿದನು. ಯಾಕೆಂದರೆ ಅವನ ತಂದೆ ಗ್ರೀಕನೆಂದು ಎಲ್ಲರಿಗೂ ಗೊತ್ತಿತ್ತು.**

ದರ್ಬೆ ಮತ್ತು ಲುಸ್ತ್ರದಲ್ಲಿ ಇನ್ನು ಅನೇಕ ಯೌವನಸ್ಥರು ಇದ್ದಿರಬಹುದು ತಿಮೊಥೆಯನೊಂದಿಗೆ ಪೌಲನು ಒಂದು ವಿಶೇಷ ಸಂಬಂಧ ಗ್ರಹಿಸಿದನು. ತಿಮೊಥೆಯನು, ತನ್ನ ಸಮುದಾಯದ ದೇವ ಜನರ ಮಧ್ಯದಲ್ಲಿ ಒಳ್ಳೆಯ ಹೆಸರು ಹೊಂದಿದ್ದನು. ತನ್ನ ಸೇವೆಯಲ್ಲಿ ಪಾಲುಗಾರನಾಗಲು ಪೌಲನು ಎಲ್ಲಾ ಸಿದ್ಧತೆ ಮಾಡಿಕೊಂಡನು ಅಗತ್ಯವಿದ್ದಾಗ ಯೆಹೂದ್ಯರೊಂದಿಗೆ ಕೆಲಸ ಮಾಡಲು ಶಕ್ತನಾಗುವಂತೆ ಪೌಲನು, ತಿಮೊಥೆಯನಿಗೆ ಸುನ್ನತಿ ಮಾಡಿಸಿದನು.

ನಿಮ್ಮ ಜೀವಿತಗಳಲ್ಲಿ ದೇವರು ಏರ್ಪಡಿಸುವ ದೈವಿಕ ಸಂಪರ್ಕಗಳ ಬಗ್ಗೆ ಪ್ರಜ್ಞೆಯುಳ್ಳವರಾಗಿರಿ. ದೇವರು ನಿಮ್ಮ ಜೀವಿತಗಳಗೆ "ತಿಮೊಥೆಯರನ್ನು ಕಳುಹಿಸಬಹುದು. ಇತರ ಜನರ ಜೀವಿತಗಳಗೆ ಪೌಲನನ್ನು ಕಳುಹಿಸಬಹುದು.

ನಿಮ್ಮ ತಿಮೊಥೆಯರ ಭವಿಷ್ಯಕ್ಕಾಗಿ ಸಹಾಯ ಮಾಡುವ ಸಂಗತಿಗಳನ್ನು ಮಾಡಲು ಪ್ರಯತ್ನಿಸಿರಿ.

ತಿಮೊಥೆಯನು ನಿಮ್ಮ ಪಕ್ಷದಲ್ಲಿರಲು ಮತ್ತು ನಿಮ್ಮ ಜೊತೆ ಕೆಲಸ ಮಾಡಲು, ಹೊಂದಿಕೊಳ್ಳಿರಿ. ಪೌಲನ ಸೇವೆಯಲ್ಲಿ ಜೊತೆ ಪ್ರಯಾಣ ಮಾಡಲು ತಿಮೊಥೆಯನಿಗೆ ಅವಕಾಶ ಸಿಕ್ಕಿತ್ತು.

ಅಪೊಸ್ತಲರ ಕೃತ್ಯಗಳು 17:14,15

**[14]ಕೂಡಲೇ ಸಹೋದರರು ಪೌಲನನ್ನು ಸಮುದ್ರದ ತನಕ ಹೋಗುವುದಕ್ಕೆ ಕಳುಹಿಸಿಕೊಟ್ಟರು. ಆದರೆ ಸೀಲನೂ ತಿಮೊಥೆಯನೂ ಅಲ್ಲೇ ನಿಂತರು. [15]ಪೌಲನನ್ನು ಸಾಗಕಳುಹಿಸಿದವರು ಅವನನ್ನು ಅಥೇನೆಯವರೆಗೂ ಕರೆದುಕೊಂಡು ಹೋಗಿ ಸೀಲನನ್ನೂ ತಿಮೊಥೆಯನನ್ನೂ ಕೂಡಿದ ಮಟ್ಟಿಗೆ ಬೇಗ ನನ್ನ ಬಳಿಗೆ ಬರಹೇಳಿರಿ ಎಂಬ ಅಪ್ಪಣೆಯನ್ನು ಅವನಿಂದ  ಹೊಂದಿ ಹೊರಟು ಬಂದರು.**

ಅಪೊಸ್ತಲರ ಕೃತ್ಯಗಳು 18:5

**[5]ಸೀಲನೂ ತಿಮೊಥೆಯನೂ ಮಕೆದೋನ್ಯದಿಂದ  ಬಂದಾಗ ಪೌಲನು ದೇವರ ವಾಕ್ಯವನ್ನು ಬೋಧಿಸುವುದರಲ್ಲಿ ಅತ್ಯಾಸಕ್ತಿಯುಳ್ಳವನಾಗಿ ಯೇಸುವೇ ಬರಬೇಕಾದ ಕ್ರಿಸ್ತನೆಂದು ಯೆಹೂದ್ಯರಿಗೆ ಖಂಡಿತವಾಗಿ ಸಾಕ್ಷಿ ಹೇಳಿದನು.**

ಅಪೊಸ್ತಲರ ಕೃತ್ಯಗಳು 20:1-4

**[1]ಗದ್ದಲವು ನಿಂತು ತರುವಾಯ ಪೌಲನು ಶಿಷ್ಯರನ್ನು ಕೂಡ ಕರೆಸಿ ಧೈರ್ಯಗೊಳಿಸಿ ಅವರ ಅಪ್ಪಣೆ ತೆಗೆದುಕೊಂಡು ಮಕೆದೋನ್ಯಕ್ಕೆ ಹೊರಟನು [2]ಆ ಸೀಮೆಯಲ್ಲಿ ಸಂಚಾರ ಮಾಡಿ ಅಲ್ಲಿಯವರನ್ನು ಅನೇಕ ಮಾತುಗಳಿಂದ ಧೈರ್ಯಪಡಿಸಿ ಗ್ರೀಸ್ ದೇಶಕ್ಕೆ ಬಂದನು. [3]ಅಲ್ಲಿ ಮೂರು ತಿಂಗಳು ಕಳೆದ ಮೇಲೆ ಸಿರಿಯ ದೇಶಕ್ಕೆ ಸಮುದ್ರಮಾರ್ಗವಾಗಿ ಹೋಗಬೇಕೆಂದಿದ್ದಾಗ ಅವನಿಗೆ ವಿರುದ್ಧವಾಗಿ ಯೆಹೂದ್ಯರಲ್ಲಿ ಒಳಸಂಚು ಹುಟ್ಟಿದ್ದರಿಂದ ಅವನು ಮಕೆದ್ಯೋನ್ಯದ ಮೇಲೆ ಹಿಂತಿರುಗಿ ಹೋಗುವದಕ್ಕೆ ತೀರ್ಮಾನ ಮಾಡಿದನು.
[4]ಪುರ್ರನ ಮಗನಾದ ಬೆರೋಯಪಟ್ಟಣದ ಸೋಪತ್ರನೂ ಥೆಸಲೋನಿಕದವರಲ್ಲಿ ಅರಿಸ್ತಾರ್ಕನೂ ಸೆಕುಂದನೂ ದೆರ್ಬೆ ಪಟ್ಟಣದ  ಗಾಯನೂ ತಿಮೊಥೆಯನೂ  ಆಸ್ಯಸೀಮೆಯವರಲ್ಲಿ ತುಖಿಕನೂ ತ್ರೋಫಿಯನೂ ಆಸ್ಯಸೀಮೆಯ ವರೆಗೆ ಅವನ ಜೊತೆಯಲ್ಲಿ ಹೋದರು.**

ಫಿಲಿಪ್ಪಿಯವರಿಗೆ 2:22

**[22]ತಿಮೊಥೆಯನ ಗುಣವನ್ನು ನೀವು ನೋಡಿ ತಿಳಿದುಕೊಂಡಿದ್ದೀರಿ; ಮಗನು ತಂದೆಗೆ ಹೇಗೋ ಹಾಗೆಯೇ ಅವನು ನನ್ನ ಜೊತೆಯಲ್ಲಿ ಸುವಾರ್ತಾ ಪ್ರಚಾರಕ್ಕಾಗಿ ಕಷ್ಟಪಟ್ಟು ಕೆಲಸ ನಡೆಸಿದನೆಂಬದು ನಿಮಗೆ ಗೊತ್ತುಂಟು.**

2 ತಿಮೊಥೆಯನಿಗೆ 2:2

**[2]ನೀನು ನನ್ನಿಂದ ಅನೇಕ ಸಾಕ್ಷಿಗಳ ಮುಂದೆ ಕೇಳಿದ ಉಪದೇಶವನ್ನು ಇತರರಿಗೆ ಬೋಧಿಸಶಕ್ತರಾದ ನಂಬಿಗಸ್ತ ಮನುಷ್ಯರಿಗೆ ಒಪ್ಪಿಸಿಕೊಡು.**

- ಜಾಗರೂಕತೆಯಿಂದ ನಿಮ್ಮ ''ತಿಮೊಥೆಯ'' ನನ್ನು ಆರಿಸಿಕೊಳ್ಳಿರಿ.
- ಸಾಮರ್ಥ್ಯಕ್ಕಿಂತ, ನಂಬಿಗಸ್ತಿಕೆಯು ಬಹಳ ಪ್ರಾಮುಖ್ಯವಾದುದು.
- ವರಗಳಿಗಿಂತ, ಹೃದಯದ ಸ್ಥಿತಿಗತಿಗಳು ಬಹಳ ಪ್ರಾಮುಖ್ಯವಾದವು

## 2. ಪೋಷಣೆಯ ಸಂಬಂಧ ಬೆಳೆಸಿಕೊಳ್ಳಿರಿ

1 ತಿಮೊಥೆಯನಿಗೆ 1:2

**[2]ನಂಬಿಕೆಯ ವಿಷಯದಲ್ಲಿ ನಿಜಕುಮಾರನಾಗಿರುವ ತಿಮೊಥೆಯನಿಗೆ ಬರೆಯುವುದೇನೆಂದರೆ - ತಂದೆಯಾದ ದೇವರಿಂದಲೂ ನಮ್ಮ ಕರ್ತನಾದ ಕ್ರಿಸ್ತಯೇಸುವಿನಿಂದಲೂ ನಿನಗೆ ಕೃಪೆಯೂ ಕರುಣೆಯೂ ಶಾಂತಿಯೂ ಆಗಲಿ**

2 ತಿಮೊಥೆಯನಿಗೆ 1:2

**[2]ನಂಬಿಕೆಯ ವಿಷಯದಲ್ಲಿ ನಿಜಕುಮಾರನಾಗಿರುವ ತಿಮೊಥೆಯನಿಗೆ ಬರೆಯುವುದೇನೆಂದರೆ - ತಂದೆಯಾದ ದೇವರಿಂದಲೂ ನಮ್ಮ ಕರ್ತನಾದ ಕ್ರಿಸ್ತಯೇಸುವಿನಿಂದಲೂ ನಿನಗೆ ಕೃಪೆಯೂ ಕರುಣೆಯೂ ಶಾಂತಿಯೂ ಆಗಲಿ**

1 ಕೊರಿಂಥದವರಿಗೆ 4:17

**[17]ಈ ನಿಮಿತ್ತದಿಂದ ಕರ್ತನಲ್ಲಿ ನನ್ನ ಮಗನಾದ ತಿಮೊಥೆಯನನ್ನು ನಿಮ್ಮ ಬಳಿಗೆ ಕಳುಹಿಸಿಕೊಟ್ಟಿದ್ದೇನೆ. ಅವನು ನನಗೆ ಪ್ರಿಯನೂ ನಂಬಿಗಸ್ತನೂ ಆಗಿದ್ದಾನೆ. ಅವನು ಕ್ರಿಸ್ತನ ಸೇವೆಯಲ್ಲಿರುವ ನನ್ನ ನಡಾವಳಿಯನ್ನು ಅಂದರೆ ನಾನು ಎಲ್ಲೆಲ್ಲಿಯೂ ಪ್ರತಿಯೊಂದು ಸಭೆಯಲ್ಲಿಯೂ ಬೋಧಿಸುವ ಕ್ರಮವನ್ನು ನಿಮ್ಮ ನೆನಪಿಗೆ ತರುವನು.**

ಅಲ್ಲಿ ವಿಶೇಷವಾದ ಬಂಧನವಿದ್ದಿತು - ಪೌಲನು ಮತ್ತು ತಿಮೊಥೆಯನ ನಡುವೆ ವಿಶೇಷವಾದ ಸಂಬಂಧವು ಇತ್ತು. ಪೌಲನು ತಿಮೊಥೆಯನನ್ನು ತನ್ನ ಆತ್ಮಿಕ ಮಗನೆಂದು ಎಣಿಸಿದನು ಮತ್ತು ತಿಮೊಥೆಯನು ಪೌಲನನ್ನು ತನ್ನ ಆತ್ಮಿಕ ತಂದೆಯಾಗಿ ನೋಡುತ್ತಿದ್ದನು.

## ೩. ಆತ್ಮೀಯತೆ ಮತ್ತು ಪಾರದರ್ಶಕತೆ ಸ್ಥಾಪಿಸಿರಿ.

2 ತಿಮೊಥೆಯನಿಗೆ 3:10,11

**[10]ನೀನಾದರೋ ನನ್ನನ್ನು ಅನುಸರಿಸುವವನನಾಗಿದ್ದು ನನ್ನ ಬೋಧನೆ ನಡತೆ ಉದ್ದೇಶ ನಂಬಿಕೆ ದೀರ್ಘಶಾಂತಿ ಪ್ರೀತಿ ಸೈರಣೆ ಇವುಗಳನ್ನೂ ''ಅಂತಿಯೋಕ್ಯ ಇಕೋನ್ಯ ಲುಸ್ತ್ರ ಎಂಬ ಪಟ್ಟಣಗಳಲ್ಲಿ ನನಗೆ ಸಂಭವಿಸಿದ ಹಿಂಸೆಗಳನ್ನೂ ಕಷ್ಟನುಭವಗಳನ್ನೂ ತಿಳಿದವನಾಗಿದ್ದೀ. ನಾನು ಎಂಥೆಂಥ ಹಿಂಸೆಗಳನ್ನು ಸಹಿಸಿಕೊಂಡೆನು. ಅವೆಲ್ಲವುಗಳೊಳಗಿಂದ ಕರ್ತನು ನನ್ನನ್ನು ಬಿಡಿಸಿದನು.**

ಅಪೊಸ್ತಲನಾದ ಪೌಲನು, ತಾನು ನಿಜವಾಗಿ ಏನಾಗಿದ್ದೆನೆಂಬುದನ್ನು ತಿಮೊಥೆಯನು ನೋಡುವಂತೆಯೂ ಮತ್ತು ತಿಳಿಯುವಂತೆಯೂ ಮಾಡುವ ಆತ್ಮಿಯತೆ ಮತ್ತು ಪಾರದರ್ಶಕತೆಯು ಇಬ್ಬರ ನಡುವೆ ಇದ್ದಿತು. ತಿಮೊಥೆಯನು ಅನುಸರಿಸುವುದರೊಂದಿಗೆ ಪ್ರತಿಕ್ರಿಯೆ ತೋರಿದನು ಅಥವಾ ಪೌಲನಲ್ಲಿ ತಾನು ಕಂಡದ್ದನ್ನು ತನ್ನ ಮಾದರಿಯಾಗಿಟ್ಟುಕೊಂಡನು.

## 4. ನಿರ್ದಿಷ್ಟ ಉಪದೇಶಗಳ ಸಂಪರ್ಕ

1 ತಿಮೊಥೆಯನಿಗೆ 1:18

**[18]ಮಗನಾದ ತಿಮೊಥೆಯನೇ, ನಮ್ಮ ವಿಷಯದಲ್ಲಿ ಮುಂಚೆ ಉಂಟಾದ ಪ್ರವಾದನೆಗಳನ್ನು ನಾನು ನೆನಸಿ ನೀನು ಅವುಗಳಿಂದ ಧೈರ್ಯಗೊಂಡು ಕ್ರೈಸ್ತರ ದಿವ್ಯ ಯುದ್ಧವನ್ನು ನಡಿಸಬೇಕೆಂದು ನಿನಗೆ ಆಜ್ಞಾಪನೆ ಮಾಡುತ್ತೇನೆ.**

1ತಿಮೊಥೆಯನಿಗೆ 6:20

**[20]ಎಲೈ ತಿಮೊಥೆಯನೇ, ಜ್ಞಾನೋಪದೇಶವೆಂದು ಸುಳ್ಳಾಗಿ ಹೇಳಿಕೊಳ್ಳುವ ಬೋಧನೆಗೆ ಸಂಬಂಧಪಟ್ಟ ಪ್ರಾಪಂಚಿಕವಾದ ಆ ಹರಟೆ ಮಾತುಗಳಿಗೂ ವಿವಾದಗಳಿಗೂ ನೀನು ದೂರವಾಗಿದ್ದು ನಿನ್ನ ವಶಕ್ಕೆ ಕೊಟ್ಟಿರುವದನ್ನೇ ಕಾಪಾಡು.**

ಪೌಲನು ತಿಮೊಥೆಯನಿಗೆ ಯಾವುದನ್ನು ಮಾಡಬೇಕು, ಯಾವುದನ್ನು ಮಾಡಬಾರದೆಂಬ ಶಿಕ್ಷಣವನ್ನು, ಅಪಾಯದ ಜಾಗಗಳನ್ನು ನಿಯಂತ್ರಿಸುವುದು ಮುಂತಾದವುಗಳ ಬಗ್ಗೆ ಉಪದೇಶ ನೀಡಿದ್ದನು. (1 ಮತ್ತು 2 ತಿಮೊಥೆಯನಿಗೆ)

## ೫. ಪ್ರೋತ್ಸಾಹ ಹಿತವಚನ ಮತ್ತು ತಿದ್ದುಪಡಿ.

ಪೌಲನು, ತಿಮೊಥೆಯನಿಗೆ ಸಕಾರಾತ್ಮಕ ಪ್ರೋತ್ಸಾಹವನ್ನು ನೀಡಿದನು.

1 ತಿಮೊಥೆಯನಿಗೆ 6;12

**[12]ಕ್ರಿಸ್ತ ನಂಬಿಕೆಯುಳ್ಳವರು ಮಾಡತಕ್ಕ ಶ್ರೇಷ್ಟ ಹೋರಾಟವನ್ನು ಮಾಡು ನಿತ್ಯಜೀವವನ್ನು ಹಿಡಿದುಕೋ, ಅದಕ್ಕಾಗಿ ದೇವರು ನಿನ್ನನ್ನು ಕರೆದನು, ಮತ್ತು ನೀನು ಅನೇಕ ಸಾಕ್ಷಿಗಳ ಮುಂದೆ ಒಳ್ಳೇ ಪ್ರತಿಜ್ಞೆಯನ್ನು ಮಾಡಿದಿಯಲ್ಲಾ.**

ಸೇವೆಯಲ್ಲಿ ಬಹಳ ಕಠಿಣವಾದ ವಿಷಯವೆಂದರೆ ತಿದ್ದುಪಡಿ ಮಾಡುವುದು. ಆದರೆ ನೀವು ಇದನ್ನು ಪ್ರೀತಿಪೂರ್ವಕವಾಗಿ ಸಕಾರಾತ್ಮಕವಾಗಿ ಮತ್ತು ಉದ್ಧಾರದ ಮಾರ್ಗವೆಂಬುದಾಗಿ ತಿಳಿದು ಮಾಡಲು ಕಲಿಯಬೇಕು, ನೀವು ನಿಮ್ಮ ''ತಿಮೊಥೆಯನನ್ನು'' ಸರಿಪಡಿಸದಿದ್ದರೆ ನೀವು ಅವರು ಮುಂದುವರಿಯಲು ಅವಕಾಶ ನೀಡಿದ ಆ ಮುಖ್ಯ ವಿಷಯವು ಹುಣ್ಣು (ಕ್ಯಾನ್ಸರ್) ಆಗಿಬಿಡುತ್ತದೆ. ಅಲ್ಲಿಗೆ ಅದು ಅವರ ಜೀವಿತವನ್ನೆಲ್ಲಾ ತಿಂದು ಅವರನ್ನು ನಾಶಮಾಡುತ್ತದೆ. ತಿದ್ದುಪಡಿಯು, ''ಆತ್ಮಿಕ ಶಸ್ತ್ರಚಿಕಿತ್ಸೆ'' (ಸರ್ಜರಿ) ಇದ್ದಂತೆ ಇದು ನೋವುಂಟು ಮಾಡುತ್ತದೆ, ಆದರೆ ಇದು ಸಕಾರಾತ್ಮಕ ಫಲಿತಾಂಶ ಹೊಂದಿದೆ.

## 6. ತೆರಬೇಕಾದ ಬೆಲೆಯನ್ನು ಸ್ಪಷ್ಟಗೊಳಿಸು

ತೆರಬೇಕಾದ ಯಥಾರ್ಥ ಬೆಲೆಯ ಸಂಪರ್ಕ ಮಾಡಬೇಕು ದೇವರ ಸೇವೆಯನ್ನು ಮಾಡಲು ಬೆಲೆಯನ್ನು ಪಾವತಿ ಮಾಡಬೇಕು. ಪೌಲನು ತಿಮೊಥೆಯನಿಗೆ ''ಮೆದುಮಾತು''ಗಳನ್ನು ಆಡಲಿಲ್ಲ ಅವುಗಳಿದ್ದಂತೆಯೇ ವಿಷಯಗಳನ್ನು ತಿಮೊಥೆಯನ ಮುಂದಿಡುತ್ತಾನೆ. ತಿಮೊಥೆಯನು, ತನ್ನ ಹಿಂಸೆಗಳನ್ನು ಹಂಚಿಕೊಳ್ಳಲು ಅವನನ್ನು ಆಹ್ವಾನಿಸುತ್ತಾನೆ.

2 ತಿಮೊಥೆಯನಿಗೆ 1:8

**[8] ಆದ್ದರಿಂದ ನೀನು ನಮ್ಮ ಕರ್ತನನ್ನು ಕುರಿತು ಹೇಳುವ ಸಾಕ್ಷಿಯ ವಿಷಯದಲ್ಲಾಗಲಿ ಆತನ ಸೆರೆಯವನಾದ ನನ್ನ ವಿಷಯದಲ್ಲಾಗಲಿ ನಾಚಿಕೆಪಡದೆ ದೇವರ ಬಲವನ್ನು ಆಶ್ರಯಿಸಿ ನನ್ನೊಂದಿಗೆ ಸುವಾರ್ತೆಗೋಸ್ಕರ ಶ್ರಮೆಯನ್ನನುಭವಿಸು.**

2 ತಿಮೊಥೆಯನಿಗೆ 2:3-5

**[3] ಕ್ರಿಸ್ತ ಯೇಸುವಿನ ಒಳ್ಳೇ ಸೈನಿಕನಂತೆ ನನ್ನೊಂದಿಗೆ ಶ್ರಮೆಯನ್ನನುಭವಿಸು [4]ಯುದ್ಧಕ್ಕೆ ಹೋಗುವ ಸೈನಿಕನು ಲೋಕ ವ್ಯವಹಾರದಲ್ಲಿ ಸಿಕ್ಕಿಕೊಳ್ಳದೆ ತನ್ನನ್ನು ಸೈನ್ಯದಲ್ಲಿ ಸೇರಿಸಿಕೊಂಡವನನ್ನು ಮೆಚ್ಚಿಸುವದಕ್ಕೆ ಪ್ರಯಾಸಪಡುತ್ತಿರುವನಲ್ಲವೇ. [5]ಇದಲ್ಲದೆ ಯಾವನಾದರೂ ರಂಗಸ್ಥಳದಲ್ಲಿ ಎದುರಾಳಿಯೊಡನೆ ಹೋರಾಡುವಾಗ ನಿಯಮದ ಪ್ರಕಾರ ಹೋರಾಡದಿದ್ದರೆ ಅವನಿಗೆ ಜಯಮಾಲೆ ದೊರಕುವುದಿಲ್ಲ.**

## 7. ಗೌರವದ ಸ್ಥಳ, ಕಟ್ಟಿರಿ, ಗೌರವದಿಂದ ಸತ್ಕರಿಸಿರಿ

1ತಿಮೊಥೆಯನಿಗೆ 6:11

**[11]ಎಲೈ, ದೇವರ ಮನುಷ್ಯನೇ, ನೀನಾದರೋ ಇವುಗಳಿಗೆ ದೂರವಾಗಿರು, ನೀತಿ, ಭಕ್ತಿ ನಂಬಿಕೆ ಪ್ರೀತಿ ಸ್ಥಿರಚಿತ್ತ ಸಾತ್ವಿಕತ್ವ ಇವುಗಳನ್ನು ಸಂಪಾದಿಸುವದಕ್ಕೆ ಪ್ರಯಾಸಪಡು.**

2 ಕೊರಿಂಥದವರಿಗೆ 1:1

**[1]ದೇವರ ಚಿತ್ತಾನುಸಾರ ಕ್ರಿಸ್ತಯೇಸುವಿನ ಅಪೊಸ್ತಲನಾದ ಪೌಲನೂ ಸಹೋದರನಾದ ತಿಮೊಥೆಯನೂ ಕೊರಿಂಥದಲ್ಲಿರುವ ದೇವರ ಸಭೆಯವರಿಗೂ ಅಖಾಯ ಸೀಮೆಯಲ್ಲೆಲ್ಲಾ ಇರುವ ದೇವಜನರೆಲ್ಲರಿಗೂ ಬರೆಯವದೇನೆಂದರೆ...**

ಫಿಲೆಮೋನನಿಗೆ 1:1

**[1]ಕ್ರಿಸ್ತ ಯೇಸುವಿನ ಸೆರೆಯವನಾಗಿರುವ ಪೌಲನೂ ಸಹೋದರನಾದ ತಿಮೊಥೆಯನೂ ನಮಗೆ ಪ್ರಿಯನೂ ಜೊತೆಗೆಲಸದವನೂ ಆಗಿರುವ ಫಿಲೆಮೋನನೆಂಬ ನಿನಗೂ...**

ರೋಮಾಪುರದವರಿಗೆ 16:21

**[21]ನನ್ನ ಜೊತೆಕೆಲಸದವನಾದ ತಿಮೊಥೆಯನೂ ನನ್ನ ಸ್ವಜನರಾದ ಲೂಕ್ಯನೂ ಯಾಸೋನನೂ ಸೋಸಪತ್ರನೂ ನಿಮಗೆ ವಂದನೆಗಳನ್ನು ಹೇಳುತ್ತಾರೆ.**

ಪೌಲನು, ತಿಮೊಥೆಯನನ್ನು ಬಹಳ ಗೌರವದೊಂದಿಗೆ ಸಂಪರ್ಕ ಹೊಂದಿದನು. ಅವನು ತಿಮೊಥೆಯನನ್ನು ದೇವರ ಮನುಷ್ಯ, ಸಹೋದರ ಜೊತೆ ಸೇವಕ ಎಂಬುದಾಗಿ ಕರೆದಿದ್ದಾನೆ. ತಿಮೊಥೆಯನ ಸತ್ಯತೆ, ವರಗಳು ಮತ್ತು ಅಭಿಷೇಕವನ್ನು ಅವನು ಗುರ್ತಿಸಿದನು.

ನೀವು ತಿಮೊಥೆಯರನ್ನು ಯಾವ ರೀತಿ ಗೌರವಿಸುತ್ತೀರಿ ಎಂಬುದು, ನೀವು ಸೇವಕ ಅಥವಾ ಮಗನನ್ನು ಎಬ್ಬಿಸುತ್ತಿದ್ದೀರ ಎಂಬುದನ್ನು ನಿಶ್ಚಯಪಡಿಸುತ್ತದೆ. ಸೇವಕನಂತೆ ಸತ್ಕರಿಸಿದರೆ ಸೇವಕರನ್ನು ಎಬ್ಬಿಸುತ್ತೀರಿ. ದೇವ ಜನರ ಮೇಲೆ ಯಜಮಾನ/ಪಾಳೆಗಾರನಾಗಿರುವುದರ ಬದಲು ದೇವರ ಮನೆಯಲ್ಲಿ ಸತ್ಯವಾದ ತಂದೆ/ತಾಯಂದಿರಾಗಿರುವುದನ್ನು ಕಲಿಯಬೇಕು. ತಂದೆಯರು ಮತ್ತು ತಾಯಂದಿರು, ಮಗ ಮತ್ತು ಮಗಳನ್ನು ಹೊಂದಿದ್ದಾರೆ ಯಜಮಾನ/ಪಾಳೆಗಾರರು, ಆಳುಗಳನ್ನು ಹೊಂದಿದ್ದಾರೆ. ನಾವು ಏನಾಗಿದ್ದೇವೆಂಬುದು, ದೇವರ ಮನೆಯಲ್ಲಿ ನಾವು ಎಂತಹ ಜನರನ್ನು ಪೋಷಿಸುತ್ತೇವೆ ಎಂಬುದನ್ನು ನಿಶ್ಚಯಪಡಿಸುತ್ತದೆ.

ಆಳು ಕೂಲಿಗಾಗಿ ಕೆಲಸ ಮಾಡುತ್ತಾನೆ. ಮಗನು ಮನೆಗೆ ಸಂಬಂಧಪಟ್ಟವನಾಗಿ ಕೆಲಸ ಮಾಡುತ್ತಾನೆ. ಆಳಿನ ಬದ್ಧತೆ ಬದಲಾಗಬಹುದು. ಮಗನು ಬದ್ಧತೆಯಲ್ಲಿ ಸ್ಥಿರವಾಗಿರುತ್ತಾನೆ ಮತ್ತು ಅವನು ಯಾರಿಗೆ ಸಂಬಂಧಪಟ್ಟವನೆಂದು ತಿಳಿದಿರುತ್ತಾನೆ ಮಗನು ಹೊರಗೆ ಹೋದರು, ಸ್ವಂತ ಮನೆಯನ್ನು ಹೊಂದಿರುತ್ತಾನೆ. ಅವನು ಯಾವಾಗಲೂ ತನ್ನ ತಂದೆಯನ್ನು ನೆನಪಿಸಿಕೊಳ್ಳಬಹುದು. ಆಳುಗಳು, ಅವರ ಕೆಲಸಕ್ಕಾಗಿ ಸಂಬಳ ಪಡೆಯುತ್ತಾರೆ. ಆದರೆ ಮಗನು, ತನಗೆ ಸಂಬಂಧಿಸಿದ ಸ್ವಾಸ್ತ್ಯವನ್ನು ಪಡೆಯುತ್ತಾನೆ.

## 8. ಪ್ರತಿನಿಧಿಸು ಮತ್ತು ಅಧಿಕಾರಕೊಡು

ಪೌಲನು ತಿಮೊಥೆಯನನ್ನು ನಿರ್ದಿಷ್ಟ ಸೇವೆಗಾಗಿ ಕಳುಹಿಸಿದನು. ಈ ಜವಾಬ್ದಾರಿಯನ್ನು ತಿಮೊಥೆಯನಿಗೆ ಕೊಡುವುದರಲ್ಲಿ ಪೌಲನು ಪೂರ್ಣ ನಂಬಿಕೆ ಮತ್ತು ಭರವಸೆ ಹೊಂದಿದ್ದನು.

1 ಕೊರಿಂಥದವರಿಗೆ 4:17

**[17]ಕರ್ತನಲ್ಲಿ ನನ್ನ ಮಗನಾದ ತಿಮೊಥೆಯನನ್ನು ನಿಮ್ಮ ಬಳಿಗೆ ಕಳುಹಿಸಿ ಕೊಟ್ಟಿದ್ದೇನೆ. ಅವನು ನನಗೆ ಪ್ರಿಯನೂ ನಂಬಿಗಸ್ತನೂ ಆಗಿದ್ದಾನೆ. ಅವನು ಕ್ರಿಸ್ತನ ಸೇವೆಯಲ್ಲಿರುವ ನನ್ನ ನಡಾವಳಿಯನ್ನು ಅಂದರೆ ನಾನು ಎಲ್ಲೆಲ್ಲಿಯೂ ಪ್ರತಿಯೊಂದು ಸಭೆಯಲ್ಲಿಯೂ ಬೋಧಿಸುವ ಕ್ರಮವನ್ನು ನಿಮ್ಮ ನೆನಪಿಗೆ ತರುವನು.**

ಫಿಲಿಪ್ಪಿಯವರಿಗೆ 2:19

**[19] ಆದರೆ ಕರ್ತನಾದ ಯೇಸುವಿನ ಚಿತ್ತವಾದರೆ ನಾನು ತಿಮೊಥೆಯನನ್ನು ಬೇಗನೆ ನಿಮ್ಮ ಬಳಿಗೆ ಕಳುಹಿಸಬೇಕೆಂದು ನಿರೀಕ್ಷಿಸುತ್ತೇನೆ. ಅವನ ಮುಖಾಂತರ ನಿಮ್ಮ ಸಂಗತಿಗಳನ್ನು ತಿಳಿದು ನಾನೂ ಧೈರ್ಯ ತಂದು ಕೊಂಡೆನು.**

1 ಥೆಸಲೋನಿಕದವರಿಗೆ 3:1.2

**[1]ಆದದರಿಂದ ಇನ್ನು ತಡೆಯಲಾರದೆ ನಾವು ಅಥೇನೆಯಲ್ಲಿ ಒಬ್ಬೊಂಟಿಗರಾಗಿಯೇ ಇರುವದು ಒಳ್ಳೇದೆಂದು ಯೋಚಿಸಿ [2] ನಿಮ್ಮ ಮೇಲೆ ಬಂದಿರುವ ಸಂಕಟಗಳಲ್ಲಿ ಒಬ್ಬರೂ ಚಂಚಲರಾಗದಂತೆ ನಿಮ್ಮನ್ನು ದೃಢಪಡಿಸುವದಕ್ಕೂ ನಿಮ್ಮ ನಂಬಿಕೆಯು ವೃದ್ಧಿಗಾಗಿ ಪ್ರಬೋಧಿಸುವದಕ್ಕೂ ನಮ್ಮ ಸಹೋದರನೂ ಕ್ರಿಸ್ತನ ಸುವಾರ್ತೆಯ ಉದ್ಯೋಗದಲ್ಲಿ ದೇವರ ಸೇವಕನೂ ಆಗಿರುವ ತಿಮೊಥೆಯನನ್ನು ನಿಮ್ಮ ಬಳಿಗೆ ಕಳುಹಿಸಿದೆವು.**

ಜವಾಬ್ದಾರಿಯ ಪ್ರತಿನಿಧಿಸುವಿಕೆ ಜನರು ಪ್ರೌಢರಾಗಿ ಬೆಳೆಯಲು ಸಹಾಯ ಮಾಡುತ್ತದೆ. ಜನರು ತಪ್ಪು ಮಾಡಲು ಆಸ್ಪದವಿರುತ್ತದೆ ಮತ್ತು ಅವರು ಮಾಡಿದಾಗ ಅವರನ್ನು ಕರುಣೆಯಿಂದ ಪ್ರತಿನಿಧಿಸಿ ತಪ್ಪುಗಳನ್ನು, ಕಲಿಯಲು ಮತ್ತು ಬೆಳೆಯಲು ಅವಕಾಶಗಳನ್ನಾಗಿ ಉಪಯೋಗಿಸಿರಿ.

## 9. ಸಕಾರಾತ್ಮಕ ಶಿಫಾರಸ್ಸು

1 ಕೊರಿಂಥದವರಿಗೆ 16:10

**[10]ತಿಮೊಥೆಯನು ಬಂದರೆ ಅವನು ನಿಮ್ಮ ಬಳಿಯಲ್ಲಿ ಭಯವಿಲ್ಲದೆ ಇರುವಂತೆ ನೋಡಿಕೊಳ್ಳಿರಿ, ನನ್ನ ಹಾಗೆಯೇ ಕರ್ತನ ಕೆಲಸವನ್ನು ನಡಿಸುತ್ತಾನೆ.**

ಫಿಲಿಪ್ಪಿಯವರಿಗೆ 2:19-23

**[19] ಆದರೆ ಕರ್ತನಾದ ಯೇಸುವಿನ ಚಿತ್ತವಾದರೆ ನಾನು ತಿಮೊಥೆಯನನ್ನು ಬೇಗನೆ ನಿಮ್ಮ ಬಳಿಗೆ ಕಳುಹಿಸಬೇಕೆಂದು ನಿರೀಕ್ಷಿಸುತ್ತೇನೆ. ಅವನ ಮುಖಾಂತರ ನಿಮ್ಮ ಸಂಗತಿಗಳನ್ನು ತಿಳಿದು ನಾನೂ ಧೈರ್ಯತಂದುಕೊಂಡೇನು [20]ಅವನ ಹಾಗೆ ನಿಮ್ಮ ಕಾರ್ಯಗಳನ್ನು ಕುರಿತು ಯಥಾರ್ಥವಾಗಿ ಚಿಂತಿಸುವವರು ನನ್ನ ಬಳಿಯಲ್ಲಿ ಬೇರೆ ಯಾರೂ ಇಲ್ಲ [21]ಎಲ್ಲರೂ ಸ್ವಕಾರ್ಯಗಳ ಮೇಲೆ ಮನಸ್ಸಿಡುತ್ತಾರೆಯೇ ಹೊರತು ಯೇಸುಕ್ರಿಸ್ತನ ಕಾರ್ಯಗಳ ಮೇಲೆ ಮನಸ್ಸಿಡುವುದಿಲ್ಲ [22] ತಿಮೊಥೆಯನ ಗುಣವನ್ನು ನೀವು ನೋಡಿ ತಿಳಿದುಕೊಂಡಿದ್ದೀರಿ; ಮಗನು ತಂದೆಗೆ ಹೇಗೋ ಹಾಗೆಯೇ ಅವನು ನನ್ನ ಜೊತೆಯಲ್ಲಿ ಸುವಾರ್ತಾ ಪ್ರಚಾರಕ್ಕಾಗಿ ಕಷ್ಟಪಟ್ಟು ಕೆಲಸನೆಡೆಸಿದನೆಂಬುದು ನಿಮಗೆ ಗೊತ್ತುಂಟು. [23]ಆದ್ದರಿಂದ ನನ್ನ ಸಂಗತಿಯು ಹೇಗಾಗುವದೋ ಅದನ್ನು ತಿಳಿದ ಕೂಡಲೇ ಅವನನ್ನೇ ಕಳುಹಿಸುವುದಕ್ಕೆ ನಿರೀಕ್ಷಿಸುತ್ತೇನೆ.**

ಪೌಲನು, ತಿಮೊಥೆಯನನ್ನು ಹೊರಗೆ ಕಳುಹಿಸಿದಾಗ, ಸಕಾರಾತ್ಮಕವಾಗಿಯೂ ಹುಮ್ಮಸ್ಸಿನಿಂದಲೂ ಅವನನ್ನು ಶಿಫಾರಸ್ಸು ಮಾಡಿದನು. ಪೌಲನು, ತಿಮೊಥೆಯನಿಗೆ ಜೊತೆ ಕೆಲಸದವನು ಮತ್ತು ಜೊತೆ ಸಮಾನನು ಎಂಬುದಾಗಿ ಸೇವೆಯಲ್ಲಿ ಶಿಫಾರಸ್ಸು ಮಾಡಿದನು.

## 10. ಆತನ ಕರೆಗೆ ಬಿಡುಗಡೆಗೊಳಿಸುವುದು

ಅಂತಿಮವಾಗಿ ಪೌಲನು ಎಫೆಸದ ಸಭೆಯನ್ನು ಕಾಳಜಿಯಿಂದ ನೋಡಿಕೊಳ್ಳಲು ತಿಮೊಥೆಯನಿಗೆ ಬಿಟ್ಟನು.

1 ತಿಮೊಥೆಯನಿಗೆ 1:3

**[3] ನಾನು ಮೆಕೆದೋನ್ಯಕ್ಕೆ ಹೋಗುತ್ತಿದ್ದಾಗ ನೀನು ಎಫೆಸದಲ್ಲೇ ಇದ್ದುಕೊಂಡು ಅಲ್ಲಿರುವ ಕೆಲವರಿಗೆ ನೀವು ಬೇರೆ ಉಪದೇಶವನ್ನು ಮಾಡಬಾರದೆಂತಲೂ ಪ್ರಾಯೋಗಿಕ ತರಬೇತಿಯ ಮೂಲಕ ತಿಮೊಥೆಯನು ದೇವರ ಮನುಷ್ಯನಾಗಿ ರೂಪುಗೊಂಡನು.**

ಪ್ರಾಯೋಗಿಕ ತರಭೇತಿಯಿಂದಾಗಿ ತಿಮೊಥೆಯನು, ಚೆಂದವಾದ ದೇವರ ಮನುಷ್ಯನಾಗಿ ಕಾಣಲ್ಪಟ್ಟನು.

ತಿಮೊಥೆಯರು ಮೇಲ್ವರ್ಗದಲ್ಲಿರುವುದನ್ನು ನೋಡುವುದು ನಮ್ಮ ಗೌರವವಾಗಿದೆ. ತಿಮೊಥೆಯನು ನಮ್ಮನ್ನು ಮೀರಿಸುವಂತದ್ದನ್ನು ನೋಡುವುದು ಗೌರವಕರವಾಗಿದೆ. ನಮ್ಮ ಸೇವೆಯನ್ನು ಪೂರೈಸಿದ್ದೇವೆ. ನಾವು ಒಳ್ಳೆಯ ಆತ್ಮಿಕ ತಂದೆಯಾಗಿದ್ದೇವೆ.

ಮಗನು ಬೆಳವಣಿಗೆಯಲ್ಲಿ ಸೋತಾಗ ತೊಂದರೆಯು ಉದ್ಭವಿಸುತ್ತದೆ. ಅಥವಾ ಮಗನು ಅಥವಾ ಸಹ ಬಾಧ್ಯಸ್ಥನಾಗುವ ಬದಲು ಅವನು ಯಾವಾಗಲೂ 'ಮಗ'ನಾಗಿ ಉಳಿದುಕೊಳ್ಳಬೇಕೆಂದು ತಂದೆಯು ಇಚ್ಛಿಸುವಾಗ ತೊಂದರೆ ತಲೆದೂರುತ್ತದೆ.

## ನೀವು ವೃದ್ಧರಾದಾಗ ಮತ್ತು ನರೆ ತಲೆಯವರಾದಾಗ

ಕೀರ್ತನೆಗಳು 71:17,18

**[17]ದೇವರೇ, ನೀನು ಬಾಲ್ಯಾರಭ್ಯ ನನ್ನನ್ನು ಉಪದೇಶಿಸುತ್ತಾ ಬಂದಿದ್ದೀ; ನಾನು ನಿನ್ನ ಅದ್ಭುತ ಕೃತ್ಯಗಳನ್ನು ಇಂದಿನವರೆಗೂ ಪ್ರಚುರಪಡಿಸುತ್ತಿದ್ದೇನೆ. ದೇವರೇ, ನಾನು ನರೆಯ ಮುದುಕನಾದಾಗಲೂ ಕೈಬಿಡಬೇಡ; ಆಗ ಮುಂದಿನ ತಲೆಯವರಿಗೆ ನಿನ್ನ ಭುಜದ ಬಲವನ್ನು ಸಾರುವೆನು, ತಲ-ತಲಾಂತರದವರಿಗೆಲ್ಲಾ ನಿನ್ನ ಪ್ರತಾಪವನ್ನು ಪ್ರಕಟಿಸುವೆನು.**

ದೇವರ ಬಲವನ್ನು ಸಾಬೀತು ಪಡಿಸುತ್ತಿರು. ವಯಸ್ಸಿನೊಡನೆ ದೇವರ ಅಭಿಷೇಕವು ಸೊರಗುವುದಿಲ್ಲ.

ಯೆಶಾಯ 46:4

**[4]ನಿಮ್ಮ ಮುಪ್ಪಿನ ತನಕ ನಾನೇ ಆಧಾರ, ನರೆಬಂದಾಗಲೂ ನಿಮ್ಮನ್ನು ಹೊತ್ತು ಸಹಿಸುವೆನು; ನಾನೇ ಉಂಟುಮಾಡಿದೆನು, ನಾನೇ ಹೊರುವೆನು, ಹೌದು ನಿಮ್ಮನ್ನು ಹೊತ್ತು ಸಹಿಸಿ ನಿರ್ವಹಿಸುವೆನು.**

*(1) ದೇವರ ಜ್ಞಾನದಲ್ಲಿ ಪಾಲುಗಾರರಾಗಿರಿ*

ದೇವರ ರಾಜ್ಯದಲ್ಲಿ ಪ್ರೌಢರಾಗಿ ನಾವು ಬೆಳೆದಾಗ ನಾವು ದೇವರೊಂದಿಗೆ ನಡೆದ ಮೂಲಕ ಪಡೆದಂತಹ ಜ್ಞಾನವನ್ನು ಮುಂದೆ ಸಾಗಿಸುವುದು ನಾವು ಮಾಡುವ ಪ್ರಾಮುಖ್ಯ ಕೆಲಸವಾಗಿದೆ.

*(2) ನಿಮ್ಮ ಅಭಿಷೇಕವನ್ನು ನವೀನವಾಗಿರಿಸಿರಿ ''ಮತ್ತೆ ಹೊಸದಾಗಿ ತುಂಬಿಕೊಳ್ಳಿರಿ'' ನಿವೃತ್ತರಾಗಬೇಡಿರಿ!*

ಕೀರ್ತನೆ 92:10

[10] **ಆದರೆ ನನ್ನ ಕೊಂಬನ್ನು ಕಾಡುಕೋಣದ ಕೊಂಬಿನಂತೆ ಎತ್ತಿದ್ದೀ; ಚೈತನ್ಯ ತೈಲದಿಂದ ನನ್ನನ್ನು ಅಭಿಷೇಕಿಸಿದ್ದೀ!**

*(3) ಫಲಕೊಡುವವನಾಗಿರಿ.*

ಕೀರ್ತನೆ 92;14

[14]ಮುಪ್ಪಿನಲ್ಲಿಯೂ ಫಲಿಸುವರು ; ಪುಷ್ಟಿಯಾಗಿದ್ದು ಶೋಭಿಸುವರು

*(4) ಕೃಪೆಯೊಡನೆ ನಿರ್ಗಮಿಸಿರಿ.*

1 ಪೂರ್ವಕಾಲವೃತ್ತಾಂತ 29:28

[28] **ಅವನು ಐಶ್ವರ್ಯ ಮಾನ ದೀರ್ಘಾಯಷ್ಯ ಇವುಗಳನ್ನು ಅನುಭವಿಸಿದನಂತರ ತುಂಬಾ ವೃದ್ಧನಾಗಿ ಮರಣಹೊಂದಿದನು ಅವನಿಗೆ ಬದಲಾಗಿ ಅವನ ಮಗ ಸೊಲೋಮೋನನು ಅರಸನಾದನು.**

## ವೈಯಕ್ತಿಕ ಅನ್ವಯ

ಪ್ರ. 1. ಕಿರಿಯ ಸೇವಕರನ್ನು ಪೋಷಿಸುವುದರಲ್ಲಿ ನಿಮ್ಮ ಅನುಭವಗಳೇನು? ಯಶಸ್ಸು ಮತ್ತು ಸವಾಲುಗಳೇನು?

ಪ್ರ. 2. ಕಿರಿಯ ದೇವ ಸೇವಕರುಗಳಿಗೆ ಯಾವ ರೀತಿ ಆತ್ಮಿಕ ತಂದೆಯಾಗುತ್ತೀರ ಮತ್ತು ಯಥಾರ್ಥವಾಗಿ ಸಹಾಯಮಾಡಿರಿ ಅವರನ್ನು ಪೋಷಿಸಿರಿ.

## ದೇವರ ರಾಜ್ಯ ಕಟ್ಟುವವರಾಗಿರಿ

ಈ ಸಂಪುಟದಲ್ಲಿರುವ ಸತ್ಯಾಂಶಗಳನ್ನು, ಅನೇಕ ದೇವ ಸೇವಕರುಗಳೊಂದಿಗೆ ಸಂಪರ್ಕಿಸಿ ಸಾಧ್ಯವಾದಷ್ಟು ಅವರಿಗೆ ತಿಳಿಯ ಮಾಡಬೇಕೆಂಬುದು ನಮ್ಮ ಪ್ರಾಮಾಣಿಕ ಇಚ್ಛೆಯಾಗಿದೆ. ಈ ಪುಸ್ತಕದ ಮೂಲಕ ಕಲಿತ ವಿಷಯಗಳನ್ನು ದಯವಿಟ್ಟು ನಿರಾತಂಕವಾಗಿ ಭಾವಿಸಿ ಬೋಧಿಸಿರಿ ಮತ್ತು ಸಾರಿರಿ.

ವೈಯಕ್ತಿಕವಾಗಿ ದೇವರ ರಾಜ್ಯ ಕಟ್ಟುವವರ ಈ ಸಮಾವೇಷ (ಕೆ.ಬಿ.ಸಿ) ಕ್ಕೆ ಹಾಜರಾಗುವುದರಿಂದ ನೀವು ಬಲಯುತವಾಗಿ ರೂಪಾಂತರ ಹೊಂದಬಹುದೆಂದು ನಾವು ನಂಬುತ್ತೇವೆ. ನೀವು ಒಂದು ಕೆ.ಬಿ.ಸಿ. ಗೆ ಹಾಜರಾಗಲು ನಾವು ಪ್ರೋತ್ಸಾಹಿಸುತ್ತೇವೆ.

ನೀವು ಮತ್ತು ನಿಮ್ಮ ಇತರ ಜೊತೆ ಸಭಾಪಾಲಕರೊಂದಿಗೆ, ನಿಮ್ಮ ಸ್ವಂತ ಸ್ಥಳದಲ್ಲಿ ಜೊತೆಯಾಗಿ ದೇವರ ರಾಜ್ಯ ಕಟ್ಟುವವರ ಈ ಸಮಾವೇಶ ಏರ್ಪಡಿಸಲು ನಾವು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ. ಸಾಧ್ಯವಾದಷ್ಟು ಸೇವಕರುಗಳನ್ನು ಕೆ.ಬಿ.ಸಿ. ಗೆ ಆಹ್ವಾನಿಸಿರಿ, ಇದರಿಂದ ಅವರ ಹೃದಯಗಳು ಮತ್ತು ಮನಸ್ಸುಗಳು ಮಾರ್ಪಡುವವು. ಸಮಾವೇಶಕ್ಕೆ ನಮ್ಮ ತಂಡವನ್ನು ತರಲು ಮತ್ತು ಸೇವೆ ಸಲ್ಲಿಸಲು ನಾವು ಸಂತೋಷವುಳ್ಳವರಾಗಿದ್ದೇವೆ.

ನೀವು ದೇವರ ರಾಜ್ಯ ಕಟ್ಟುವವರ ಸಮಾವೇಶ (ಕೆ.ಬಿ.ಸಿ) ಯನ್ನು ಏರ್ಪಡಿಸಬೇಕೆಂದಿದ್ದರೆ, ಮುಂಭಾಗದ ಒಳ ಪುಟದಲ್ಲಿ ಕೊಟ್ಟಿರುವ ಮಾಹಿತಿಗಳನ್ನು ಉಪಯೋಗಿಸುವ ಮೂಲಕ ನಮ್ಮನ್ನು ಸಂಪರ್ಕಿಸಬಹುದು.

ಅನೇಕ ಸಂದರ್ಭಗಳಲ್ಲಿ, ನಮ್ಮ ಆತಿಥ್ಯ ಸಭಾಪಾಲಕರು / ಸೇವಕರು ಈ ಕೂಟಕ್ಕೆ ತಗಲುವ ವೆಚ್ಚವನ್ನು ಭರಿಸುತ್ತಾರೆ. ನಮ್ಮ ವೈಯಕ್ತಿಕ ಪ್ರಯಾಣ ಮತ್ತು ವಸತಿ ಖರ್ಚುಗಳನ್ನು ನಾವೇ ನೋಡಿಕೊಳ್ಳುತ್ತೇವೆ. ನಾವು ನಿಮ್ಮಿಂದ ಉತ್ತರವನ್ನು ಕೇಳಲು ಎದುರು ನೋಡುತ್ತಿದ್ದೇವೆ.

(ಆಹ್ವಾನ ಹೊಂದಲು ಎದುರು ನೋಡುತ್ತಿದ್ದೇವೆ)

**ಆಶಿಷ್ ರಾಯಚೂರ್**

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು. (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಭೇತಿಗೊಳಿಸುವುದು (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಭೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾಸೇವಕರ ಸಮಾವೇಶವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚ್ಚುಗೆವುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ನಮ್ಮ ಕಛೇರಿಯ ವಿಳಾಸವಾದ ''ಆಲ್ ಪೀಪಲ್ಸ್ ಸಭೆ ಬೆಂಗಳೂರು'' ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು

Account Name: All Peoples Church

Account Number: 0057213809, IFSC Code: CITI0000004

Bank: Citibank N.A., 506-507, Level 5, Prestige Meridian 2, # 30, M.G. Road, Bangalore - 560 001

(ದಯವಿಟ್ಟು ಗಮನಿಸಿ: ಆಲ್ ಪೀಫಲ್ಸ್ ಸಭೆಯು FCRA ಅನುಮತಿ ಹೊಂದಿಲ್ಲ ಮತ್ತು ಭಾರತೀಯ ನಾಗರೀಕರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು.) ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ! ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!

## ಆಲ್ ಪೀಪಲ್ಸ್ ಸಭೆಯ ಪ್ರಕಟಣೆಗಳು

ಕೆಲಸದ ಕಡೆಗೆ ಸತ್ಯವೇದದ ನೋಟ

ನಿನ್ನ ಕರೆಯನ್ನು ಕಡೆಗಣಿಸದಿರು

ನಿರೀಕ್ಷೆಯನ್ನು ಕಳೆದುಕೊಳ್ಳಬೇಡ

ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು

ವೈಯುಕ್ತಿಕ ಮತ್ತು ತಲೆಮಾರಿನ ಬಂಧನಗಳನ್ನು ಮುರಿಯುವುದು

ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು

ದೇವರ ರಾಜ್ಯ ಕಟ್ಟುವವರು

ಪರಲೋಕವೆಂದು ಕರೆಯಲ್ಪಡುವ ನಿಜ ಸ್ಥಳ

ದೇವರ ಉದ್ದೇಶಗಳಿಗೆ ಜನ್ಮ ಕೊಡುವುದು

ಬೇರುಗಳಿಗೆ ಕೊಡಲಿ ಹಾಕುವುದು

ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು

ಉಜ್ಜೀವನದಲ್ಲಿ ಒಂದು ಸಭೆ

ದೇವರ ಪ್ರಸನ್ನತೆ

ಜ್ಞಾನ, ಪ್ರಕಟನೆ ಮತ್ತು ಬಲದ ಆತ್ಮನು

ದೇವರು ಒಳ್ಳೆಯ ದೇವರಾಗಿದ್ದಾನೆ

**ಉಚಿತ ಇ-ಪುಸ್ತಕಗಳು**

ನಮ್ಮ ಚರ್ಚ್ ವೆಬ್ ಸೈಟ್‌ನಿಂದ ನಮ್ಮ ಎಲ್ಲಾ ಪುಸ್ತಕಗಳ ಪಿ ಡಿ ಎಫ್ ಅನುವಾದವನ್ನು ಉಚಿತವಾಗಿ ಸಂಗ್ರಹಿಸಲು ದೊರೆಯುತ್ತವೆ. ಇತರೆ ಪ್ರಾದೇಶಿಕ ಭಾಷೆಗಳಲ್ಲೂ ಸಹ ಈ ಪುಸ್ತಕಗಳು ದೊರೆಯುತ್ತದೆ. ಇಂತಹ ಉಚಿತ ಪುಸ್ತಕಗಳಿಗಾಗಿ ಇ-ಮೇಲ್ ಅಥವಾ ಅಂಚೆಯ ಮೂಲಕವಾಗಿ ನಮ್ಮನ್ನು ಸಂಪರ್ಕಿಸಬಹುದಾಗಿದೆ.

**ಉಚಿತ ಆಡಿಯೋ ಮತ್ತು ವೀಡಿಯೊ ಸಂದೇಶಗಳು**

'ಲಿವಿಂಗ್ ಸ್ಟ್ರಾಂಗ್ ಎಂಬ ಗಾಡ್ ಟವಿಯ ಕಾರ್ಯಕ್ರಮದ ಮತ್ತು ಸಮಾವೇಶಗಳ ವಿಡಿಯೋ ರೆಕಾರ್ಡಿಂಗ್ ಗಳಿಗಾಗಿ ಮತ್ತು ನಮ್ಮ ಭಾನುವಾರದ ಸಂದೇಶಗಳ ಆಡಿಯೋ ರೆಕಾರ್ಡಿಂಗ್ (MP3)ಗಳಿಗಾಗಿ ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿ.

**ಸತ್ಯವೇದ ಶಾಲೆ**

**ಮತ್ತು ಸೇವಾತರಬೇತಿ ಕೇಂದ್ರ**

ಆಲ್ ಪೀಪಲ್ಸ್ ಸಭೆ - ಮತ್ತು ಸೇವಾತರಬೇತಿ ಕೇಂದ್ರ (A P C - BC & MTC) 2005 ರ ಆಗಸ್ಟ್ ತಿಂಗಳಲ್ಲಿ ಸ್ಥಾಪಿತವಾಯಿತು. ಇಲ್ಲಿ ಪುರುಷರು ಮತ್ತು ಸ್ತ್ರೀಯರನ್ನು ಸೇವೆಗಾಗಿ ಸಿದ್ಧಗೊಳಿಸಿ, ತರಬೇತಿಗೊಳಿಸಿ, ನಂಬಿಗಸ್ಥರಾದವರನ್ನು ಭಾರತದೇಶಕ್ಕೂ ಇತರದೇಶಗಳಿಗೂ - ಹಳ್ಳಿ, ಪಟ್ಟಣ, ನಗರ ಮತ್ತು ರಾಷ್ಟ್ರಗಳನ್ನು ಯೇಸುಕ್ರಿಸ್ತನಿಗಾಗಿ ಗೆಲ್ಲಲು ತರಬೇತಿಗೊಳಿಸುತ್ತೇವೆ.

**ಎ.ಪಿ.ಸಿ - ಬಿ.ಸಿ. / ಎಂ.ಟಿ.ಸಿ. - 2 ಪರಿವಿಡಿಗಳನ್ನು ನೀಡುತ್ತದೆ.**

- ಶೈಕ್ಷಣಿಕ ಪರಿಣಿತಿಯೊಡನೆ ಆತ್ಮಿಕ ಮತ್ತು ಪ್ರಾಯೋಗಿಕ ಸೇವಾತರಬೇತಿಯನ್ನು ಒದಗಿಸುವುದಕ್ಕಾಗಿ ಪೂರ್ಣಾವಧಿ ವಿದ್ಯಾರ್ಥಿಗಳಿಗಾಗಿ 2 ವರ್ಷಗಳ ಸತ್ಯವೇದ ಶಾಲೆಯ ಶಿಕ್ಷಣ ಪರಿವಿಡಿ. 2 ವರ್ಷಗಳ ಪರಿವಿಡಿಗಳನ್ನು ಮುಗಿಸಿದ ವಿದ್ಯಾರ್ಥಿಗಳು **ಡಿಪ್ಲೋಮಾ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ** (Dip.Th/Cm) ಪಡೆದುಕೊಳ್ಳುತ್ತಾರೆ. ತರಗತಿಗಳು ಆಂಗ್ಲಭಾಷೆಯಲ್ಲಿ ನಡೆಸಲ್ಪಡುತ್ತವೆ. ನಮ್ಮ ಬೋಧನಾ ವಿಭಾಗವು ತರಬೇತಿಹೊಂದಿದ ಮತ್ತು ದೇವರ ವಾಕ್ಯದ ಅಭಿಷೇಕ ಹೊಂದಿದ ಶಿಕ್ಷಕರನ್ನು ಒಳಗೊಂಡಿದೆ. ಎಲ್ಲಾ ಬೋಧಕರು ಹಾಗೂ ವಿದ್ಯಾರ್ಥಿಗಳು ಎ.ಪಿ.ಸಿ ಯ ಅಧ್ಯಯನ ಕೇಂದ್ರ ಮತ್ತು ಗ್ರಂಥಾಲಯವನ್ನು (Sc & L) ಉಪಯೋಗಿಸಬಹುದಾಗಿದೆ.

- ಪ್ರಾಯೋಗಿಕ ತರಬೇತಿ ಹೊಂದಲು ಅಪೇಕ್ಷಿಸುವ ನಮ್ಮ ಸತ್ಯವೇದ ಶಾಲೆಯ ಪಧವೀದರರಿಗೆ ಪ್ರಾಯೋಗಿಕ ಸೇವಾ ತರಬೇತಿ ನೀಡುತ್ತೇವೆ. ಒಂದು ಅಥವಾ ಹೆಚ್ಚಿನ ವರ್ಷಗಳನ್ನು ಮುಗಿಸಿದವರು **ಪ್ರಾಯೋಗಿಕ ಸೇವಾ ಪ್ರಮಾಣಪತ್ರ** ಪಡೆದುಕೊಳ್ಳುತ್ತಾರೆ ಮತ್ತು ತೊಡಗಿಸಿಕೊಂಡ ಅವಧಿಯು ಸ್ಪಷ್ಟವಾಗಿ ನಮೂದಿಸಲ್ಪಡುತ್ತದೆ.

# ಭಾರತದಲ್ಲಿ ಆಲ್ ಪೀಪ್‌ಲ್ಸ್ ಸಭೆಯಿರುವ ಸ್ಥಳಗಳು

ಪ್ರಸಕ್ತವಾಗಿ ಆಲ್ ಪೀಪ್‌ಲ್ಸ್ ಸಭೆಯು ಕೆಳಕಂಡ ಸ್ಥಳಗಳಲ್ಲಿವೆ.

ಆಲ್ ಪೀಪ್‌ಲ್ಸ್ ಚರ್ಚ್ - ಬೆಂಗಳೂರು (ಕರ್ನಾಟಕ)
ಆಲ್ ಪೀಪ್‌ಲ್ಸ್ ಚರ್ಚ್ - ಮಂಗಳೂರು (ಕರ್ನಾಟಕ)
ಆಲ್ ಪೀಪ್‌ಲ್ಸ್ ಚರ್ಚ್ - ರಾಯಚೂರು (ಕರ್ನಾಟಕ)
ಆಲ್ ಪೀಪ್‌ಲ್ಸ್ ಚರ್ಚ್ - ಮುಂಬೈ (ಮಹಾರಾಷ್ಟ್ರ)
ಆಲ್ ಪೀಪ್‌ಲ್ಸ್ ಚರ್ಚ್ - ಪುಣೆ (ಮಹಾರಾಷ್ಟ್ರ)
ಆಲ್ ಪೀಪ್‌ಲ್ಸ್ ಚರ್ಚ್ - ನಾಗ್ಪುರ್ (ಮಹಾರಾಷ್ಟ್ರ)
ಆಲ್ ಪೀಪ್‌ಲ್ಸ್ ಚರ್ಚ್ - ಕೋಹಿಮಾ (ನಾಗಾಲ್ಯಾಂಡ್)
ಆಲ್ ಪೀಪ್‌ಲ್ಸ್ ಚರ್ಚ್ - ದೀಮಾಪುರ್ (ನಾಗಾಲ್ಯಾಂಡ್)
ಆಲ್ ಪೀಪ್‌ಲ್ಸ್ ಚರ್ಚ್ - ಬೆಹ್ರಮ್‌ಪುರ್ (ಒರಿಸ್ಸಾ)

ಹೊಸ ಸಭೆಗಳು ನಿಯತಕಾಲಿಕವಾಗಿ ಭಾರತದಾದ್ಯಂತ ಸ್ಥಾಪಿಸಲ್ಪಡುತ್ತಿವೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪ್‌ಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿರಿ. www.apcwo.org ಅಥವಾ contact@apcwo.org ಗೆ ಇ-ಮೇಲ್ ಕಳುಹಿಸಿರಿ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದೀರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು.

ಆತನು ಪಾಪರಹಿತ ಜೀವನ ನಡಿಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ - ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು. ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಅದ್ಭುತ ಕಾರ್ಯಗಳು ನಮಗೆ ದೇವರು, ಒಳ್ಳೆಯ ದೇವರು, ಆತನು ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಬಯಸುತ್ತಾನೆ. ದೇವರು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತವೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಅಂಗೀಕಾರವಾಗದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು, ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ

ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಕೆಗೊಳಿಸುತ್ತದೆ. ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೇನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ''ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರವ ನಿತ್ಯಜೀವ'' ಎಂದು ಹೇಳುತ್ತದೆ (ರೋಮಪುರ 6:23) ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು. ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ, ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ, ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ. ನೀನು ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಮತ್ತು ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

**''ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು''** (ಅಪೊಸ್ತಲರ ಕೃತ್ಯ 10:43)

**‘‘ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬುದೇ’’** (ರೋಮಾಪುರದವರಿಗೆ 10:9)

ನೀವು ಸಹ ಯೇಸುಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪರಿಹಾರಗಳನ್ನು ಹೊಂದಿಕೊಳ್ಳಬಹುದು. ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

*ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥ ಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರ್‍ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ ನನ್ನ ಬಾಯಿಂದ, ‘‘ನೀನು ನನಗಾಗಿ ಸತ್ತೇ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ. ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ’’ ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯಮಾಡು. ಆಮೇನ್*

ಇಂದಿನ ಕ್ರಿಸ್ತೀಯ ಸೇವೆಯಲ್ಲಿ, ಪರಿಪೂರ್ಣವಾಗಿ ಅಗತ್ಯವಿರುವ ಒಂದು ಸಂಗತಿಯೆಂದರೇ, ದೇವರ ರಾಜ್ಯದ ಮನಸ್ಸು ಹೊಂದಿಕೊಳ್ಳುವುದಾಗಿದೆ. ನಮ್ಮ ಸ್ವಂತ ಸಭೆಗಳು ಅಥವಾ ನಮ್ಮ ಸ್ವಂತ ಸೇವೆಗಳನ್ನು ಕಟ್ಟಿಕೊಳ್ಳಲು ದೇವರು ನಮ್ಮನ್ನು ಕರೆದಿಲ್ಲ. ಆತನ ರಾಜ್ಯವನ್ನು ಕಟ್ಟುವುದಕ್ಕಾಗಿ ನಮ್ಮನ್ನು ಕರೆದಿದ್ದಾನೆ.

ಅರಸನೊಂದಿಗೆ ಜೊತೆ ಕೆಲಸದವರಾಗಿರುವುದರ ಅರ್ಥವೇನು ಎಂಬುದನ್ನು ಗುರ್ತಿಸಿರಿ. ದೇವರ ರಾಜ್ಯ ಕಟ್ಟುವವರ ಹೃದಯ ವೃದ್ಧಿಸಿಕೊಳ್ಳಿರಿ. ದೇವರ ರಾಜ್ಯದ ವಿಸ್ತರಣೆಗಾಗಿ, ಆತನ ದರ್ಶನ ಮತ್ತು ಕನಸ್ಸುಗಳನ್ನು ನೆರವೇರಿಸಲು ನಮ್ಮನ್ನು ದೇವರು ಹೇಗೆ ಉಪಯೋಗಿಸುತ್ತಾನೆ ಎಂಬುದನ್ನು ಅರ್ಥಮಾಡಿಕೊಳ್ಳಿರಿ.

ದೇವರ ರಾಜ್ಯ ಕಟ್ಟುವುದು ಜನರನ್ನು ಕಟ್ಟುವುದಾಗಿದೆ! ಆತ್ಮನಿಂದ ಜನರನ್ನು ಕಟ್ಟುವುದು ಹೇಗೆ ಎಂಬುದನ್ನು ಕಲಿಯಿರಿ.

ಕನಸ್ಸುಗಳು ಮತ್ತು ದರ್ಶನಗಳು ಪರಸ್ಪರ ಸಂಬಂಧ ಹೊಂದಿವೆ!

ದೇವರ ರಾಜ್ಯ ಕಟ್ಟುವುದರಲ್ಲಿ ಪಾಲುಗಾರರಾಗಿರುವುದು ಹೇಗೆ ಎಂಬುದನ್ನು ಕಲಿಯಿರಿ.

ನಾವು ದೇವರ ರಾಜ್ಯ ಕಟ್ಟುವವರಾಗಿ, ಕೆಲಸಮಾಡಿದರೆ, ಯಾವುದೇ ರಾಷ್ಟ್ರ, ಪ್ರಾಂತ್ಯ, ಯಾವುದೇ ನಗರದಲ್ಲಿನ ಕ್ರಿಸ್ತ ಅಂಗಗಳ ನಡುವೆ ಒಂದು ಆತ್ಮೀಕ ಕ್ರಿಯಾತ್ಮಕ ಬದಲಾವಣೆಯನ್ನು ನಾವು ನೋಡಬಹುದಾಗಿದೆ.

**ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್**
**319, 2ನೇ ಫ್ಲೋರ್, 7ನೇ ಮೈನ್, ಹೆಚ್,ಆರ್,ಬಿ,ಆರ್ ಲೇಔಟ್,**
**2ನೇ ಬ್ಲಾಕ್, ಕಲ್ಯಾಣ್ ನಗರ, ಬೆಂಗಳೂರು- 560 043**
**ಕರ್ನಾಟಕ, ಭಾರತ.**

**ಫೋನ್** : +91-80-25452617, +91-80-65970617

**ಇ-ಮೇಲ್**: contact@apcwo.org

**ವೆಬ್‌ಸೈಟ್**: www.apcwo.org